ಸಂಪುಟ : ೨೬

ಸಂಚಿಕೆ : ೪

ಕರ್ನಾಟಕ ಭಾರತಿ

ಅಕ್ಷಯ ತೃತೀಯಾ ಸಂಚಿಕೆ

ಮೇ, ೧೯೯೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು :

"ಕರ್ನಾಟಕ ಭಾರತಿ''ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ಪುಸ್ತಕಗಳನ್ನು ವಿಮರ್ಶೆಗಾಗಿ ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯಾ ತೃತೀಯಾ ಸಂಚಿಕೆ

ಬಿಡಿ ಸಂಚಿಕೆ ಬೆಲೆ : ರೂ. ೨೦–೦೦

ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೧೦-೦೦ ಮಾತ್ರ ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೯   ಸಂಚಿಕೆ : ೪

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

೨.೧.೯೭

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೫ ಸಂಚಿಕೆ : ೪

ಅಕ್ಷಯ ತೃತೀಯಾ ಸಂಚಿಕೆ

ಮೇ, ೧೯೯೩

ಪ್ರಕಾಶಕರು

ಎಚ್. ವಿ. ನಾಗೇಶ್

ನಿರ್ದೇಶಕರು

ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು

ಜೆ. ಎ. ಪೆರೇರಾ

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ, ಧಾರವಾಡ

iii

ಪರಿವಿಡಿ

ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ : ಆಧುನಿಕ ಒಲವುಗಳು

* ಆರ್.ವಾಯ್.ಕುಲಕರ್ಣಿ

ಭಾಷಾವಿಜ್ಞಾನ ಮತ್ತು ಅದರ ಕ್ಷೇತ್ರಕಾರ್ಯದ ಪದ್ಧತಿಗಳ ಹಾಗೂ ವಿಧಾನಗಳ ಬೆಳವಣಿಗೆಯನ್ನು ಈ ಎರಡು-ಮೂರು ದಶಕಗಳಿಂದ ಸ್ವಲ್ಪ ಗಮನಿಸಿದರೆ ಆಶ್ಚರ್ಯವಾಗುವಷ್ಟು ಬದಲಾವಣೆಗಳು ಕಂಡುಬರುತ್ತವೆ. ಭಾಷಾವಿಜ್ಞಾನವು ತಂದುಕೊಂಡ ಆಮೂಲಾಗ್ರ ಬದಲಾವಣೆ ನಿಜವಾಗಿಯೂ ಅದರ ವ್ಯಾಪ್ತಿಯನ್ನು ತೋರಿಸುತ್ತದೆ. ಇದೇ ಮಾತನ್ನು ಇನ್ನಷ್ಟು ಸ್ಪಷ್ಟವಾಗಿ ಹೇಳುವುದಾದರೆ ಸಾಂಪ್ರದಾಯಿಕ ಅಥವಾ ಸಂರಚನಾ ಭಾಷಾವಿಜ್ಞಾನಿಗಳು ಎತ್ತಿದ ಪ್ರಶ್ನೆಗಳಿಗಿಂತ ತೀರ ಭಿನ್ನವಾದ ಪ್ರಶ್ನೆಗಳು ಈಗ ಭಾಷಾವಿಜ್ಞಾನದಲ್ಲಿ ಹುಟ್ಟಿಕೊಳ್ಳುತ್ತಲಿವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಬೆಳೆದುಬಂದಿರುವ ಭಾಷಾವಿಜ್ಞಾನದ ಸಿದ್ಧಾಂತಗಳಾಗಲಿ, ಕಲ್ಪನೆಗಳಾಗಲಿ ಅಥವಾ ಗ್ರಂಥಗಳಾಗಲಿ ಕೆಲವೊಮ್ಮೆ ಇಂದಿನ ಭಾಷಾವಿಜ್ಞಾನಿಗಳಿಗೆ ನೀರಸವಾಗಿ ಕಾಣಬಹುದು ಅಥವಾ ಇವರು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುವ ಸಾಮರ್ಥ್ಯ ಅವುಗಳಿಗೆ ಇರದೇ ಹೋಗಿರಬಹುದು. ಆದ್ದರಿಂದಲೇ ಸಂರಚನಾಕಾರರ ಸಂಶೋಧನಾ ಪದ್ಧತಿಯನ್ನು ನೋಮ ಚಾಮಸ್ಕಿ ಶೋಧನಾ ವಿಧಾನ (Discovery procedures) ವೆಂದು ಕರೆದನು. ಕ್ರಿ.ಶ. ೧೯೫೦ ವರೆಗೆ ಭಾಷಾವೈಜ್ಞಾನಿಕ ವಿಶ್ಲೇಷಣೆ ಅಂದರೆ ದತ್ತವನ್ನು ಬಾತ್ಮಿದಾರನ ಮೂಲಕವಾಗಲಿ, ಪಠ್ಯಗಳಿಂದಾಗಲಿ ಸಂಗ್ರಹಿಸಿ ವಿಶ್ಲೇಷಿಸಿ, ವಿಭಜಿಸಿ ಇದು ಹೀಗೆ ಎಂದು ವರ್ಣನಾತ್ಮಕವಾಗಿ ವಿವರಿಸಿದರೆ ಸಂರಚನಾಕಾರರ ಕೆಲಸ ಮುಗಿಯುತು. ಆ ವಿಶ್ಲೇಷಣೆಯಿಂದ ಸಾಧಿತವಾದ ಸಾಧನೆಯನ್ನು ಹೀಗೇಕೆಂದು ಪ್ರಶ್ನಿಸುವ ಗೊಂದಲಕ್ಕೆ ಹೋಗುವುದು ಬಹಳ ಕಡಿಮೆಯಾಗಿತ್ತು. ಈ ಕಾರಣಕ್ಕಾಗಿಯೇ ಚಾಮಸ್ಕಿ ವರ್ಣನಾತ್ಮಕ (Descriptive) ಮತ್ತು ವಿವರಣಾತ್ಮಕ (Explanatory) ಎಂಬ ಎರಡು ವಿಶಿಷ್ಟ ಪ್ರಕಾರದ ವ್ಯಾಕರಣಗಳಿವೆ ಎಂದು ವಿವರಿಸಿ ಬಹಳಷ್ಟು ಚರ್ಚೆಗೆ ಆಸ್ಪದ ಮಾಡಿಕೊಟ್ಟನು.

೨೧ ನೆಯ ಶತಮಾನದಲ್ಲಿ ಧುಮುಕುತ್ತಿರುವ ಭಾಷಾವೈಜ್ಞಾನಿಕ ಸಿದ್ಧಾಂತಗಳ ವಿವೇಚನೆಯ ಹಿನ್ನೆಲೆಯಲ್ಲಿ ಈ ಗ್ರಂಥಗಳನ್ನು ಅಭ್ಯಸಿಸಿದಾಗ ಸಮಕಾಲಿನ ವಿಷಯಗಳು ಬೃಹತ್ ಸ್ವರೂಪವನ್ನು ಪಡೆದುಕೊಂಡು ಬಿಡುತ್ತವೆ. ಇಂತಹ ಬೃಹತ್ ಸ್ವರೂಪದ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತ ಭಾಷಾವಿಜ್ಞಾನ ದಿನೇ ದಿನೇ ತೀವ್ರಗತಿಯಿಂದ ಬೆಳೆಯುತ್ತಿದೆ. ಇಂದಿನ ಸಿದ್ಧಾಂತಗಳು ನಾಳೆಗೆ ಮಸಕಾಗುತ್ತಿವೆ. ಆದರೆ ಈ ಮಸಕಾದ ಸಿದ್ಧಾಂತಗಳು ವೈಜ್ಞಾನಿಕ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಯಾವುದೆ ವೈಜ್ಞಾನಿಕ ಸಿದ್ಧಾಂತವಾದರೂ ಅದು ತನ್ನೊಡಲಿನಲ್ಲಿ ತನ್ನ ವಿನಾಶದ ಬೀಜವನ್ನಿಟ್ಟುಕೊಂಡೇ ಜನಿಸಿರುತ್ತದೆ ಎಂಬ ಎಮನ್ ಬಾಕ್‌ನ ಮಾತನ್ನು ನೆನಪಿನಲ್ಲಿಡಬೇಕು. ಈ ತತ್ವಕ್ಕೆ ಹೊರತಾದ ವೈಜ್ಞಾನಿಕ ತತ್ವಗಳು ದೊರೆಯುವುದು ಬಹಳ ವಿರಳ. ಉದಾಹರಣೆಗೆ ನ್ಯೂಟನ್‌ನ ಗುರುತ್ವಾಕರ್ಷಣ ಶಕ್ತಿಯ ನಿಯಮಗಳೂ ಕೂಡ ಪರೀಕ್ಷೆಗೆ ಒಳಗಾದುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಆದ್ದರಿಂದ ೧೯ನೆಯ ಶತಮಾನದ ಭಾಷಿಕ ಜಿಜ್ಞಾಸೆ ಅಥವಾ ಸಂಶೋಧನೆಗಳು ಇಂದಿನ ಭಾಷಾವೈಜ್ಞಾನಿಕ ಸಂಶೋಧನೆಗಳಿಗೆ ಉತ್ತರವನ್ನಾಗಲಿ, ಸಂಶೋಧನಾ ಪದ್ಧತಿಯನ್ನಾಗಲಿ ಸರಳವಾಗಿ ದೊರಕಿಸಿಕೊಡುವುದು ಕಷ್ಟಸಾಧ್ಯವಾಗಿದೆ. ಭಾಷಾವಿಜ್ಞಾನದಲ್ಲಿ ಸಿದ್ಧಾಂತಗಳ ಮೇಲೆ ಸಿದ್ಧಾಂತಗಳು

ಹುಟ್ಟಿ ಬರುತ್ತಲಿವೆ. ಭಾಷಾವಿಜ್ಞಾನ ನೂರಕ್ಕೆನೂರರಷ್ಟು ವಿಜ್ಞಾನವಾಗಲು ಹವಣಿಸುತ್ತಿದೆ. ಆಧುನಿಕ ಭಾಷಾವಿಜ್ಞಾನ ಅನೇಕ ವಿಜ್ಞಾನಗಳೊಂದಿಗೆ ಸಂಬಂಧವನ್ನು ಬೆಳೆಸಿಕೊಂಡಿದೆ. ಉದಾಹರಣೆಗೆ - ಭೌತವಿಜ್ಞಾನ, ಸಂಖ್ಯಾಶಾಸ್ತ್ರ, ಕಂಪ್ಯೂಟರ್ ವಿಜ್ಞಾನ ಮತ್ತು ಗಣಿತ ಮುಂತಾದವುಗಳು.

ಭಾಷಿಕ ಪ್ರಕ್ರಿಯೆಗಳನ್ನು ವಿಶ್ಲೇಷಿಸಿ ವಿವರಿಸಬೇಕಾದರೆ ನಾವು ಕೆಲವು ಸಂಶೋಧನಾ ಕ್ರಮಗಳನ್ನು ಬಳಸಿಕೊಳ್ಳುತ್ತೇವೆ. ಈ ಕ್ರಮಗಳ ಹಿಂದೆ ಹಲವಾರು ತತ್ವಗಳು ಅಡಕಗೊಂಡಿರುತ್ತವೆ. ಯಾವುದೇ ವಿಜ್ಞಾನವಾಗಲಿ ಅದು ಒಂದು ವಿಷಯದ ಆಂತರಿಕ ಕರ್ತೃ ಸಂಬಂಧತೆಯ ಸಮ್ಮತವನ್ನು ಮತ್ತು ಅದರಲ್ಲಿ ಅಡಕಗೊಂಡಿರುವ ತತ್ವಗಳನ್ನು ಕಂಡುಕೊಳ್ಳಲು ಸಂಶೋಧನಾ ಕ್ರಮಗಳನ್ನು ಉಪಯೋಗಿಸಿಕೊಳ್ಳುತ್ತದೆ. ಭಾಷಾವಿಜ್ಞಾನವೂ ಇದೇ ರೀತಿ ಉಳಿದ ವಿಜ್ಞಾನಗಳಂತೆ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಳ್ಳತ್ತದೆ.

ಭಾಷೆಯ ನಡುವಳಿಕೆ ಮತ್ತು ಅದರ ಸ್ವಭಾವವನ್ನು ಗುರುತಿಸಲು ಭಾಷೆಯನ್ನು ಅಭ್ಯಸಿಸಬೇಕಾಗುತ್ತದೆ. ಭಾಷೆಯನ್ನು ಅಭ್ಯಸಿಸಲು ದತ್ತವನ್ನು ಸಂಗ್ರಹಿಸಬೇಕು. ಭಾಷಾವೈಜ್ಞಾನಿಕ ಅಧ್ಯಯನಕ್ಕಾಗಿ ದತ್ತವನ್ನು ಸಂಗ್ರಹಿಸುವ ಕ್ರಮಕ್ಕೆ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯವೆಂದು ಕರೆಯುತ್ತಾರೆ. ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯದಲ್ಲಿಯೂ ಕೂಡ ಕಾಲಕಾಲಕ್ಕೆ ಬದಲಾವಣೆ ಕಾಣಿಸಿಕೊಳ್ಳುತ್ತಲೇ ಇದೆ. ಇಂದಿನವರೆಗೆ ಕ್ಷೇತ್ರ ಕಾರ್ಯ ಬೆಳೆದುಬಂದಿರುವ ಹಿನ್ನೆಲೆಯನ್ನು ಗಮನಿಸಿ ಕ್ಷೇತ್ರಕಾರ್ಯ ಪದ್ಧತಿಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು.

೧. ಐತಿಹಾಸಿಕ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ ಪದ್ಧತಿ.

೨. ಸಂರಚನಾಕಾರರ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ ಪದ್ಧತಿ.

೩. ಉತ್ಪಾದಕ ವ್ಯಾಕರಣಕಾರರ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ ಪದ್ಧತಿ.

ಇವುಗಳನ್ನು ವಿವರವಾಗಿ ನೋಡುವ ಮೊದಲು ನಾವು ಕ್ಷೇತ್ರಕಾರ್ಯವನ್ನು ಮಾಡುವ ಮೂಲ ಉದ್ದೇಶವೇನು ಎಂಬುದನ್ನು ನೋಡಬೇಕು. ರಾಸ್ಮಸ್ ರಾಸ್ಕನಿಂದ ಇವತ್ತಿನವರೆಗೆ ನಡೆದು ಬಂದ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯವನ್ನು ನಿರೀಕ್ಷಿಸಿದರೆ ಎರಡು ಪ್ರಮುಖ ಕಾರಣಗಳಿಗಾಗಿ ಕ್ಷೇತ್ರ ಕಾರ್ಯವನ್ನು ನಿರ್ವಹಿಸುವುದು ಕಂಡುಬರುತ್ತದೆ.

೧. ದತ್ತವನ್ನು ಸಂಗ್ರಹಿಸಿ ವಿಶ್ಲೇಷಿಸುವದಕ್ಕಾಗಿ ಮತ್ತು ದತ್ತ ಸಂಗ್ರಹಿಸಲು ಅಳವಡಿಸಿಕೊಂಡ ಕ್ರಮಗಳನ್ನು ಪರೀಕ್ಷಿಸುವದಕ್ಕಾಗಿ

೨. ಈ ಮೇಲೆ ಹೇಳಿದ ಪ್ರಕ್ರಿಯೆಯಿಂದ ಸಾಧಿತವಾದ ಸಿದ್ಧಾಂತಗಳನ್ನು ಪರೀಕ್ಷಿಸುವುದಕ್ಕಾಗಿ, ಅಥವಾ ಆಕಸ್ಮಾತ್ತಾಗಿ ಸಿದ್ಧಾಂತವು ದೋಷಪೂರಿತವಾಗಿದ್ದರೆ ಅದು ಎಷ್ಟರ ಮಟ್ಟಿಗೆ ದತ್ತಕ್ಕೆ ಮತ್ತು ಅದರ ಆಕರಕ್ಕೆ ಸಂಬಂಧಿಸಿದುದು ಎಂಬುದನ್ನು ಕಂಡುಕೊಳ್ಳಲು ಸಹ ಕ್ಷೇತ್ರಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

ಈ ಎರಡು ಕಾರಣಗಳಲ್ಲಿ ಮೊದಲನೆಯದು ಕ್ಷೇತ್ರಕಾರ್ಯ ಸಿದ್ಧಾಂತದ ವಿಶ್ವಾಸಾರ್ಹತೆಯನ್ನು ಪರೀಕ್ಷಿಸುತ್ತದೆ ಮತ್ತು ಎರಡನೆಯದು ಈ ಪ್ರಕ್ರಿಯೆಯಿಂದ ಸಾಧಿತವಾದ

ಸಿದ್ಧಾಂತದ ಸಾಧಾರತೆಯನ್ನು ಪ್ರಾಯೋಗಿಕವಾಗಿ ಪರೀಕ್ಷಿಸುತ್ತದೆ.

ಆಧುನಿಕ ಭಾಷಾವಿಜ್ಞಾನದಲ್ಲಿ ಕ್ಷೇತ್ರಕಾರ್ಯ ಬಹಳ ಪ್ರಮುಖವಾದ ಸ್ಥಾನವನ್ನು ಭದ್ರವಾಗಿರಿಸಿಕೊಂಡಿದೆ. ಪ್ರತಿಯೊಂದು ಸಿದ್ಧಾಂತದ ತಳಹದಿಯಾಗಿ ಕ್ಷೇತ್ರಕಾರ್ಯ ನಿಲ್ಲುತ್ತದೆ. ಭಾಷಾವಿಜ್ಞಾನದಲ್ಲಿ ಸಿದ್ಧಾಂತಗಳು ಮೊದಮೊದಲು ಅವಶ್ಯಕತೆಯಾಗಿ, ಆ ಮೇಲೆ ಕಲೆಯಾಗಿ, ಆಧುನಿಕ ಭಾಷಾವಿಜ್ಞಾನದಲ್ಲಿ ಭಾಷಾಬಳಕೆಯ ಸಿದ್ಧಾಂತಗಳ ಬೆಳವಣಿಗೆಗಾಗಿ ಹಲವಾರು ಮಾರ್ಗಗಳನ್ನು ತೆರೆದಿವೆ.

ಭಾಷೆ ವಿಶಿಷ್ಟವಾಗಿ ಮಾನವನಿಗೆ ಸೀಮಿತವಾದದ್ದು. ಇದು ಮೂಲತಃ ಮನುಷ್ಯನ ಮನದಲ್ಲಿ ಆಳವಾಗಿ ಹುದಗಿಕೊಂಡಿದೆ. ಅದರ ನಿರ್ಮಾಣದಲ್ಲಿ ಹಲವಾರು ಸಾಮಾಜಿಕ ಮತ್ತು ವೈಜ್ಞಾನಿಕ ಮಾದರಿಗಳಿವೆ. ಇವುಗಳ ವಿವರಣೆಯನ್ನು ಭಾಷಾವೈಜ್ಞಾನಿಕವಾಗಿ ನೀಡಬೇಕಾಗಿದೆ. ಭಾಷಾ ವಿಜ್ಞಾನದಲ್ಲಿ ವಿವರಣೆ (Linguistic Explanation) ಎನ್ನುವ ಪದ ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಭಾಷಿಕ ವಿವರಣೆಯ ಬಗೆಗೆ ಅನೇಕ ಭಾಷಾವಿಜ್ಞಾನಿಗಳು ವಿವೇಚಿಸಿದ್ದಾರೆ, ವಿವೇಚಿಸುತ್ತಲೂ ಇದ್ದಾರೆ. ಇವರಲ್ಲಿಪ್ರಮುಖರಾದವರು -ಬಾಕ್, ಚಾಮಸ್ಕಿ, ಲೆಬೋವ್, ಪಾಪರ್, ರಿಂಗನ್, ಫ್ರಾಮ್‌ಕಿನ್, ಲೈಟನರ್, ಹೂಪರ್, ಮತ್ತು ಕಿಪಾರಸ್ಕಿ ಮುಂತಾದವರು.

ಭಾಷಾ ಅಧ್ಯಯನ ಮಾಡಲು ಸಂರಚನಾಕಾರರು ಕ್ಷೇತ್ರಭಾಷಾವಿಜ್ಞಾನವನ್ನು ಮಾನವ ವಿಜ್ಞಾನ(Anthropology)ದಿಂದ ನೇರವಾಗಿ ಪಡೆದುಕೊಂಡು ಭಾಷಾವಿಜ್ಞಾನಿಗಳನ್ನಾಗಿ ತರಬೇತಿಗೊಳಿಸಲು ಭಾಷೆಯನ್ನು ಹೇಗೆ ವಿಶ್ಲೇಷಿಸಬೇಕೆಂಬ ನಿಯಮಾವಳಿಗಳನ್ನು ಹೇಳಿಕೊಟ್ಟರು. ನಿಜವಾಗಿಯೂ ಭಾಷಾವಿಜ್ಞಾನಿಯನ್ನು ತರಬೇತಿಗೊಳಿಸುವದಾದರೆ ಅವರಿಗೆ ದತ್ತವನ್ನು ಸಂಗ್ರಹಿಸುವ ಪದ್ಧತಿಗಳನ್ನು ಕಲಿಸಬೇಕು. ಸಂರಚನಾಕಾರರಿಗಿಂತ ಮೊದಲು ಐತಿಹಾಸಿಕ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯವನ್ನು ನೋಡುವಾ.

೧. ಐತಿಹಾಸಿಕ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ ಪದ್ಧತಿ

ಭಾಷಾವಿಜ್ಞಾನಿ ತನ್ನ ಸಂಶೋಧನಾ ಕ್ಷೇತ್ರವನ್ನು ಅವಲಂಬಿಸಿ ಅಥವಾ ಅನುಲಕ್ಷಿಸಿ ತನಗೆ ಸರಿ ಹೋಗುವ ಒಂದು ಕ್ಷೇತ್ರಕಾರ್ಯಪದ್ಧತಿಯನ್ನು ಅಳವಡಿಸಿಕೊಳ್ಳುತ್ತಾನೆ. ಸಂಶೋಧನಾ ಕಾರ್ಯದಲ್ಲಿ ಭಾಷಾವಿಜ್ಞಾನಿ ಪ್ರಯೋಗಶಾಲೆ, ಗ್ರಂಥಾಲಯ, ಧ್ವನಿಸುರಳಿ, ಮತ್ತು ಭಾಷಾಸಮುದಾಯ ಇವುಗಳನ್ನು ಬಳಸಿಕೊಳ್ಳುತ್ತಾನೆ. ಅಂದರೆ ಇವುಗಳ ಆಧಾರದಿಂದ ಪ್ರಾಯೋಗಿಕ ಪಠ್ಯ, ದತ್ತ ಸಂಗ್ರಹಣೆ, ಮತ್ತು ನಿರೀಕ್ಷಣೆಗಳನ್ನು ಮಾಡುತ್ತಾನೆ.

ಐತಿಹಾಸಿಕ ಭಾಷಾವಿಜ್ಞಾನ ಕ್ಷೇತ್ರಕಾರ್ಯವನ್ನು ಇನ್ನುಳಿದ ಭಾಷಾವೈಜ್ಞಾನಿಕ ಕ್ಷೇತ್ರ ಕಾರ್ಯಗಳಿಗೆ ಹೋಲಿಸಿದರೆ ಬಹಳ ತೊಂದರೆದಾಯಕವಾದದ್ದು. ಈ ಕ್ಷೇತ್ರಕಾರ್ಯದಲ್ಲಿ ಭಾಷಾವಿ ಜ್ಞಾನಿಗೆ ಪಠ್ಯವನ್ನು ದೊರಕಿಸುವುದೇ ಕಠಿಣ ಕಾರ್ಯವಾಗುತ್ತದೆ. ಪಠ್ಯಗಳು ಇಡಿಯಾಗಿ ದೊರಕದೇ ತುಂಡುತುಂಡಾಗಿ ದೊರೆಯುತ್ತವೆ. ಆಕಸ್ಮಾತ್ತಾಗಿ ದೀರ್ಘಪಠ್ಯಗಳೂ ದೊರೆಯುವ ಸಂಭವವಿರುತ್ತದೆ. ಹೀಗಾಗಿ ಐತಿಹಾಸಿಕ ಭಾಷಾವಿಜ್ಞಾನಿಗೆ ದತ್ತದ ಮೇಲೆ ಹಿಡಿತವಿರುವುದಿಲ್ಲ. ದೊರೆತ ದತ್ತವನ್ನೇ

ಜಾಗರೂಕನಾಗಿ ಬಳಸಬೇಕು. ಇದೇ ದತ್ತವನ್ನು ಯಾರಾದರೂ ಪ್ರಕಟಿಸಿದ್ದರೆ ತನಗೆ ದೊರೆತ ದತ್ತವನ್ನು ಮೊದಲು ಸಂಪಾದನೆ ಮಾಡಿ ಪ್ರಕಟಗೊಂಡ ದತ್ತದೊಡನೆ ಹೋಲಿಸಬೇಕು. ಪಾಠಾಂತರಗಳನ್ನೂ ಲಕ್ಷಿಸಬೇಕು. ಇರುವಷ್ಟು ದತ್ತದ ಮಾರ್ಗವಾಗಿಯೇ ನಿರ್ಣಯಗಳಿಗೆ ಬರಬೇಕು.

ಐತಿಹಾಸಿಕ ಭಾಷಾವಿಜ್ಞಾನಿ ಇತರ ಭಾಷಾವಿಜ್ಞಾನಿಗಳಷ್ಟು ಸುದೈವಿಯಲ್ಲ. ಈತನ ದತ್ತವೇ ಪರಿಮಿತವಾದದ್ದು ಮತ್ತು ಅದನ್ನೇ ಸಂಪೂರ್ಣವಾಗಿ ಅವಲಂಬಿಸಬೇಕು. ಅವುಗಳ ಸಾಧಾರತೆ ಮತ್ತು ವಿಶ್ವಾಸಾರ್ಹತೆಯನ್ನು ಪರೀಕ್ಷಿಸಲು ಅನೇಕ ಬಾರಿ ಬೇರೆ ದತ್ತವಿರುವದಿಲ್ಲ. ಆದ್ದರಿಂದ ಅನೇಕ ಸಾರೆ ಐತಿಹಾಸಿಕ ಭಾಷಾವಿಜ್ಞಾನಿಯ ನಿರ್ಣಯಗಳು ದೋಷಪೂರಿತವೆಂದು ಸಾಬೀತಾಗುವ ಸಂಭವವೂ ಇಲ್ಲದಿಲ್ಲ. ಇಷ್ಟೆಲ್ಲ ಪರಿಮಿತಗಳ ನಡುವೆಯೇ ಐತಿಹಾಸಿಕ ಭಾಷಾವಿಜ್ಞಾನಿಗಳು ತಮ್ಮ ಕಾರ್ಯವನ್ನು ಮತ್ತು ಪರಿಕಲ್ಪನೆಗಳನ್ನು ಯಶಸ್ವಿಯಾಗಿ ಸಾಧಾರತೆ ಮತ್ತು ವಿಶ್ವಾಸಾರ್ಹತೆಯೊಂದಿಗೆ ನಿರೂಪಿಸಿದವರೂ ಇದ್ದಾರೆ. ಹೊಸ ವೈಯಾಕರಣಿಕ(Neogrammarians)ರನ್ನೇ ಉದಾಹರಣೆಗಾಗಿ ತೆಗೆದುಕೊಳ್ಳಬಹುದು. ಮುಖ್ಯವಾಗಿ ಅವರು ನೀಡಿದ ಧ್ವನಿ ಸಿದ್ಧಾಂತಗಳು ಬಹಳ ಖ್ಯಾತಿಯನ್ನು ಪಡೆದಿವೆ.

ಈ ಮೊದಲೇ ಹೇಳಿದಂತೆ ಈ ವಿಜ್ಞಾನಿಗೆ ಅರ್ಧಮರ್ಧ ದತ್ತ ದೊರಕುವುದೇ ಬಹಳ ಅಲ್ಲದೇ ದತ್ತವು ದೋಷಪೂರಿತವಾಗಿರಲೂಬಹುದು, ಅಥವಾ ಆ ಕಾಲದ ಭಾಷೆಗಿಂತ ತೀರ ಭಿನ್ನವಾಗಿರುವ ಸಾಧ್ಯತೆಯೂ ಇರುತ್ತದೆ. ಐತಿಹಾಸಿಕ ಭಾಷಾವಿಜ್ಞಾನಿ ಈ ತೊಂದರೆಗಳನ್ನು ದಾಟಿ ಬರಬೇಕು. ಹೀಗಾಗಿ ಆತ ಎಲ್ಲ ದತ್ತವನ್ನು ವಿಮರ್ಶಾತ್ಮಕವಾಗಿ ನೋಡಲೇಬೇಕು. ಮುದ್ರಣಗೊಂಡ ಪ್ರತಿಯೊಂದು ದತ್ತವನ್ನು ಸಂಗ್ರಹಣೆ ಮಾಡುವಾಗ ಆತ ಅದರೊಡನಿದ್ದ ಅನುಬಂಧಗಳನ್ನೂ ಪರಿಶೀಲಿಸಬೇಕು. ಹೆಚ್ಚಾಗಿ ಮುದ್ರಿತವಾದ ದತ್ತಗಳು ಇತಿಹಾಸಕಾರರಿಗಾಗಿಯೇ ಮುದ್ರಣಗೊಂಡಂತಹವು. ಅವು ಭಾಷಾ ವಿಜ್ಞಾನಿಗಳಿಗಾಗಿ ಅಲ್ಲ ಎಂಬುದನ್ನು ಗಮನದಲ್ಲಿರಿಸಿ ಕೆಲಸ ಮಾಡುವುದು ಒಳ್ಳೆಯದು. ಐತಿಹಾಸಿಕ ಭಾಷಾ ವಿಜ್ಞಾನಿಯ ದತ್ತಸಂಗ್ರಹಣೆ ಮತ್ತು ವಿಶ್ಲೇಷಣೆಯನ್ನು ವೀಕ್ಷಿಸಿದಾಗ ಐತಿಹಾಸಿಕ ಭಾಷಾವಿಜ್ಞಾನಿ ನಮ್ಮನ್ನು ದತ್ತದ ಹತ್ತಿರ ಕರೆದೊಯ್ಯುತ್ತಾನೆ. ಆದರೆ ವರ್ಣನಾತ್ಮಕ ಭಾಷಾವಿಜ್ಞಾನಿ ನಮ್ಮನ್ನು ದತ್ತದಿಂದ ಬಹುದೂರಕ್ಕೆ ಕರೆದೊಯ್ಯುತ್ತಾನೆ.

ಐತಿಹಾಸಿಕ ಭಾಷಾವಿಜ್ಞಾನಿ ಮುಖ್ಯವಾಗಿ ಬರಹಕ್ಕೂ ಮತ್ತು ಮಾತಿಗೂ ಇರುವ ಸಂಬಂಧವನ್ನು ನಿರ್ಧರಿಸಬೇಕು. ಕ್ರಮಬದ್ಧವಾಗಿ ನಡೆದು ಬಂದ ಪ್ರಕ್ರಿಯೆಗಳನ್ನು ಮತ್ತು ಆ ಪ್ರದೇಶದ ಆಡುಮಾತನ್ನು ನಿರ್ಧರಿಸಬೇಕಾಗುತ್ತದೆ. ಅಂದರೆ ದತ್ತ ಮತ್ತು ನಿಯಮಗಳ ನಡುವಿನ ಸಂಬಂಧವನ್ನು ಕಂಡುಹಿಡಯಬೇಕು. ಇದು ಆ ಭಾಷಾವಿಜ್ಞಾನಿಯ ಪರಿಪಕ್ವತೆಯನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ ಇಂಗ್ಲಿಷ್‌ನಲ್ಲಿ ನಡೆದುಹೋದ ಧ್ವನಿಪರಿವರ್ತನೆ Great vowel shift ಅನ್ನು ನೋಡಬೇಕು. ಇಲ್ಲಿ ಮುಖ್ಯವಾಗಿ ಧ್ವನಿ ಪರಿವರ್ತನೆಯನ್ನು ನಿಯಂತ್ರಿಸುವ ತಂತ್ರಗಳಾದ ನಿಯಮಿತತೆ ಮತ್ತು ಆಂತರಿಕ ಸಂಬಂಧಗಳನ್ನು ಯಾವ ರೀತಿ ತೋರಿಸಿಕೊಟ್ಟಿದ್ದಾರೆಂಬುದನ್ನು ಗಮನಿಸಬೇಕು. ಆಗ ಐತಿಹಾಸಿಕ ಭಾಷಾ ವಿಜ್ಞಾನಿಯ ಕ್ಷೇತ್ರಕಾರ್ಯ ಎಷ್ಟು ತೊಡರುಗಳನ್ನು ಒಡ್ಡುತ್ತದೆ ಎಂಬ ಕಲ್ಪನೆ ಬರುತ್ತದೆ.

೨. ಸಂರಚನಾಕಾರರ ಭಾಷಾ ವೈಜ್ಞಾನಿಕ ಕ್ಷೇತ್ರ ಕಾರ್ಯ ಪದ್ಧತಿ

ಸಂರಚನಾಕಾರರ ಕ್ಷೇತ್ರಕಾರ್ಯ ಪದ್ಧತಿಯು ಮುಖ್ಯವಾಗಿ ಭಾಷೆಯನ್ನು ಹೇಗೆ ವಿಶ್ಲೇಷಿಸಬೇಕು ಎಂಬುದನ್ನು ಕಲಿಸುತ್ತದೆ. ಸಂರಚನಾಕಾರರು ಭಾಷೆಯನ್ನು ಭಾಷಿಕ ಕನಿಷ್ಠ ಘಟಕಗಳಲ್ಲಿ ವಿಂಗಡಿಸಿ ಭಾಷಾರಚನೆಯ ಬಗೆಗೆ ಮಾಹಿತಿಯನ್ನು ನೀಡುತ್ತಿದ್ದರು. ಭಾಷಿಕ ರಚನೆಗಳನ್ನು ಅಭ್ಯಸಿಸುವಾಗ ಅವುಗಳ ಅರ್ಥ ಸಂರಚನಾಕಾರರಿಗೆ ಬಹಳ ಗೌಣವಾಗಿ ಕಾಣುತ್ತಿತ್ತು. ಅರ್ಥವಿಜ್ಞಾನ(Semantics)ವನ್ನು ಭಾಷಾವಿಜ್ಞಾನದ ಒಂದು ಅಂಗವೆಂದು ಗಣನೆಗೆ ತೆಗೆದುಕೊಳ್ಳುವುದೂ ಕಠಿಣವಾಗಿತ್ತು. ದತ್ತವನ್ನು ಸಂಗ್ರಹಿಸಲು ಹೇಗೆ ಕ್ಷೇತ್ರಕಾರ್ಯವನ್ನು ನಿರ್ವಹಿಸಬೇಕು ಅನ್ನುವದಕ್ಕಿಂತ ದತ್ತವನ್ನು ಹೇಗೆ ವಿಶ್ಲೇಷಿಸಬೇಕು ಎಂಬುದರ ಬಗೆಗೆ ವಿಶೇಷವಾದ ಒತ್ತು ಕೊಡುತ್ತಿದ್ದರೆಂಬುದು ಸಂರಚನಾಕಾರರ ಕ್ಷೇತ್ರಕಾರ್ಯವನ್ನು ಮತ್ತು ವಿಧಾನಗಳನ್ನು ನೋಡಿದಾಗ ತಿಳಿದುಬರುತ್ತದೆ. ಒಂದು ಭಾಷಾ ಸಮುದಾಯವನ್ನು ಅಭ್ಯಸಿಸಲು ಒಬ್ಬರು ಅಥವಾ ಇಬ್ಬರು ಬಾತ್ಮಿದಾರರನ್ನು ಆಯ್ಕೆಮಾಡಿಕೊಂಡು ಅವರಿಂದ ದತ್ತವನ್ನು ಸಂಗ್ರಹಿಸುತ್ತಿದ್ದರು. ಸಂದರ್ಶಕರು ಭಾಷೆಯ ಕಡೆಗೆ ಚೆನ್ನಾಗಿ ಗಮನಕೊಡುತ್ತಿದ್ದರೇ ಹೊರತು ಬಾತ್ಮಿದಾರರೆಡೆಗೆ ಅಲ್ಲ. ದ್ವಿಭಾಷಿಕರನ್ನು ಬಾತ್ಮಿದಾರರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಭಾಷೆ ಸಾಮಾಜಿಕ ಪ್ರಕ್ರಿಯೆ ಎನ್ನುವ ಮೇರೆಗೆ, ಅದೇ ಸಿದ್ಧಾಂತದ ಪ್ರಕಾರ, ಭಾಷೆ ಪ್ರತಿಯೊಬ್ಬನ ಸೊತ್ತು ಎನ್ನುವ ಅರ್ಥದಲ್ಲಿ ದತ್ತವನ್ನು ಯಾರಿಂದಲಾದರೂ ಸಂಗ್ರಹಿಸಬಹುದು ಎನ್ನುವ ಸಿದ್ಧಾಂತದವರಾಗಿದ್ದರು ಮತ್ತು ಹೀಗೆ ಸಂಗ್ರಹಿಸಿದ ದತ್ತವು ಸಾಧಾರವಾದದ್ದು ಎಂದು ಬಲವಾಗಿ ನಂಬಿದ್ದರು. ಈ ನಂಬಿಕೆಯನ್ನು ಉತ್ಪಾದಕ ವ್ಯಾಕರಣಕಾರರಲ್ಲಿ ಕೂಡ ಕಾಣಬಹುದು.

ಮೌಖಿಕವಾಗಿ ದತ್ತವನ್ನು ಸಂಗ್ರಹಿಸಿದ ನಂತರ ಅದರಲ್ಲಿ ಕನಿಷ್ಠಯುಗ್ಮಗಳನ್ನು ಶೋಧಿಸುತ್ತಿದ್ದರು. ಈ ದತ್ತವನ್ನು ಸಂಗ್ರಹಿಸುವಾಗ ಬಾತ್ಮಿದಾರ ಪ್ರಜ್ಞಾಪೂರ್ವಕವಾಗಿ ದತ್ತವನ್ನು ನೀಡುತ್ತಾನೆ ಎಂಬುದನ್ನು ಗುರುತಿಸಲೂ ಸಹ ಸಂರಚನಾಕಾರರು ಅಸಮರ್ಥರಾಗಿದ್ದರು. ಇಂತಹ ಸಂದರ್ಭಗಳ ಬಗೆಗೆ ಮತ್ತು ಅವುಗಳ ಸಾಮಾಜಿಕ ಸಂದರ್ಭಗಳ ಸಂಬಂಧವನ್ನು ಕುರಿತು ಆಲೋಚಿಸುವುದೂ ಕಠಿಣವಾಗಿತ್ತು. ಆದರೆ ಒಬ್ಬ ಬಾತ್ಮಿದಾರನನ್ನು ಆತನ ಸಮುದಾಯದಿಂದ ಬೇರ್ಪಡಿಸಿ ಆತನನ್ನು ಸಮುದಾಯದೊಂದಿಗೆ ಹೋಲಿಸಿ ನೋಡುವುದು ಸಂರಚನಾಕಾರರ ಸಮಸ್ಯೆಯಾಗದೇ ಅದು ಮನೋಭಾಷಾವಿಜ್ಞಾನ (Psycholinguistics) ದ ಸಮಸ್ಯೆಯಾಗಿ ಪರಿಣಮಿಸುತ್ತದೆ. ಕಾರಣ ಸಂರಚನಾಕಾರರು ಇಂತಹ ವಿಷಯಗಳ ಬಗ್ಗೆ ವಿಚಾರಿಸುವುದು ಸಾಧ್ಯವಿಲ್ಲದ ಮಾತಾಗಿತ್ತು. ಕನಿಷ್ಠಯುಗ್ಮಗಳ ಪರೀಕ್ಷೆ ಭಾಷಾವಿಶ್ಲೇಷಣೆಯಲ್ಲಿ ಎಷ್ಟು ಪ್ರಭಾವಶಾಲಿಯಾಗಿತ್ತೆಂದರೆ ನೋಮ ಚಾಮಸ್ಕಿ ಕೂಡ ಈ ವಿಧಾನವನ್ನು ಸಾಧಾರಿತವಾದದ್ದು ಎಂಬ ಅಭಿಪ್ರಾಯಕೊಟ್ಟದ್ದುಂಟು (೧೯೫೭). ಆದರೆ ಎಡೆಬಿಡದೇ ಈ ಪರೀಕ್ಷೆಯನ್ನು ನಡೆಸಲಾಗಿ ಕೆಲವೊಮ್ಮೆ ಈ ಪರೀಕ್ಷೆ ಕೂಡ ಭಾಷೆಯನ್ನು ವಿವರಿಸಲು ಅಸಮರ್ಥವಾಯಿತು. ಆಗಲೇ ಧ್ವನಿಮಾಗಳೂ ಕೂಡ ಸಾಮಾಜಿಕ ಸ್ಥಿತಿ, ಸ್ತರಗಳನ್ನು ಅವಲಂಬಿಸಿವೆ ಎಂದು ಹೊಳೆದದ್ದು.

ಸಂರಚನಾಕಾರರಾದ ಪೈಕ (೧೯೪೭), ನೈಡಾ (೧೯೪೯),ಮತ್ತು ಗ್ಲಿಸನ್ (೧೯೫೫) ಇವರುಗಳು ಸೂಚಿಸಿದ ವಿಶ್ಲೇಷಣಾತ್ಮಕ ಪದ್ಧತಿಗಳನ್ನು ಉಪಯೋಗಿಸಿಕೊಂಡು ಕೆಲವು ಭಾಷಿಕ ಸಮಸ್ಯೆ

ಮತ್ತು ವೈವಿಧ್ಯತೆಗಳಿಗೆ ಸಮಾಧಾನಗಳನ್ನು ನೀಡಿದರು. ಹಲವಾರು ಪ್ರಕಾರದ ವೈವಿಧ್ಯತೆಗಳನ್ನು ಸ್ವಚ್ಛಂದ / ಸ್ವತಂತ್ರ ವೈವಿಧ್ಯತೆ (Free variation) ಗಳೆಂದು ವಿವರಿಸುತ್ತಿದ್ದರು. ಈ ಪ್ರಕ್ರಿಯೆಯು ಕೆಲವು ಅಪರಿಚಿತ ಭಾಷೆಗಳನ್ನು ವಿಶ್ಲೇಷಿಸುವಾಗ ಅಗಾಧವಾದ ಮತ್ತು ಅಮೂಲ್ಯವಾದ ಕೆಲಸಗಳನ್ನು ಮಾಡಿತು. ಆದರೆ ಇದೇ ಪದ್ಧತಿಯನ್ನು ಪರಿಚಿತ ಭಾಷೆಗಳಿಗೆ ಅನ್ವಯಿಸಿದಾಗ ಅಲ್ಲಿ ಕಂಡುಬರುವ ವೈವಿಧ್ಯತೆಯನ್ನು ವಿವರಿಸಲು ಅಸಾಧ್ಯವಾದ ತೊಂದರೆಯಾಯಿತು. ಆಗ ಈ ವೈವಿಧ್ಯತೆಯನ್ನು ವ್ಯಕ್ತಿ ಭಾಷಾ ಲಕ್ಷಣವೆಂದು ತಳ್ಳಿಬಿಡಲಾಯಿತು. ಇದು ಒಂದು ರೀತಿಯಲ್ಲಿ ಸಸೂರನ ಭಾಷಾವ್ಯವಸ್ಥೆ(Langue) ಯ ಸಿದ್ಧಾಂತದ ಸೋಲು, ಯಾಕಂದರೆ ಭಾಷೆ ಸಾಮಾನ್ಯವಾಗಿ ಆ ಭಾಷಾ ಸಮುದಾಯದ ಸೊತ್ತು ಎಂಬುದು ಅವನ ಸಿದ್ಧಾಂತವಲ್ಲವೇ?

ಈ ಪ್ರಶ್ನೆ ಇಲ್ಲಿಗೆ ನಿಲ್ಲದೆ ಭಾಷಾವಿಜ್ಞಾನಿಗಳಿಗೆ ಭಾಷಾವೈವಿಧ್ಯತೆಯೇ ಒಂದು ಸವಾಲಾಯಿತು. ಕ್ಷಣಕ್ಷಣಕ್ಕೂ ಇದು ಸ್ವಚ್ಛಂದ ವೈವಿಧ್ಯತೆ ಎಂದು ಹೇಳುವುದು ಸಮಂಜಸವೆನ್ನಿಸಲಿಲ್ಲ. ಇದನ್ನು ವಿವರಿಸಲು ಏನಾದರೂ ಒಂದು ಮಾರ್ಗವನ್ನು ಕಂಡುಹಿಡಿಯಬೇಕೆಂದು ತಡಕಾಡಿದರು. ಬರಬರುತ್ತ ಸಾಮಾನ್ಯಿಕರಣ (Generalization) ಕೂಡ ಬಹಳ ತೊಂದರೆಯನ್ನೊಡ್ಡಿತು. ಪ್ರತಿಯೊಂದು ಭಾಷಿಕ ಪ್ರಕ್ರಿಯೆಗೆ ಒಂದು ನಿಯಮವಿರಲೇಬೇಕು. ಅಲ್ಲದೇ ಅದು ಹೇಗೆ ನಡೆಯುತ್ತದೆಂಬ ವಿವರಣೆಯನ್ನು ಭಾಷಾವಿಜ್ಞಾನ ಬಯಸತೊಡಗಿತು. ಆಗ ಸಂರಚನಾಕಾರರ ಪದ್ಧತಿಯ ಪ್ರಾಯೋಗಿಕ ಇತಿಮಿತಿಗಳನ್ನು ಅರಿತುಕೊಂಡ ಭಾಷಾವಿಜ್ಞಾನಿಗಳು ಬೇರೆಬೇರೆ ಸಾಧ್ಯಾ ಸಾಧ್ಯತೆಗಳನ್ನು ಕಂಡುಕೊಳ್ಳಲು ಪ್ರಯತ್ನಿಸತೊಡಗಿದರು. ಇದರ ಫಲವಾಗಿ ಉತ್ಪಾದಕ ವ್ಯಾಕರಣಕಾರರ (Generative Grammarians) ಪಂಥವು ಹುಟ್ಟಿಕೊಂಡಿತು.

೩. ಉತ್ಪಾದಕ ವ್ಯಾಕರಣಕಾರರ ಕ್ಷೇತ್ರ ಕಾರ್ಯ ಪದ್ಧತಿ

ಉತ್ಪಾದಕ ವ್ಯಾಕರಣಕಾರರ ಕ್ಷೇತ್ರಕಾರ್ಯ ಪದ್ಧತಿಯಾಗಲಿ, ಅವರ ಸಿದ್ಧಾಂತಗಳಾಗಲಿ ಅವು ಸಸೂರನ ಸಿದ್ಧಾಂತವನ್ನು ಸಂಪೂರ್ಣವಾಗಿ ಬಳಸಿಕೊಂಡಂತಹವು. ಉತ್ಪಾದಕ ವ್ಯಾಕರಣಕಾರರ ವಾದವು ಈ ರೀತಿಯಾಗಿದೆ - ಭಾಷೆಯು ಸಾಮಾಜಿಕ ಪ್ರಕ್ರಿಯೆಯಾದರೆ, ಅದು ಪ್ರತಿಯೊಬ್ಬನ ಸೊತ್ತಾದರೆ, ದತ್ತವನ್ನು ಆ ಸಮುದಾಯದ ಯಾವುದೇ ವ್ಯಕ್ತಿಯಿಂದ ಪಡೆದುಕೊಳ್ಳಬಹುದು. ಅಲ್ಲದೇ ಭಾಷಾವಿಜ್ಞಾನಿಯು, ದತ್ತ ಸಂಗ್ರಹಿಸಬೇಕಾದ ಭಾಷಾಸಮುದಾಯಕ್ಕೆ ಸೇರಿದವನಾಗಿದ್ದರೆ ತನ್ನ ದತ್ತಕ್ಕೆ ತಾನೇ ಬಾತ್ಮಿದಾರನಾಗಬಹುದು. ಚಾಮಸ್ಕಿಯೂ ತನ್ನ ಭಾಷಾ ಅಂತರ್ಜ್ಞಾನ (Intuition / TACIT Knowledge / Sprachgefuhl) ವನ್ನೇ ಮೂಲವಾಗಿಟ್ಟುಕೊಂಡು ಭಾಷಾವಿಶ್ಲೇಷಣೆ ಮಾಡಿದ್ದಲ್ಲದೇ ಇದು ವೈಜ್ಞಾನಿಕವೂ ಎಂದು ವಾದಿಸಿದ. " the necessity for present day linguistics to give priority to introspective evidence and to the linguistic intuition of native_speakers."(chomsky 1965 :20). ಉತ್ಪಾದಕ ವ್ಯಾಕರಣಕಾರರ ಸಂಶೋಧನೆಯಿಂದ ಇಂಗ್ಲಿಷ ವಾಕ್ಯ ಉತ್ಪತ್ತಿಯ ಹೊಸ ಆಯಾಮಗಳು ಬೆಳಕಿಗೆ ಬಂದವು. ಚಾಮಸ್ಕಿ ತನ್ನ ವಾಕ್ಯ ಉತ್ಪತ್ತಿಯ ಸಿದ್ಧಾಂತಗಳನ್ನು ಮುಂಚೂಣಿಯಲ್ಲಿ ತಂದು ನಿಲ್ಲಿಸಿದನಲ್ಲದೇ ಭಾಷಾವಿಜ್ಞಾನದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದ. ಆದ್ದರಿಂದ ಚಾಮಸ್ಕಿಯನ್ನು ಆಧುನಿಕ ಭಾಷಾವಿಜ್ಞಾನದ ಪ್ರವರ್ತಕನೆಂದು ಕರೆಯುವುದು.

ಉತ್ಪಾದಕ ವ್ಯಾಕರಣಕ್ಕೆ ತಳಹದಿಯಾಗಿ ಈ ಕೆಳಗಿನ ಸಂಗತಿಗಳನ್ನು ಚಾಮಸ್ಕಿ ಪ್ರತಿಪಾದಿಸುತ್ತಾನೆ.

೧. ವ್ಯಾಕರಣಾತ್ಮಕತೆ (Grammaticality) ಮತ್ತು ಅವ್ಯಾಕರಣಾತ್ಮಕತೆ (Ungrammaticality) ಗಳ ನಿರ್ಣಯ.

೨. ವಾಕ್ಯಗಳಲ್ಲಿ ಬರುವ ಸಂದಿಗ್ಧತೆ (Ambiguity)ಯನ್ನು ಗುರುತಿಸುವಿಕೆ.

೩.ಏಕಾರ್ಥ(Synonmioty),ಭಾವಾರ್ಥ(Paraphase) ಮತ್ತು ವಾಕ್ಯ ಸಂಬಂಧಗಳನ್ನು (Relatedness of sentences) ಗುರುತಿಸುವಿಕೆ.

ವಾಕ್ಯಗಳ ಸಾಧಾರತೆಯನ್ನು ವ್ಯಾಕರಣಾತ್ಮಕತೆಯನ್ನು ಕುರಿತು ಚಾಮಸ್ಕಿ _ ಅದು ಮಾತೃಭಾಷಿಕ(Native_speaker) ನ ಸ್ವೀಕೃತಿ (Acceptability) ಯನ್ನು ಅವಲಂಬಿಸಿರುತ್ತದೆ ಎಂದು ಹೇಳಿದ್ದಾನೆ. ಆದರೆ ವ್ಯಾಕರಣಾತ್ಮಕತೆ ಮಾತ್ರ ವಾಕ್ಯ ಸಿದ್ಧಾಂತಗಳ ಮೇಲೆ ಅವಲಂಬಿಸಿರುತ್ತದೆ ಎನ್ನುತ್ತಾನೆ.

ಈ ವಾದದ ಬೆಳವಣಿಗೆಯ ಹಿನ್ನೆಲೆಯಲ್ಲಿ ಚಾಮಸ್ಕಿಯ ಪಂಥದ ಭಾಷಾವಿಜ್ಞಾನಿಗಳೆಲ್ಲ ಚಾಮಸ್ಕಿಯ ಭಾಷಾ ಅಂತರ್ಜ್ಞಾನ (Intuition) ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ವ್ಯಕ್ತಿಭಾಷೆಯನ್ನು ದತ್ತ ಸಂಗ್ರಹಣೆಗಾಗಿ ಉಪಯೋಗಿಸತೊಡಗಿದರು. ಆದರೆ ತಾವು ಆಧಾರವಾಗಿಟ್ಟುಕೊಂಡ ತಮ್ಮ ವ್ಯಕ್ತಿಭಾಷೆ ಎಂದು ಹೇಳದೇ ಅದು ತಮ್ಮ ಉಪಭಾಷೆ ಅಥವಾ ಅದು ಎಲ್ಲ ಉಪಭಾಷೆಗಳಿಗೆ ಸಂಬಂಧಪಟ್ಟುದುದು ಎಂದು ಹೇಳತೊಡಗಿದರು. ಬರಬರುತ್ತ ಭಾಷಾ ವಿಜ್ಞಾನಿಗಳು ಉತ್ಪಾದಕ ವ್ಯಾಕರಣಕಾರರು ಭಾಷಾ ಅಂತರ್ಜ್ಞಾನದಿಂದ ಸಂಗ್ರಹಿಸಿದ ದತ್ತದ ಸಾಧಾರತೆ ಮತ್ತು ವಿಶ್ವಾಸಾರ್ಹತೆಯನ್ನು ಪ್ರಶ್ನಿಸತೊಡಗಿದರು. ಉಳಿದ ವೈಜ್ಞಾನಿಕ ಕ್ಷೇತ್ರಗಳಲ್ಲಿ ನಡೆಸುವ ಸಂಶೋಧನೆಗೆ ಭಾಷಾವೈಜ್ಞಾನಿಕ ಸಂಶೋಧಕರನ್ನು ಹೋಲಿಸಿದಾಗ ಅಂತರ್ಜ್ಞಾನದಿಂದ ಸಂಗ್ರಹಿಸಿದ ದತ್ತವನ್ನು ಸಾಧಾರತೆ ಮತ್ತು ವಿಶ್ವಾಸಾರ್ಹತೆಯೊಂದಿಗೆ ಒಪ್ಪಿಕೊಳ್ಳುವುದು ಕಠಿಣವಾಯಿತು. ಯಾವ ವಿಜ್ಞಾನಿಯೂ ತನ್ನ ಅನಿಸಿಕೆಗಳನ್ನು ಮತ್ತು ಜ್ಞಾಪಕಶಕ್ತಿಯನ್ನು ಮೂಲವಾಗಿಟ್ಟುಕೊಂಡು ಅವು ಸಾಧಾರತೆ ಮತ್ತು ವಿಶ್ವಾಸಾರ್ಹತೆಯಿಂದ ಕೂಡಿದಂತಹವು ಎಂದು ಹೇಳಲಾರ. ವೈಜ್ಞಾನಿಕ ದತ್ತವಿದ್ದರೆ ಅದು ಯಾವುದೇ ಕಾಲ ಮತ್ತು ಸ್ಥಳಗಳಲ್ಲಿಯೂ ಒಂದೇ ರೀತಿಯಾದ ಸಾಧಾರತೆ ಮತ್ತು ವಿಶ್ವಾಸಾರ್ಹತೆಯಿಂದ ಕೂಡಿದ ಫಲಿತಾಂಶವನ್ನು ನೀಡಬೇಕು. ಈ ವಿವಾದವನ್ನು ಗಮನಿಸಿದಾಗ ಉತ್ಪಾದಕ ವ್ಯಾಕರಣಕಾರರ ಕ್ಷೇತ್ರಕಾರ್ಯ ಎಷ್ಟು ದೋಷಪೂರಿತವಾದುದು ಎಂಬುದು ಮನದಟ್ಟಾಗುತ್ತದೆ. ಆದರೆ ಚಾಮಸ್ಕಿ ವಿಶ್ವಾಸಾರ್ಹತೆಯ ಪ್ರಶ್ನೆಯನ್ನೇ ಅಲ್ಲಗಳೆಯುತ್ತಾನೆ (೧೯೬೫). ಈ ರೀತಿಯ ಪ್ರಶ್ನೆಗಳು ಉತ್ಪಾದಕ ವ್ಯಾಕರಣಕಾರರ ಸಿದ್ಧಾಂತಗಳನ್ನು ಸಹ ಅಲುಗಾಡಿಸಿದವು. ಅಲ್ಲದೇ ಇವರ ಫಲಿತಾಂಶ ಮತ್ತು ನಿರ್ಣಯಗಳ ಮೇಲೆ ಆ ಭಾಷಾವಿಜ್ಞಾನಿಯ ಪ್ರಭಾವವಿರುತ್ತದೆಂಬುದೂ ಖಚಿತವಾಯಿತು. ವಿಮರ್ಶಾತ್ಮಕವಾಗಿ ನೋಡಿದರೆ ಈ ಪ್ರಶ್ನೆ ಭಾಷಾವಿಜ್ಞಾನದ ಮೂಲಭೂತ ಪ್ರಶ್ನೆಯಾಗಿದೆ. ಉಳಿದ ವಿಜ್ಞಾನಗಳಂತೆ ಭಾಷಾವಿಜ್ಞಾನ ಪರಿಪೂರ್ಣವಾದ ವಿಜ್ಞಾನವಾಗದಿರುವದಕ್ಕೆ ಇದೇ ಕಾರಣವಾಗಿದೆ ಎಂದು ಹೇಳಬೇಕು. ಅದೇನೇ ಇದ್ದರೂ ಕ್ಷೇತ್ರಕಾರ್ಯ ಮತ್ತು ದತ್ತದ ಪ್ರಶ್ನೆ

ಬಂದಾಗ ಐತಿಹಾಸಿಕ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ ಮತ್ತು ಉತ್ಪಾದಕ ವ್ಯಾಕರಣಕಾರರ ಕ್ಷೇತ್ರಕಾರ್ಯಗಳನ್ನು ತುಲನೆ ಮಾಡಿದರೆ ಉತ್ಪಾದಕ ವ್ಯಾಕರಣಕಾರರ ದತ್ತ ಎಷ್ಟು ವೈಜ್ಞಾನಿಕ ಎನ್ನುವುದು ತಿಳಿಯುತ್ತದೆ.

ಆಡುಮಾತು ಮತ್ತು ಕ್ಷೇತ್ರಕಾರ್ಯ : ಕೆಲವು ಹೊಸ ಆಯಾಮಗಳು

ವ್ಯಾಕರಣವು ಭಾಷಾಶಾಸ್ತ್ರವಾಗಿ, ಭಾಷಾಶಾಸ್ತ್ರವು ಭಾಷಾವಿಜ್ಞಾನವಾಗಿ, ಭಾಷಾವಿಜ್ಞಾನವು ಭಾಷಾಶಿಲ್ಪ (Language Engineering) ವಾಗಿ ಉಳಿದ ವಿಜ್ಞಾನಗಳೊಡನೆ ಸರಿತೂಗುವಂತೆ ಕಂಡರೂ ಕೆಲವೊಮ್ಮೆ ಭಾಷಾವಿಜ್ಞಾನದ ಬಗೆಗೆ ಗಂಭೀರವಾಗಿ ಆಲೋಚಿಸಿದಾಗ ಭಾಷಾವಿಜ್ಞಾನಿಗಳು ಮಾಡಿದ ಹಾಗೂ ಮಾಡುತ್ತಿರುವ ಸಂಶೋಧನೆಗಳ ಕಡೆಗೆ ಹಣಿಕಿನೋಡಬೇಕಾಗುತ್ತದೆ. ವ್ಯಾಕರಣದಿಂದ ಭಾಷಾಶಿಲ್ಪದವರೆಗೆ ಬೆಳೆದು ಬಂದ ಈ ಶಿಸ್ತಿನ ಬೆಳವಣಿಗೆಗಳ ಹಂತಗಳನ್ನು ಐತಿಹಾಸಿಕವಾಗಿ ಸಮೀಕ್ಷಿಸಿದರೆ ಬರಹದಿಂದ ಆಡುಮಾತಿನವರೆಗೆ ಬಂದು ಆಡುಮಾತನ್ನು ವಿಶ್ಲೇಷಿಸಿ ವಿವರಣೆ ಕೊಡುವುದೇ ಭಾಷಾಶಿಲ್ಪವಾಗಿದೆ ಎಂದು ಹೇಳಬೇಕು. ಆದರೆ ಹೀಗೆ ನಿರ್ವಚಿಸಿದ ತಕ್ಷಣ ನಿಜವಾದ ಭಾಷಾವಿಜ್ಞಾನಿಗೆ ಒಂದು ಅಪ್ಪಟವಾದ ಪ್ರಶ್ನೆ ಹುಟ್ಟಿಕೊಳ್ಳುತ್ತದೆ - ಭಾಷಾವಿಜ್ಞಾನಿಗಳು ಸಂಗ್ರಹಿಸುವ ದತ್ತವು ಎಷ್ಟರ ಮಟ್ಟಿಗೆ ದೈನಂದಿನ ಆಡುಮಾತಿಗೆ ಸಂಬಂಧಿಸಿದುದು ? ಇದರರ್ಥ ಭಾಷಾವಿಜ್ಞಾನಿಗಳು ಸರ್ವೇಕ್ಷಣೆ ಅಥವಾ ಕ್ಷೇತ್ರಕಾರ್ಯ ಮಾಡುವದಿಲ್ಲವೆಂದಲ್ಲ. ಕ್ಷೇತ್ರಕಾರ್ಯದಲ್ಲಿ ಎದರಾಗುವ ಎಡರುತೊಡರುಗಳನ್ನು ಎದುರಿಸಲು ಎಷ್ಟು ಸಮರ್ಥರಿದ್ದಾರೆ ಎಂಬುದು ಮುಖ್ಯವಾಗುತ್ತದೆ. ಈ ತೊಡರುಗಳು ದತ್ತ, ಬಾತ್ಮಿದಾರ, ಸಂದರ್ಶಕ, ಸಂದರ್ಶನ, ಅಥವಾ ಕ್ಷೇತ್ರಕಾರ್ಯದ ವಿಜ್ಞಾನ ವಿಧಾನ ಯಾವುದಾದರೊಂದಕ್ಕೂ ಅಂಟಿಕೊಂಡಿರಬಹುದು. ಕ್ಷೇತ್ರಕಾರ್ಯದಿಂದ ಪಡೆದುಕೊಂಡ ದತ್ತ ಪರಿಪೂರ್ಣವಾಗಿರಲಿಕ್ಕಿಲ್ಲ. ಬಾತ್ಮಿದಾರನ ಆಯ್ಕೆ ಸರಿಯಾಗಿರಲಿಕ್ಕಿಲ್ಲ. ಸಂದರ್ಶಕರು ಪಡೆದುಕೊಂಡ ಜ್ಞಾನ ದತ್ತ ಸಂಗ್ರಹಿಸಲು ಪಕ್ವವಾಗಿರಲಿಕ್ಕಿಲ್ಲ. ಅಥವಾ ಕ್ಷೇತ್ರಕಾರ್ಯದಲ್ಲಿ ಬಳಸಿದ ತಂತ್ರಗಳಲ್ಲಿ ದೋಷ ಅಡಗಿರಬಹುದು. ಹೀಗೆ ಒಂದಿಲ್ಲೊಂದು ಕೊರತೆಯುಂಟಾಗಿರಬಹುದು. ಈ ತೆರನಾದ ಯಾವ ತಾಂತ್ರಿಕ ತೊಂದರೆ ಇಲ್ಲವೆಂದಾದರೆ ದತ್ತವನ್ನು ಸಂಗ್ರಹಿಸುವ ಭಾಷಾವಿಜ್ಞಾನಿ ಅಸಮರ್ಥವಾಗಿದ್ದನೆಂದು ಹೇಳಬೇಕು. ಇಂದಿನವರೆಗೆ ನಡೆದು ಬಂದ ಕ್ಷೇತ್ರಕಾರ್ಯವನ್ನು ಅದನ್ನು ಹಿಂಬಾಲಿಸಿ ಬರುವ ಸಂಶೋಧನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮೂಲಭೂತವಾದ ಪ್ರಶ್ನೆಯೊಂದು ಉದ್ಭವಿಸುತ್ತದೆ. ಭಾಷಾವಿಜ್ಞಾನಿಗಳು ಆಡುಮಾತನ್ನು ದಾಖಲಿಸಿಕೊಳ್ಳುತ್ತಾರೆಯೇ ? ಹಾಗಿದ್ದರೆ ಭಾಷಾವೈವಿಧ್ಯತೆಯ ನಿಯಮಗಳು ಭಾಷಾವಿಜ್ಞಾನಿಗಳಿಂದ ಏಕೆ ಜಾರುತ್ತಿವೆ ? ಅಥವಾ ಭಾಷಾರೂಪವನ್ನು ಗಣನೆಗೆ ತಂದುಕೊಳ್ಳಲಾರದಷ್ಟು ಭಾಷಾವಿಜ್ಞಾನಿಗಳು ನಿರ್ಲಕ್ಷ್ಯದಿಂದ ಇದ್ದಾರೆಯೇ ? ಇವುಗಳನ್ನು ಕುರಿತು ಆಲೋಚಿಸಿದಾಗ ಕ್ಷೇತ್ರಕಾರ್ಯವೇ ನಮ್ಮೆದುರು ನಿಲ್ಲುತ್ತದೆ. ಕ್ಷೇತ್ರಕಾರ್ಯಕ್ಕೆ ಒಗ್ಗುವಂಥ ತಂತ್ರಗಳನ್ನು ಭಾಷಾವಿಜ್ಞಾನಿಗಳು ಬಳಸಿಕೊಳ್ಳುತ್ತಿಲ್ಲವೆಂದು ಅನ್ನಿಸುತ್ತದೆ. ದತ್ತ ಸಂಗ್ರಹಣದ ಕಾಲಕ್ಕೆ ಸಿದ್ಧಾಂತವನ್ನು ಕಲ್ಪಿಸಿ ಗಮನದಲ್ಲಿರಿಸಿಕೊಂಡು ಕೆಲಸ ಮಾಡುತ್ತಾರೆಯೇ ? ಎಂಬ ಶಂಕೆ ಬರುತ್ತದೆ. ಈ ಕುಂದಿನಿಂದ ಪಾರಾಗಬೇಕಾದರೆ ದೊರೆತ ದತ್ತವನ್ನೆಲ್ಲ ಸಂಗ್ರಹಿಸಬೇಕು. ಸೈದ್ಧಾಂತಿಕ ಕಲ್ಪನೆಗೆ ದತ್ತವು ಪ್ರತಿಕೂಲವಾಗಿದ್ದರೂ, ಅನುಕೂಲವಾಗಿದ್ದರೂ ಚಾಚೂ ತಪ್ಪದೇ ದಾಖಲಿಸಿಕೊಳ್ಳಬೇಕು. ಇಂತಹ ಕ್ಷೇತ್ರಕಾರ್ಯ ಮಾಡಿದಾಗ ಮಾತ್ರ ಭಾಷಾವೈವಿಧ್ಯತೆ ಭಾಷಾ

ವಿಜ್ಞಾನಿಯ ಕೈಗೆ ಎಟಕುತ್ತದೆ.

ಸಸೂರ ಹೇಳಿದ ಪ್ರಕಾರ "ಭಾಷೆ ಸಾಮಾಜಿಕ ಪ್ರಕ್ರಿಯೆ" ಎಂದು ಪರಿಗಣಿಸುವದಾದರೆ ಭಾಷೆ ಸಮಾಜದ ಆಳಕ್ಕೆ ಇಳಿದುಕೊಂಡಿದೆ. ಸಮಾಜ ಇಲ್ಲದೇ ಭಾಷೆ ಇಲ್ಲ. ಭಾಷೆ ಇಲ್ಲದೇ ಸಮಾಜವಿಲ್ಲ. ಸಮಾಜ ಮತ್ತು ಭಾಷೆ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಭಾಷಿಕ ನಿಯಮಗಳು ಮತ್ತು ಅವುಗಳ ಹುಟ್ಟು ಸಮಾಜದಲ್ಲಿಯೇ ಅಂದಮೇಲೆ ಭಾಷಿಕ ನಿಯಮಗಳನ್ನು ಒಂದು ಚೌಕಟ್ಟಿನಲ್ಲಿ ಅಳವಡಿಸಬಹುದು. ಕ್ಷೇತ್ರಕಾರ್ಯದಿಂದ ಪಡೆದ ದತ್ತ ಮಾತ್ರ ವೈವಿಧ್ಯಮಯವಾಗಿರುತ್ತದೆ. ದತ್ತ ವೈವಿಧ್ಯಮಯವಾಗಿರುವದಕ್ಕೆ ಕಾರಣಗಳನ್ನು ಸಾಮಾಜಿಕ ಸಂದರ್ಭದಿಂದಲೇ ಶೋಧಿಸಬೇಕು. ಉದಾಹರಣೆಗೆ ಸಾಮಾಜಿಕ ಸ್ತರ, ಲಿಂಗಭೇದ, ಶಿಕ್ಷಣ ಮತ್ತು ವಯಸ್ಸು ಇವೇ ಮೊದಲಾದ ಸಾಮಾಜಿಕ ಸಂಗತಿಗಳಿರಬಹುದು. ಹಾಗಾದರೆ ವೈವಿಧ್ಯತೆ ಭಾಷಾವಿಜ್ಞಾನಿಗಳ ಕೈಯಿಂದ ಏಕೆ ಜಾರುತ್ತಿದೆ ? ಇದಕ್ಕೆ ಉತ್ತರ ಬಹಳ ಸರಳವಾಗಿದೆ. ದತ್ತ ಪರಿಪೂರ್ಣವಾಗಿರುವುದಿಲ್ಲ. ದತ್ತ ದಾಖಲಿಸುವ ಕಾಲಕ್ಕೆ ಸಂದರ್ಶಕನು ತನ್ನ ಸಿದ್ಧಾಂತದ ಕಲ್ಪನೆ ಕಡೆಗೆ ಹೆಚ್ಚು ಒಲೆದಿರುತ್ತಾನೆ. ಬಾತ್ಮಿದಾರ ತನ್ನ ಸಾಮಾಜಿಕ ಸ್ಥಾನ ಮಾನಗಳ ಬಗ್ಗೆ ಜಾಗರೂಕನಾಗಿರುತ್ತಾನೆ. ಭಾಷಾವಿಜ್ಞಾನಿ ವ್ಯಕ್ತಿ ಅಥವಾ ಉಪಭಾಷೆ ಅವಲಂಬಿಸಿದ್ದರೆ ಅವನ ಮನಸ್ಸು ಸಿದ್ಧಾಂತವನ್ನು ದಿಟ್ಟಿಸುತ್ತಿರುತ್ತದೆ. ಸರಿಯಾದ ಭಾಷಾ ವಿಶ್ಲೇಷಣೆ ನಡೆಯಬೇಕಾದರೆ ಅಪ್ಪಟ ಆಡುಮಾತಿನಿಂದಲೇ ದತ್ತವನ್ನು ಸಂಗ್ರಹಿಸಬೇಕು. ಪೂರ್ವಗ್ರಹ ಪೀಡೆಗಳಿಂದ ದೂರವಿರಬೇಕು.

ದತ್ತ ಸಂಗ್ರಹಿಸುವ ಪದ್ಧತಿ

ಭಾಷಾವೈವಿಧ್ಯತೆಯನ್ನೇ ವಿಶ್ಲೇಷಿಸುವ ಕ್ಷೇತ್ರಕಾರ್ಯವಾಗಿದ್ದರೆ ಪ್ರಶ್ನಾವಳಿಯ ಚೌಕಟ್ಟಿನಲ್ಲಿ ದತ್ತವನ್ನು ಸಂಗ್ರಹಿಸಕೂಡದು. ಭಾಷೆ ಏಕಮುಖವಾದದ್ದಲ್ಲ; ನಾನಾ ಮುಖಗಳನ್ನು ಅಳವಡಿಸಿಕೊಂಡದ್ದು. ತಾಂತ್ರಿಕವಾಗಿಯೂ ಜಗತ್ತು ಸಾಕಷ್ಟು ಮುಂದುವರಿದಿದೆ. ದತ್ತವನ್ನು ಪ್ರಶ್ನಾವಳಿಯ ಸಹಾಯವಿಲ್ಲದೇ ದೈನಂದಿನ ಆಡುಮಾತನ್ನು ಟೇಪಮಾಡಿಕೊಳ್ಳಬೇಕು. ನಂತರ ಧ್ವನ್ಯಾಲೇಖದಲ್ಲಿ ಬರೆದುಕೊಳ್ಳಬೇಕು. ವ್ಯವಸ್ಥಿತ ಸಂದರ್ಶನ, ನಿರೀಕ್ಷಣೆ, ಮತ್ತು ಸಮಾಲೋಚನೆ ಇವು ಬಾತ್ಮಿದಾರನನ್ನು ಕೃತಕ ಸಂದರ್ಭದ ಕಡೆಗೆ ಕರೆದೊಯ್ಯುತ್ತವೆ. ಆತ ನಿಯಮನಿಷ್ಠ ಭಾಷೆಯನ್ನು ಉಪಯೋಗಿಸುತ್ತಾನೆ. ಇದು ಪ್ರಮಾಣಭಾಷೆಯಲ್ಲ. ಆದರೆ ಪ್ರಮಾಣಭಾಷೆಗೆ ಹತ್ತಿರವಾದದ್ದು. ವ್ಯವಸ್ಥಿತ ಸಂದರ್ಶನದಲ್ಲಿ ಬಾತ್ಮಿದಾರ ತಾನು ಬಾತ್ಮಿಯನ್ನು ಪೂರೈಸುವವನೆಂದು ಬಹಳ ಎಚ್ಚರಿಕೆಯಿಂದ ವರ್ತಿಸುತ್ತಾನೆ. ಆದರೆ ಆತ ಬಾತ್ಮಿದಾರನಾಗಿರದಾಗ ಯಾವ ರೀತಿಯಾದ ಭಾಷೆಯನ್ನು ಉಪಯೋಗಿಸುತ್ತಾನೆಂಬುದನ್ನು ಗಮನಿಸಬೇಕು. ಸಂದರ್ಭಕ್ಕನುಸಾರವಾಗಿ ತನ್ನ ಮಾತಿನ ಧಾಟಿಯನ್ನು ಬದಲಿಸುತ್ತಲೇ ಇರುತ್ತಾನೆ. ಸಾಮಾಜಿಕ ಪರಿಸರ, ಸ್ತರಗಳಿಗನುಗುಣವಾಗಿ ಭಾಷೆ ಹೇಗೆ ತನ್ನಲ್ಲಿ ಮಾರ್ಪಾಡನ್ನು ತಂದುಕೊಳ್ಳುತ್ತಿರುತ್ತದೋ ಹಾಗೆ ಈತ ಕೂಡ ವರ್ತಿಸುತ್ತಿರುತ್ತಾನೆ. ಆದ್ದರಿಂದ ವ್ಯವಸ್ಥಿತವಾದ ಪ್ರಶ್ನಾವಳಿಯಿಂದ ವ್ಯವಸ್ಥಿತವಾದ ಮತ್ತು ಪರಿಪೂರ್ಣವಾದ ದತ್ತವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನಿರೀಕ್ಷಣೆಯಲ್ಲಿ ಅಭಾಸವನ್ನುಂಟುಮಾಡುತ್ತದೆ.

ನಿತ್ಯದ ಆಡುಮಾತನ್ನು ದಾಖಲಿಸಿಕೊಳ್ಳಬೇಕಾದರೆ, ಭಾಷಾ ಸಮುದಾಯವನ್ನು ಅತ್ಯಂತ

ಜಾಗರೂಕತೆಯಿಂದ ನಿರೀಕ್ಷಿಸಬೇಕು. ಸಂದರ್ಶನ ನಡೆದಿದೆ ಎಂಬ ಕಲ್ಪನೆ ಉಂಟಾಗದಂತೆ ಸಮಾಲೋಚನೆಯಲ್ಲಿ ಬಾತ್ಮಿದಾರನನ್ನು ಮಗ್ನಗೊಳಿಸಬೇಕು. ಜೀವನಕ್ಕೆ ಬಹಳ ಹತ್ತಿರವಾದ ಪ್ರಶ್ನೆಗಳನ್ನು ಕೇಳಬೇಕು. ಪ್ರಶ್ನೆಗಳು ವಿವರಣಾತ್ಮಕವಾದ ಉತ್ತರವನ್ನು ನೀಡುವಂತಹವಿರಬೇಕು. ಹೌದು, ಇಲ್ಲ ಎಂದು ಉತ್ತರ ಬರುವ ಪ್ರಶ್ನೆಗಳು ಇರಕೂಡದು. ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಹೋಗಕೂಡದು. ಸಂದರ್ಭಕ್ಕೆ ಉಚಿತವಾದ ಪ್ರಶ್ನೆಗಳನ್ನು ಕೇಳಬೇಕು. ಸಂಭಾಷಣೆ ಯಾವಾಗಲೂ ಸ್ವಾಭಾವಿಕವಾದದ್ದಿರಬೇಕು. ಕೃತ್ರಿಮತೆ ಎಲ್ಲಿಯೂ ಕಾಣಬಾರದು.

ಸಾಂಪ್ರದಾಯಿಕ ಸಂದರ್ಶನಪದ್ಧತಿಯಿಂದ ಧ್ವನಿ, ಧ್ವನಿಮಾ, ಕನಿಷ್ಠಯುಗ್ಮ, ಆಕೃತಿಮಾ, ಸಂಧಿನಿಯಮ, ವಾಕ್ಯರಚನೆ ಇವುಗಳನ್ನು ಕಂಡುಕೊಳ್ಳಬಹುದು. ಆದರೆ ಭಾಷಾವೈವಿಧ್ಯತೆಯನ್ನು ವಿವರಿಸಲು ಸಾಧ್ಯವಾಗದು. ಸಾಂಪ್ರದಾಯಿಕ ಸಂದರ್ಶನದಿಂದ ನಿತ್ಯದ ಎಲ್ಲ ಆಯಾಮಗಳನ್ನೊಳಗೊಂಡ ಮಾತಿನ ಧಾಟಿಗಳನ್ನು ಸಂಗ್ರಹಿಸಲಿಕ್ಕಾಗುವುದಿಲ್ಲ. ಈ ತೆರನಾದ ಆಯಾಮಗಳನ್ನು ದಾಖಲಿಸಬೇಕಾದಲ್ಲಿ ಸಂಪೂರ್ಣವಾಗಿ ಸಾಮಾಜಿಕ ರಚನೆಯನ್ನು ಅಭ್ಯಸಿಸಿ ಪ್ರತಿಯೊಂದು ಕ್ಷಣಕ್ಷಣಕ್ಕೂ ಬದುಕನ್ನು ದಿಟ್ಟಿಸುತ್ತ ಹೋಗಬೇಕು. ದತ್ತವನ್ನು ಪೇಟೆ, ಚಹದ ಅಂಗಡಿ, ಉಪವನ, ಶಾಲೆ, ಜನಸಮುದಾಯ, ಸಾಮಾಜಿಕ ಸಮಾರಂಭ, ಮತ್ತು ಸಾರ್ವಜನಿಕ ಎಲ್ಲ ಸ್ಥಳಗಳಿಂದ ಸಂಗ್ರಹಿಸಬೇಕು. ಸಂದರ್ಶಕ ದತ್ತ ಸಂಗ್ರಹಿಸಲು ಹೊಸ ಆಯಾಮಗಳನ್ನು ಕಂಡುಕೊಳ್ಳಲು ಹವಣಿಸಬೇಕು. ಅಪ್ಪಟವಾದ ದತ್ತವನ್ನು ಕೇವಲ ವೈಯಕ್ತಿಕ ಸಂದರ್ಶನದಲ್ಲಿ ಸಂಗ್ರಹಿಸಲಾಗದು. ವ್ಯಕ್ತಿಯಿಂದ ಆ ವ್ಯಕ್ತಿಯ ಕುಟುಂಬಕ್ಕೆ ಕುಟುಂಬದಿಂದ ಸಮುದಾಯವನ್ನು ಭೇಧಿಸುತ್ತ ಹೋಗಬೇಕು. ಈ ರೀತಿಯಾದ ಕ್ಷೇತ್ರಕಾರ್ಯವನ್ನು ಗಂಪರ್ಜ, ಲೆಬೋವ್ ಮತ್ತು ಲ್ಯಾಂಬ್ರೊಟ ಮಾಡಿದುದನ್ನು ಗಮನಿಸಬೇಕು. ಇಂತಹ ಕ್ಷೇತ್ರಕಾರ್ಯಗಳಲ್ಲಿಯೂ ಅಡಚಣೆಗಳಿವೆ. ಇವೂ ಕೂಡ ಪರಿಪೂರ್ಣವಾದವುಗಳೆಂದು ಹೇಳಲುಬಾರದು. ಉದಾಹರಣೆಗೆ ಲೆಬೋವ್ ಡಿಪಾರ್ಟಮೆಂಟಲ್ ಸ್ಟೋರ್ಸದಲ್ಲಿ ನಡೆಸಿದ ಕ್ಷೇತ್ರಕಾರ್ಯ ಆತನಿಗೆ ಬಾತ್ಮಿದಾರರ ಕೌಟುಂಬಿಕ ಹಿನ್ನೆಲೆ, ಶಿಕ್ಷಣ ಮತ್ತು ಸಾಮಾಜಿಕ ಸ್ತರಗಳ ಬಗೆಗೆಯೂ ಮಾಹಿತಿಯನ್ನು ಒದಗಿಸಲಿಲ್ಲ. ಆದರೆ ಆತ ದತ್ತವನ್ನು ಸಂಗ್ರಹಿಸಲು ಒಂದು ಹೊಸ ತಂತ್ರವನ್ನು ಕಂಡು ಹಿಡಿದ. ಈ ನಿಟ್ಟಿನಲ್ಲಿ ಸಂಶೋಧನೆ ನಡೆಸಿದ ಯೋಜನೆಗಳು ಈ ಕೆಳಗಿನಂತಿವೆ :

William Labov :

1. New York city community Project 1966.
2. South Central Harlem Project 1968

Fishman & Gumper z :

Fishman - Gumperz - Ma Project in Jersey City 1964.

ಈ ಯೋಜನೆಗಳಲ್ಲಿ ಈ ಕೆಳಗಿನ ತಂತ್ರಗಳನ್ನು ದತ್ತ ಸಂಗ್ರಹಣೆಗಾಗಿ ಉಪಯೋಗಿಸಿಕೊಂಡಿದ್ದಾರೆ -

Perception tests, subjective reaction tests, self-evaluation

tests, Classroom correction tests, Vernacular tests, and Session with natural groups etc.,

ಸಮೂಹ ಮಾಧ್ಯಮದಿಂದಲೂ ದತ್ತವನ್ನು ಪಡೆಯುವ ಸಾಧ್ಯತೆ ಇದೆ. ಹಲವಾರು ಸಾರೆ ದುರಂತಗಳು ಸಂಭವಿಸಿರುತ್ತವೆ. ಆಗ ನಡೆಸಿದ ಸಂದರ್ಶನಗಳನ್ನು ವೀಕ್ಷಿಸಿದರೆ ಅಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಉಪಭಾಷೆ ಅಥವಾ ವ್ಯಕ್ತಿಭಾಷೆಯನ್ನು ಬಳಸುತ್ತಿರುತ್ತಾನೆ. ಯಾಕೆಂದರೆ ಆತ ತನ್ನ ಜೀವನಕ್ಕೆ ಬಹಳ ಹತ್ತಿರವಾದ ಘಟನೆಯನ್ನು ವಿವರಿಸುತ್ತಿರುವಂತೆ ಮಗ್ನನೂ ಆಗಿರುತ್ತಾನೆ. ತಾನು ಸಂದರ್ಶನ ಕೊಡುತ್ತಿದ್ದೇನೆಂಬ ಕಲ್ಪನೆ ಇದ್ದರೂ ನಡೆದುಹೋದ ದುರಂತದ ಅಳುವಿನಲ್ಲಿರುತ್ತಾನೆ. ಅದು ಅವನಿಗೆ ಕೃತಕ ಸನ್ನಿವೇಷ ಅನ್ನಿಸುವುದೇ ಇಲ್ಲ. ಆದರೆ ಈ ದಿಕ್ಕಿನಲ್ಲಿ ಕ್ಷೇತ್ರಕಾರ್ಯಮಾಡುವುದು ಬಹಳ ಚಾಣಾಕ್ಷತನದ ಮಾತಾಗಿದೆ. ಇಂತಹ ಕ್ಷೇತ್ರಕಾರ್ಯದಿಂದ ಶ್ರೀಮಂತ ದತ್ತವನ್ನು ಸಂಗ್ರಹಿಸಬಹುದು. ಅಲ್ಲದೇ ಭಾಷಾ ನಡವಳಿಕೆಯ ಮೇಲೆ ಸಾಕಷ್ಟು ಪ್ರಮಾಣದಲ್ಲಿ ಸಂಶೋಧನೆ ಮಾಡಬಹುದು. ಭಾಷಾ ರಚನೆ, ಭಾಷಿಕ ಬದಲಾವಣೆ, ನಿಯಮಿತ ಮತ್ತು ಅನಿಯಮಿತ ಧ್ವನಿ ಮತ್ತು ವ್ಯಾಕರಣಾತ್ಮಕ ಪಡಿಕಟ್ಟುಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಭಾಷಾಪಡಿಕಟ್ಟುಗಳು ಆಡುಮಾತನ್ನು ಅವಲಂಬಿಸಿರುತ್ತವೆ ಹೊರತು ಗ್ರಾಂಥಿಕ ಭಾಷೆಯನ್ನಲ್ಲ. ಭಾಷಾ ಕಲಿಕೆಯನ್ನೂ ಕುರಿತು ಇಂಥ ಕ್ಷೇತ್ರಕಾರ್ಯ ಹಲವು ಸಂಗತಿಗಳನ್ನು ತಿಳಿಸಿಕೊಡುತ್ತದೆ.

ಒಂದು ಸಮಸ್ಯೆಯನ್ನು ಬಿಡಿಸಲು ವಿಜ್ಞಾನಿ ಉದ್ಯುಕ್ತನಾದಾಗ ಆ ಸಮಸ್ಯೆ ಇನ್ನೊಂದು ಸಮಸ್ಯೆಯನ್ನು ಒಡ್ಡುತ್ತದೆ. ಅದನ್ನು ಬಿಡಿಸಲು ಬೇರೆ ದಾರಿ ಕಂಡುಕೊಳ್ಳಬೇಕಾಗುತ್ತದೆ. ಹಾಗೆ ಭಾಷಾ ವೈವಿಧ್ಯತೆ ಭಾಷೆಯ ಒಂದು ವಿರಾಟ್‌ಸ್ವರೂಪ. ಇಂತಹ ವಿರಾಟ್‌ಸ್ವರೂಪವನ್ನು ಕಂಡುಕೊಂಡು ಅದನ್ನು ನಿಯಮಗಳ ಚೌಕಟ್ಟಿನಲ್ಲಿ ಅಳವಡಿಸಲು ವಿರಾಟ್ ಸ್ವರೂಪದ ಕ್ಷೇತ್ರಕಾರ್ಯವನ್ನೇ ಮಾಡಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಎಷ್ಟೋ ಹೊಸ ಹೊಸ ಅಭ್ಯಾಸಪದ್ಧತಿಗಳು ಹುಟ್ಟಿಕೊಳ್ಳುತ್ತವೆ. ಒಂದು ತೆರನಾದ ದತ್ತವನ್ನು ವಿವರಿಸುವಾಗ ಇನ್ನೊಂದು ತೆರನಾದ ದತ್ತದ ಸಹಾಯವನ್ನು ಕೇಳಬಹುದು. ಅಲ್ಲದೇ ಇಂತಹ ಕ್ಷೇತ್ರಕಾರ್ಯದ ಬೆಳವಣಿಗೆ ಭಾಷಾವಿಜ್ಞಾನಿಯಲ್ಲಿ ಮತ್ತು ಆತನ ಸಿದ್ಧಾಂತಗಳಲ್ಲಿ, ಪರಿಕಲ್ಪನೆಗಳಲ್ಲಿ, ಮತ್ತು ಪ್ರಮೇಯಗಳಲ್ಲಿ ವಿಶ್ವಾಸವನ್ನು ಬುದುರಿಸುತ್ತದೆಂದು ಖಚಿತವಾಗಿ ಹೇಳಬಹುದು. ಯಾಕೆಂದರೆ ಸಾಮಾಜಿಕ ಸಂದರ್ಭದಲ್ಲಿ ಭಾಷೆಯನ್ನು ಅಬ.ಸಿಸತೊಡಗಿದಾಗಿನಿಂದ ಹೊಸ ಪದ್ಧತಿಗಳು ಮತ್ತು ತಂತ್ರಗಳು ಹುಟ್ಟುತ್ತಲೇ ಬಂದಿವೆ ಮತ್ತು ಭಾಷಾ ವೈವಿಧ್ಯತೆಯನ್ನು ವಿವರಿಸಲು ಸಹಾಯ ಮಾಡುತ್ತಲೇ ಬಂದಿವೆ.

ಆಕರ ಗ್ರಂಥಗಳು

1.Bloomfield, L.1944.'Secondary and tertiary responce to language; Language. 20.45-55.
2.Carden, Guy. 1970. ' A note on conflecting idiolects' Linguistic Inquiry. 1. 281-90.
3.Chomsky, Noam. 1957. Syntactic structures. The Hague : Mouton.
4. 1961. 'Some methodoligical remarks on gener~tive grammar',

Word. 17.219-39.

5. 1965, Aspects of the theory of syntax. Cambridge : The MIT Press.
6. Fischer, J.L. 1958. ' Social influences on the choice of a linguistic variants', word. 14. 47-56.
7. Gleason, H.A.Jr. 1955. Workbook in descriptive linguistics, New York : Holt, Rinehart and Winston.
8. Gumperz, J. 1964. Linguistic and social interaction in two comunities in J.J.Gumperz and D.Hymes (ed). The ethnology of communication, Washington, D.C.: American Anthropological Association. 137-53.
9. Harris. Zelling. 1965. 'Transformational theory'. Language. 41. 363-401.
10. Homans, G.C. 1955. The human group. Harcourt : Brace and Ward.
11. Kulkarni, R.Y. 1982. Role of Caste in language special reference to Kannada. unpublished term paper. Osmania University
12. Labov. William, 1963. ' The social motivation of sound charge '. Word. 19. 273-309.
13. 1965. On the mechanism of linguistic change.
14. Washington : Georgetwon University.
15. 1966. The Social Stratification of English in NewYork city.
16. Washington D.C. : Centre for Applied Linguistics.
17. 1972 (a) The Study of language in Social Context, in William Labov (ed). Sociolinguistic Patterns. Philadelphia : The University of Pennsylvania Press. 207-216.
18. 1972 (b) 'Some principles of linguistic methodology'. Language in Society. 1.97-120.
19. Lounsbury. Floyd G. 1953 Field methods and techniques in linguistics in A.L.Krober (ed) Anthropology Today and an encyclopedic inventory. Chicago . University of Chicago.
20. Nida. E 1949. Morphology Ann Arbor University of Michigan Press.
21. Pike, K 1947. Phonemics. Ann Arbor : University of Michigan Press.
22. Samarin. William. J 1967 Field linguistics . A guide to linguistic fieldwork New York Holt, Rinehart and Winston
23. Saussure. F de. 1959. Course in general linguistics. Wade Baskin. New York : Philosopical Library
24. Shuy. Roger W., W.A. Wolfram. and William K Riley. 1968 Field iechniques in an urban language study. Washington: Centre for Applied Linguisiics

25. Waterman, J.T. 1970. Perspectives in linguistics. Chicago and London : The University of Chicago Press.
26. Wolfram, W. 1969. Linguistic correlates of social stratification in speech of Detroit Negroes, Hartford Seminary Foundation Thesis.

ಕರ್ನಾಟಕದ ಜೈನ ಸಾಮಾಜಿಕ - ಧಾರ್ಮಿಕ ಪದ್ಧತಿಯಲ್ಲಿ ನೋಂಪಿಗಳ ಪ್ರಾಮುಖ್ಯತೆ

* ವಸಂತಕುಮಾರಿ

ವಿಗ್ರಹ ಆರಾಧನೆ, ಗುರುಪೂಜೆ, ವ್ರತನಿಯಮ ಪಾಲನೆ, ತೀರ್ಥಕ್ಷೇತ್ರ ಸಂದರ್ಶನ ಇಂತಹ ಅನೇಕ ಧರ್ಮಾಚರಣೆಗಳು ಜೀವನಕ್ರಮದಲ್ಲಿ ಅವಿಭಾಜ್ಯ ಅಂಗವಾಗಿ ಬೆರೆತುಹೋಗಿವೆ. ಇವುಗಳು ಶಾಂತಿ, ನೆಮ್ಮದಿಯ ಜೀವನ ಮಾಡುವ ಸಾಧನೆಗಳೂ ಆಗಿವೆ. ವಾಸ್ತವ ಜೀವನದಲ್ಲಿ ಧರ್ಮಾಚರಣೆಯು ಧರ್ಮ ಎನ್ನುವ ಭಾವನೆಯೂ ಸ್ಥಿರವಾಗಿ ನೆಲೆಯೂರಿದೆ. ಸಾಂಪ್ರದಾಯಿಕವಾಗಿ ಪೂಜೆ, ವ್ರತ, ನಿಯಮಪಾಲನೆ ಧರ್ಮಾಚರಣೆಯ ಪ್ರತಿಷ್ಠೆಯಾಗಿ ಪರಿಗಣಿಸಲಾಗಿದೆ.

ವಿಶ್ವ ಧರ್ಮಗಳಲ್ಲಿ ಜೈನಧರ್ಮದ ಪ್ರತ್ಯೇಕತೆ ಈ ಧರ್ಮದ ಸಿದ್ಧಾಂತವನ್ನು ಅವಲಂಬಿಸಿದೆ. ಸೃಷ್ಟಿಕರ್ತ ಸಿದ್ಧಾಂತವನ್ನು ಪ್ರತಿಪಾದಿಸದೆ ಇರುವುದೇ ಜೈನಸಿದ್ಧಾಂತದ ವೈಶಿಷ್ಟ್ಯತೆ. ತೀರ್ಥಂಕರನು ದೇವದೂತನೂ ಅಲ್ಲ, ಸೃಷ್ಟಿಕರ್ತನೂ ಅಲ್ಲ. ಆದರೂ ತೀರ್ಥಂಕರ ಆರಾಧನೆ ಮತ್ತು ಯಕ್ಷ, ಯಕ್ಷಿ, ಕ್ಷೇತ್ರಪಾಲ ಮತ್ತಿತರ ಸಾಮಾನ್ಯ ದೇವತೆಗಳ ಆರಾಧನೆ - ಇವುಗಳಿಗೆ ಜೈನಧರ್ಮಾಚರಣೆಯಲ್ಲಿ ಮಹತ್ವದ ಸ್ಥಾನವಿದೆ. ಶ್ರಾವಕರ ಆಸೆ, ಆಕಾಂಕ್ಷೆಗಳನ್ನು ಪೂರೈಸುವಂತಹ ಶಾಂತಿ, ನೆಮ್ಮದಿಗಳನ್ನು ನೀಡುವಂತಹ ಧಾರ್ಮಿಕ-ಸಾಮಾಜಿಕ ಪದ್ಧತಿಗಳು ಜೈನಧರ್ಮದಲ್ಲಿ ಆಚರಣೆಯಲ್ಲಿವೆ. ಅವುಗಳಲ್ಲಿ ನೋಂಪಿಗಳ ಸ್ಥಾನ ಬಹಳ ಮುಖ್ಯವಾಗಿದೆ.

'ನೋಂಪಿ' ಮತ್ತು 'ವ್ರತ' ಈ ಎರಡೂ ಪದಗಳ ಅರ್ಥ ಒಂದೇ ಎಂಬ ಅಭಿಪ್ರಾಯವಿದ್ದರೂ, ನೋಂಪಿ ಎನ್ನುವ ಪದಕ್ಕೆ ಜೈನ ಆಚರಣೆಯಲ್ಲಿ ಹೆಚ್ಚು ವಿಶಿಷ್ಟ ಅರ್ಥವಿರುವುದನ್ನು ಕಾಣಬಹುದು. ನೋಂಪಿ ಎಂದರೆ ನಿಯಮಾನುಸಾರವಾಗಿ ಅಥವಾ ವಿಧಿಪೂರ್ವಕವಾಗಿ ಸೇವೆ, ದೇವತಾರಾಧನೆಯನ್ನು ಇಷ್ಟಾರ್ಥಸಿದ್ಧಿಗಾಗಿ ಮಾಡುವುದು ಎಂದರ್ಥ. ಕರ್ನಾಟಕದಲ್ಲಿ ಜೈನ ಶ್ರಾವಕರು, ಭಕ್ತಿಪೂರ್ವಕವಾಗಿ ಆಚರಿಸಿದ ವಿವಿಧ ನೋಂಪಿಗಳ ವಿವರಣೆ ಶಾಸನಗಳಲ್ಲಿಯೂ, ಹಾಗೂ ಸಾಹಿತ್ಯದಲ್ಲಿಯೂ ಕಂಡುಬರುತ್ತದೆ. ಸುಮಾರು ೧೨ನೇ ಶತಮಾನದ ನಂತರ ಜೈನ ಧಾರ್ಮಿಕ ಪದ್ಧತಿಯಲ್ಲಿ ನೋಂಪಿಯ ಆಚರಣೆ ಹೆಚ್ಚು ಪ್ರಚಲಿತವಾಯಿತು.

ಸಾಮಾನ್ಯವಾಗಿ ನೋಂಪಿಗಳನ್ನು ಶ್ರಾವಕರು ತಮ್ಮ ನಿವಾಸದ ಗ್ರಾಮ ನಗರ ಬಸ್ತಿಗಳಲ್ಲಿಯೇ ಆಚರಿಸುವ ಪದ್ಧತಿ ಇದ್ದರೂ, ಜೈನ ಯಾತ್ರಾ ಕ್ಷೇತ್ರಗಳಲ್ಲಿ ನೋಂಪಿಯ ಆಚರಣೆ ಶ್ರೇಷ್ಠವಾದುದೆಂಬ ಭಾವನೆ ಇದ್ದಿತು. ಮುನಿಗಳ ಚಾತುರ್ಮಾಸ ಸಮಯದಲ್ಲಿ ಜೈನ ತೀರ್ಥಕ್ಷೇತ್ರಗಳಲ್ಲಿ ನೋಂಪಿಗಳನ್ನು ವಿವಿಧ ಭಾಗಗಳಿಂದ ಬಂದ ಶ್ರಾವಕರು ಸಾಮೂಹಿಕವಾಗಿಯೇ ಆಚರಿಸುತ್ತಿದ್ದರು.[೨]

ಅಷ್ಟಾನಿಕ ವ್ರತ ಹತ್ತನೇ ಶತಮಾನಕ್ಕಿಂತಲೂ ಪೂರ್ವದಲ್ಲಿಯೇ ಆಚರಿಸಲ್ಪಡುತ್ತಿದ್ದಂತಹ ಧಾರ್ಮಿಕ ವಿಧಿ. ಅಜಿತನಾಥ ಪುರಾಣದಲ್ಲಿ ಈ ವ್ರತದ ಪ್ರಾಮುಖ್ಯತೆಯನ್ನು ಘೋಷಿಸುತ್ತ, ಕವಿ

ರನ್ನನು ಈ ವ್ರತವು ಪ್ರತಿಯೊಬ್ಬ ಜೈನ ಶ್ರಾವಕರು ಆಚರಿಸಲೇಬೇಕಾದ ವ್ರತ ಎಂದು ಹೇಳಿದ್ದಾನೆ.[೩]

ಈ ವ್ರತಪಾಲಕರು ಎಂಟು ದಿನಗಳ ಉಪವಾಸವನ್ನು ಆಚರಿಸುತ್ತಿದ್ದರು.

ಈ ವ್ರತಪಾಲಕರನ್ನು ಅಷ್ಟೋಪವಾಸಿಗಳೆಂದು ಕರೆಯಲಾಗುತ್ತಿತ್ತು.[೪] ಹತ್ತನೆ ಶತಮಾನದ ಒಂದು ಶಾಸನದಲ್ಲಿ ಮಾರಮಯ್ಯನ ಪತ್ನಿಯಾದ ಮಾರಿಕಬ್ಬೆಯು, ಅಷ್ಟೋಪವಾಸಿ ಭೂತಯ್ಯ, ಅಟ್ಟಯ್ಯನ ತಾಯಿ ಮಾರಕಬ್ಬೆಯು ಸನ್ಯಾಸದ ಮರಣ ಹೊಂದಿದ ಉಲ್ಲೇಖವಿದೆ.[೫]

ಅನೇಕ ತಮಿಳು ಶಾಸನಗಳಲ್ಲಿ ಪಟ್ಟಿಣೀಕುರಟ್ಟಿಯಾರ್, ಪಟ್ಟಿಣೀ ಪೆರಿಯಾದಿಗಳ, ಕುರಟ್ಟಿ, ಪಟ್ಟಿಣೀಬಟ್ಟಾರ[೬] ಎಂಬ ಉಲ್ಲೇಖವಿದ್ದು ಪಟ್ಟಿಣೀ ಎಂಬ ತಮಿಳು ಪದಕ್ಕೆ ಉಪವಾಸ ಎಂಬ ಅರ್ಥವಿದ್ದು, 'ಪಟ್ಟಿಣೀ' ಮತ್ತು 'ಅಷ್ಟೋಪವಾಸಿ' ಈ ಪದಗಳಲ್ಲಿ ಹೊಂದಾಣಿಕೆ ಇದ್ದು ಅಷ್ಟಾನಿಕ ವ್ರತದ ಕಾಲದಲ್ಲಿ ವ್ರತಪಾಲಕರಾದ ಶ್ರಾವಕರೂ, ಮುನಿಗಳೂ ಉಪವಾಸ ಆಚರಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೋಪವಾಸಿಗಳ ಉಲ್ಲೇಖ ಶಾಸನಗಳಲ್ಲಿ ಸಾಕಷ್ಟು ದೊರಕುತ್ತದೆ. ಪುರುಷವ್ರತದ ಉಲ್ಲೇಖ ಕರ್ನಾಟಕದ ಅನೇಕ ಶಾಸನಗಳಲ್ಲಿಯೂ, ಮತ್ತು ಕವಿರಾಜಮಾರ್ಗ, ಪಂಪಭಾರತ, ವಡ್ಡಾರಾಧನೆ, ಚಾಮುಂಡರಾಯಪುರಾಣ ಧರ್ಮಾಮೃತ, ಲೀಲಾವತಿ, ವರ್ಧಮಾನ ಪುರಾಣ ಮುಂತಾದ ಸಾಹಿತ್ಯ ಕೃತಿಗಳಲ್ಲಿಯೂ ದೊರಕುತ್ತದೆ. ಈ ವ್ರತ ಶ್ರಾವಕರ ಬ್ರಹ್ಮ ಚರ್ಯಾಣುವ್ರತಕ್ಕೆ ಅನ್ವಯಿಸುತ್ತದೆ ಎಂಬ ವ್ಯಾಖ್ಯಾನವನ್ನು ಡಾ. ಎ.ಎನ್. ಉಪಾಧ್ಯೆ ಅವರು ನೀಡುತ್ತಾ ಈ ರೀತಿ ಹೇಳಿದ್ದಾರೆ. "ಸ್ತ್ರೀಯರ ಸಂದರ್ಭದಲ್ಲಿ ಅದು ಪಾತಿವ್ರತ್ಯ ಮತ್ತು ಪುರುಷರ ಸಂಬಂಧದಲ್ಲಿ ಅದು 'ಸ್ವದಾರ ಸಂತೋಷ' ಅಂದರೆ ವೈವಾಹಿಕ ಜೀವನದಲ್ಲಿ ಪತಿ ಪತ್ನಿಯರಲ್ಲಿ ಪರಸ್ಪರ ಏಕ ನಿಷ್ಠೆಯೆ ಪುರುಷವ್ರತವು "[2]ಅ.

ನಂದೀಶ್ವರ ನೋಂಪಿಯೂ ಹೆಚ್ಚು ಪ್ರಚಲಿತವಿದ್ದ ನೋಂಪಿ. ಈ ನೋಂಪಿಯ ಉದ್ಯಾಪನ ಸಂದರ್ಭದಂದು ಬಸ್ತಿಗಳ ನಿರ್ಮಾಣ, ಪಂಚಕಲ್ಯಾಣ, ನಂದೀಶ್ವರ ಕೂಟದ ಲೋಹ ರಚನೆಯ ದಾನ ಹಾಗೂ ವ್ರತನಿಯಮವನ್ನು ಪಾಲಿಸುತ್ತಿದ್ದರು. ಶ್ರೀಮಂತ ಶ್ರಾವಕವರ್ಗ ಈ ನೋಂಪಿಯನ್ನು ಆಚರಿಸುತ್ತಿದ್ದರು.[೯] ನಿರ್ದಿಷ್ಟ ಫಲಾಪೇಕ್ಷೆಯಿಂದ ನೋಂಪಿಗಳನ್ನು ಆಚರಿಸಲಾಗುತ್ತಿತ್ತು.

<u>ಕರ್ಮನಿರ್ಜರ ನೋಂಪಿ</u> : ಈ ನೋಂಪಿಯ ಆಚರಣೆಯ ಉದ್ದೇಶ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕರ್ಮದಿಂದ ವಿಮುಕ್ತಿ ಪಡೆಯುವುದು.

<u>ಕರ್ಮಹರಾಷ್ಟಮಿಯ ನೋಂಪಿ</u> : ಇದರ ಉದ್ದೇಶ ಸ್ವರ್ಗಸುಖ ಪ್ರಾಪ್ತಿ.[೧೦] ಈ ನೋಂಪಿಯನ್ನು ಗರ್ಭಿಣಿ ಸ್ತ್ರೀಯರು, ಬಂಜೆಯರೂ ಕೂಡ ಆಚರಿಸುತ್ತಿದ್ದರು.

<u>ಕಲ್ಪಕುಂಜರದ ನೋಂಪಿ</u> : ಇದರ ಉದ್ದೇಶ ಸ್ವರ್ಗಸುಖ ಪ್ರಾಪ್ತಿ.[೧೧]

<u>ಕೀಳ್ಗೋಗು ನೋಂಪಿ</u> : ಈ ನೋಂಪಿಯನ್ನು ವಿಶೇಷವಾಗಿ ರಾಜಮಹಾರಾಜರುಗಳು ಆಚರಿಸುತ್ತಿದ್ದರು. ಚಾಲುಕ್ಯ ದೊರೆ ತ್ರಿಭುವನಮಲ್ಲ ನಾಲ್ಕನೆ ಸೋಮೇಶ್ವರನ ಕಾಲಕ್ಕೆ ಸೇರಿದ ಒಂದು ಶಾಸನದಲ್ಲಿ ಈ ನೋಂಪಿಯ ಉಲ್ಲೇಖವಿದೆ.[೧೨] ಮಲಾಳಮಹಾದೇವಿಯು ಈ ನೋಂಪಿಯನ್ನು ಆಚರಿಸಿ ನರಸಿಂಹ ಪಟ್ಟವರ್ಧನನಿಗೆ ದಕ್ಷಿಣೆಯ ದಾನವಾಗಿ, ಭೂಮಿಯ ದತ್ತಿ, ಧನ ಕನಕಗಳನ್ನು ನೀಡಿದ ವಿವರಣೆ

ಇದೆ.[೧೩] ಕ್ರಿ.ಶ. ೧೧೭೬ ಕ್ಕೆ ಸೇರಿದ ಒಂದು ಶಾಸನದಲ್ಲಿ ಮಲಾಳದೇವಿಯು ನಾಲ್ಕನೇ ವಿಕ್ರಮಾದಿತ್ಯನ ಮಗಳೆಂದೂ, ಗೋವಾದ ಕದಂಬ ವಂಶದ ದೊರೆ ಜಯಕೇಶಿಯ ಪತ್ನಿಯೆಂದೂ ಹೇಳಲಾಗಿದೆ.[೧೪]

ಕೈವಲ್ಯ ಸುಖಾಷ್ಟಮಿ ನೋಂಪಿ ಮತ್ತು ನಿರತಿಶಯದ ನೋಂಪಿ : ಇವುಗಳು ಐಶ್ವರ್ಯ ಪ್ರಾಪ್ತಿಯನ್ನು ಆಪೇಕ್ಷಿಸಿ ಆಚರಿಸುವ ನೋಂಪಿಗಳು.[೧೫]

ನವನಿಧಿ ಭಂಡಾರದ ನೋಂಪಿ : ಶಾಂತಿ ಹಾಗೂ ಸುಖಜೀವನ ಪ್ರಾಪ್ತಿಗಾಗಿ ಆಚರಿಸುತ್ತಿದ್ದರು.[೧೬]

ನಾಗರಪಂಚಮಿ ನೋಂಪಿ : ಆಪತ್ತಿನಿಂದ ಪಾರಾಗಲು ಮತ್ತು ಸಂತಾನ ಪ್ರಾಪ್ತಿ, ಸುಖ ಪ್ರಾಪ್ತಿಗಾಗಿ ಆಚರಿಸುವ ನೋಂಪಿ ಆಗಿದ್ದಿತು.[೧೭]

ನಿತ್ಯ ಸುಖದ ನೋಂಪಿ : ದೀರ್ಘ ಆಯುಸ್ಸು ಶ್ರೇಯೋಭಿವೃದ್ಧಿಗಾಗಿ ಆಚರಿಸುವ ನೋಂಪಿ ಆಗಿದ್ದಿತು.[೧೮]

ಜೀವದಯಾಷ್ಟಮಿ ನೋಂಪಿ : ಅಹಿಂಸಾ ವ್ರತಪಾಲನೆಯ ಘೋಷಣೆಯನ್ನೂ ಮತ್ತು ಐಶ್ವರ್ಯ ಪ್ರಾಪ್ತಿಗಾಗಿ ಇದನ್ನು ಆಚರಿಸಲಾಗುತ್ತಿತ್ತು.[೧೯]

ಸಿದ್ಧರನೋಂಪಿ : ಈ ನೋಂಪಿಯನ್ನು ದೀರ್ಘ ಆಯಸ್ಸು, ಶ್ರೇಯೋಭಿವೃದ್ಧಿಗಾಗಿ ಆಚರಿಸಲಾಗುತ್ತಿತ್ತು.

ಸಪ್ತಜ್ಯೋತಿಯ ನೋಂಪಿ : ಈ ನೋಂಪಿಯನ್ನು ಶಾಂತಿ, ನೆಮ್ಮದಿಯನ್ನು ಬಯಸಿ ಆಚರಿಸಲಾಗುತ್ತಿತ್ತು.[೨೦]

ಸೌಭಾಗ್ಯದ ನೋಂಪಿ : ಇದನ್ನು ಕೀರ್ತಿ ಪ್ರಾಪ್ತಿಗಾಗಿಯೂ ಆಚರಿಸಲಾಗುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಒಂದು ತಾಮ್ರಪಟ ಶಾಸನದ ಪ್ರಕಾರ, ಈ ನೋಂಪಿಯನ್ನು ಕಾರ್ಕಳದ ದೊರೆ ಭೈರವೇಂದ್ರನು ಆಚರಿಸಿದನು. ಈ ನೋಂಪಿಯನ್ನು ಹೊಸದಾಗಿ ಸ್ಥಾಪಿಸಲ್ಪಟ್ಟ ಕಾರ್ಕಳ ಮಠದ ಪಟ್ಟಾಚಾರ್ಯರಾದ ಲಲಿತಕೀರ್ತಿ ಆಚಾರ್ಯರ ನೇತೃತ್ವದಲ್ಲಿ ಆಚರಿಸಿದನೆಂಬ ವಿವರಣೆ ಇದೆ. ಈ ಸಂದರ್ಭದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸುಮಾರು ೧೦,೦೦೦ ಪ್ರಜೆಗಳು ಭಾಗವಹಿಸಿದ್ದರೆಂದೂ ಹೇಳಿದೆ.[೨೧]

ಸಪ್ತ ಪರಮಸ್ಥಾನದ ನೋಂಪಿ : ಪುತ್ರಸಂತಾನ, ಸುಖ ನೆಮ್ಮದಿಯ ಜೀವನ, "ನಾನ್ಯಥಾ ಜೈನಭಾಷಿತಂ ಶ್ರವಣೊ ಅಮೋಘವನಯೋನೊ" ಎಂಬ ಈ ಹೇಳಿಕೆಯಲ್ಲಿ ದೃಢನಂಬಿಕೆ - ಇವುಗಳನ್ನು ಅಪೇಕ್ಷಿಸಿ ಆಚರಿಸುವ ನೋಂಪಿ ಆಗಿದ್ದಿತು."

ಪುಷ್ಪಾಂಜಲಿ ನೋಂಪಿ : ಉತ್ತಮ ಜೀವನವನ್ನು ಬಯಸಿ ವೈವಾಹಿಕ ಜೀವನ ಸುಖಪ್ರಾಪ್ತಿಗಾಗಿ. ಜೈನಧರ್ಮದ ದೃಢನಂಬಿಕೆ, ಸ್ಥಿರವಾಗಿ ನಿರಂತರವೂ ಇರುವಂತಾಗಲು ಮಾಡುವ ನೋಂಪಿ ಆಗಿದ್ದಿತು.[೨೩]

ಉಪಸರ್ಗದ ನಿವಾರಣದ ನೋಂಪಿ : ರತ್ನತ್ರಯರಲ್ಲಿ ನಂಬಿಕೆಯನ್ನು ದೃಢೀಕರಿಸಲು ಆಚರಿಸಲಾಗುತ್ತಿತ್ತು.[೨೪]

<u>ರತ್ನತ್ರಯ ನೋಂಪಿ</u> : ಈ ನೋಂಪಿ-ಯನ್ನು ಆಚರಿಸಿದ ಅನೇಕ ವಿವರಣೆಗಳು ಶಾಸನದಲ್ಲಿ ಇವೆ. ಉದಾ: ಬಿಡದಿಯ ಶ್ರಾವಕರು ಗೊಮ್ಮಟೇಶ್ವರನ ಸನ್ನಿಧಿಯಲ್ಲಿ ರತ್ನತ್ರಯ ನೋಂಪಿಯ ಉದ್ಯಾಪನೆಯನ್ನು ಆಚರಿಸುವುದಕ್ಕಾಗಿ ಶ್ರವಣಬೆಳಗೊಳಕ್ಕೆ ಹೋದುದಾಗಿ ವಿವರಣೆ ಇದೆ. ಇದು ೧೫ನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ.[೨೫]

<u>ಚಂದನ ಷಷ್ಠಿಯ ನೋಂಪಿ</u> : [೨೬] ರೋಗ, ಕಷ್ಟ ನಿವಾರಣೆಗಾಗಿ ಈ ನೋಂಪಿಯನ್ನು ಆಚರಿಸಲಾಗುತ್ತಿತ್ತು. ಉಪನಯನದ ಸಂದರ್ಭದಂದು ಈ ನೋಂಪಿಯನ್ನು ಆಚರಿಸಿದ ಉಲ್ಲೇಖನ ಧಾರವಾಡದ ಸಮೀಪ ಅಕ್ಕಿಗುಂಡ ಗ್ರಾಮದ ೧೨ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿದೆ. ಈ ಸಂದರ್ಭದಲ್ಲಿ ಹರತಿಯ ಭವ್ಯರು ಉದ್ಯಾಪನ ಸಂದರ್ಭದಂದು ಚೌವೀಸ್ ತೀರ್ಥಂಕರ ವಿಗ್ರಹವನ್ನು ದೇವಸ್ಥಾನಕ್ಕೆ ನೀಡಿದುದಾಗಿ ಉಲ್ಲೇಖವಿದೆ. [೨೭]

<u>ಆಯಿಗಾಹಿಯ ನೋಂಪಿ</u> : ಪತಿಯಿಂದ ತಿರಸ್ಕೃತಳಾದ ಸತಿ, ಸಂಸಾರ ಸುಖ ಪ್ರಾಪ್ತಿಗಾಗಿ ಆಚರಿಸುತ್ತಿದ್ದರು.[೨೮]

೧೮೯೩-೧೯೩೦ ರ ಅವಧಿಯಲ್ಲಿ ಮೈಸೂರಿನ ಪದ್ಮರಾಜ ಪಂಡಿತರು ತಮ್ಮ ಸ್ವಪ್ರಯತ್ನದಿಂದ ಸುಮಾರು ೨೦೦ ನೋಂಪಿಯ ಕಥೆಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಆದರೆ ಈಗ ಅವುಗಳ ಪ್ರತಿಗಳು ದೊರಕುವುದಿಲ್ಲ. ೧೯೭೬-೧೯೮೧ ರ ಅವಧಿಯಲ್ಲಿ ಡಾ. ಹಂಪ.ನಾಗರಾಜಯ್ಯ ಮತ್ತು ಡಾ.ಬಿ.ಎಸ್. ಕುಲಕರ್ಣಿಯವರು ಕೆಲವು ನೋಂಪಿಯ ಕಥೆಗಳನ್ನು ಸಂಪಾದಿಸಿದ್ದಾರೆ. ನೋಂಪಿಯ ಕಥೆಗಳು ಅಂದಿನ ಜೈನ ಸಾಮಾಜಿಕ-ಧಾರ್ಮಿಕ ಜೀವನದ ಬಗ್ಗೆ ಮಾಹಿತಿಯನ್ನು ನೀಡುವ ಆಧಾರಗಳೂ ಆಗಿವೆ.

<u>ಕೈವಲ್ಯ ಸುಖಾಷ್ಟಮಿಯ ನೋಂಪಿಯ</u> [೨೯] ವಿವರಣೆ ಗಮನಾರ್ಹವಾದುದು. ನೋಂಪಿಯ ಉದ್ಯಾಪನಾ ಸಂದರ್ಭದಲ್ಲಿ ಶ್ರಾವಕರು ಅನೇಕ ದವಸ ಧಾನ್ಯಗಳನ್ನು ಅರ್ಪಿಸುತ್ತಿದ್ದರು. ಹಾಗೆ ಅರ್ಪಿಸುವ ಪ್ರತಿಯೊಂದು ಪದಾರ್ಥಗಳಿಂದ ದೊರಕುವ ಫಲಪ್ರಾಪ್ತಿಯ ವಿವರಣೆ ಹೀಗೆ ಇದೆ.

ಉಪ್ಪು _ ಹೇಳಿದ ಮಾತಿಗೆ ತಪ್ಪದವರಂತೆ ಮಾಡುವುದು

ಅಕ್ಕಿ _ ಸಂತಾನ ಪ್ರಾಪ್ತಿಗಾಗಿ

ಬೇಳೆ _ ಕೀಳು ಕುಲದಲ್ಲಿ ಹುಟ್ಟುವುದನ್ನು ತಪ್ಪಿಸಲು

ಎಳ್ಳು _ ಕಳಂಕ ಬರದಿರುವುದಕ್ಕಾಗಿ

ಗೋಧಿ _ ತೀಕ್ಷ್ಣಗ್ರಾಹಿಯಾಗಿ, ವಿದ್ವಾಂಸ ಪದವಿ ಪ್ರಾಪ್ತಿಗಾಗಿ

ಕಡಲೆ – ಬಡತನ ನಿವಾರಣೆಗಾಗಿ

ತೊಗರೆಬೇಳೆ-ಮಗಳ ಕ್ಷೇಮಾಭಿವೃದ್ಧಿಗಾಗಿ

ಉದ್ದು-ಮದ್ಯಪಾನದಿಂದ ಮುಕ್ತಿ ಪಡೆಯುವುದಕ್ಕಾಗಿ

ಹೆಸರು-ಆಭರಣ ಪ್ರಾಪ್ತಿಗಾಗಿ

ಅಲಸಂದೆ-ವಂಶದಲ್ಲಿ ಕೀರ್ತಿವಂತನಾಗುವುದಕ್ಕಾಗಿ

ಭತ್ತ-ಎಲ್ಲದರಲ್ಲೂ ಬಲ್ಲಿದವನಾಗುವುದಕ್ಕಾಗಿ

ನವಣೆ-ಜಗಳ, ಕದನದಿಂದ ವಿಮುಕ್ತಿಗಾಗಿ

ಇವುಗಳ ಜೊತೆಗೆ ಹಣ್ಣು, ಹೂವು, ತುಪ್ಪ, ಬೆಲ್ಲ, ಹೂರಿಗೆ, ಬೆಸುರಿಗೆ, ವಸ್ತ್ರ, ಮತ್ತಿತರ ವಸ್ತುಗಳನ್ನು ಅರ್ಪಿಸುತ್ತಿದ್ದರು. ಅಲ್ಲದೆ ಆರ್ಯಿಕೆಯರಿಗೆ, ಮುನಿ ತಂಡದವರಿಗೆ ವಸ್ತ್ರಗಳ ಹಂಚಿಕೆ, ಆಹಾರಧಾನ್ಯ ಇವುಗಳ ವ್ಯವಸ್ಥೆಯನ್ನೂ ಮಾಡಲಾಗುತ್ತಿತ್ತು. ದೇವಪಾಲಮುನಿಯ ಹೇಳಿಕೆಯ ಮೇರೆಗೆ ಕನಕಮಾಲ ಈ ನೋಂಪಿಯನ್ನು ಆಚರಿಸಿದ ಕಾರಣ, ಅವಳಿಗೆ ಧನಕನಕಗಳು ಪ್ರಾಪ್ತವಾಗಿ ಸಂಸಾರ ಸುಖವನ್ನು ಅನುಭವಿಸಿ ದೀಕ್ಷೆಯನ್ನು ಸ್ವೀಕರಿಸಿ, ಸಮಾಧಿಮರಣ ಹೊಂದಿದಳು.[೩೦]

ನೋಂಪಿಯ ಆಚರಣೆಯ ಸಂದರ್ಭದಂದು ನಡೆಸಲಾಗುತ್ತಿದ್ದ ಹೋಮ, ಉತ್ಸವ, ಪಂಚಮಹಾವಾದ್ಯಗಳ ಸ್ವರಮೇಳ, ವಿವಿಧ ನೈವೇದ್ಯಗಳ ಅರ್ಪಣೆ, ಪಂಚಾಮೃತ ಅಭಿಷೇಕ ಇನ್ನೂ ಅನೇಕ ವೈಭವಯುಕ್ತ ಪೂಜಾ ವಿಧಿಗಳು ಸಮುದಾಯದ ಸಂಘಟನೆ, ಭಕ್ತಿ ಶ್ರದ್ಧೆಗಳ ಹೆಚ್ಚಳದಲ್ಲಿ ಪ್ರಭಾವ ಬೀರಿದವು ಎಂದು ಹೇಳಬಹುದು.

ಅನಂತ ನೋಂಪಿ : ಇದು ಜೈನರಲ್ಲಿ, ವೈದಿಕರಲ್ಲಿ, ಇಂದಿಗೂ ಹೆಚ್ಚು ಪ್ರಚಾರದಲ್ಲಿರುವ ನೋಂಪಿ. ಸಂಸಾರ ದುಃಖವನ್ನು ಹೋಗಲಾಡಿಸಿ ಶಾಂತಿ ನೆಮ್ಮದಿಗಾಗಿ ವೈದಿಕರು ಭಗವಂತ ನಾರಾಯಣನನ್ನು ಆರಾಧಿಸುತ್ತಾರೆ. ಈ ವ್ರತಪಾಲಕರು ೧೪ ಎಳೆಯ ಹುಸಿದಾರವನ್ನು ಬಲಗೈಗೆ ಕಟ್ಟಿಕೊಳ್ಳುತ್ತಾರೆ. ಇದು ಅನಂತಶಕ್ತಿಯ ಸಂಕೇತ.[೩೧]

ಜೈನರೂ ಈ ನೋಂಪಿಗೆ ವಿಶೇಷವಾದ ಮಹತ್ವ ನೀಡಿದ್ದರು. ಅನಂತ ನೋಂಪಿಯನ್ನು ಆಚರಿಸಿದವರಿಗೆ ಇಹಪರ ಸೌಖ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆ ಇದೆ. ಸ್ತ್ರೀಯರಿಗೆ ಈ ನೋಂಪಿಯ ಆಚರಣೆಯ ಫಲವಾಗಿ ಸೌಂದರ್ಯ, ಸಂಪತ್ತು, ಸಂತಾನ, ಮುತ್ತೈದೆತನ ಅಭ್ಯುದಯ ಮುಂತಾದವುಗಳು ಪ್ರಾಪ್ತವಾಗುವುದೆಂದು ಜನ್ನನು ಅನಂತನಾಥ ಪುರಾಣದಲ್ಲಿ ಹೇಳಿದ್ದಾನೆ. ಈ ನೋಂಪಿ ಹೆಚ್ಚು ಪ್ರಚಾರದಲ್ಲಿ ಇದ್ದ ಕಾರಣ, ಈ ನೋಂಪಿಯ ಬಗ್ಗೆ ಹೆಚ್ಚಿನ ಶಾಸನ ಉಲ್ಲೇಖನವಿದೆ.

ವಿಜಾಪುರ ಜಿಲ್ಲೆಯ ಕಲ್ಕೇರಿಯಲ್ಲಿ ೧೩ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ—[೩೨]

೮೭. ಪ್ರಭುಗಳು ಮುಖ್ಯವಾಗಿ ಮೂನೂರ್ವ್ವರು ಮಹಾಜನಂಗಳು ಆ ಮನೆಯ . . . . ಈ ನಾಡ ನೆಟ್ಟಿಗುತ್ತ ಚೌಡಿಸೆಟ್ಟಿಯರು ಮುಖ್ಯವಾಗಿ ಮುಂಮುರಿದಂಡಂಗಳು ಸಮುಜಿತೇ . . . . .

೮೮. ತಸ್ಥಾನರಾಗಿದ್ದ ಸಮಯದಲು ರಾಯಪ್ರದಾನಿ ಮಲ್ಲಿನುಂ ಬೀಚಣನುಂ ಮಗಂ ಪಾಯಿಸೆಟ್ಟಿ ಮುಖ್ಯವಾಗಿ ಸರಳ ಭವ್ಯ ಜನಂಗಳು ನೋಂಪಿ ನಿಮಿತ್ತವಾಗಿ ಮಾಡಿಸಿದ ಶ್ರೀಮದನಸ್ತ . . . .

೫೯. ತೀರ್ತ್ಥದೇವರ ಅಂಗಭೋಗ ರಂಗಭೋಗ ನಿತ್ಯನೈಮಿತ್ತಿಕ ಮಾಹಾಭಿಷೇಕ ಪೂಜಾದಿ ಚತುರ್ವ್ವಿಂದ ವಾದ ಸನ್ಮಾನ ಖಂಡಸ್ಪುಟಿತ ಜೀರ್ಣ್ಣೋದ್ಧಾರಕ್ಕೆಂದು

೬೦ . . . . ದಾರಾಪೂರ್ವ್ವಕವಾಗಿ ಪಡೆದ ಕಯ್ಯಸ್ಥಳನಿರ್ದೇ . . . .

೬೧ . . . .

೬೨ ಶವಾ (ವು)ದೆಂದಡೆ . . . .

೬೩ . . . . ೧೨ ನಿವೇಶಣ

೬೪ . . . . . . ಶ್ರೀಮದಿಂಗುಳಿಗೆಯ ಮಹಾಪ್ರಭು ಮುಟ್ಟರಸನು ತಂನ. . ಅನನ್ತ

೬೫ ದೇವರ ನೋಂಪಿ ಉದ್ಯಾಪನೆ ನಿಮಿತ್ತವಾಗಿ ಕೊಟ್ಟ . . . .

ಅನನ್ತ ದೇವರ ನೋಂಪಿ ಉದ್ಯಾಪನೆಯ ನಿಮಿತ್ತವಾಗಿ ಭೂಮಿಯ ದತ್ತಿ, ನಿವೇಶನದ ಜಾಗ, ಪಂಚಮಹಾ ಶಬ್ಧ ಸ್ವರಮೇಳದವರಿಗೆ ಮನೆ ನಿವೇಶನವನ್ನು ನೀಡಿದ ವಿವರಣೆ ಇದೆ.[೩೩]

ವೃಷಭತೀರ್ಥಂಕರರಿಂದ ಅನಂತತೀರ್ಥಂಕರರವರೆಗೆ ಲೋಹ ಮೂರ್ತಿಗಳನ್ನು ತಂಜಾವೂರಿನ ಶ್ರಾವಕ ಚಟ್ಟಿರಾಂ ಅಪ್ಪಾವು ಅನಂತ ನೋಂಪಿಯ ಉದ್ಯಾಪನ ಸಂದರ್ಭದಂದು ನೀಡಿದ ಬಗ್ಗೆ ಶಾಸನ ಆಧಾರವಿದೆ.[೩೪]

ಸಾಂಗಲಿಯ ಸಮೀಪ ಅಕ್ಕಿಗುಂಡದಲ್ಲಿ ದೊರಕಿರುವ ಚೌವೀಸ್ ತೀರ್ಥಕರ ಮೂರ್ತಿಯ ಪೀಠದಲ್ಲಿ ಕೆತ್ತಿರುವ ಶಾಸನದಲ್ಲಿ ಮೂಲಸಂಘ, ಸೌರಾಷ್ಟ್ರಗಣ, ದೇಶಿಯ ಸಂಘದ ಜಯಕೀರ್ತಿ ಭಟ್ಟರಕರ ನೇತೃತ್ವದಲ್ಲಿ ಪದ್ಮಗೌಡ, ಸುಗೀಗೌಡರು ಅನಂತ ನೋಂಪಿಯ ಉದ್ಯಾಪನವನ್ನು ಆಚರಿಸಿದ ಸಂದರ್ಭದಲ್ಲಿ ನೀಡಿದ ಮೂರ್ತಿಯೆಂದು ಹೇಳಿದೆ. ವರಕೋಡುವಿನ ಬಳಿ ಇರುವ ೧೫ನೆಯ ಶತಮಾನಕ್ಕೆ ಸೇರಿದ ಎರಡು ಶಾಸನಗಳಲ್ಲಿ ಇಲ್ಲಿಯ ಭವ್ಯರು ಅನಂತ ನೋಂಪಿಯನ್ನು ಸಾಮೂಹಿಕವಾಗಿ ಆಚರಿಸಿದ ವಿವರಣೆ ಇದೆ.[೩೫]

ಅನಂತವ್ರತದ ಸೂತ್ರ(ದಾರ)ದಲ್ಲಿ ಹದಿನಾಲ್ಕು ಗಂಟುಗಳಿಗೆ ಜೈನರಲ್ಲಿ ವಿಶೇಷ ಮಹತ್ವವಿದೆ. ಮೊದಲನೇ ಗಂಟು – ಮೊದಲನೇ ಹದಿನಾಲ್ಕು ತೀರ್ಥಂಕರರ, ಅಂದರೆ ವೃಷಭನಿಂದ ಅನಂತ ತೀರ್ಥಂಕರನ ಸಂಕೇತ. ಎರಡನೆಯ ಗಂಟು – ಸಿದ್ಧ ಪರಮೇಷ್ಟಿಗಳ ಹದಿನಾಲ್ಕು ಗುಣಗಳು. ಮೂರನೆ ಗಂಟು – ಮತಿ ಶ್ರುತ ಮತ್ತು ಅವಧಿಜ್ಞಾನ ಸಂಪನ್ನರಾದ ಹದಿನಾಲ್ಕು ಮುನಿಗಳ ನಾಮದ ಸಂಕೇತ. ನಾಲ್ಕು – ಅರ್ಹತರರಿಗೆ ಧೇವತೆಗಳು ರಚಿಸಿದ ಹದಿನಾಲ್ಕು ಅತಿಶಯಗಳು. ಐದನೆಯ ಗಂಟು – ಚತುರ್ದಶ ಪೂರ್ವಿಗಳು. ಆರು – ಹದಿನಾಲ್ಕು ಗುಣಸ್ಥಾನಗಳು. ಏಳು– ಹದಿನಾಲ್ಕು ಮಾರ್ಗಣಸ್ಥಾನಗಳು. ಎಂಟು - ಚತುರ್ದಶ ಜೀವ ಸಮಾಸಗಳು. ಒಂಬತ್ತು - ಹದಿನಾಲ್ಕು ನದಿಗಳು -ಗಂಗಾ, ಯಮುನಾ, ಸರಸ್ವತಿ, ಬ್ರಹ್ಮಪುತ್ರಾ, ಕೃಷ್ಣಾ, ಗೋದಾವರೀ, ಕಾವೇರಿ, ತಪತೀ, ನರ್ಮದಾ,

ಕಪಿಲಾ, ಪದ್ಮಾ, ಮಹಾಪದ್ಮ, ಪುಂಡರೀಕೇಳಿ - ಹತ್ತು-ಚತುರ್ದಶ ಮನು. ಹನ್ನೊಂದು –ಚಕ್ರವರ್ತಿಗಳ ಚತುರ್‌ರತ್ನ, ಚಕ್ರ, ದಂಡ, ಛತ್ರ, ಚಾಮರ. ಹನ್ನೆರಡು –ಹದಿನಾಲ್ಕು ಸ್ವರಗಳು, ಹದಿಮೂರು –ಹದಿನಾಲ್ಕು ತಿಥಿಗಳು. ಹದಿನಾಲ್ಕು – ಚತುರ್ದಶ ಬಾಹ್ಯಾಭ್ಯಂತರವನ್ನು ಗೆದ್ದ ಮುನಿಗಳು.[೩೬]

ಹದಿನಾಲ್ಕು ಗಂಟುಗಳಿಗೂ ನೀಡಿರುವ ವ್ಯಾಖ್ಯಾನ ಜೈನಸಿದ್ಧಾಂತವನ್ನು ಸಂಕ್ಷಿಪ್ತವಾಗಿ ವ್ರತಪಾಲಕರಿಗೂ ಇತರ ಶ್ರಾವಕರಿಗೂ ತಿಳಿಯಪಡಿಸುವುದೇ ಆಗಿದೆ.

ಶಿವರಾತ್ರಿ ನೋಂಪಿ :[೩೭] ಆಧಿನಾಥ ತೀಥಂಕರರ ಆರಾಧನೆ, ನಾಲ್ಕು ಜಾವ ಪೂಜೆ, ಇವು ಈ ನೋಂಪಿಯ ಕ್ರಮ. ಶ್ರೇಯಾಂಸ ತೀಥಂಕರರ ಗೌರೀ ಯಕ್ಷಿಯ ಆರಾಧನೆಯೇ ಗೌರೀ ನೋಪಿ.

ನಾಗರಪಂಚಮೀ ನೋಂಪಿ :[೩೮] ಈ ನೋಂಪಿಯಲ್ಲಿ ಪಾರ್ಶ್ವನಾಥ ತೀರ್ಥಂಕರರ ಮತ್ತು ಧರಣೇಂದ್ರ ಪದ್ಮಾವತಿ ಯಕ್ಷ ಯಕ್ಷಿಯರ ಆರಾಧನೆಯನ್ನು ಮಾಡಲಾಗುತ್ತದೆ.

ವಾಸ್ತು ಕಲ್ಯಾಣದ ನೋಂಪಿ :[೩೯] ಅಂದಿನ ಜೈನ ಮತ್ತು ಜೈನೇತರ ಗುಂಪಿನಲ್ಲಿ ನಡೆದ ಘರ್ಷಣೆ.

ಜೈನ ದೇವಾಲಯಗಳ ವಿನಾಶ:
ಜೈನ ದೇವಾಲಯಗಳನ್ನು ಅವ್ಯವಹಾರಕ್ಕಾಗಿ ಬಳಕೆ ;
ಬಸ್ತಿಗಳ ಗರ್ಭಗುಡಿಯೊಳಗೆ ಶವಗಳನ್ನು ಹಾಕುವುದು;
ತೀರ್ಥಂಕರ ವಿಗ್ರಹಗಳ, ನಿರ್ಗ್ರಂಥ ಮುನಿಗಳ ಅವಹೇಳನ;
ಸೃಷ್ಟಿಕರ್ತನಲ್ಲದ, ಪವಾಡಪುರುಷನಲ್ಲದ, ಭಕ್ತರಿಗೆ ಅಭಯ ನೀಡಲು
ಅಶಕ್ತನಾದ ತೀರ್ಥಂಕರನ ಅಪಹಾಸ್ಯ,
ಜೈನ ಆಚಾರ್ಯರನ್ನು ಬಸ್ತಿಗಳಿಂದ ಹೊರದೂಡುವುದು.

ಇವುಗಳ ಚಿತ್ರಣವಿದೆ. ಇಂತಹ ಸಂದರ್ಭಗಳನ್ನು ಅತ್ಯಂತ ಸಹನೆಯಿಂದ ಎದುರಿಸಿದ ಜೈನ ಆಚಾರ್ಯರು, ಈ ಘರ್ಷಣೆಗಳು ಮುಗಿದ ನಂತರ ಅಳಿದುಳಿದ ಬಸ್ತಿಗಳ ಸಂರಕ್ಷಣೆಯನ್ನೂ ಮಾಡಿಸಿದರು. ಜೊತೆಗೆ ಶುದ್ಧೀಕರಣವನ್ನೂ ಮಾಡಿಸಿದರು. ಹೀಗೆ ಬೆಳೆದು ಬಂದ ನೋಂಪಿಯೇ ವಾಸ್ತು ಕಲ್ಯಾಣದ ನೋಂಪಿ.

ವಾಸ್ತು ಕಲ್ಯಾಣದ ನೋಂಪಿಯ ಕಥೆಯ ಹಿನ್ನೆಲೆಯು ಅಂದಿನ ಸಾಮಾಜಿಕ ಚಿತ್ರಣವನ್ನು ನಿಗೂಢವಾಗಿ ಚಿತ್ರಿಸುತ್ತದೆ. ಇದು ಕಲ್ಪನೆ ಅಲ್ಲ. ೧೯ನೆ ಶತಮಾನದ ಆರಂಭದಲ್ಲಿ ಕರ್ನಾಟಕದಲ್ಲಿ ಸಂಚರಿಸಿ, ಇಲ್ಲಿಯ ಸ್ಥಿತಿಗತಿಗಳ ಬಗ್ಗೆ ಮಾಹಿತಿಗಳನ್ನು ನೀಡಿರುವ ಬುಕೆನಾನ್‌ನ ಬರವಣಿಗೆಯಲ್ಲಿಯೂ, ಜೈನ ದೇವಸ್ಥಾನಗಳ ಶೋಚನಿಯ ಸ್ಥಿತಿಗತಿಗಳ ಬಗ್ಗೆ ಮತ್ತು ಜೈನಮಠ, ಶ್ರಾವಕರ ಅಸಹಾಯಕ ಸ್ಥಿತಿಗತಿಗಳ ಬಗ್ಗೆಯೂ ಮಾಹಿತಿಗಳಿವೆ. ಇಂತಹ ಅನೇಕ ಘಟನೆಗಳನ್ನು ದೇವಚಂದ್ರನು ರಾಜಾವಳೀ ಕಥೆಯಲ್ಲಿಯೂ ಚಿತ್ರಿಸಿದ್ದಾನೆ. ಜೈನಾಚಾರ್ಯರು ಈ ಘಟನೆಗಳಿಗೆ ಪ್ರತಿಕ್ರಿಯೆಗಾಗಿ ವಾಸ್ತು ಕಲ್ಯಾಣದ ನೋಂಪಿಯನ್ನು ಆಚರಿಸಲು ಉತ್ತೇಜನ ನೀಡಿದರು. ಈ ರೀತಿಯ ಅಮಾನುಷ ಕೃತ್ಯ ಮಾಡಿದ ಕಾರಣ ನಂದಿಮಿತ್ರ ಕುಷ್ಠರೋಗದಿಂದ ನರಳಿ ನಂತರ ಹುಲಿಯಾಗಿ,

ಹಂದಿಯಾಗಿ, ಕೋಣನಾಗಿ ಹುಟ್ಟಿ, ಬೇಡನಿಂದ ಕೊಲ್ಲಲ್ಪಟ್ಟನು. ಈ ಕಥೆಯಲ್ಲಿ ಕೇವಲ ಜೈನಧರ್ಮದ ಕರ್ಮಸಿದ್ಧಾಂತದ ವಿವರಣೆ ಮಾತ್ರವಲ್ಲ, ಸಹಬಾಳ್ವೆ, ಸಹಚಿಂತನೆ, ಶಾಂತಿ ಸಹಿಷ್ಣುತೆಯ ವಿವರಗಳೂ ಇವೆ.

ಕಾರ್ಕಳದ ಭೈರವೇಶ್ವರನು ಕ್ರಿ.ಶ. ೧೫೦೦ಳ ರಲ್ಲಿ ಸೌಭಾಗ್ಯ ನೋಂಪಿಯನ್ನು ಆಚರಿಸಲು ನಿರ್ಧರಿಸಿ ಬಿದಿರೆಯ, ಅಂದರೆ ಮೂಡಬಿದಿರೆಯ ಚಾರುಕೀರ್ತಿ ಭಟ್ಟಾರಕರಿಗೆ ತತ್ಪೋಪದೇಶದ ಕ್ರಮದಿಂದ ನೋಂಪಿಯನ್ನು ನಡೆಸಬೇಕೆಂದು ಬಿನ್ನವತ್ತಳೆ ಬರೆಸಿ, ನಾಲ್ವರು ಇಂದ್ರರನ್ನು ಕಳುಹಿಸಲು, ಅದೇ ಸಮಯದಲ್ಲಿ ಚೌಟರಿಗೂ ನೋಂಪಿ ಇರುವುದರಿಂದ ಮುಗಿದ ನಂತರವೇ ಕಾರ್ಕಳಕ್ಕೆ ಬರಲು ಸಾಧ್ಯ ಎಂದು ಹೇಳಿ, ಹನಸೋಗೆಯಿಂದ ಬಂದಿದ್ದ ನಿರ್ವಾಣಮುನಿ ತಂಡವನ್ನು ಭೈರವೇಶ್ವರನಲ್ಲಿಗೆ ಕಳುಹಿಸಿಕೊಡಲು, ಭೈರವರಸನು ಕೋಪಗೊಂಡರೂ ಅದನ್ನು ತಡೆದುಕೊಂಡು, ಹನಸೋಗೆಯ ನಿರ್ವಾಣಮುನಿಗೆ ಪಟ್ಟಕಟ್ಟಿ ಅವರಿಗೆ ಲಲಿತಕೀರ್ತಿ ಭಟ್ಟಾರಕ ಎಂಬ ಪ್ರಶಸ್ತಿ ನೀಡಿ ಅವರ ನೇತೃತ್ವದಲ್ಲಿ ಈ ನೋಂಪಿಯನ್ನು ಆಚರಿಸಿದ ಎಂಬ ವಿವರಣೆ ಇದೆ. ಹೀಗೆ ಈ ಸೌಭಾಗ್ಯ ನೋಂಪಿಯ ಆಚರಣೆ ಒಂದು ಹೊಸ ಗುರುಪೀಠದ ಸ್ಥಾಪನೆಗೂ ಕಾರಣವಾಯಿತು. [೪೦]

ನೋಂಪಿಯನ್ನು ೩,೫,೭,೯,೧೨ ಮತ್ತು ೧೪ ವರ್ಷಗಳ ಕಾಲ ಆಚರಿಸಿದ ನಂತರ ಉದ್ಯಾಪನವನ್ನು ಅಥವಾ ವಿಸರ್ಜನೆಯನ್ನು ಮಾಡಲಾಗುತ್ತಿತ್ತು. ಅಂತಹ ಸಂದರ್ಭದಲ್ಲಿ ಉತ್ಸವ, ಸಮುದಾಯ ಔತಣಗಳೂ ನಡೆಯುತ್ತಿದ್ದವು. ಅಕ್ಕಿಹಿಟ್ಟಿನ ರಂಗೋಲಿ, ಹಸಿರು ಚಪ್ಪರ, ತೋರಣಗಳಿಂದ ಅಲಂಕಾರ, ಕಳಸ, ಸ್ವಸ್ತಿಕ, ದರ್ಪಣ ಮುಂತಾದ ಮಂಗಳ ಚಿಹ್ನೆಗಳು, [೪೧] ಇವುಗಳ ಪ್ರದರ್ಶನ, ಸಮುದಾಯ ಸಂಘಟನೆ ಮತ್ತು ಧಾರ್ಮಿಕ ಪದ್ಧತಿಯನ್ನು ಬೆಳೆಯುವಂತೆ ಮಾಡುವ ಕ್ರಮವೂ ಆಗಿದ್ದಿತು. ನೋಂಪಿಯ ಉದ್ಯಾಪನ ಸಮಯದಲ್ಲಿ ಲೋಹ ಜಿನಬಿಂಬ, ನಂದೀಶ್ವರ, ಬಾಹುಬಲಿ, ಯಕ್ಷ, ಯಕ್ಷಿ, ಕೇತ್ರಪಾಲ ವಿಗ್ರಹ, ಮುಂತಾದ ವಿಗ್ರಹಗಳನ್ನು ದೇವಸ್ಥಾನಗಳಿಗೆ ನೀಡುವ ಕ್ರಮದಿಂದ ಜೈನರಲ್ಲಿ ವಿಗ್ರಹಗಳ ಸಂಖ್ಯೆಯೂ ಹೆಚ್ಚಿತು.

ನೋಂಪಿಯ ಸಮಯದಲ್ಲಿ ಅರ್ಪಿಸುವ ಅನೇಕ ದವಸ ಧಾನ್ಯ ಮತ್ತಿತರ ಸಾಮಗ್ರಿಗಳು ಬಸ್ತಿಯ ಪುರೋಹಿತ ವರ್ಗದ ಆಧಾಯವೂ ಆಗಿರುತ್ತಿತ್ತು. ಬಸ್ತಿಗಳ ಜಾಮೀನು ಅಥವಾ ದೇವಸ್ಥಾನದ ಜಮೀನುಗಳನ್ನು ರಾಜರುಗಳು ಅಧೀನಪಡಿಸಿಕೊಂಡಂತೆ, ಅಥವಾ ಆಯಾ ಪ್ರದೇಶಗಳಲ್ಲಿ ಜೈನೇತರ ಮಠಗಳು ಅಕ್ರಮಿಸಿಕೊಂಡಂತೆಲ್ಲಾ ಜೈನ ಬಸ್ತಿಗಳ ಆರ್ಥಿಕ ವರಮಾನ ಕ್ಷೀಣಿಸತೊಡಗಿತು. ಆ ಕಾರಣ, ಈ ರೀತಿಯ ದವಸ ಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುವ ಪದ್ಧತಿಯೂ ಜಾರಿಗೆ ಬಂದಿರಬಹುದು.

ನೋಂಪಿಯ ಆಚರಣೆ ೧೨ನೆಯ ಶತಮಾನದ ನಂತರ ಹೆಚ್ಚು ಪ್ರಚಾರಕ್ಕೆ ಬಂದರೂ, ವ್ರತನಿಯಮ ಆಚರಣೆಯು ವರ್ಧಮಾನ ಮಾಹಾವೀರನ ಕಾಲದಿಂದಲೇ ಬೆಳೆದುಬಂದ ಸಾಮಾಜಿಕ -ಧಾರ್ಮಿಕ ಆಚರಣೆ ಎಂಬ ಭಾವನೆ ಜನರಲ್ಲಿ ಬೆಳೆಯುವಂತೆ ಮಾಡಲು, ಮತ್ತು ಆ ಮೂಲಕ ಪ್ರಾಚೀನ ಪರಂಪರೆಯನ್ನು ದೃಢೀಕರಿಸಿ, ನೋಂಪಿ ಆರಾಧನೆಯ ಪ್ರಾಮುಖ್ಯತೆಯನ್ನು ನೋಂಪಿಯ ಕಥೆಗಳು ತಿಳಿಸುತ್ತವೆ. ಹೆಚ್ಚಾಗಿ ನೋಂಪಿಯ ಕಥೆಗಳನ್ನು 'ಗಂಧಕುಟಿ' ಯಲ್ಲಿ ಅಂದರೆ ಮಹಾವೀರ ತೀರ್ಥಕರರ'ಸಮಸರಣ ' (ಬೋಧನಾ ಸಭೆ)ಯಲ್ಲಿ ಗೌತಮಗಣಧರರು ಚೇಳಿನೀದೇವಿ ಮತ್ತು

ಶ್ರೇಣಿಕ ಮಹಾರಾಜನಿಗೆ ನೋಂಪಿಯ ಆಚರಣೆಯ ಮಹತ್ವವನ್ನು ನಿರೂಪಿಸುವಂತೆ ರಚಿಸಲಾಗಿದೆ. ಕಥಾರೂಪಕವಾಗಿ ನೋಂಪಿಯ ಕಥೆಗಳನ್ನು ಈ ಮೂಲಕವಾಗಿ ಗೃಹಸ್ಥಜೀವನದಲ್ಲಿ ದಂಪತಿಗಳು, ಈ ವ್ರತ ನಿಯಮವನ್ನು ಆಚರಿಸಬೇಕು ಎನ್ನುವ ನಿಯಮವನ್ನೂ, ಹಾಗೆ ಆಚರಿಸುವುದರಿಂದ ಲಭ್ಯವಾಗುವ ಪುಣ್ಯ ಮತ್ತು ಪ್ರಸ್ತುತ ಜೀವನದಲ್ಲಿ ಪ್ರತಿಷ್ಠೆ, ಶಾಂತಿ, ನೆಮ್ಮದಿ, ಐಶ್ವರ್ಯ ಪ್ರಾಪ್ತಿ ಲಭಿಸುವುದೆಂಬ ನಂಬಿಕೆಯನ್ನು, ದಾನ, ಧರ್ಮ ಕಾರ್ಯಗಳಿಗಾಗಿ ಸಂಪತ್ತಿನ ವಿನಿಯೋಗ ಮಾಡಬೇಕೆಂದೂ, ಈ ರೀತಿ, ಶ್ರಾವಕ ಧರ್ಮದ ನಿಯಮವನ್ನು ಪ್ರಸಾರ ಮಾಡುತ್ತಿದ್ದರು. ಜೊತೆಗೆ, ಕಷ್ಟ ಪರಿಹಾರ, ವರಪ್ರಸಾದ, ದೈವ ಅನುಗ್ರಹ, ಇಂತಹ ಶ್ರಾವಕರ ಲೌಕಿಕ ಆಸೆ ಆಕಾಂಕ್ಷೆಗಳು ವ್ರತ ಆಚರಣೆಯಿಂದ ಪೂರ್ಣಗೊಳ್ಳುತ್ತವೆ ಎಂಬುದನ್ನು ಈ ನೋಂಪಿಯ ಕಥೆಗಳು ಸೂಚಿಸುತ್ತವೆ. ಶತಮಾನಗಳು ಉರುಳಿದಂತೆ ಇಂತಹ ನಂಬಿಕೆಗಳು ಬಲವಾಗಿ, ಹೆಚ್ಚಾಗಿ ನೋಂಪಿಯ ಆಚರಣೆ ಜೈನ ಸಮಾಜದಲ್ಲಿ ಹೆಚ್ಚು ಪ್ರಚಾರಕ್ಕೆ ಬಂದಿತು. ಆ ಕಾರಣದಿಂದಲೇ ಈ ನೋಂಪಿಯ ಕಥೆಗಳ ಹಸ್ತ ಪ್ರತಿಗಳು ಹೆಚ್ಚಾಗಿ ದೊರೆತಿವೆ. (ಮದ್ರಾಸ್ ಓರಿಯಂಟಲ್ ಲೈಬ್ರೆರಿಯಲ್ಲಿರುವ ಹಸ್ತಪ್ರತಿಗಳ ಪಟ್ಟಿಯಲ್ಲಿ, ಸಂಪುಟಗಳಲ್ಲಿ ಮೂರನೇ ಸಂಪುಟ ಪೂರ್ಣವಾಗಿ ನೋಂಪಿಯ ಕಥೆಗಳಿಗೇ ಮೀಸಲಾಗಿದೆ. ಇದನ್ನು ೧೯೩೯ ರಲ್ಲೇ ಈ ಪಟ್ಟಿಯನ್ನೊಳಗೊಂಡ ಸಂಪುಟವನ್ನು ಬಿಡುಗಡೆ ಮಾಡಲಾಗಿದೆ. ಇದನ್ನು ಮಹೋಪಾಧ್ಯಾಯ ವಿದ್ಯಾಚಕ್ರವರ್ತಿ ಪ್ರೊ. ಎಸ್. ಕುಪ್ಪುಸ್ವಾಮಿ ಶಾಸ್ತ್ರಿಗಳು ಮತ್ತು ವಿದ್ಯಾಸಾಗರ ವಿದ್ಯಾಚಕ್ರವರ್ತಿ ವಿ.ಪಿ. ಸುಬ್ರಮಣ್ಯ ಶಾಸ್ತ್ರಿಗಳು ರಚಿಸಿದ್ದಾರೆ.) ನೋಂಪಿಗಳಿಗೆ ಹೊಂದಿಕೊಂಡಂತೆ, ಯಕ್ಷ, ಯಕ್ಷಿ, ಕ್ಷೇತ್ರಪಾಲ, ಬ್ರಹ್ಮದೇವಪೂಜೆ, ಪದ್ಮಾವತೀ, ಜ್ವಾಲಾಮಾಲಿನೀ, ಕೂಷ್ಮಾಂಡಿನೀ ದೇವಿಯರ ಪವಾಡ, ಇವುಗಳಲ್ಲಿಯೂ ನಂಬಿಕೆ ಬಲವಾಯಿತು.

ಕರ್ನಾಟಕ ಜೈನ ಧಾರ್ಮಿಕ ಆಚರಣೆಯಲ್ಲಿ ನೋಂಪಿಯ ಆಚರಣೆ ಇಂದಿಗೂ ಹೆಚ್ಚು ಪ್ರಚಾರದಲ್ಲಿದೆ. ನೋಂಪಿಯ ಆಚರಣೆ, ಉದ್ಯಾಪನೆಯ ಸಂದರ್ಭದಂದು ಕಂಚಿನ ವಿಗ್ರಹಗಳನ್ನು ಬಸ್ತಿಗಳ ಮೇಲ್ವಿಚಾರಣೆಗೆ ದಾನ ದತ್ತಿ ನೀಡುವ ಪದ್ಧತಿ, ವಿಗ್ರಹಗಳ ಸಂಖ್ಯೆಯೂ ಹೆಚ್ಚಿತು. ಶಾಸ್ತ್ರ ದಾನ ಈ ಸಂದರ್ಭದಲ್ಲಿ ಅನುಸರಿಸುತ್ತಿದ್ದುದರಿಂದ, ಹೊಸ ಗ್ರಂಥ ರಚನೆ, ಗ್ರಂಥಗಳನ್ನು ಪ್ರತಿ ಮಾಡಿಸುವ ಕ್ರಮದ ಮೂಲಕ ಜ್ಞಾನಪ್ರಸಾರ ಮತ್ತು ಶಾಸ್ತ್ರರಕ್ಷಣೆಯೂ ಆಯಿತು.

ಅಡಿಟಿಪ್ಪಣಿಗಳು :

1. Hampa.Nagarajaiah, Nompiya Kathegalu. (Abbreviation used here after H.P.N.)
2. E.C.,Vol. 11, No.333.
3. H.P.N. Introduction, X IV.
4. Ibid., P.XIV.
5. E.C., III, Tayuru, 211.

6. P.B.Desai : Jainism in South India, P.80.

7. S.I. 1, Vol. IX-I; E.C., Vol. VIII.

7(a). Kannada Sahitya Parishatina Patrike, Vol, 5-54 and 59, 1974

8. H.P.N. Nom. Ka. Introl XXIII.

9. Dr. B.S.Kulkarni. Nompiya Kathegalu, P.62. (Abbreviation used hereafter B.S.K.).

10. A Descriptive Catalogue of the kannada Manuscripts. Vol. III, Madras, P.514,No. 322

11. Ibid., P. 516, No. 323.

12. Dr. B.R.Gopal. Karnatak Inscriptions, Vol.V.K.R.I., Dharwad, No. 32.

13. Ibid., No.32.

14. Ibid., No. 33.

15. B.S.K., P. 80 and P.101.

16. Ibid., P.98.

17. H.P.N., P.79.

18. B.S.K. P.85.

19. B.S.K. P. 31.

20. Descriptive Catalogue of the Kannada Manuscripts, Vol.III, Madras, P.422.

21. V.Lokanatha Sastry, Moodabidireya Charitre, 1937.

22. B.S.K.,P.103.

23. Ibid., P.67.

24. Ibid., P.1.

25. E.C., Vol.II, No., 333.

26. H.P.N., P.51.

27. A Descriptive List of Stone/ Copper Plate Inscriptions. K.R.I.,Dharwad.

28. B.S.K., P. 41.

29. Ibid., P.80.

30. Ibid., P.82

31. Encyclopaedia of Indian Culture, Vol., 1, P.71.

32. South Indian Inscriptions, Vol. XX, No. 202.

33. Ibid., No. 202.

34. E.C., Vol. II, No. 492.

35. E.C., Vol.No. 24.

36. Chikka Padmanna Setty, Ananthanatha Charitrem (Ed)Ban-nmah, PP. 376.

37. H.P.N., 74.

38. H.P.N., P. 79.

40. Pandita Lokanatha Sastri, Moodabidireya Charitrem 1937.

41. H.P.N.

೧೯೮೮ ರ ಸಂಶೋಧನ ಸಾಹಿತ್ಯ

* ಎಸ್.ಕೆ. ಕೊಪ್ಪಾ

ಸಾಮಾನ್ಯವಾಗಿ ಒಂದು ಅಧ್ಯಯನ ಕ್ಷೇತ್ರದಲ್ಲಿ ಹೊರಬಂದಿರುವ ಪುಸ್ತಕಗಳ ಪಟ್ಟಿ ಮಾಡುವ ಕೆಲಸ ಸುಲಭವಾದುದಲ್ಲ. ಪುಸ್ತಕಗಳ ಪರಿಸ್ಥಿತಿಯೇ ಹೀಗಾದ ಮೇಲೆ ಬಿಡಿ ಲೇಖನಗಳ ಸ್ಥಿತಿಯನ್ನು ಹೇಳುವುದೇ ಬೇಡ. ಇನ್ನು ಸಂಶೋಧನ ಪ್ರಕಟಣೆಗಳ ಸ್ಥಿತಿ ಇನ್ನಷ್ಟು ಗಂಭೀರವಾಗಿದೆ. ಪುಸ್ತಕೋದ್ಯಮಕ್ಕೆ ಮೀಸಲಾಗಿರುವ ಗ್ರಂಥಲೋಕದ ೧೯೮೮ ರ ಸಂಚಿಕೆಗಳನ್ನು ತಿರುವಿ ಹಾಕುತ್ತಿದ್ದರೆ ಸಂಶೋಧನ ಪಟ್ಟಿಯಲ್ಲಿ ಯಾವ ಗಮನಾರ್ಹ ಪ್ರಕಟನೆಗಳೂ ಕಾಣುವುದಿಲ್ಲ. ಸಂಶೋಧನ ಕ್ಷೇತ್ರ ವಿಶಾಲವಾದುದರಿಂದ ಸಾಹಿತ್ಯ, ಇತಿಹಾಸ, ಧರ್ಮ,ಶಾಸನ,ಜಾನಪದ,ಸಂಸ್ಕೃತಿ ಇತ್ಯಾದಿ ವಿಭಾಗದಡಿ ಪಟ್ಟಿಗೊಂಡ ಕೃತಿಗಳಲ್ಲಿ ನಾವು ಸಂಶೋಧ ಕೃತಿಗಳನ್ನು ಗುರುತಿಸಬೇಕಾಗುತ್ತದೆ.

ಇಂದು ಅಧ್ಯಯನ, ಅಧ್ಯಾಪನದಷ್ಟೇ ಮಹತ್ವ ಪಡೆಯುತ್ತಿರುವ ಸಂಶೋಧನ ಕ್ಷೇತ್ರ ಜನಾದರಣೆ –ಆಕರ್ಷಣೆಗಳಿಂದ ದೂರ ಉಳಿದಿದೆ. ಆದರೂ ಅದು ಈ ದಶಕದಲ್ಲಿ ಬಹುಬಗೆಯ ಪ್ರೋತ್ಸಾಹಗಳಿಂದ, ಆಸಕ್ತಿ ಭರವಸೆಗಳನ್ನು ಹುಟ್ಟಿಸುತ್ತಲಿದೆ. ಪ್ರಕಾಶನದ ಆತಂಕದಲ್ಲಿರುವ ಸಂಶೋಧನ ಪ್ರಕಟಣೆಗಳು ಈಚೆಗೆ ಹೆಚ್ಚು ಹೆಚ್ಚಾಗಿ ಹೊರಬರುತ್ತಲಿರುವುದು ಸಮಾಧಾನಕರ ಅಂಶವಾಗಿದೆ. ವಿವಿಧ ಪತ್ರಿಕೆಗಳು, ಸಂಭಾವನ ಸಂಸ್ಮರಣ ಗ್ರಂಥಗಳ ಮೂಲಕ ಪ್ರಕಟಗೊಂಡ ಅಧಿಕ ಪ್ರಮಾಣದ ಬಿಡಿ ಸಂಶೋಧನ ಲೇಖನಗಳನ್ನು ಹೊರತುಪಡಿಸಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡ ೧೯೮೮ ರ ಸಂಶೋಧನ ಸಾಹಿತ್ಯವನ್ನು ಇಲ್ಲಿ ಸಮೀಕ್ಷಿಸಲಾಗಿದೆ. ಈ ವರ್ಷದ ಪ್ರಕಟನೆಗಳಲ್ಲಿ ಸಂಶೋಧನ ಹೆಸರಿನಿಂದಾಗಿ ಎಂ. ಚಿದಾನಂದಮೂರ್ತಿಯವರ ''ಪಗರಣ ಮತ್ತು ಇತರ ಸಂಪ್ರಬಂಧಗಳು',ಸೀತಾರಾಮ್ ಜಾಗೀರ್‌ದಾರ್‌ರ ''ಛಂದೋರಚನಾ ಸಂಶೋಧನೆಗಳು', ಬಿ.ಆರ್.ಹಿರೇಮಠರ ''ಸಂಶೋಧನ ಪಥ',ಎಚ್. ದೇವೀರಪ್ಪನವರ 'ಸಂಶೋಧನ ಸಂಪುಟ' ಇವು ನಮ್ಮ ಗಮನ ಸೆಳೆಯುತ್ತವೆ. ಇವೆಲ್ಲ ಒಂದು ಪ್ರಕಾರಕ್ಕೆ ವಿಷಯಕ್ಕೆ ಸಂಬಂಧಿಸಿದ ಕೃತಿಗಳಾಗಿರದೆ ಆಯಾ ಲೇಖಕರ ಬಿಡಿಬರಹಗಳ ಸಂಕಲನಗಳಾಗಿರುವುದು ಈ ವರ್ಷದ ವೈಶಿಷ್ಟ್ಯವೆಂದು ಹೇಳಬೇಕು.

೧೯೮೮ರಸಂಶೋಧನ ಪ್ರಕಟಣೆಗಳಲ್ಲಿ ಎಂ.ಚಿದಾನಂದ ಮೂರ್ತಿಯವರ' ಪಗರಣ'ಗಮನಾರ್ಹವಾದುದು. ಕನ್ನಡ ಸಾಹಿತ್ಯ, ಸಂಶೋಧನ ಕ್ಷೇತ್ರದಲ್ಲಿ ಚಿದಾನಂದ ಮೂರ್ತಿಯವರ ಹೆಸರು ಈಗಾಗಲೇ ಚಿರಪರಿಚಿತವಾಗಿದೆ. ಯಾವಾಗಲೂ ಹೊಸತನವನ್ನು ಗುರುತಿಸುವ ಅವರ ಒಟ್ಟು ಬರವಣಿಗೆಯ ಹೆಚ್ಚಿನ ಪಾಲು ಸಂಪ್ರಬಂಧಗಳಿಗೆ ಮೀಸಲಾಗಿದೆ. ಜಾನಪದಶಾಸ್ತ್ರ ಕ್ಷೇತ್ರದಲ್ಲಿ ಹೊರತಂದಿರುವ ಮೂರನೆಯ ಕೃತಿ ಪಗರಣದಲ್ಲಿ ಐತಿಹಾಸಿಕ ಮತ್ತು ವ್ಯಾಖ್ಯಾನಾತ್ಮಕವಾದ 'ಹತ್ತೊಂಬತ್ತು ಸಂಪ್ರಬಂಧಗಳಿವೆ. ತಮ್ಮದೇ ಹಿಂದಿನ ಪುಸ್ತಕಗಳ ಲೇಖನಗಳನ್ನು ಮತ್ತೊಂದು ಪುಸ್ತಕದಲ್ಲಿ ಸೇರಿಸಿಕೊಳ್ಳುವ 'ಗ್ರಾಮೀಣ' ಮತ್ತು 'ವಾಗಾರ್ಥ'ಗಳ ಪರಂಪರೆಯನ್ನು ಚಿದಾನಂದ ಮೂರ್ತಿಯವರು ಇಲ್ಲಿಯೂ ಮುಂದುವರೆಸಿದ್ದಾರೆ. 'ಪಗರಣ'ಪುಸ್ತಕದ ಹೆಸರಿಗೆ ಕಾರಣವಾದ ೩೫ ಪುಟಗಳ 'ಪಗರಣ(ಹಗರಣ) ಇತಿಹಾಸದಲ್ಲಿ ಮತ್ತು ಸಮಕಾಲೀನದಲ್ಲಿ'

ಲೇಖನ ಚಿದಾನಂದ ಮೂರ್ತಿಯವರ 'ಗ್ರಾಮೀಣ' ಪುಸ್ತಕದಲ್ಲಿನ ಮೊದಲ ೨೬ ಪುಟಗಳನ್ನು ಯಥಾವತ್ತಾಗಿ ಪಡೆದಿದೆ. ಹೆಚ್ಚಿನ ವಿಷಯವನ್ನು ಹೊಂದಿದ ಮುಂದುವರಿಕೆ ಭಾಗ 'ಹಗರಣ: ಚಿಕ್ಕಮಗಳೂರು ಜಿಲ್ಲೆಯಲ್ಲಿ' ಎಂಬುದು ಸ್ವತಂತ್ರ ಲೇಖನ ಇಲ್ಲವೆ ಟಿಪ್ಪಣಿಯಾಗಬಹುದಿತ್ತು. 'ಕನ್ನಡ ಕಾವ್ಯ ಶಾಸನಗಳಲ್ಲಿ ಮೈಲಾರ ಮತ್ತು ಮಾಳಚಿ', 'ನಯಸೇನ ಕನ್ನಡದ ಒಬ್ಬ ಜಾನಪದ ಚಂಪೂಕವಿ' ಈ ಎರಡು ಲೇಖನಗಳು ಅವರ ಸಂಶೋಧನ ತರಂಗ ಭಾಗ ೨ ರಿಂದ ಅನಾಮತ್ತಾಗಿ ಎತ್ತಿದವುಗಳು. ಒಂದೊಂದು ಪುಸ್ತಕಗಳಲ್ಲಿ ಒಂದೊಂದು ವಿಷಯ ಸೇರಿಸುವ ಹಿನ್ನೆಲೆಯಲ್ಲಿ ಚಿದಾನಂದ ಮೂರ್ತಿಯವರ ಈ ಕ್ರಿಯೆ ನಿಜಕ್ಕೂ ಆಶ್ಚರ್ಯವನ್ನುಂಟುಮಾಡುತ್ತದೆ. ಯಾವಾಗಲೂ ಹಲವು ಹತ್ತು ಕ್ಷೇತ್ರಗಳಲ್ಲಿ ಕೈಯಾಡಿಸುವ ಚಿದಾನಂದಮೂರ್ತಿಯಂತವರಿಗೆ ಒಂದು ವಿಷಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತರುವುದು ಸಾಧುವಲ್ಲದ ವಿಚಾರವೆಂಬುದು ಎಲ್ಲರಿಗೂ ತಿಳಿಯುವ ಮಾತು. ಮುದ್ರಣ ದುಬಾರಿಯಾದ ಇಂದಿನ ಕಾಲದಲ್ಲಿ ಇಂಥ ಲೇಖನಗಳ ಪುನರಾವರ್ತನೆ ಓದುಗರಿಗೆ ವೃಥಾ ಭಾರವಾಗುವದರೊಂದಿಗೆ ಗೊಂದಲಕ್ಕೆ ಸಿಕ್ಕಿಸುತ್ತದೆ.

ಉಳಿದ ಲೇಖನಗಳಲ್ಲಿ 'ಜೋಕುಮಾರನ ಕಥೆಯ ಇನ್ನೊಂದು ಪ್ರಭೇದ' ಕರ್ನಾಟಕದ ಗ್ರಾಮೀಣ ದೈವಗಳಲ್ಲಿ ಅತ್ಯಂತ ಕುತೂಹಲಕಾರಿಯಾದ ಜೋಕುಮಾರನ ಹುಟ್ಟಿನಿಂದ ಸಾವಿನವರೆಗಿನ ವಿಧಿ ಆಚರಣೆಗಳ ಹೊಸ ಮಾಹಿತಿ ಸಂಗ್ರಹಣೆಯನ್ನೊಳಗೊಂಡಿದೆ. 'ಜಾನಪದ ಶಾಸ್ತ್ರ ಸಮೂಹ ಸ್ಮರಣೆಯ ಕತೆಗಳು ಇತ್ಯಾದಿ' ಲೇಖನ ಈ ಮೊದಲು folkloreಎಂಬರ್ಥದಲ್ಲಿ ಬಳಸಿದ, ಹೆಚ್ಚು ಪ್ರಚಾರ ಪ್ರಸಿದ್ಧಿ ಪಡೆಯದ ಜಾನಪದಶಾಸ್ತ್ರ ಎಂಬ ತಮ್ಮ ಮಾತಿನ ಔಚಿತ್ಯವನ್ನು 'ಪಾರಿಭಾಷಿಕ ಪದಗಳ' ಹಿನ್ನೆಲೆಯಲ್ಲಿ ಡಾ. ಚಿದಾನಂದ ಮೂರ್ತಿ ಪುನಃ ಸಮರ್ಥಿಸಿಕೊಂಡಿದ್ದಾರೆ. ಮುಂದುವರಿದು ಜಾನಪದ ಸಾಮಗ್ರಿಯನ್ನು ಒಟ್ಟು ಬದುಕಿನ ಅಂಗವಾಗಿ ಅರ್ಥಪೂರ್ಣ ರೀತಿಯಲ್ಲಿ ಹೊಂದಿಸಬೇಕಾದ ಅಗತ್ಯವನ್ನು ಲಂಬಾಣಿಗಳ ತಾಂಡಾಕ್ಕಿರುವ ಎರಡೆರಡು ಹೆಸರುಗಳ ಮೂಲಕ ಅರ್ಥವತ್ತಾಗಿ ವ್ಯಾಖ್ಯಾನಿಸಿದ್ದಾರೆ.

ಜಾನಪದ ಗೀತಗಳನ್ನು ಅಭ್ಯಸಿಸಬೇಕಾದಾಗ ಅದರ ಕೃತಿಕಾರನಿಗಿರುವ ತೀವ್ರವಾದ ಜೀವನಾನುಭವ ಮತ್ತು ಮನುಷ್ಯನ ಸಂಕೀರ್ಣಸ್ವಭಾವದ ಅರಿವನ್ನು ಗಮನಿಸದೇ ಹೋದರೆ ಅದರ ಅರ್ಥ ಅಮುಖ್ಯವಾಗುತ್ತದೆ ಎನ್ನುವ ಎಚ್ಚರಿಕೆ ಎಂದು ಅಪೂರ್ವ ಜಾನಪದ ಗೀತದಲ್ಲಿದೆ 'ಚಿಕ್ಕಿ ಉಂಗುರಕೆ ನಾರಿ ಮನಸೋತಳೋ' ಎಂಬ ಆಕರ್ಷಕ ಅಪೂರ್ವ ಕೋಲಾಟ ಪದ ಕೋಲಾಟದ ಸಮಯದಲ್ಲಿ ಕಾಲಾಟ, ಹಾರಾಟ, ಕೂಗಾಟಗಳ ಮಧ್ಯೆ ಹುದುಗಿ ಅರ್ಥ ಹಿನ್ನೆಲೆಗೆ ಸರಿದಿರುವ ದುರಂತವನ್ನು ಆ ಗೀತದುದ್ದಕ್ಕೂ ಗುರುತಿಸಿ ವ್ಯಾಖ್ಯಾನಿಸಿದ್ದಾರೆ. ಜೋಗಿಯ ಚಿಕ್ಕಿ ಉಂಗುರಕೆ ಮನಸೋತು ಆತನ ಬೆನ್ನು ಹತ್ತಿ ತಿರುಗಿದ ಮುಗ್ಧ ಹಳ್ಳಿಯ ಸಂಸಾರಿ ಹೆಣ್ಣು ಏನೆಲ್ಲ ಕಷ್ಟವನ್ನು ಅನುಭವಿಸುತ್ತಾಳೆ. ಆದರೆ ಅವಳನ್ನು ತಾನೆಂದೂ ಒಪ್ಪಿಕೊಳ್ಳನೆಂಬ ಜೋಗಿಯ ಮನಸ್ಥೈರ್ಯದೊಂದಿಗೆ ಮುಕ್ತಾಯಗೊಳ್ಳುವ ಈ ಪದ ಬದುಕು -ಸಾವಿನ ದುರಂತದ ತುತ್ತ ತುದಿಯನ್ನು ತಲುಪುತ್ತದೆ. ಯಾವುದೇ ನೀತಿ-ಮತಧರ್ಮದ ಸೋಂಕಿಲ್ಲದ ಈ ಲೌಕಿಕ ಗೀತದಲ್ಲಿ ಜಾನಪದ ಕವಿ ಒಂದು ಹೆಣ್ಣನ್ನು ಕೊರಗಿನ ಮಟ್ಟದಲ್ಲೇ ನಿಲ್ಲಿಸುವ ಮೂಲಕ ಜನ್ನನ ಯಶೋಧರ ಚರಿತೆಯ ಕತೆಗಿಂತ ಹೆಚ್ಚು ತೀವ್ರ ಮತ್ತು ನಿಶ್ಚಯವಾಗಿ ಹೆಚ್ಚು ದುರಂತಾತ್ಮಕಗೊಳಿಸಿದ್ದಾನೆ ಎಂಬ ಅವರ ನಿಲುವನ್ನು ಮೆಚ್ಚಬೇಕು. ಮೇಲ್ನೋಟಕ್ಕೆ ತಮಾಷೆಯ ಕತೆಯಂತೆ ಕಂಡುಬರುವ ಸರಳ ಮತ್ತು ಜಾನಪದ ಮೂಲ ವಸ್ತುವಿನ

ಹಿಂದೆ ಆಧುನಿಕ ಕಾಲದವರೂ ಆಶ್ಚರ್ಯಪಡುವ ಮತ್ತು ಮೆಚ್ಚುವ ಗಂಭೀರ ಅರ್ಥವನ್ನು ಕನಕದಾಸರು ತಮ್ಮ ರಾಮಧಾನ್ಯ ಚರಿತೆಯಲ್ಲಿ ಹೇಗೆ ಹುದುಗಿಸಿಟ್ಟಿದ್ದಾರೆಂಬ ಅಂಶ 'ಹಾಸ್ಯದ ಕತೆಯೊಂದರಲ್ಲಿ ವರ್ಗಹೋರಾಟದ ಚಿತ್ರಣ :ರಾಮಧಾನ್ಯ ಚರಿತೆ ' ಲೇಖನದಲ್ಲಿದೆ. ರಾಮಧಾನ್ಯ ಚರಿತೆಯಲ್ಲಿ ವರ್ಗಹೋರಾಟದ ಅಂಶ ಗುರುತಿಸಿದವರಲ್ಲಿ ಚಿದಾನಂದ ಮೂರ್ತಿ ಮೊದಲಿಗರಲ್ಲವಾದರೂ ಅದನ್ನು ಕನಕದಾಸರ ಆತ್ಮಚರಿತ್ರಾತ್ಮಕ ಕೃತಿಯಾಗಿ ಅರ್ಥೈಸುವ ರೀತಿ ಮಾತ್ರ ಹೊಸತು.

ರೇವಣಸಿದ್ದೇಶ್ವರ ಮಠದಲ್ಲಿದ್ದುಕೊಂಡು ಆ ದೈವದ ಪೂಜೆ ಮಾಡುತ್ತ, ಕುರುಬ ಜಾತಿಯ ಮತೀಯ ಕ್ರಿಯೆಗಳನ್ನು ನಡೆಸುತ್ತ ಅವರ ಆರಾಧ್ಯರಾಗಿರುವ ಒಡೆಯರ ಬಗೆಗಿನ ವಿಶೇಷ ಅಧ್ಯಯನವೇ ಕುರುಬ ಜಾತಿಯ ಒಡೆಯರು ಮತ್ತು ಒಡೇರಮ್ಮ 'ಪ್ರಬಂಧ. ಭಾರತೀಯ ಸಮಾಜದಲ್ಲಿ ಪುರೋಹಿತ ಮತ್ತು ಲೌಕಿಕರ ಮಧ್ಯೆ, ಸಸ್ಯಾಹಾರ ಮತ್ತು ಮಾಂಸಾಹಾರಗಳ ಮಧ್ಯೆ ಮದುವೆ ಸಂಬಂಧಗಳು ಬಹುಮಟ್ಟಿಗೆ ನಿಷಿದ್ಧ. ಆದರೆ ಕುರುಬ ಜನಾಂಗದ ಪುರೋಹಿತರಾದ ಒಡೆಯರೆಲ್ಲ ಅಣ್ಣ ತಮ್ಮಂದಿರೆಂಬ ನಂಬಿಕೆ ಇಟ್ಟುಕೊಂಡಿದ್ದರಿಂದ ಎರಡು ಒಡೆಯರ ಕುಟುಂಬಗಳ ಮಧ್ಯೆ ವಿವಾಹವಾಗುವುದಿಲ್ಲ. ಇಲ್ಲಿ ಪುರೋಹಿತರಾದ ಒಡೆಯರರು ಲೌಕಿಕರಾದ ಕುರುಬರ ಮಧ್ಯೆ ನಡೆಯುವ ವಿವಾಹ, ವಿವಾಹ ಮಾತ್ರವಲ್ಲ ಸಸ್ಯಾಹಾರಿ -ಮಾಂಸಾಹಾರಿ ಪಂಗಡಗಳ ಮಧ್ಯದ ವಿವಾಹವೂ ಎನಿಸುತ್ತದೆ. ಈ ದೃಷ್ಟಿಯಿಂದ ಅವರ ಮಧ್ಯೆ ಆಗಿರುವ ಗಮನಾರ್ಹ ಏರ್ಪಾಟನ್ನು ಡಾ.ಚಿದಾನಂದ ಮೂರ್ತಿಯವರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಕುರುಬರ ಮನೆಯಿಂದ ಒಡೆಯರ ಮನೆಗೆ ಸೊಸೆಯಾಗಿ ಬರುವ ಹುಡುಗಿಗೆ ಮದುವೆಯಲ್ಲಿ ಹುಡುಗನೊಂದಿಗೆ ಕೆಲಸಂಸ್ಕಾರಗಳು ನೆರವೇರುತ್ತವೆ (ಒಡೆಯರ ಹುಡುಗಿಗೆ ಕುರುಬರ ಮನೆಗೆ ಕೊಡಬೇಕಾದಾಗ ಆ ಅಗತ್ಯವಿಲ್ಲ) ಅಂದಿನಿಂದ ಹುಡುಗ ನಿಜವಾದ ಒಡೆಯರು (ಮೊದಲು ಆತ ಮಾಂಸಾಹಾರಿ ಇರಬಹುದು). ಅವನ ಹೆಂಡತಿ ಒಡೇರಮ್ಮ ಎನ್ನಿಸಿಕೊಳ್ಳುತ್ತಾಳೆ. ಒಡೆಯರಂತೆ ಮೈಮೇಲೆ ಸದಾ ಲಿಂಗವನ್ನು ಧರಿಸುವ ಈ ಒಡೇರಮ್ಮ ಅಂದಿನಿಂದ ಸಸ್ಯಾಹಾರಿಯಷ್ಟೇ ಅಲ್ಲ ಸಮಾಜದ ದೃಷ್ಟಿಯಲ್ಲಿ ಮೇಲ್ಮಟ್ಟದ ಸ್ಥಾನವನ್ನು ಪಡೆಯುತ್ತಾಳೆ. ಒಡೆಯರಿಗೆ ಸಲ್ಲುವ ಎಲ್ಲ ಸಾಮಾಜಿಕ ಧಾರ್ಮಿಕ ಗೌರವಗಳು ಅವಳಿಗೂ ಸಲ್ಲುತ್ತವೆ. ವಿಚಿತ್ರವೆಂದರೆ ಒಡೆಯರು ನಡೆಸುವ ಧಾರ್ಮಿಕ ವಿಧಿ-ವಿಧಾನಗಳನ್ನು ಅವಳು ವಿಧವೆಯಾದಾಗಲೂ ನಡೆಸಬಹುದು. ವಾಸ್ತವವಾಗಿ ಗಂಡ ಸತ್ತನಂತರ ಅವಳು ಯಾವ ಸೌಭಾಗ್ಯದ ಚಿಹ್ನೆಗಳನ್ನು ತೆಗೆದುಹಾಕಬೇಕಿಲ್ಲ. ಈ ಪ್ರಗತಿಪರ ಮಾನವೀಯ ಧೋರಣೆಗಳಿಂದಾಗಿ, ಒಡೆಯರ ಜನಾಂಗ ಭಾರತದಲ್ಲೇ ಅತ್ಯಂತ ವಿಶಿಷ್ಟವಾದ ಆಶ್ಚರ್ಯಕರ ಉದಾರವಾದೀ ಜಾತಿವ್ಯವಸ್ಥೆಯ ವಿರಳ ನಿದರ್ಶನವೆನಿಸುತ್ತದೆ. ನಮ್ಮ ಅರಿವನ್ನು ವಿಸ್ತರಿಸುವ ಡಾ. ಚಿದಾನಂದ ಮೂರ್ತಿಯವರ ಈ ಶೋಧನೆ ಸಮಾಜ ಶಾಸ್ತ್ರಜ್ಞರ, ಮಾನವ ಶಾಸ್ತ್ರಜ್ಞರ ಮತ್ತು ಜಾನಪದ ಶಾಸ್ತ್ರಜ್ಞರ ಅಧ್ಯಯನಕ್ಕೆ ಬೆರಗಿನ ವಸ್ತುವಾಗಬಲ್ಲದು.

ಕಬ್ಬಿಣದ ಕುರಿತು ದೇಶ-ವಿದೇಶಗಳ ಜನಪದ ನಂಬಿಕೆಗಳ ಜಾನಪದ ಶಾಸ್ತ್ರ, ಶಬ್ದನಿಷ್ಪತ್ತಿಯನ್ನೊಳಗೊಂಡ ಭಾಷಾವಿಜ್ಞಾನ, ಮನುಷ್ಯ ಇತಿಹಾಸದ ಅಧ್ಯಯನಗಳಾದ ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು 'ಪುರಾತತ್ವಶೋಧ ಇವು ಅಂತಃಸ್ಥಲದಲ್ಲಿ ಒಂದನ್ನೊಂದು ಹೇಗೆ ಸಮರ್ಥಿಸಬಲ್ಲವು ಎಂಬುದು 'ಜಾನಪದಶಾಸ್ತ್ರದಲ್ಲಿ ಅಂತರ್ ಶಿಸ್ತೀಯ ಅಧ್ಯಯನ :ಕಬ್ಬಿಣದ ಒಂದು ನಿದರ್ಶನ ' ಪ್ರಬಂಧದಲ್ಲಿದೆ. ಕಬ್ಬಿಣ ಎಲ್ಲ ದೇಶಗಳಲ್ಲೂ ಎಲ್ಲ ಸಂಸ್ಕೃತಿಗಳಲ್ಲೂ ಬಿರುಗಾಳಿಯಾಗಿ ನುಗ್ಗಿ ಜನರ ಜೀವನ ವಿಧಾನದಲ್ಲಿ ಅನೇಕ ಮಾರ್ಪಾಡು ಮಾಡಿದಾಗ ಅದರ ಬಗ್ಗೆ ಪ್ರಾಕ್ತನ ಮನಸ್ಸಿನಲ್ಲಿ

ಮೂಡಿದ ಭಯ, ಅಪನಂಬಿಕೆ, ತಿರಸ್ಕಾರಗಳು ಆ ಮೇಲೂ ಹೇಗೆ ಉಳಿದುಕೊಂಡವು ; ಒಂದು ವಸ್ತು ಏಕಕಾಲಕ್ಕೆ ನಿಷಿದ್ಧವೂ ಸ್ವಾಗತಾರ್ಹವೂ ಆಗುವುದು ಏಕೆ? ಎಂಬುದನ್ನು ಜಾನಪದಶಾಸ್ತ್ರದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಒಂದು ಅಧ್ಯಯನ ಅಂತರ್ ಶಿಸ್ತೀಯವಾಗಬೇಕಾದ ವಿಧಾನ ಯಾವುದು ಎಂಬ ವಿಚಾರಗಳಿಗೆ ಈ ಲೇಖನ ನಿದರ್ಶನವನ್ನೊದಗಿಸಬಲ್ಲುದು.

ಜಾನಪದ ಶಾಸ್ತ್ರದ ಹಿನ್ನೆಲೆಯಲ್ಲಿ ಹಬ್ಬಗಳನ್ನು ಐತಿಹಾಸಿಕವಾಗಿ ಸಮಕಾಲೀನವಾಗಿ, ನೈತಿಕವಾಗಿ ಅಭ್ಯಸಿಸುವ ಅಗತ್ಯತೆಯ ಸ್ಪಷ್ಟನೆ 'ಪ್ರಸ್ತುತ ಹಬ್ಬಗಳ ಹಿಂದೆ ಪ್ರಾಕ್ತನತೆ' ಪ್ರಬಂಧದಲ್ಲಿದೆ. ಕಾಲಾನುಕ್ರಮದಲ್ಲಿ ಬೇರೆ ಬೇರೆ ನಂಬಿಕೆ ಆಚರಣೆಗಳ ಹಿನ್ನೆಲೆಯಲ್ಲಿ ಜನರ ಅರಿವಿನಿಂದ ಮರೆಯಾದ ಹಬ್ಬಗಳ ಹಿಂದಿನ ಕೆಚ್ಚು (core= ಆಶಯ)ಗುರುತಿಸದೇ ಹಬ್ಬಗಳ ಗಂಭೀರ ಅಧ್ಯಯನ ಸಾಧ್ಯವಿಲ್ಲ ಎನ್ನುವ ಚಿದಾನಂದಮೂರ್ತಿಯವರ ಮಾತಿನಲ್ಲಿ ಆ ನಿಟ್ಟಿನಲ್ಲಿನ ಅಧ್ಯಯನದ ಕೊರತೆ ಸೂಚಿತವಾಗಿದೆ. ಸಮಕಾಲೀನ ಹಬ್ಬಗಳಲ್ಲಿ ಸಾಮಾಜಿಕ, ಮತೀಯ, ಶೈಕ್ಷಣಿಕ ಆಯಾಮಗಳಿರುವುದನ್ನು ಚೆನ್ನಾಗಿ ಗುರುತಿಸಲಾಗಿದೆ. ಹಬ್ಬಗಳ ಕುರಿತು ತಾತ್ತ್ವಿಕ ಬರಹಗಳ ಕೊರತೆ ಇರುವ ನಮ್ಮಲ್ಲಿ ಆ ಅಧ್ಯಯನಕ್ಕೆ ಒಂದು ಹೊಸಹಾದಿ ಇಲ್ಲಿ ತೆರೆದಿದೆ.

'ಉತ್ತರ ಕನ್ನಡ ಜಿಲ್ಲೆಯ ಒಂದು ದೇವಾಲಯ' 'ಆದಿಚುಂಚನಗಿರಿ ಮಠದ ಮೂಲದ ಬಗ್ಗೆ ಹೆಚ್ಚಿನ ಸಮರ್ಥನೆ' 'ಸುಡುಗಾಡ ಸಿದ್ಧರು' ಆ ಕುರಿತಾದ ಹೆಚ್ಚಿನ ಮಾಹಿತಿಗಳನ್ನೊಳಗೊಂಡಿವೆ. 'ಅಪೂರ್ವ ವಾದ್ಯಮೇಳ ಜಗ್ಗಲಗೆ' ಮತ್ತೆರಡು ಶೂಲಬ್ರಹ್ಮಶಿಲ್ಪಗಳು' ಪ್ರಥಮ ಬಾರಿಗೆ ಅವುಗಳ ವೈಶಿಷ್ಟ್ಯದೊಂದಿಗೆ ಬೆಳಕುಕಂಡಿವೆ. ಉಳಿದ ಲೇಖನಗಳಾದ 'ಕುಪ್ಪಕುಜಿ ಹಿಂದಿನ ಕಾಲದ ಒಂದು ಮಕ್ಕಳ ಆಟ' 'ಪ್ರಾಚೀನ ಕರ್ನಾಟಕದಲ್ಲಿ ವೃಕ್ಷಾರೋಪಣ' 'ಹಿಂದಿನ ಕರ್ನಾಟಕದಲ್ಲಿ ಗುಲಾಮಗಿರಿ ಮತ್ತು ಗುಲಾಮರ ಮಾರಾಟ'ಗಳಲ್ಲಿ ಕಾವ್ಯ ಶಾಸನಾಧಾರಗಳನ್ನಾಶ್ರಯಿಸಿದ ಚಿದಾನಂದಮೂರ್ತಿಯವರ ಅಧ್ಯಯನದ ಆಳ, ವ್ಯಾಪ್ತಿಗಳನ್ನು ಗುರುತಿಸಬಹುದು.

ಸಂಶೋಧನ ಕ್ಷೇತ್ರದಲ್ಲಿ ಅವಿರತವಾಗಿ ದುಡಿಯುತ್ತಿರುವ ಶ್ರೀ ಸೀತಾರಾಮ ಜಾಗೀರ್‌ದಾರ್ ಅವರ'ಛಂದೋರಚನಾ ಸಂಶೋಧನೆಗಳು' ಹೆಸರೇ ಸೂಚಿಸುವಂತೆ ಛಂದಸ್ಸಿಗೆ ಸಂಬಂಧಪಟ್ಟ ಆರು ಸಂಶೋಧನ ಲೇಖನಗಳನ್ನೊಳಗೊಂಡಿದೆ. ಮೊದಲ ಲೇಖನದಲ್ಲಿ ಕವಿ ಪಂಪ, ವಿಕ್ರಮಾರ್ಜುನ ವಿಜಯದ ಪದ್ಯವೊಂದರಲ್ಲಿ 'ಟಾಠಡಾಢಣ' ನುಡಿಗಟ್ಟಿನ ಮೂಲಕ ಛಂದಸ್‌ಶಾಸ್ತ್ರದ ಒಂದು ಪಾರಿಭಾಷಿಕವನ್ನು ಭೀಮನ ಮಾತಿನ ಖಚಿತತೆಗೆ ಹೇಗೆ ಸುಂದರವಾದ ಉಪಮೆಯಾಗಿಸಿದ್ದಾನೆ - ಎಂಬುದನ್ನು ಪ್ರಾಕೃತ ಪೈಂಗಲನ ಛಂದೋಗ್ರಂಥದ 'ಟಟ್ಠಡಢಾಣಂ' ಗಣಗಳ ಹಿನ್ನೆಲೆಯಲ್ಲಿ ವಿವೇಚಿಸುತ್ತ ಪ್ರಾಕೃತ ಪೈಂಗಲ ಮತ್ತು ಪಂಪನಿಗೆ ಮೂಲ ಆಕರವಾಗಿರಬಹುದಾದ ಅನುಪಲಬ್ಧ ಛಂದೋಗ್ರಂಥದ ಕಡೆ ಕುತೂಹಲ ಕೆರಳಿಸಿದ್ದಾರೆ. ಕನ್ನಡ ಛಂದಸ್‌ಶಾಸ್ತ್ರಕ್ಕೆ ತನ್ನ ಛಂದೋನುಶಾಸನದ ಮೂಲಕ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟ ಜಯಕೀರ್ತಿ ಕನ್ನಡಿಗರ ಧೀಶಕ್ತಿಯ ಕೀರ್ತಿ ಪತಾಕೆಯನ್ನು ಕನ್ನಡ ನಾಡಿನ ಗಡಿಗಳಾಚೆ ಒಯ್ದು ನೆಟ್ಟ ಮಹಾನುಭಾವರಲ್ಲೊಬ್ಬ. ಏಕಾಭಿಪ್ರಾಯವಿಲ್ಲದ ಆತನ ಕಾಲದ ಅನಿಶ್ಚಿತತೆಗೆ ಸೀತಾರಾಮ್ ಜಾಗೀರ್‌ದಾರ್ ಅವರು ಹೆಗ್ಗೆರೆ ಶಾಸನವನ್ನು ಆಧಾರವನ್ನಾಗಿ ಬಳಸಿಕೊಂಡಿದ್ದಾರೆ. ಅಲ್ಲಿ ಅವರಿಗಿರುವ ಪ್ರಮುಖ ಆಧಾರಗಳಲ್ಲಿ ಆ ಶಾಸನವನ್ನು ರಚಿಸಿದ ಪಂಡಿತ ದೇವಚಂದ್ರಮುನಿ ಚಂಪಕಮಾಲೆ ವೃತ್ತವನ್ನು ಚಿತ್ರಲತೆ - ಎಂದು

ಕರೆದಿರುವುದು ಒಂದಾದರೆ ಮತ್ತೊಂದು ಚಾಂದ್ರಾಯಣದೇವರ ಉಲ್ಲೇಖ. ಈ ವರೆಗೆ ತಿಳಿದಿರುವಂತೆ ಚಂಪಕಮಾಲೆ ವೃತ್ತವನ್ನು ಜಯಕೀರ್ತಿಯ ವಿನಃ ಬೇರಾವ ಛಂದಶ್ಶಾಸ್ತ್ರಜ್ಞನೂ ಚಿತ್ರಲತೆ ಎಂದು ಹೇಳಿಲ್ಲದಿರುವುದನ್ನು ಚಿಕ್ಕಹನಸೋಗೆಯ ಎರಡು ಶಾಸನಗಳು ಜಯಕೀರ್ತಿ ಚಾಂದ್ರಾಯಣ ನೋಂಪಿಯ ಮೂಲಕ ಚಾಂದ್ರಾಯಣದೇವ ಹೆಸರು ಪಡೆದಿರುವುದನ್ನು ಶ್ರೀ ಜಾಗೀರ್‌ದಾರ ವಾದಕ್ಕೆ ಬಳಸಿಕೊಂಡು ಹೆಗ್ಗೆರೆ ಶಾಸನದ ಕಾಲ ಕ್ರಿ.ಶ. ೧೦೫೫ರ ಎಡಬಲದಲ್ಲಿ ಆತ ಬಾಳಿಬದುಕಿದನೆಂಬುದನ್ನು ಖಚಿತಪಡಿಸಲು 'ಹೆಗ್ಗೆರೆ ಶಾಸನ ಮತ್ತು ಜಯಕೀರ್ತಿಯ ಕಾಲವಿಚಾರ'ದಲ್ಲಿ ಯತ್ನಿಸಿದ್ದಾರೆ.

ರಗಳೆಯ ಮೂಲವನ್ನು ಕೆದಕುವ ಪ್ರಯತ್ನ 'ಕನ್ನಡ ರಗಳೆ ಛಂದಸ್ಸುಗಳು' ಮತ್ತು 'ಕನ್ನಡ ರಗಳೆಯ ಉಗಮಃ ಒಂದು ವಿವೇಚನೆ' ಪ್ರಬಂಧಗಳಲ್ಲಿದೆ. ಸದ್ಯ ಕನ್ನಡದಲ್ಲಿ ಪ್ರಚಾರವಾಗಿರುವ ಮೂರು ರಗಳೆಗಳಿಗೆ ಪಜ್ಝಟಿಕೆಯೊಂದೆಯೇ ಮೂಲವೆ ಹೇಗೆ ? ಎಂಬ ಪ್ರಶ್ನೆಯನ್ನು ಮುಂದೆ ಮಾಡಿಕೊಂಡು ಹಿಂದೆ ದಿವಂಗತ ಶ್ರೀ ಮುಳಿಯ ತಿಮ್ಮಪ್ಪಯ್ಯನವರು ರಗಳೆಗೆ ಸಂಸ್ಕೃತದ ಅಕ್ಷರ ವೃತ್ತಗಳೇ ಮೂಲವೆಂದ ಮಾತನ್ನನುಸರಿಸಿ ಹೆಚ್ಚು ವಿವರಗಳೊಂದಿಗೆ ಪ್ರಾಕೃತದ ಪಜ್ಝಟಿಗೂ ಸಂಸ್ಕೃತದ ಪದ್ಧಲಿ/ಪದ್ಧಡಿಗೂ ಇರುವ ಸಂಬಂಧ-ಅಂತರಗಳನ್ನು ಪೃಥಕ್ಕರಿಸಿದ್ದಾರೆ. ರಗಳೆಗಳ ಮೂಲಬೇರು ಸಂಸ್ಕೃತ ವೃತ್ತಗಳಲ್ಲೆ ಗುರುತಿಸಿಲಾಗಿದ್ದರೂ ಅವು ಇತ್ತ ಪೂರ್ಣಸಂಸ್ಕೃತ ಗತಿಯ ಬಂಧಗಳೂ ಅಲ್ಲ ಅತ್ತ ಪೂರ್ಣ ಪ್ರಾಕೃತ ಛಂದಾಧರಿತಗಳೂ ಅಲ್ಲ ಎಂಬ ಅವರ ನಿರ್ಣಯ ಗಮನಾರ್ಹವಾದುದು. ಸಂಗೀತ, ತಾಳಲಯಗಳನ್ನು ಜೀವಾಳವಾಗಿ ಉಳ್ಳ ರಗಳೆಗಳನ್ನು ಜಾಗೀರ್‌ದಾರ್ ಇಲ್ಲಿ ಮಿಶ್ರ ಜಾತಿಗೆ ಸೇರಿಸಿದ್ದು ಉಚಿತವಾಗಿದೆ. ಪ್ರಾಕೃತ ಕಾವ್ಯಗಳು ಮತ್ತು ಸೋಮದೇವ ಸೂರಿಯ ಯಶಸ್ತಿಲಕ ಚಂಪೂ ಇತ್ಯಾದಿಗಳ ಅಧ್ಯಯನದಿಂದ ಕನ್ನಡ ರಗಳೆಗಳ ಉಗಮ-ವಿಕಾಸ ವಿಷಯದಲ್ಲಿ ಹೊಸ ಆಯಾಮ ಮೂಡಿನಿಂತದ್ದನ್ನು ಇಲ್ಲೆಲ್ಲ ಪ್ರತಿಪಾದಿಸಿದ್ದಾರೆ. ಅಂತೆಯೇ ಈ ಎರಡು ಲೇಖನಗಳು ಈ ಪುಸ್ತಕದ ಹೃದಯವೆಂದಿದ್ದಾರೆ ಮುನ್ನುಡಿ ಬರೆದ ಡಾ. ಎಂ.ಎಂ. ಕಲಬುರ್ಗಿಯವರು.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಛಂದಶ್ಶಾಸ್ತ್ರಗಳಿಗೆ ಶ್ರವಣಬೆಳ್ಗೊಳದ ಶಾಸನಗಳ ಕಾಣಿಕೆ ಅಪಾರ ಮತ್ತು ಅನುಪಮ. ಈ ಹಿನ್ನೆಲೆಯಲ್ಲಿ ಬರೆದ ಪ್ರೌಢಲೇಖನ 'ಛಂದಶ್ಶಾಸ್ತ್ರಕ್ಕೆ ಶ್ರವಣಬೆಳಗೊಳದ ಶಾಸನಗಳ ಕಾಣಿಕ್ಕಾ. ಶ್ರೀ ಸೀತಾರಾಮ ಜಾಗೀರ್‌ದಾರ್ ಅವರು ಬಹಳ ಪರಿಶ್ರಮದಿಂದ ಅಕ್ಷರಛಂದಸ್ಸು, ಮಾತ್ರಾ ಛಂದಸ್ಸು ಮತ್ತು ಅಂಶಗಣ ಛಂದಸ್ಸುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಜೊತೆಗೆ ಅಪೂರ್ಣ ಶಾಸನ ಪದ್ಯಗಳನ್ನು ಊಹೆಗಳಿಂದ ತುಂಬಿ ಹೆಸರಿಸುವ ಮೂಲಕ ಗ್ರಂಥಸಂಪಾದನಾ ಶಾಸ್ತ್ರದ ಸೂಕ್ಷ್ಮ ಪ್ರಜ್ಞೆಯನ್ನು ಮೆರೆದಿದ್ದಾರೆ. ಸಂಸ್ಕೃತ ಅಲಂಕಾರಶಾಸ್ತ್ರದ ಪ್ರಾಸ ಅಂದು ಕನ್ನಡ ಛಂದದಲ್ಲಿ ನಿಯತವಾಗಿದ್ದರೂ ಒಂದು ಶಾಸನ ವೃತ್ತದಲ್ಲಿ ಅದಕ್ಕೆ ಚ್ಯುತಿಯುಂಟಾಗಿರುವುದು ವಿಲಕ್ಷಣವೆಂದು ತೋರಿಸಿದ್ದಾರೆ. ಇದಕ್ಕೆ ಕಾರಣ ಹುಡುಕುತ್ತ ಆಗ ಪ್ರಾಸದ ಸಂಕಲೆಯು ಇನ್ನೂ ಸೃಷ್ಟಿಯಾಗಿರಲಿಕ್ಕಿಲ್ಲ. ಹಾಗಾದರೆ ಹಿಂದೊಮ್ಮೆ ಕನ್ನಡದಲ್ಲಿ ಸಂಸ್ಕೃತದ ಹಾಗೆಯೇ ಪ್ರಾಸವಿಲ್ಲದೆಯೇ ಬರೆಯಲಾಗುತ್ತಿತ್ತೆಂಬುದು ಖಚಿತವಾದುತ್ತದೆ ಎಂದು ಸರಿಯಾಗಿ ಊಹಿಸಿದ್ದಾರೆ.

ಜಯಕೀರ್ತಿ ತನ್ನ ಛಂದೋನುಶಾಸನದಲ್ಲಿ ಹಲವು ಪುರಾತನ ಛಂದೋಗ್ರಂಥಕಾರರ ಬಗ್ಗೆ ಹೇಳುತ್ತ ಶ್ರೀ ಪೂಜ್ಯಪಾದರ ಹೆಸರನ್ನು ಸೇರಿಸಿದ್ದಾನೆ. ಈ ಬೆಳಕಿನಲ್ಲಿ ಶ್ರವಣಬೆಳಗೊಳದ

ಮಹಾನವಮಿ ಮಂಟಪದ ಶಾಸನವೊಂದರಲ್ಲಿ ದೇವನಂದಿ ಅವರ ನಾಮಧೇಯ ಪೂಜ್ಯಪಾದರನ್ನು ಜೈನೇಂದ್ರ, ಸರ್ವಾರ್ಥಸಿದ್ಧಿ, ಜೈನಾಭಿಷೇಕ, ಛಂದಸ್ ಮತ್ತು ಸಮಾಧಿಶತಕ ಕೃತಿಕಾರನೆಂದು ಹೇಳಲಾಗಿದೆ. ಈ ಶಾಸನವನ್ನು ಸಂಪಾದಿಸಿದ ಶ್ರೀ ಆರ್. ನರಸಿಂಹಾಚಾರ್ ಅವರ ಇಂಗ್ಲೀಷ್ ಅನುವಾದ ಸಮರ್ಪಕವಾಗಿಲ್ಲ. ಅವರು ಛಂದಸ್ ಎಂಬುದನ್ನು ಬೇರೆ ಕೃತಿಯೊಂದು ಪರಿಗಣಿಸಿಲ್ಲ. ಹೀಗಾಗಿ ಶ್ರವಣಬೆಳಗೊಳ ಶಾಸನ ಛಂದಶ್ಶಾಸ್ತ್ರ ಒಂದರ ಮೇಲೆ ಬೆಳಕು ಬೀರುವುದನ್ನು ಶ್ರೀ ಜಾಗೀರ್‌ದಾರ್ ತೋರಿಸಿಕೊಟ್ಟಿದ್ದಾರೆ.

'ಶಾಸನದಲ್ಲಿ ಒಂದು ತ್ರಿಪದಿ' ಗದುಗಿನ ತ್ರಿಕೂಟೇಶ್ವರ ದೇವಾಲಯ ಶಾಸನವೊಂದರ ತ್ರಿಪದಿ ಪದ್ಯವನ್ನು ಪ್ರಥಮ ಬಾರಿಗೆ ಪರಿಷ್ಕರಿಸಿ ನೀಡಿದ ಲೇಖನವಾಗಿದೆ. ಅಂಶಗಣದ ಈ ತ್ರಿಪದಿಯಲ್ಲಿ ಬ್ರಹ್ಮಕ್ಕೆ ವಿಷ್ಣು, ವಿಷ್ಣುವಿಗೆ ಬ್ರಹ್ಮ ಮುಂತಾಗಿ ಗಣಪರಿವೃತ್ತಿಯಾಗುವುದನ್ನು ಜಾಗೀರ್‌ದಾರ್ ಗುರುತಿಸಿದ್ದಾರೆ. ಪುಸ್ತಕದ ಕೊನೆಯಲ್ಲಿ ಅನುಬಂಧವಾಗಿ ಸೇರಿಸಿದ ನೂರು ಪುಟಗಳ ವೃತ್ತರೂಪ ನಾಮಸೂಚಿ ಆಳವಾದ ಅಧ್ಯಯನದಿಂದ ಮೂಡಿಬಂದ ಒಂದು ಕೋಷ್ಟಕವಾಗಿದೆ. ಮುನ್ನುಡಿಯಲ್ಲಿ ಡಾ. ಎಂ.ಎಂ. ಕಲಬುರ್ಗಿಯವರು ಹೇಳುವಂತೆ ಛಂದಸ್ಸಿನ ಬಗೆಗೆ ಮಾತನಾಡುವುದೂ ಬರೆಯುವುದೂ ಎಲುಬು ಕಡಿಯುವ ಕೆಲಸವೆಂದು ಪ್ರಜ್ಞಾವಂತರೇ ಭಾವಿಸುತ್ತಿರುವ ಇಂದಿನ ಕಾಲದಲ್ಲಿ ಛಂದಸ್ಸನ್ನು ಕುರಿತು ಒಂದು ಉಪಯುಕ್ತ ಸಂಶೋಧನ ಸಂಕಲನ ನೀಡಿದ ಜಾಗಿರ್‌ದಾರ್‌ರು ನಿಜಕ್ಕೂ ಅಭಿನಂದನಾರ್ಹರು.

ಸಂಶೋಧನ ಕ್ಷೇತ್ರದಲ್ಲಿ ದಟ್ಟವಾಗಿ ಕೇಳಬರುತ್ತಿರುವ ಹೆಸರುಗಳಲ್ಲಿ ಡಾ.ಬಿ.ಆರ್.ಹಿರೇಮಠರ ಹೆಸರೂ ಒಂದು. ಶಾಸನ, ಜಾನಪದ, ಹಸ್ತಪ್ರತಿ, ಚರಿತ್ರೆ ಹಾಗೂ ಕಾವ್ಯಕ್ಷೇತ್ರಗಳನ್ನು ವ್ಯಾಪಿಸಿದ ಅವರ ಅಧ್ಯಯನದ ಹತ್ತು ವರ್ಷಗಳಲ್ಲಿ ಮೂಡಿಬಂದ ಲೇಖನಗಳಲ್ಲಿ ಹತ್ತು "ಸಂಶೋಧನ ಪಥ" ಹೆಸರಿನಲ್ಲಿ ಒಗ್ಗೂಡಿವೆ. ನಮ್ಮ ನಾಡಿನ ಕವಿಗಳನ್ನು ಅಮರರನ್ನಾಗಿಸಿ ನಾಡವರ ಸಂಸ್ಕೃತಿಯನ್ನು ಅಕ್ಷಯವಾಗಿ ಉಳಿಸಿದ ಪರಮಪುಣ್ಯಕಾರ್ಯ ಹಸ್ತಪ್ರತಿ ಲಿಪಿಕಾರರದು. ಹಸ್ತಪ್ರತಿಗಳಲ್ಲಿ ಕಾಣಸಿಗುವ ಹಲವು ವರ್ಗ, ವರ್ಣ, ವಯೋಮಾನ, ವಿಭಿನ್ನ ಪ್ರವೃತ್ತಿಯ ಲಿಪಿಕಾರರನ್ನು ನಿಯುಕ್ತ ಲಿಪಿಕಾರ (Appointed Writers), ವೃತ್ತಿ ಲಿಪಿಕಾರ (Professional writers), ಹವ್ಯಾಸಿ ಲಿಪಿಕಾರ (Amateur Writers) ಎಂದು ವರ್ಗೀಕರಿಸಿ ವಿವೇಚಿಸಲಾಗಿದೆ. ಹಸ್ತಪ್ರತಿಗಳಲ್ಲಿ ಅದನ್ನು ಬರೆದವ ಮತ್ತು ಬರೆಸಿದವರ ಕುರಿತಾಗಿ ಸಿಗುವ ಅಪೂರ್ವ ಮಾಹಿತಿಗಳು ಹೊಸ ಅಧ್ಯಯನಕ್ಕೆ ಹೇಗೆ ವಸ್ತುವಾಗಬಲ್ಲುವೆಂಬ ಸಾಧ್ಯತೆಗಳತ್ತ ಗಮನ ಸೆಳೆದಿದ್ದಾರೆ. ಲಿಪಿಕಾರರ ಬದುಕಿನ ಶಿಸ್ತು-ಅಶಿಸ್ತು, ಹೊಣೆಗಾರಿಕೆ-ಹೊಣೆಗೇಡಿತನ, ಗಂಭೀರ-ಲಘುಸ್ವಭಾವಗಳು ಏನೇ ಇರಲಿ ಅವರು ಪ್ರತಿಮಾಡುವಾಗಿನ ಭಕ್ತಿ, ಪ್ರೀತಿ, ಉತ್ಸಾಹ, ಪರಿಶ್ರಮ, ಪ್ರಯತ್ನ ಹಾಗೂ ಸಮರ್ಪಣಭಾವ ಮೆಚ್ಚಬೇಕಾದದ್ದು. ಮರಹು, ಆಲಸ್ಯ, ಹಸ್ತವೇಗ ದೃಷ್ಟಿದೋಷ -ಶ್ರವಣದೋಷಗಳಿಂದ ನಕಲು ಕಾರ್ಯದಲ್ಲಿ ತಪ್ಪುಗಳಾಗುವುದನ್ನು ಒಪ್ಪಿಕೊಂಡ ಲಿಪಿಕಾರರು ಗ್ರಂಥಗಳ ರಕ್ಷಣೆಗಾಗಿ ಭಿನ್ನವಿಸಿಕೊಳ್ಳುವ ಕಳಕಳಿಯೂ ಗಮನಾರ್ಹವಾದುದು. ಈ ಎಲ್ಲ ಅಂಶಗಳನ್ನು ನೂರಾರು ಆಕರಗಳ ಮೂಲಕ ಕಲೆಹಾಕಿ ಶಾಸ್ತ್ರೀಯವಾಗಿ ವಿವೇಚಿಸುವ ಬಿ.ಆರ್. ಹಿರೇಮಠರ ಶ್ರಮ ಇಲ್ಲಿ ಸಾರ್ಥಕವಾಗಿದೆ.

ಹಲವಾರು ಮಹಾಪ್ರಬಂಧಗಳಿಗೆ ಆಹಾರವಾಗುವ ವಿಷಯ 'ವಿಜಾಪುರ ಜಿಲ್ಲೆಯ

ಶಾಸನಗಳು' ಪ್ರಬಂಧದಲ್ಲಿದೆ. ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ, ಕಲಚುರಿ, ಯಾದವ, ಸಿಂಧ, ವಿಜಯನಗರ, ಮೊಗಲ್, ಬಹಮನಿ ಅರಸರ ಆಳ್ವಿಕೆಗೆ ಒಳಗಾಗಿದ್ದ ಇಂದಿನ ವಿಜಾಪುರ ಜಿಲ್ಲೆಯಲ್ಲಿ ಸಾವಿರಕ್ಕೂ ಮಿಕ್ಕ ಶಾಸನಗಳು ದೊರೆತು ಪ್ರಕಟವಾಗಿವೆ. ಇವೆಲ್ಲವುಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಸಣ್ಣ ಕೆಲಸವಲ್ಲ. ಆದರೂ ಡಾ. ಬಿ.ಆರ್. ಹಿರೇಮಠರು ಒಂದು ಪರಿಮಿತಿಯಲ್ಲಿ ಈ ಜಿಲ್ಲೆಯ ಪ್ರಾಚೀನ ಮತ್ತು ಮಧ್ಯಕಾಲೀನ ಸಾಂಸ್ಕೃತಿಕ ಚಿತ್ರವನ್ನು ಅಚ್ಚುಕಟ್ಟಾಗಿ ನೀಡಿದ್ದಾರೆ.

ಕರ್ನಾಟಕಕ್ಕೆ ತೀರ ಹೊಸತಾದ ಗ್ರಾಮನಾಮಗಳ ಅಧ್ಯಯನವು ಆಯಾ ಸ್ಥಳಗಳ ಭೌಗೋಲಿಕ, ರಾಜಕೀಯ, ಸಾಂಸ್ಕೃತಿಕ ಸ್ವರೂಪ ಹಾಗೂ ಇತಿಹಾಸಗಳನ್ನು ತೆರೆದು ತೋರಿಸುತ್ತದೆ. ಕನ್ನಡ ಶಾಸನಗಳಲ್ಲಿ ಕಂಡು ಬರುವ ಐಹೊಳೆಯ ಪ್ರಾಚೀನ ರೂಪಗಳನ್ನು ಗಮನಿಸಿ ಅದು ವ್ಯಕ್ತಿನಾಮವಾಗಿ, ಗ್ರಾಮನಾಮಗಳ ಗುಂಪಿಗೆ ಸೇರುವದನ್ನು ಅಯ್ಯನ+ಪೊಟಲ್> ಅಯಾಪೊಟಲ್> ಅಯ್ಯಾವೊಳೆ ,ಅಯ್ಯವೊಳೆ>ಐಹೊಳೆ ಎಂದು ಸ್ಪಷ್ಟಪಡಿಸಿದ್ದಾರೆ .'ಐಹೊಳೆ ವ್ಯುತ್ಪತ್ತಿ ಹಾಗೂ ಪ್ರಾಚೀನತೆ' ಲೇಖನದಲ್ಲಿ.

ಐಹೊಳೆ ಗ್ರಾಮನಾಮದ ಮೂಲರೂಪ ಹಾಗೂ ಮೂಲಾರ್ಥಗಳು ಮರೆಯಾದಾಗ ಪಂಡಿತ ಪಾಮರರು ಸೃಷ್ಟಿಸಿದ ಐಪುರಿ, ಆರ್ಯಪುರ, ಅಯ್ಯಯ್ಯಹೊಳೆ ಎಂಬ ರೂಪಗಳು ಹುಟ್ಟಿಕೊಂಡ ಸ್ವಾರಸ್ಯವನ್ನು ಗುರುತಿಸಿದ್ದಾರೆ.

ಎರಡು ಶತಮಾನಗಳ ತರುವಾಯ (ಕ್ರಿ.ಶ.೧೨೦೯) ಗದಾಯುದ್ಧ ತುಱುಗೋಳೊಳ್ ಪೆಣ್ಬುಯ್യಲೊಳ್ ಎಂಬ ಪ್ರಸಿದ್ಧ ಕಂದಪದ್ಯ ಕೆಲವು ಮಾರ್ಪಾಟುಗಳೊಂದಿಗೆ ಮುದಿಗೆರೆಯ ಶಾಸನಕವಿ (Ec.VI ತರಿಕೇರಿ ೮೪) ಸ್ವೀಕರಿಸಿದುದನ್ನು ಪ್ರಥಮ ಬಾರಿಗೆ ಗುರುತಿಸಿ ಪ್ರಕಟಿಸಿದುದೇ 'ಶಾಸನದಲ್ಲಿ ಗದಾಯುದ್ಧದಕಂದಪದ್ಯ ಟಿಪ್ಪಣಿ ಆರನೆಯ ವಿಕ್ರಮಾದಿತ್ಯನ ಒಲುಮೆಯ ಮಡದಿಯೂ ಪಿರಿಯರಸಿಯೂ ಆದ ಲಕ್ಷ್ಮಿಮಾಹಾದೇವಿಯ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ಜೀವನವನ್ನು ಶಾಸನ ಕಾವ್ಯಾಧಾರಗಳಿಂದ ಕಂಡರಿಸಿದ ಲೇಖನ "ಆರನೆಯ ವಿಕ್ರಮಾದಿತ್ಯನ ಪಿರಿಯರಸಿ ಲಕ್ಷ್ಮಿಮಾಹಾದೇವಿ".

ಕೆಲದಿನಗಳ ಹಿಂದೆ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ರಾಜಕೀಯ ವಿಭಾಗಗಳು ಪರಿಜ್ಞಾನವಿಲ್ಲದ ಕೆಲವು ಜನರು ಬಸವಣ್ಣನವರ ಜನ್ಮಸ್ಥಳ ಬೆಳಗಾವಿ ಜಿಲ್ಲೆಯ ಬೆಲ್ಲದ ಬಾಗೇವಾಡಿ ಎಂದು ತಪ್ಪಾಗಿ ವಾದಿಸಿದುದಕ್ಕೆ ಪ್ರತಿಕ್ರಿಯೆಯಾಗಿ ಮೂಡಿಬಂದ ಲೇಖನ "ತರ್ದವಾಡಿ, ನಾಡು-ಬಾಗೇವಾಡಿ."

ಶಾಸನಗಳಲ್ಲಿ ಬಳಕೆಯಾದ ಅನೇಕ ಪಾರಿಭಾಷಿಕ ಹಾಗೂ ವಿಶಿಷ್ಟ ಶಬ್ದಗಳಲ್ಲಿ ಹದಿನೆಂಟು ಸಂತತಿಯೂ ಒಂದು. ಹದಿನೆಂಟು ಸಂತತಿಗೆ ಪರ್ಯಾಯವಾಗಿ ಸಂತಾನರು, ಸಂತಾತಿಗಳು, ಸಮಸ್ತಸಂತಾನರು, ಸಮಸ್ತಸಂತಾತಿಗಳು-ಎಂಬಿವು ಶಾಸನಗಳಲ್ಲಿ ಬಳಕೆಯಾಗಿವೆ. ಸೀಮಿತ ಆಧಾರಗಳ ಹಿನ್ನೆಲೆಯಲ್ಲಿ ಇದು ಶಿಲಾಹಾರರಿಗಷ್ಟೇ ಬಳಕೆಯಾಗಿದೆ ವೇನ್ನುವುದು ತಪ್ಪಾಗುತ್ತದೆ. ಹದಿನೆಂಟು ಸಂಖ್ಯೆ ಯಾವಾಗಲೂ ಹದಿನೆಂಟಾಗಿರದೆ ಅದೊಂದು ಸಾಮಾನ್ಯ ಸಾಂಪ್ರದಾಯಿಕ ಪದವಾಗಿರಬಹುದೆನಿಸುತ್ತದೆ.

ನೀತಿಗೆರೆಯಲ್ಲಿಯ ಗುಂಡಬ್ರಹ್ಮಯ್ಯಗಳ ವಿಗ್ರಹ ಡಾ.ಚಿದಾನಂದಮೂರ್ತಿಯವರು ಪರಿಶೀಲಿಸಿ ಟಿಪ್ಪಣಿ ತೆಗೆದುಕೊಂಡುದರ ಬೆಳಕಿನಲ್ಲಿ ಕೈಕೊಂಡ ಸಂಶೋಧನೆ. ಹಾಗಾದರೆ ಚಿದಾನಂದಮೂರ್ತಿಯವರಿಗೆ ಗುಂಡಬ್ರಹ್ಮಯ್ಯಗಳ ವಿಗ್ರಹದ ಪರಿಚಯವಿರಲಿಲ್ಲವೆಂದು ಹೇಳುವುದು ಹೇಗೆ ? ಡಾ. ಚಿದಾನಂದಮೂರ್ತಿ ಕಸ್ತೂರಿಗೆ ಬರೆದ ತಮ್ಮ ಬನಶಂಕರಿ ಪೆಟ್ಟಿಗೆ ಲೇಖನದಲ್ಲಿ (ಏಪ್ರಿಲ್ ೧೯೭೪ ಪು.೫೮) ಈ ಉಬ್ಬು ಚಿತ್ರಗಳ ಸಮಗ್ರ ವಿವರಣೆ ನೀಡಿದ್ದಾರೆ. ಆದರೆ ಗುಂಡ ಬ್ರಹ್ಮಯ್ಯ ವಿಗ್ರಹವೆಂದು ಮಾತ್ರ ಹೇಳಿಲ್ಲ. ಅಷ್ಟರಮಟ್ಟಿಗೆ ಮಾತ್ರ ಇದು ಡಾ. ಬಿ. ಆರ್. ಹಿರೇಮಠರ ಸಂಶೋಧನೆ ಎನ್ನಬಹುದು. ಹಾವೇರಿ ಗುಂಡೇನಹಳ್ಳಿ ವಿಗ್ರಹಗಳು ಕುಳಿತ ಭಂಗಿಯಲ್ಲಿವೆ. ಚಿತ್ರದುರ್ಗ-ನೀತಿಗೆರೆ,ಬನವಾಸಿ ವಿಗ್ರಹಗಳು ನಿಂತ ಭಂಗಿಯಲ್ಲಿವೆ. ಆದರೂ ಹಿರೇಮಠರು ಬನವಾಸಿ ವಿಗ್ರಹವನ್ನು ಪ್ರತ್ಯೇಕ ವರ್ಗಕ್ಕೆ ಸೇರಿಸಿ ಮೂರು ವರ್ಗಗಳಾಗಿ ವಿಂಗಡಿಸಿರುವುದರ ಔಚಿತ್ಯ ತಿಳಿಯುವುದಿಲ್ಲ.

ಆತ್ಮಾನುಸಂಧಾನಕ್ಕೆ ಸಂಬಂಧಿಸಿದ ಜೈನಧಾರ್ಮಿಕ ಮರಣಗಳಲ್ಲಿ ಸಮಾಧಿ ಮರಣ ಪ್ರಮುಖವಾದುದು. ಸಮಾಧಿ ಮರಣದ ಸಲ್ಲೇಖನವ್ರತಕೈಕೊಂಡ ಇಬ್ಬರು ಸಹೋದರಿಯರ ನಿಷಧಿ ಶಾಸನಗಳನ್ನು ಡಾ.ಹಿರೇಮಠರು 'ಹೆರೂರುನಿಷಧಿ ಶಾಸನಗಳು" ಲೇಖನದ ಮೂಲಕ ಬೆಳಕಿಗೆ ತಂದಿದ್ದಾರೆ. ಈ ಶಾಸನಗಳ ಸಾಹಿತ್ಯಗುಣ, ಬಂಧುಗಳು ಶೋಕಿಸುವ ಅಪರೂಪದ ವಾಸ್ತವಿಕ ಸಂಗತಿಗಳೊಂದಿಗೆ ೧೪ ವರ್ಷಗಳ ನಂತರ ತಂಗಿಯ ನಿಷಧಿ ಶಾಸನದಲ್ಲಿ ಪುನರುಕ್ತಗೊಂಡ ಚಂಪಕಮಾಲಾವೃತ್ತ ಲಿಪಿಕಾರನ ಸ್ಖಾಲಿತ್ಯ ಕಾರಣ ಪ್ರಮಾಣಗಳನ್ನು ಡಾ.ಹಿರೇಮಠರು ಸಮರ್ಥವಾಗಿ ಗುರುತಿಸಿದ್ದಾರೆ. ಕಳೆದ ದಶಕದಲ್ಲಿ ಕನ್ನಡ ಭಾಷೆ, ಸಾಹಿತ್ಯ ಚರಿತ್ರೆ, ವ್ಯಾಕರಣ. ಛಂದಸ್ಸು. ಗ್ರಂಥಸಂಪಾದನೆ,ಶಾಸನ - ಇತ್ಯಾದಿ ಕ್ಷೇತ್ರಗಳಲ್ಲಿ ನಡೆದ ಸಂಶೋಧನೆಯ ಒಲವು-ನಿಲುವು, ನ್ಯೂನ್ಯತೆ-ಮೌಲಿಕತೆಗಳ ಸಮೀಕ್ಷೆ 'ಕನ್ನಡ ಸಾಹಿತ್ಯದಲ್ಲಿ ಸಂಶೋಧನೆ' ಲೇಖನದಲ್ಲಿದೆ. ಅಧ್ಯಯನದ ಶ್ರದ್ಧೆ, ಪರಿಶ್ರಮಗಳಿಂದ ಸಂಶೋಧನೆ ಪಥ ಹಲವಾರು ಹೊಸ ವಿಷಯಗಳನ್ನು ಗುರುತಿಸಿ, ಪರಿಚಯಿಸಿದೆ. ಸಂಶೋಧನ ಕ್ಷೇತ್ರದಲ್ಲಿ ದುಡಿಯುತ್ತಿರುವ ಈ ತರುಣ ಸಂಶೋಧಕರ ಪ್ರಯತ್ನ ಸ್ವಾಗತಾರ್ಹವಾಗಿದೆ.

ಈ ತಲೆಮಾರಿನ ಕನ್ನಡ ವಿದ್ವಾಂಸರಲ್ಲಿ ಒಬ್ಬರಾದ ಎಚ್.ದೇವೀರಪ್ಪನವರು ೪ ದಶಕಗಳಲ್ಲಿ ಬರೆದು ಪ್ರಕಟಿಸಿದ ಸಂಶೋಧನ ಲೇಖನಗಳಲ್ಲಿ ಮುಖ್ಯವಾದುವನ್ನು ಸಂಶೋಧನ ಸಂಪುಟದಲ್ಲಿ ಸಂಗ್ರಹಿಸಿಕೊಟ್ಟಿದ್ದಾರೆ. ವೀರಶೈವ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನಮಾಡಿದ ದೇವೀರಪ್ಪನವರು ಈ ಹಿಂದೆ ಮೈಸೂರಿನ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕರಾಗಿದ್ದುಕೊಂಡು ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಧ್ಯಯನಕ್ಕೆ, ಬರಹಕ್ಕೆ ಬೆಲೆಯಿದೆ. ಪ್ರಸ್ತುತ ಸಂಶೋಧನ ಸಂಪುಟದಲ್ಲಿ ೫೧ ಲೇಖನಗಳನ್ನು ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಅಧ್ಯಯನಕ್ಕೆ, ಬರಹಕ್ಕೆ ಬೆಲೆಯಿದೆ. ಇಲ್ಲಿನ ಎಲ್ಲ ಲೇಖನಗಳು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಒಂದಲ್ಲ ಒಂದು ಸಮಸ್ಯೆಯನ್ನು ಕುರಿತವುಗಳಾಗಿವೆ.

ಮೊದಲ ಭಾಗವಾದ 'ಕವಿಚರಿತೆ' ಕವಿ-ಕಾಲ-ದೇಶ ವಿಚಾರಗಳಿಗೆ ಸಂಬಂಧಿಸಿದುದಾಗಿದೆ. ವಡ್ಡಾರಾಧಾನೆಯ ಕಾರ್ತಿಕ ಋಷಿಯ ಕಥೆಯಲ್ಲಿ ಬರುವ ತೀರ್ಥನಾಮ, ಸ್ಥಳನಾಮಗಳ ಆಧಾರದ ಮೇಲೆ ಶಿವಕೋಟ್ಯಾಚಾರ್ಯನ ಕಾಲವನ್ನು ೭ನೆಯ ಶತಮಾನಕ್ಕೆ ಒಯ್ದು. ಬಳ್ಳಾರಿ ಜಿಲ್ಲೆಯ ಕೋಗಳಿ

ಅಥವಾ ಅದರ ಹತ್ತಿರದವನಾಗಿರಬೇಕೆಂದು ತೀರ್ಮಾನ, ಭಾಷಾಭೂಷಣವನ್ನು ಬರೆದ ಎರಡನೆಯ ನಾಗವರ್ಮನ ಸಮರ್ಪಕ ಕಾಲ ಕ್ರಿ.ಶ. ೧೧೮೪ ಎಂದು ನಿರ್ಣಯಿಸಿ ಆತನನ್ನ ಕವಿತಾಗುಣೋದಯ ನಾಗವರ್ಮನೆಂದು ಕರೆಯುವುದರ ಔಚಿತ್ಯ, ಜೇಡರ ದಾಸೀಮಯ್ಯನ ಕುರಿತಾದ ಎಲ್ಲ ಕಥೆ-ವಚನಗಳ ಹಿನ್ನೆಲೆಯಲ್ಲಿ ಅವನು ಕ್ರಿ.ಶ. ೧೦೬೦ ರಲ್ಲಿ ಜನ್ಮವೆತ್ತಿ ಕ್ರಿ.ಶ. ೧೧೫೦ ರವರೆಗೆ ಜೀವಿಸಿದ್ದಿರಬೇಕೆಂಬ ನಿರ್ಣಯ, ಕ್ರಿ.ಶ. ೧೨೦೦ ರ ಸುಮಾರಿನಲ್ಲಿದ್ದ ಕವಿ ಬ್ರಹ್ಮಶಿವನ ಸಮಯಪರೀಕ್ಷೆಯ ವಿಡಂಬನೆಗಳು ಬಸವಣ್ಣನ ವಚನಗಳಿಗೆ ಪ್ರತ್ಯುತ್ತರದಂತೆ ಹೇಗೆ ಹೊಂದಿಕೊಳ್ಳುತ್ತವೆ ಎಂಬುದರ ಸೂಚನೆ-ಮೊದಲಾದ ಅಂಶಗಳು ಇಲ್ಲೆಲ್ಲ ಪ್ರಭುದ್ಧವಾಗಿ, ಅದ್ಭುತವಾಗಿ ಮೂಡಿಬಂದಿವೆ. ಕನ್ನಡದ ಮಹತ್ವದ ಪ್ರಮುಖ ಕವಿಗಳಲ್ಲಿ ಹರಿಹರ ಗಣ್ಯನಾದವ. ಆತನ ಕೃತಿಗಳ ಸಂಖ್ಯಾನಿರ್ಣಯ ಕುರಿತು ಒಂದು ಮಹಾಪ್ರಬಂಧವೇ ಹೊರಬಂದಿದೆ. ಆದರೂ ದೇವೀರಪ್ಪನವರೂ ಬಾಹ್ಯಾಂತರ ಪ್ರಮಾಣವನ್ನನುಸರಿಸಿ ಅವನ ಹೆಸರಿನಲ್ಲಿರುವ ಅನೇಕ ರಗಳೆಗಳು ಅವನವಲ್ಲವೆಂದು ತೋರಿಸಿ ಅವನ ರಗಳೆಗಳ ಸಂಖ್ಯೆ ೫೬ ಎಂದು ಸಿದ್ಧಪಡಿಸಿದ್ದಾರೆ. ಇನ್ನುಳಿದ ಲೇಖನಗಳಾದ 'ವಚನಕಾರ ತರಳಬಾಳು ಸಿದ್ಧೇಶ್ವರ', 'ಲಕ್ಕಣ್ಣ ದಂಡೇಶನು ಹೊಗಳಿರುವ ಕೆಲವು ಕವಿಗಳು 'ಕವಿಕಥೆಯ ಹರಿಕಥೆ' ಕುಮಾರವ್ಯಾಸ ಭಾಸ್ಕರರ ಕಾಲವನ್ನು ಕುರಿತು, ಲೇಖನಗಳು ಕವಿ-ಕಾವ್ಯ ಚರಿತೆಗೆ ಹೊಸ ಸಾಮಗ್ರಿ, ವಿವರಣೆಗಳನ್ನು ಒದಗಿಸಿವೆ.

ಎರಡನೆಯ ಭಾಗವಾದ ಕವಿ-ಕಾವ್ಯ ವಿಚಾರದಲ್ಲಿ ಕವಿಗಳ ಕಾವ್ಯಧರ್ಮ-ಮನೋಧರ್ಮಗಳ ವಿಚಾರವಿದೆ. ಭಕ್ತಿಯ ಅತ್ಯುನ್ನತ ಸ್ಥಿತಿ ಭಗವಂತ. ಹೀಗಾಗಿ ಹರಿಹರನ ಕಾವ್ಯಧರ್ಮ ಭಕ್ತಿಯಾಗದೆ ಇನ್ನೇನಾಗಲು ಸಾಧ್ಯವೆಂದ ಲೇಖಕರು ಶಿವನಿಗಾಗಿ,ಶಿವಭಕ್ತರಿಗಾಗಿ ತಾನು ಕಾವ್ಯ ಬರೆಯುವುದಾಗಿ ಹೇಳಿಕೊಂಡ ಮಾತು ಆತನ ಕೃತಿಗಳಲ್ಲಿ ಹೇಗೆ ಸಾರ್ಥಕವಾಗಿದೆ ಎಂಬುದನ್ನು ಹರಿಹರನ ಕಾವ್ಯಧರ್ಮದಲ್ಲಿ ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ. ಸಾಹಿತ್ಯ-ಧರ್ಮಗಳ ಪ್ರಸಾರಕ್ಕಾಗಿ 'ಲಕ್ಕ ಸಂಖ್ಯೆಯ ವಿತ್ತವಂ ವೆಚ್ಚಿಸಿದ' (ಗುಬ್ಬಿಯ ಮಲ್ಲಣಾರ್ಯ) ಲಕ್ಕಣ್ಣ ದಂಡೇಶನ ರಾಜಕೀಯ ದೂರದೃಷ್ಟಿ, ಸಾಹಿತ್ಯಾಭಿಮಾನ, ಧರ್ಮಭಕ್ತಿಗಳು ಮುಪ್ಪುರಿಗೊಂಡ ಸೊಗಸಾದ ಚಿತ್ರವಿದೆ.'ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ'. 'ಕುಮಾರವ್ಯಾಸನ ಇಂದ್ರಕಿಶೀಲ' ಗದುಗಿನ ಭಾರತದ ಒಂದು ಭಾಗ. ಇದರಲ್ಲಿ ಕವಿ-ಕಾಲ-ದೇಶ ವಿಚಾರಗಳನ್ನೊಳಗೊಂಡ ಅದರ ಕಥಾಸಾರ, ವಸ್ತುವೈಶಿಷ್ಟ್ಯ, ವಸ್ತುವಿನ್ಯಾಸ, ಪಾತ್ರರಚನೆ, ಶೈಲಿ ವರ್ಣನೆಗಳ ಬಗ್ಗೆ ರಸನಿರೂಪಣೆಯಿದೆ.

ಗುರುರೇವಣಸಿದ್ಧನಿಂದ ದೀಕ್ಷೆ ಪಡೆದ ವಚನಕಾರ ಮರುಳಸಿದ್ಧನ (ಮರುಳಸಿದ್ದೇಶ್ವರನ ವಚನ ಅಜವತ್ತೆಂಟು ಸಾವಿರ-ಸಿದ್ಧರಾಮ ರೇವಣ್ಣ ಪ್ರಭುವೆ ಅಂಕಿತದ ಆತನ ಒಂದು ವಚನ ದೊರಕಿದೆ). ಜೀವನ ಚರಿತ್ರೆಯೇ 'ಮರುಳಸಿದ್ಧನ ಚಾರಿತ್ರದ್ಧ. ಇದು ಬರಿ ಕಾವ್ಯವಲ್ಲ, ಅನೇಕ ಐತಿಹಾಸಿಕಾಂಶಗಳನ್ನೊಳಗೊಂಡ ವೀರಶೈವ ಪುರಾಣ. ಹಲವು ದೃಷ್ಟಿಗಳಿಂದ ವ್ಯಾಸಂಗ ಮಾಡುವವರಿಗೆ ಲಿಂಗಾಂಗಿ ಧರ್ಮದ ನಿಜವಾದ ಇತಿಹಾಸ ತಿಳಿಯಬೇಕೆನ್ನುವವರಿಗೆ ಇದು ಅತ್ಯಮೂಲ್ಯ ಆಕರಗ್ರಂಥವೆನ್ನುತ್ತಾರೆ ದೇವಿರಪ್ಪ. ಕ್ರಿ.ಶ.೧೫೬೮ ರಲ್ಲಿದ್ದ ಜೈನಕವಿ ಶ್ರುತಕೀರ್ತಿ ಬರೆದ 'ವಿಜಯ ಕುಮಾರಿ ಚರಿತ' ಮತೀಯ ದ್ವೇಷದಿಂದ ಬಸವಣ್ಣನ ವ್ಯಕ್ತಿತ್ವಕ್ಕೆ ಕುಂದುತರುವ ವಿವರಗಳನ್ನು ಹೊಂದಿದೆ. ಕುತೂಹಲಕ್ಕಾಗಿ ಅದರ ಗದ್ಯ ಸಾರಸಂಗ್ರಹವನ್ನು ಕವಿಯ ಧಾಟಿಯಲ್ಲಿಯೇ ಒದಗಿಸಿಕೊಟ್ಟಿದ್ದಾರೆ, 'ವಿಜಯಮ್ಮ ಹೇಳಿದ ಬಸವಪುರಾಣದಲ್ಲಿ ', 'ಸರ್ವಜ್ಞನ ಬಗೆಗೆ ವಿಚಾರ, ಅವಿಚಾರ ಅಪಪ್ರಚಾರ' ಲೇಖನದಲ್ಲಿ ಸರ್ವಜ್ಞನ ನಿಜವಾದ ವಚನಗಳ ಹಿನ್ನೆಲೆಯಲ್ಲಿ ಅವನ ತಂದೆ,

ತಾಯಿ, ಕಾಲ, ದೇಶ, ಅಂಕಿತಗಳ ವಿಚಾರವಿದೆ. ಸಂಬೋಧನ ರೂಪದ ಸರ್ವಜ್ಞನ ವಚನಗಳಿಗೆ ಡಾ. ಎಲ್. ಬಸವರಾಜು ಪ್ರತಿಪಾದಿಸುವ ಪರಮಾರ್ಥ ಅಂಕಿತ ಸರಿಹೊಂದದೆ ಇರುವದನ್ನು ಎತ್ತಿತೋರಿ ಸರ್ವಜ್ಞವೆಂಬುದು ಕವಿಯ ಹೆಸರೂ ಅಲ್ಲ ಬಿರುದೂ ಅಲ್ಲ, ಅದೊಂದು ಅಂಕಿತವೆನ್ನುವ ದೇವೀರಪ್ಪನವರ ನೇರ ನಿರೂಪಣೆ ಸಾಧುವಾದುದು. ಸರ್ವಜ್ಞನ ಬಗ್ಗೆ ಹೆಚ್ಚಿಗೆ ತಿಳಿಯಬಯಸುವವರು ಅಗತ್ಯ-ಓದಬೇಕಾದ ಲೇಖನವಿದು. ಸಾಕಷ್ಟು ಅರ್ಥಭಿನ್ನತೆ ಸಮಸ್ಯೆಗೆಡೆ ಮಾಡಿದ 'ಎನಿತ್ತೆನಿತ್ತಂಬುಜಪತ್ರನೇತ್ರೆಯಾ' ಪದ್ಯದ ಪಾಠ ಮತ್ತು ಅರ್ಥಸಮಸ್ಯೆ ಪರಿಹರಿಸುವ ದಿಕ್ಕಿನಲ್ಲಿ ಒಂದು ಹೊಸ ಹೆಜ್ಜೆ 'ಎನಿತ್ತೆನಿತ್ತಂಬುಜಪತ್ರ ನೇತ್ರೆಯಾ ಟಿಪ್ಪಣಿ'. ಇಲ್ಲೆಲ್ಲ ನಮಗೆ ತಿಳಿದಿರುವ ಸಂಗತಿಗಳಿಗೆ ಹೊಸ ಅಂಶಗಳನ್ನು ಸೇರಿಸುತ್ತಾ ಹೋಗುವ ದೇವೀರಪ್ಪನವರ ರೀತಿ ನಮ್ಮನ್ನು ಬೆರಗುಗೊಳಿಸುತ್ತವೆ.

ಲೇಖಕರಿಗೆ ತುಂಬ ಪ್ರಿಯವಾದ ಮೂರನೆಯ ಭಾಗ ವಚನಸಂಪಾದನೆ. ಈ ಭಾಗದ ಲೇಖನಗಳು ಅವರ ವ್ಯಾಸಂಗದ ವಿಸ್ತಾರ, ಸ್ಪಷ್ಟವಾದ ಆಲೋಚನೆ, ಸರಳ ಬರವಣಿಗೆಯಿಂದಾಗಿ ಯಾರನ್ನೂ ಸೆಳೆಯುವಂತಹವು. 'ಜೇಡರ ದಾಸಿಮಯ್ಯನ ವಚನಗಳು' ಲೇಖನದಲ್ಲಿ ವಚನಗಳ ಲಕ್ಷಣ ಉಗಮಗಳನ್ನು ಹೇಳುತ್ತ ಉಪನಿಷತ್ತು ಮತ್ತು ಗೀತವಾಕ್ಯಗಳಿಂದ ಪ್ರೇರಣೆಗೊಂಡ ದಾಸಿಮಯ್ಯ ಕನ್ನಡ-ಸಂಸ್ಕೃತಗಳೆರಡರ ಸಾರವನ್ನು ಹೀರಿಕೊಂಡ ಮಹಾನುಭವಿ. ಅವನ ಪ್ರಭಾವಮುದ್ರೆ ಇತರ ವಚನಕಾರರ ಮೇಲೆ ಹೇಗಾಗಿದೆ ಎಂಬುದನ್ನು ಸ್ಪಷ್ಟಪಡಿಸಿ, ಈತ ಕನ್ನಡದ ತಿರುವಳ್ಳುವರ್ ಎಂದಿದ್ದಾರೆ. ಬಸವಣ್ಣನವರು ಬರೆದಿರುವ ಷಟ್‌ಸ್ಥಳ ವಚನಗಳ ಬಗೆಗೆ ಸುದೀರ್ಘವಾದ ವಿವರಣೆಯನ್ನು ನೀಡುತ್ತ ಅವುಗಳಲ್ಲಿ ಎಷ್ಟು ಮೂಲದವು ಮತ್ತು ಪ್ರಕ್ಷಿಪ್ತ ಎಂಬುದನ್ನು ಗುರುತಿಸಲು ಹೊರಟ ಲೇಖನ 'ಬಸವರಾಜದೇವರ ಷಟ್‌ಸ್ಥಲ ವಚನಗಳು'. ದೇವೀರಪ್ಪನವರು ಒಬ್ಬ ಸಮರ್ಥ ಗ್ರಂಥ ಸಂಪಾದಕರಾಗಿರುವುದರಿಂದ ಇಲ್ಲೆಲ್ಲ ಪಾಠ ಪರಿಷ್ಕರಣ, ಗ್ರಂಥಸಂಪಾದನೆಯ ವಿಷಯ ವಿವರಗಳು ನುಸುಳಿವೆ. ಬಸವಣ್ಣನವರ ಷಟ್‌ಸ್ಥಳದ ವಚನಗಳು, ವೀರಶೈವ ಮತಕ್ಕೆ ಬರೆದ ಭಾಷ್ಯಗಳಾಗಿವೆಯೆಂಬುದು 'ವೀರಶೈವ ನಿರ್ಣಯ ಪರಮಾವತಾರ' ಲೇಖನದ ವಿಷಯವಾಗಿದೆ. 'ಈ ಕೆಲಸ ಮೊದಲು ಆಗಬೇಕು' ಲೇಖನದಲ್ಲಿ ಈವರೆಗೆ ಷಡುಸ್ಥಲದ ವಚನಗಳನ್ನು ತಪ್ಪಾಗಿ ಅರ್ಥೈಸಿದ ರೀತಿಯನ್ನು ಖಂಡಿಸುತ್ತ ಅವುಗಳನ್ನು ವೈಜ್ಞಾನಿಕವಾಗಿ ಸಂಪಾದನೆ ಮಾಡಿ ಆಯಾ ವಚನದ ಪ್ರತಿಪದಾರ್ಥವನ್ನು, ತಾತ್ಪರ್ಯಾದಿಗಳನ್ನು ಒದಗಿಸಬೇಕಾದ ಅವಶ್ಯಕತೆಯನ್ನು ಗುರುತಿಸಿದ್ದಾರೆ. ಕೆಲವು ಮಹತ್ವದ ವಚನಗಳಲ್ಲಿ ಇನ್ನೂ ಬೆಳಕಿಗೆ ಬರಬೇಕಾದ ವಚನಗಳ ಬಗೆಗಿನ ಕಳಕಳಿ ವ್ಯಕ್ತವಾಗಿದೆ. ವಚನಗಳನ್ನು ಅರ್ಥಮಾಡಿಕೊಳ್ಳಬೇಕಾದ ರೀತಿಯೊಂದಿಗೆ 'ಬಸವಣ್ಣನವರ ಎರಡು ವಚನಗಳು' ವಿಶ್ಲೇಷಣೆಗೊಳಗಾಗಿವೆ. ವಚನ ಸಾಹಿತ್ಯ ಅಭ್ಯಸಿಸುವವರಿಗೆಲ್ಲ ಇಲ್ಲಿನ ಮಾಹಿತಿಗಳು ತುಂಬ ಉಪಯುಕ್ತವಾಗಬಲ್ಲವು. ದೇವೀರಪ್ಪನವರ ಶ್ರಮ ಇಲ್ಲಿ ಸಾರ್ಥಕವಾಗಿದೆ.

ನಾಲ್ಕನೆಯ ಭಾಗವಾದ 'ಛಂದಸ್ಸು'ವಿನಲ್ಲಿ 'ಸಾಂಗತ್ಯ-ಷಟ್ಪದಿ' 'ಹರಿಹರನ ರಗಳೆ' 'ಶಾರದ ಎಂಬ ಹಾಡುಗಬ್ಬ' ಎಂಬ ಮೂರು ಲೇಖನಗಳಿವೆ. ಮೊದಲನೆಯದರಲ್ಲಿ ಸಾಂಗತ್ಯ ಹದಿನಾಲ್ಕನೆಯ ಶತಮಾನದ ಉತ್ತರಾರ್ಧದಲ್ಲಿ ಹಠಾತ್ತನೆ ಒಡಮೂಡಲಿಲ್ಲ, ಅದು ಹತ್ತನೆಯ ಶತಮಾನದಲ್ಲಿದ್ದ ಷಟ್ಪದದ ಪುನರಾವತಾರ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಹರಿಹರನ ದೀಕ್ಷೆಯಿಂದಾಗಿ ಜೇತದ ಸರಕುಗಳಲ್ಲಿ ಅಡಗಿಕೊಂಡಿದ್ದ ರಗಳೆ ಸ್ವತಂತ್ರ ಕಾವ್ಯ ಪ್ರಕಾರವಾಗಿ ವಿರಾಜಿಸುತ್ತಿರುವುದರ ಹಿಂದಿನ

ಇತಿಹಾಸ 'ಹರಿಹರನ ರಗಳೆಗಳಲ್ಲಿದೆ', ಕನ್ನಡ ಕೈಪಿಡಿಕಾರರು ಗುರುತಿಸಿದ ಶಾರದ (ಷಟ್ಪದಿ) ಲಕ್ಷಣಕ್ಕೂ ಅದೇ ಹಾಡುಗಬ್ಬದಲ್ಲಿ ಹಾಡುವ ರೀತಿಗೂ ಇರುವ ಸೂಕ್ಷ್ಮವ್ಯತ್ಯಾಸದ ವಿವರವೇ 'ಶಾರದ ಎಂಬ ಹಾಡುಗಬ್ಬ'.

ಐದನೆಯ ಭಾಗವಾದ ಶಬ್ದವಿವೇಕದಲ್ಲಿನ 'ಜಾಣ', 'ಕರ್ಣಾಟಕವೊ ಕರ್ನಾಟಕವೊ' 'ಮರುಳಯ್ಯನ್-7ಮಲ್ಲಿಕಾರ್ಜುನ' 'ಕಮ್ಮಜೆಯೋವಜ' 'ಕಬ್ಬಪ್ಪು' 'ಬೆಳ್ಳಿ, ಕಬ್ಬನೆಕಾರಿ, 'ನೆಲವತ್ತಿ :ಊರು ಮಾತ್ರ ಇದೆ.' 'ಕಪ್ಪಡಿ' ಮೊದಲಾದ ಲೇಖನಗಳು ಭಾಷಾಶಾಸ್ತ್ರ ಸಂಸ್ಕೃತಿ ಶಾಸ್ತ್ರಗಳ ಸರಿಜೋಡನೆಯಿಂದ ದೇವೀರಪ್ಪನವರ ಅಧ್ಯಯನದ ಆಳ, ವಿಸ್ತಾರವನ್ನು ಸೂಚಿಸುತ್ತವೆ. ಆರನೆಯ ಸಂಕೀರ್ಣ ಭಾಗ ಮೇಲಿನ ಭಾಗಗಳಿಗೆ ಸೇರದ ೧೫ ಬಿಡಿ ಲೇಖನಗಳನ್ನೊಳಗೊಂಡಿದೆ. ಹಲವು ಹತ್ತು ವಿಷಯಗಳತ್ತ ತೋರಬೆರಳಾಗಿರುವ ಇಲ್ಲಿನ ಲೇಖನಗಳೆಲ್ಲ ಅವರ ವ್ಯಾಪಕ ತಿಳುವಳಿಕೆಯನ್ನೂ, ಯಾವುದೇ ಅಭಿಪ್ರಾಯಕ್ಕೆ ಪಟ್ಟು ಹಿಡಿಯದ ನೇರಮನಸ್ಸನ್ನೂ ತಿಳಿಯಪಡಿಸುತ್ತವೆ. ಇಲ್ಲಿನ ಎಲ್ಲ ಲೇಖನಗಳ ಗುಣಮಟ್ಟ ಒಂದೇ ರೀತಿಯಾಗಿಲ್ಲ. ಕೆಲ ಸಮಸ್ಯೆಗಳಿಗೆ ಸಮರ್ಪಕ ಉತ್ತರ ದೊರಕಿಲ್ಲ. ಆದಾಗ್ಯೂ ಒಟ್ಟು ಸಂಪುಟ ಅವರೊಬ್ಬ ನಿಷ್ಠಾವಂತ ಅಭ್ಯಾಸಿಯೆಂಬುದನ್ನು, ಸಮರ್ಥ ಸಂಶೋಧಕರೆಂಬುದನ್ನು ತೋರಿಸಿಕೊಡುತ್ತದೆ.

೧೯೮೮ರಲ್ಲಿ ಪ್ರಕಟಗೊಂಡ ಚಿಕ್ಕದಾದರೂ ಸಂಶೋಧನಾತ್ಮಕ ಮನೋಭಾವದ ಅಚ್ಚುಕಟ್ಟಾದ ಕೃತಿ, ಬಾದಾಮಿಯ ಶಿಲಾಕಾಂತ ಪತ್ತಾರ ಅವರ "ಸಪ್ತಕ". ಸಪ್ತಕದ ಹೆಸರೇ ಸೂಚಿಸುವಂತೆ ಏಳು ಲೇಖನಗಳನ್ನೊಳಗೊಂಡಿದೆ. ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದ ಭಾರತೀಯ ಸಂಗೀತದ ಒಳ ಹೊರಗುಗಳ ಪರಿಚಯ 'ನಮ್ಮ ಸಂಗೀತ ಪಥದಲ್ಲಿದೆ'. ಭಾರತೀಯ ಸಂಗೀತ ಅನೇಕ ಸಂಸ್ಕೃತಿಗಳ ಪ್ರಭಾವಕ್ಕೆ ಒಳಪಟ್ಟು ಮಾರ್ಪಾಟಾಗಿರುವ ಅನಿವಾರ್ಯತೆಗೆ ವೇದಋಕ್ಕುಗಳಾದಿಯಾಗಿ ೨೦ನೇ ಶತಮಾನದ ಕರ್ನಾಟಕ ಸಂಗೀತದವರೆಗೆ ಕೊಡುವ ಮಾಹಿತಿಗಳು ಗಮನ ಸೆಳೆಯುತ್ತವೆ. ನಮ್ಮ ನಾಡಿನ ಚರಿತ್ರೆಗೆ ಶಿಲಾಶಾಸನಗಳು ಹೇಗೆ ಮಹತ್ವದ ಆಕರಗಳಾಗಿವೆ ಎಂಬುದು 'ಶಿಲಾಶಾಸನಗಳು' ಲೇಖನದಲ್ಲಿ ಸಾಧಾರವಾಗಿ ನಿರೂಪಿತವಾಗಿದೆ. ಅರಸರ ರಾಜ್ಯ ರಕ್ಷಣೆಯ ಪ್ರಶ್ನೆಗೆ ಕನ್ನಡಿ ಹಿಡಿಯುವ ಕೋಟೆಗಳು ಆರನೆಯ ಶತಮಾನದಿಂದ ಮೊದಲ್ಗೊಂಡು ಹೇಗೆ ಬೆಳೆದುಬಂದವು ಎಂಬುದರ ವಿವರಣೆಗಳನ್ನೊಳಗೊಂಡ ಲೇಖನ 'ಶಾಸನಗಳಲ್ಲಿ ಬಾದಾಮಿ ಕೋಟೆಗಳು' ಶಾಸನಾಧಾರಗಳ ಹಿನ್ನೆಲೆಯಲ್ಲಿ ಮೂಡಿಬಂದ ಈ ಲೇಖನ ಕೋಟೆಗಳ ಬಗೆಗೆ ಅಧ್ಯಯನ ನಡೆಸುವವರು ಅಗತ್ಯ ಗಮನಿಸಬೇಕಾದಂತಹದು. ವೈಷ್ಣವರಾದ ಬಾದಾಮಿ ಚಾಲುಕ್ಯರು ಅನ್ಯಧರ್ಮಗಳಾದ ಬೌದ್ಧ, ಜೈನ, ಶೈವ ಧರ್ಮಗಳನ್ನು ಹೇಗೆ ಪೋಷಿಸಿಕೊಂಡು ಬಂದರೆಂಬ ವಿವರಗಳು 'ಬಾದಾಮಿ ಚಾಲುಕ್ಯರ ಧರ್ಮಸಮನ್ವಯತೆ' ಲೇಖನದಲ್ಲಿವೆ. ಭಾರತದ ಕಲಾ ಇತಿಹಾಸದಲ್ಲಿ ಪಟ್ಟದಕಲ್ಲಿಗೆ ಮಹತ್ವದ ಸ್ಥಾನವಿದೆ. ದಕ್ಷಿಣ ಭಾರತದ ವಾಸ್ತು ಶೈಲಿಗೆ ತನ್ನದೇ ಆದ ಕಾಣಿಕೆಯನ್ನು ನೀಡಿದ ಪಟ್ಟದಕಲ್ಲಿನ ದೇವಾಲಯಗಳ ಸ್ಥಪತಿ-ರೂವಾರಿಗಳ ಪರಿಚಯದೊಂದಿಗೆ ದೇವಾಲಯಗಳ ಸೇವೆ-ರಕ್ಷಣೆಗೆ ಆ ಮೂಲಕ ನರ್ತನ-ಸಂಗೀತಾದಿ ಕಲೆಗಳಿಗೆ ಬಾದಾಮಿ ಚಾಲುಕ್ಯರು ಹೇಗೆ ಪ್ರೋತ್ಸಾಹ ನೀಡಿದರೆಂಬ ಸಂಗತಿಗಳು 'ಪಟ್ಟದಕಲ್ಲು ಒಂದು ಕಲಾ ಪ್ರಯೋಗಾಲಯ' ದಲ್ಲಿ ನಿರೂಪಿತವಾಗಿವೆ. ಭಾರತದ ಶಸ್ತ್ರಚಿಕಿತ್ಸೆಯ ಪಿತಾಮಹನಾದ ಸುಶ್ರುತನ 'ಸುಶ್ರುತ ಸಂಹಿತಾ' ವೈದ್ಯಕೀಯ ಕ್ಷೇತ್ರದಲ್ಲಿ ಬಹು ಅಪರೂಪದ ಪ್ರಾಚೀನ ಕೃತಿ. ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯರು ವೈದ್ಯಕೀಯ

ಕ್ಷೇತ್ರದ ಚಿಕಿತ್ಸಾರಂಗದಲ್ಲಿ ಪಡೆದಿದ್ದ ಪರಿಣತಿಯನ್ನು ಲೇಖಕರು ಇಲ್ಲಿ ಪಟ್ಟಿಮಾಡಿದ್ದಾರೆ. ಪ್ರಾಚೀನ ವೈದ್ಯದ ಬಗೆಗೆ ಈ ಲೇಖನ ನಮ್ಮ ಅರಿವನ್ನು ಅಗಲಗೊಳಿಸುತ್ತದೆ. ಉದಯಪುರ ಪ್ರವಾಸದ ಹಿನ್ನೆಲೆಯಲ್ಲಿ ಮೂಡಿಬಂದ 'ಉದಯಪುರದರ್ಶನ'ಕಲಾತ್ಮಕವಾಗಿ, ಕಾವ್ಯಮಯವಾಗಿ ಓದುಗರ ಮನವನ್ನು ಸೂರೆಗೈಯ್ಯುತ್ತದೆ.

ವೃತ್ತಿಯಲ್ಲಿ ಉತ್ಸಾಹಿ ಶಿಕ್ಷಕರಾಗಿರುವ ಶ್ರೀ ಪತ್ತಾರರು ಐತಿಹಾಸಿಕ ಘಟನಾವಳಿಗಳ ಹಿನ್ನೆಲೆಯೊಂದಿಗೆ ಈ ಲೇಖನಗಳನ್ನು ಸಾದರಪಡಿಸುವಲ್ಲಿ ಸಂಶೋಧನ ಮನೋಭಾವವನ್ನು ಪ್ರಕಟಿಸಿದ್ದಾರೆ. ಪಾಂಡಿತ್ಯದ ಭಾರವಿಲ್ಲದ ಇಲ್ಲಿನ ಪರಿಚಯಾತ್ಮಕ ಲೇಖನಗಳು ಓದುಗನಲ್ಲಿ ಲವಲವಿಕೆ ತುಂಬುತ್ತವೆ. ಬರವಣಿಗೆಯಲ್ಲಿನ ರಮ್ಯತೆ ಕಡಿಮೆ ಮಾಡಿ ಆಳವಾದ ಅಧ್ಯಯನದೊಂದಿಗೆ ಸಂಶೋಧನೆಯ ಶಿಸ್ತನ್ನು ಮೈಗೂಡಿಸಿಕೊಂಡರೆ ಪತ್ತಾರರು ಒಳ್ಳೆಯ ಲೇಖನಗಳನ್ನು ನೀಡಬಲ್ಲರು.

ಈ ವರ್ಷದ ಸಂಶೋಧನ ಪ್ರಕಟನೆಗೆ ಗಮನಾರ್ಹವಾದ ಮತ್ತೊಂದು ಕೃತಿ "ದಾಸ ಸಾಹಿತ್ಯದರ್ಶನ". ಸಮಗ್ರ ಹರಿದಾಸ ಸಾಹಿತ್ಯದ ಹಲವು ಮುಖಗಳ ದರ್ಶನ ಮಾಡಿಸಲು 'ಎಚ್ಚೆಸ್ಕೆ'ಯವರಿಂದ ಈ ಕೃತಿ ಸಂಪಾದಿತವಾಗಿದೆ. ಕರ್ನಾಟಕದಲ್ಲಿ ಹರಿದಾಸ ಪಂಥದ ಹುಟ್ಟು, ಬೆಳವಣಿಗೆ, ಹರಿದಾಸ ಸಾಹಿತ್ಯದ ಇತಿಹಾಸ, ಇತರ ಸಾಹಿತ್ಯಗಳೊಂದಿಗೆ ಇದರ ತೌಲನಿಕ ಅಧ್ಯಯನ, ದಾಸಸಾಹಿತ್ಯದಲ್ಲಿ ಪ್ರತಿಪಾದಿತವಾಗಿರುವ ಮೌಲ್ಯಗಳು ಹಾಗೂ ತಾತ್ವಿಕ ನಿಲುವುಗಳು, ಭಾಷೆ ಸಾಹಿತ್ಯಗಳಿಗೂ ಸಂಗೀತ ನೃತ್ಯಗಳಿಗೂ ಹರಿದಾಸರು ನೀಡಿರುವ ಕೊಡುಗೆ ಮುಂತಾದ ವಿಚಾರಗಳೊಂದಿಗೆ ಪ್ರಮುಖ ಹರಿದಾಸರ ಜೀವನ ಕೃತಿಗಳ ಪರಿಚಯ ಮೊದಲಾದ ವಿಷಯಗಳು ಸಂಶೋಧನ ಕ್ಷೇತ್ರಕ್ಕೆ ಪರಿಚಿತರಾದ ಲೇಖಕರಿಂದ ಮೂಡಿಬಂದಿವೆ.

ಈ ಗ್ರಂಥದಲ್ಲಿನ ಸೀತಾರಾಮ್ ಜಾಗೀರ್‌ದಾರರ 'ಕರ್ನಾಟಕದಲ್ಲಿ ಹರಿದಾಸಪಂಥ', ಶಾಲಿನಿ ರಘುನಾಥರ 'ಹರಿದಾಸ ಸಾಹಿತ್ಯದ ಇತಿಹಾಸ' ಪ್ರಧಾನ ಗುರುದತ್ತರ 'ದಾಸಸಾಹಿತ್ಯದಲ್ಲಿ ದೇಶಿ' ಡಾ. ಕೆ.ಜಿ. ನಾರಾಯಣ ಪ್ರಸಾದರ 'ಹರಿದಾಸರ ಕೃತಿಗಳ ಛಂದಸ್ಸು', ಶ್ರೀನಿವಾಸ ಉಡುಪರ 'ಕರ್ನಾಟಕ ಸಂಗೀತ ಮತ್ತು ನೃತ್ಯಕ್ಕೆ ಹರಿದಾಸರ ಕೊಡುಗೆ' ಪ್ರಬಂಧಗಳು; ಬಿ.ಜಿ.ಸತ್ಯಮೂರ್ತಿಯವರ 'ಭಾರತೀಯ ತತ್ತ್ವಶಾಸ್ತ್ರದ ಬೆಳಕಿನಲ್ಲಿ ದಾಸಸಾಹಿತ್ಯ' ಡಾ.ಅರ್ಸ್ವಿಯಸ್‌ರ 'ಹರಿದಾಸರು ಮತ್ತು ತೆಲುಗುಕೀರ್ತನಕಾರರು' ಪ್ರೊ.ಎಂ.ಜಿ.ನಂಜುಂಡಾರಾಧ್ಯರ 'ವಚನಸಾಹಿತ್ಯ ಮತ್ತು ದಾಸಸಾಹಿತ್ಯ. ಡಾ.ಬಾ.ರಾ. ಗೋಪಾಲರ ಆಳ್ವಾರರು ಮತ್ತು ಹರಿದಾಸರು' ಮೊದಲಾದ ತೌಲನಿಕ ಪ್ರಬಂಧಗಳು ಸ್ವತಂತ್ರ ಗ್ರಂಥ ವ್ಯಾಪ್ತಿ ಪಡೆದ ಸಂಪ್ರಬಂಧಗಳಾಗಿವೆ. ಅದರಲ್ಲಿಯೂ ಸೀತಾರಾಮ್ ಜಾಗೀರ್‌ದಾರ, ಡಾ.ಕೆ.ಜಿ. ನಾರಾಯಣಪ್ರಸಾದ, ನಂಜುಂಡಾರಾಧ್ಯ, ಡಾ.ಬಾ.ರಾ.ಗೋಪಾಲರ ಪ್ರಬಂಧಗಳು ಸಂಶೋಧನಾಧ್ಯಯನದ ಆಳವನ್ನು ಸೂಚಿಸುತ್ತವೆ. ವಸ್ತುಸ್ಥಿತಿ ಹೀಗಿದ್ದರೂ ಒಟ್ಟು ಗ್ರಂಥದ ಒಲವು ದಾಸಸಾಹಿತ್ಯದ ವೈಭವೀಕರಣದತ್ತ ವಾಲಿದೆ.

ಡಾ.ಶಿವಾನಂದ ಗುಬ್ಬಣ್ಣವರ ಅವರ 'ಲಿಂಗಾಯತ ಸಂಸ್ಕಾರಗಳು' ಲಿಂಗಾಯತರಿಂದ ಸಂಗ್ರಹಿಸಿದ ಸಂಸ್ಕಾರಗಳ ವಿಶ್ಲೇಷಣೆಯನ್ನೊಳಗೊಂಡಿದೆ. ಹದಿನಾರು ಅಧ್ಯಾಯಗಳ ಈ ಪುಸ್ತಕದಲ್ಲಿ ಲಿಂಗಾಯತ ಜನಾಂಗದ ಹಿನ್ನೆಲೆ, ಅವರ ದಿನನಿತ್ಯದ ವ್ಯವಹಾರಗಳನ್ನೊಳಗೊಂಡು ಯಾವುದೇ ವ್ಯಕ್ತಿಯ ಜೀವನದ ಅತಿಮುಖ್ಯಘಟ್ಟಗಳಾದ ಜನನ, ಮದುವೆ, ಮರಣಗಳಿಗೆ ಸಂಬಂಧಿಸಿದ ಸುದೀರ್ಘ

ಪರಿಚಯವಿಲ್ಲಿದೆ. ಲಿಂಗಾಯತ ಸಂಸ್ಕಾರಗಳೊಂದಿಗೆ ಅಯ್ಯಾಚಾರವನ್ನು ಕುರಿತಾದ ಸಂಸ್ಕಾರಗಳನ್ನೂ ಗುರುಮಠ, ವಿರಕ್ತಮಠಗಳ ಮುಖ್ಯರಿಗೆ ನಡೆಯುವ ಸಂಸ್ಕಾರಗಳನ್ನು ವಿವೇಚಿಸಿರುವದು ಅತ್ಯಂತ ಸೂಕ್ತವಾಗಿದೆ. ಮೂಲದಲ್ಲಿ ವೈದಿಕ ಸಂಸ್ಕಾರಗಳಿಗೆ ವ್ಯತಿರಿಕ್ತವಾಗಿ ಹುಟ್ಟಿಕೊಂಡ ಲಿಂಗಾಯತ ಸಂಸ್ಕಾರಗಳು ಕಾಲಾನುಕ್ರಮದಲ್ಲಿ ಕೆಲವು ವೈದಿಕ ಸಂಸ್ಕಾರಗಳನ್ನು ಅಳವಡಿಸಿಕೊಂಡು ಮಿಶ್ರರೂಪ ತಾಳಿದುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಆದರೆ ಲೇಖಕರೇ ಒಪ್ಪಿಕೊಳ್ಳುವಂತೆ ಸಮಯ, ಹಣದ ಕೊರತೆಯಿಂದಾಗಿ ಕರ್ನಾಟಕದ ತುಂಬೆಲ್ಲಾ ಅನುಸರಿಸುವ ಲಿಂಗಾಯತ ಸಂಸ್ಕಾರ, ವಿಧಿ ಕ್ರಿಯೆಗಳಲ್ಲಿರುವ ಪ್ರಭೇದಗಳನ್ನು ಗುರುತಿಸದಿರುವುದು ಈ ಅಧ್ಯಯನದ ಬಹುದೊಡ್ಡ ಕೊರತೆ. ಅಷ್ಟೇ ದೊಡ್ಡ ದೋಷ ತಮ್ಮ ಗ್ರಾಮದ (ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಹಿರೇನರ್ತಿ) ಲಿಂಗಾಯತರಿಂದ ಸಂಗ್ರಹಿಸಿದ ಎಲ್ಲ ಮಾಹಿತಿಗಳು ಲಿಂಗಾಯತ ಸಂಸ್ಕಾರಗಳೆಂದು ಕೊಟ್ಟಿರುವುದು. ಸಾಮಾನ್ಯವಾಗಿ ಜನಪದದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಸಮಾನ ಅಂಶಗಳನ್ನು ಬಿಟ್ಟು ಲಿಂಗಾಯತರಿಗೆ ವಿಶಿಷ್ಟವಾದ ಸಂಸ್ಕಾರಗಳನ್ನು ವಿಶ್ಲೇಷಿಸಿದ್ದರೆ ಚೆನ್ನಾಗಿತ್ತು.

ಮರಣ ಎಂಬ ಅಧ್ಯಾಯದ "ವಯಸ್ಕ ಹೆಣ್ಣು ತೀರಿದಲ್ಲಿ ತಂದೆಗೆ ಗಂಡು ಹುಡುಕುವ ಜವಾಬ್ದಾರಿ ತಪ್ಪಿತೆಂದು ಗ್ರಹಿಸಲಾಗಿದೆ " (ಪುಟ ೧೬೬) ಎಂಬ ಮಾತು;ಜನನಕ್ಕೆ ಸಂಬಂಧಿಸಿದಂತೆ "ಜನನ ಪೂರ್ವದವರೆಗೆ ಕೂಸಿನ ಭಾರ ತಾಯಿಹೊತ್ತಿದ್ದು, ಈಗ ಜನನಾನಂತರ ಭೂಮಿ ಹೊರಲು ಸಿದ್ಧವಾಗಿದೆ ಎಂಬುದರ ಸಂಕೇತವಾಗಿ ಹುರಿಕೊಯ್ಯಲಾಗುತ್ತದೆ "(ಪುಟ ೩೦)ಎಂಬ ವಿವರಣೆಗಳು ಅವರ ಬೇಜವಾಬ್ದಾರಿತನದ ನಿರ್ಣಯವನ್ನು ಸೂಚಿಸುತ್ತವೆ. ಮೈಲಿ ಹಾಕಿಸುವ ವೈಜ್ಞಾನಿಕ ಕ್ರಿಯೆಯನ್ನು ಸಂಸ್ಕಾರ ಪಟ್ಟಿಯಲ್ಲಿ ಸೇರಿಸಿರುವದು (ಪುಟ ೫೩) ಅಭಾಸಕರ. ಲೇಖಕರ ಕ್ಷೇತ್ರಕಾರ್ಯ ಒಂದು ಗ್ರಾಮಕ್ಕೆ ಸೀಮಿತವಾಗಿರುವದರಿಂದ ಲಿಂಗಾಯತರಲ್ಲಿರುವ ಒಳಪಂಗಡ ವಿವರಗಳು ದೊರಕಿಲ್ಲ. ಕೆಲವೆಡೆ ಅನಗತ್ಯ ವಿವರಗಳು ತಲೆಹಾಕಿವೆ. ಲೇಖಕರು ಲಿಂಗಾಯತ ಸಂಸ್ಕಾರಗಳನ್ನೇ ವಿವರಿಸುತ್ತಾ ಜನನ, ಮದುವೆ,ಮರಣ ಭಾಗಗಳಲ್ಲಿ ಕೊಡುವ ಸರ್ವಸಾಮಾನ್ಯ ಸಹಜ ಅಂಶಗಳನ್ನು ಬಿಟ್ಟು ಲಿಂಗಾಯತರಿಗೆ ವಿಶಿಷ್ಟವಾಗಿರುವ ವಿಧಿ-ವಿಧಾನಗಳು, ನಂಬಿಕೆಗಳನ್ನು ಗುರುತಿಸಿದ್ದರೆ ಸಾಕಿತ್ತು. ಇಷ್ಟೆಲ್ಲಾ ಸಂಗತಿಗಳನ್ನು ಹೊರತುಪಡಿಸಿಯೂ ಜಾನಪದ ಶಾಸ್ತ್ರ, ಸಮಾಜ ಶಾಸ್ತ್ರ, ಸಮಕಾಲೀನ ಧಾರ್ಮಿಕ ಸ್ಥಿತಿ-ಗತಿಗಳನ್ನು ಕುರಿತು ಹೆಚ್ಚಿನ ಅಧ್ಯಯನಕ್ಕೆ ತೊಡಗುವವರಿಗೆ ಪುಸ್ತಕ ಹಾಗೂ ಅನುಬಂಧದ ವಿಷಯಗಳು ಒಳ್ಳೆಯ ಆಕರಗಳಾಗಬಲ್ಲವು.

ಎಂ. ರಾಮಕೃಷ್ಣ ಅವರಿಗೆ ಪಿ.ಎಚ್.ಡಿ. ಪದವಿಯನ್ನು ತಂದುಕೊಟ್ಟ "ರನ್ನ ಮತ್ತು ಅವನ ಕೃತಿಗಳು" ಈ ವರ್ಷ ಪ್ರಕಟಗೊಂಡ ಒಂದೇ ಒಂದು ಮಹಾಪ್ರಬಂಧ. ಇದರಲ್ಲಿ ಹದಿನೈದು ಅಧ್ಯಾಯಗಳಿವೆ. ಮೊದಲ ಅಧ್ಯಾಯವಾದ ಯುಗಧರ್ಮ ಮತ್ತು ಸಾಹಿತ್ಯಕ ಹಿನ್ನೆಲೆಯಲ್ಲಿ ಯುಗಧರ್ಮಕ್ಕೆ ಕಣ್ಣು, ಕಿವಿಗಳನ್ನು ತೆರೆದ ಕವಿ, ಜೀವನದಿಂದ ಸ್ವೀಕರಿಸಿ ಅದಕ್ಕೆ ಜೀವತುಂಬಿ, ಅದನ್ನು ಸಮಾಜಕ್ಕೆ ಕೊಟ್ಟು ಹೇಗೆ ದೊಡ್ಡವನಾಗುತ್ತಾನೆ ಎಂಬುದನ್ನು ಪಾಶ್ಚಾತ್ಯ, ಪೌರ್ವಾತ್ಯಮಾನದಂಡಗಳಿಂದ ತೋರಿಸಿಕೊಡಲಾಗಿದೆ. ರನ್ನನ ಕಾಲ ಜೀವನ ಕೃತಿಗಳು ಎಂಬ ಎರಡನೆಯ ಅಧ್ಯಾಯದಲ್ಲಿ ರನ್ನನ ಅಭ್ಯುದಯಕ್ಕೆ ಕಾರಣರಾದ ಸಾಮಂತ ಮಂಡಳೇಶ್ವರರು ಯಾರು ?(ಪುಟ ೧೯), ಕವಿಗೆ ಕವಿ ಚಕ್ರವರ್ತಿ ಬಿರುದಿನೊಂದಿಗೆ ಕೊಟ್ಟ ಭತ್ತಗಾವೆ (ಭತ್ತಗಾವೆ ಕನ್ನಡ ಶಾಸನಗಳಿಂದ ಅಗ್ರಹಾರಗಳಂತಿರುವ ಗ್ರಾಮವೆಂದು ತಿಳಿದುಬರುತ್ತದೆ. ಆದರೆ ಲೇಖಕರು ಭಾವಿಸಿರುವಂತೆ ಅದೇ ಒಂದು ಗ್ರಾಮವಲ್ಲ?

ಯಾವುದು?(ಪು.೨೧)ಎಂಬ ಸಮಸ್ಯೆಗೆ ಸಮರ್ಪಕ ಉತ್ತರ ದೊರಕಿಲ್ಲ. ಹಿಂದಿನ ವಿದ್ವಾಂಸರ ವಾದ ವಿವಾದಗಳ ಹಿನ್ನೆಲೆಯಲ್ಲಿ ರನ್ನನ ಕುರಿತ ಸಮಸ್ಯೆಗಳನ್ನು ಲೇಖಕರು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಈಚೆಗೆ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಜೈನಮಠದ ಹಸ್ತಪ್ರತಿಭಂಡಾರದಲ್ಲಿ ಪತ್ತೆ ಹಚ್ಚಿದ ಎರಡು ಅಪೂರ್ವ ಹಸ್ತಪ್ರತಿಗಳ ಸಹಾಯದಿಂದ ಡಾ.ಕಲ್ಬುರ್ಗಿಯವರು ರನ್ನ ನಿಘಂಟುವನ್ನು ಪ್ರಕಟಿಸಿದ್ದಾರೆ.(ಕ.ಭಾ.ಸಂ-೮, ಸಂ ೪ ಪು. ೨೫-೩೬ ೧೯೭೬). ರಾಮಕೃಷ್ಣ ಅವರು ತಮ್ಮ ಮಹಾಪ್ರಬಂಧ ಸಾದರಪಡಿಸುವ ಪೂರ್ವದಲ್ಲಿಯೇ ಹೊರಬಂದ ೪೫ ಕಂದಪದ್ಯಗಳ ಈ ಚಿಕ್ಕ ಕೃತಿಯನ್ನು ಗಮನಿಸಿದ್ದರೆ ಚೆನ್ನಾಗಿತ್ತು.

ಮುಂದಿನ ನಾಲ್ಕು ಅಧ್ಯಾಯಗಳು 'ಗದಾಯುದ್ಧದ ವಸ್ತು ವಿನ್ಯಾಸ' 'ಆಕರಗಳು-ಪ್ರಭಾವ' 'ರಸನಿರೂಪಣೆ-ವರ್ಣನೆ''ಪಾತ್ರ-ಚಿತ್ರಣ'ಗಳಿಗೆ ಮೀಸಲಾಗಿವೆ. ಐತಿಹಾಸಿಕ ಸತ್ಯಾಶ್ರಯ ಇಱಿವಬೆಡಂಗನನ್ನು ಪೌರಾಣಿಕ ಭೀಮನೊಂದಿಗೆ ಅಭೇದಗೊಳಿಸಿ ಅಮರನನ್ನಾಗಿಸುವ ಉತ್ಸಾಹದಲ್ಲಿ ಕವಿ ಎದುರಿಸಿದ ತೊಡಕುಗಳು ಮತ್ತು ಆತನೇ ಸೃಷ್ಟಿಸಿದ ಕೆಲವು ಸನ್ನಿವೇಶ ಸಂದರ್ಭಗಳನ್ನು ಲೇಖಕರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗದಾಯುದ್ಧದ ವಸ್ತುವಿನ್ಯಾಸ, ಮೌಲ್ಯಾಮೌಲ್ಯಗಳ ಪೃಥಕ್ಕರಣವನ್ನೂ ಲೇಖಕರು ತೂಕಬದ್ಧವಾಗಿ ಒದಗಿಸಿದ್ದಾರೆ. ರನ್ನನ ಸಾಹಸಭೀಮವಿಜಯಕ್ಕೆ ಆಧಾರವೆಂದರೆ ಪಂಪ ಭಾರತದ ೧೩ನೇ ಆಶ್ವಾಸ. ಇದರೊಂದಿಗೆ ಇನ್ನು ಕೆಲವು ಆಶ್ವಾಸಗಳಿಂದ ..., ನುಡಿಗಟ್ಟು, ವಾಕ್ಯಾಂಶ, ಪದ್ಯಾರ್ಥ,ಪೂರ್ಣಪದ್ಯಭಾವ, ಘಟನೆ,ಸನ್ನಿವೇಶ ಮುಂತಾದವುಗಳನ್ನು ಆರಿಸಿಕೊಂಡಿರುವುದು ಸ್ಪಷ್ಟವಿದೆ. ಕೆಲವು ಸಂದರ್ಭಗಳಲ್ಲಿ ಪಂಪನಲ್ಲಿ ಇಲ್ಲದಿರುವುದು ಎಲ್ಲಿಂದ ಬಂತು ಎಂದು ಪರಿಶೀಲಿಸಿದಾಗ ಭಾಸನ ಊರುಭಂಗ, ದೂತವಾಕ್ಯ, ಭಟ್ಟನಾರಾಯಣನ ವೇಣೀಸಂಹಾರ ನಾಟಕಗಳಿಂದ ಕಥೆ ಮತ್ತು ಪಾತ್ರಸಂವಿಧಾನಕ್ಕೆ ಪಡೆದ ಪ್ರೇರಣೆ, ಸ್ಫೂರ್ತಿ, ಪ್ರಚೋದನೆಗಳೊಂದಿಗೆ ಕವಿಯ ಸ್ವಂತದ ಕಲ್ಪನೆಯನ್ನೂ ಚರ್ಚಿಸಲಾಗಿದೆ. ಇಲ್ಲೆಲ್ಲ ಮೂಲದೊಂದಿಗೆ ಆಕರಗಳ ಪ್ರಭಾವವನ್ನು ತೌಲನಿಕವಾಗಿ ನೋಡುವ ಈ ಭಾಗ ಲೇಖಕರ ಸಂಶೋಧನೆಯ ಆಳವನ್ನು ಸೂಚಿಸುತ್ತದೆ.

ನವರಸಗಳೊಂದಿಗೆ ೩೬ ಅಲಂಕಾರಗಳನ್ನು ಒಪ್ಪಿಕೊಂಡ ರನ್ನನ ಗದಾಯುದ್ಧದಲ್ಲಿ (ಗ.ಮು.೧-೭)ರಸಭಂಗಕ್ಕೆ ಕಾರಣವಾದ ಇತಿಹಾಸಾಂಶವನ್ನು ಬಿಟ್ಟು ನೋಡಿದರೆ ಭೀಮ-ವೀರ, ರೌದ್ರ, ಅಶ್ವತ್ಥಾಮ-ರೌದ್ರ. ದ್ರೌಪದಿ-ವೀರ, ದುರ್ಯೋಧನ-ವೀರ, ರೌದ್ರ, ಕರುಣ, ಧೃತರಾಷ್ಟ್ರ, ಗಾಂಧಾರಿ, ಕುಂತಿ, ಭಾನುಮತಿ -ಕರುಣರಸಗಳಿಗೆ ವಿಭಾವವಾಗುವ ಅಂಶಗಳನ್ನು ಕಾವ್ಯಭಾಗದಿಂದ ಎತ್ತಿ ತೋರಿಸಲಾಗಿದೆ. ನಾಲ್ಕನೆಯ ಆಶ್ವಾಸದ ಕೆಲವು ಪದ್ಯಗಳು (೨೩-೩೧) ಅಸಮರ್ಪಕ ರಸನಿರೂಪಣೆಯಿಂದ ಅನುಚಿತವಾಗಿರುವುದನ್ನು ಸೂಚಿಸಿದ ಲೇಖಕರು ಈ ಕಾವ್ಯದ ಪ್ರಬಂಧ ರಸ ಸತ್ವ ರಜೋಗುಣಪ್ರಧಾನವಾದ ವೀರವಾಗಿದೆ ಎಂದು ಸಾಧಾರವಾಗಿ ಸಾಧಿಸಿದ್ದಾರೆ. ಮೂಲತಃ ರಜೋಪ್ರಧಾನ ವ್ಯಕ್ತಿಯಾದ ದುರ್ಯೋಧನ ತನ್ನ ಸತ್ವ, ರಜಸ್,ತಮಸ್ ಗುಣಗಳಿಂದ ಒಬ್ಬ ಜಟಿಲ-ಸಂಕೀರ್ಣ ವ್ಯಕ್ತಿಯಾಗಿ ಸಾರ್ವಕಾಲಿಕ ಪಾತ್ರವಾಗಿ ಪಂಪನ ಸ್ಫೂರ್ತಿಯಿಂದ ರನ್ನನಲ್ಲಿ ಚಿತ್ರಿತವಾಗಿರುವುದನ್ನು ಮೂಲದಿಂದ ಭಿನ್ನವಾಗಿರದ ಭೀಮನ ಪಾತ್ರಕ್ಕೆ ಪಟ್ಟಾಭಿಷೇಕ ಪ್ರಸಂಗ ಮತ್ತು ದುರ್ಯೋಧನನ್ನು ಛೇಡಿಸುವ ಪ್ರಸಂಗಗಳು ರನ್ನನಲ್ಲಿ ಸೇರ್ಪಡೆಯಾಗಿರುವ ಅಂಶಗಳನ್ನು ಲೇಖಕರು ಗಮನಿಸಿದ್ದಾರೆ.

ಭೀಮ ದುಃಖಿಗಳಾದ ದೃತರಾಷ್ಟ್ರ, ಗಾಂಧಾರಿಯರ ಮುಂದೆ ಹಾರಾಡುವುದೂ ತೊಡೆಮುರಿದು

ಬಿದ್ದ ದುರ್ಯೋಧನನ ಶಿರವನ್ನು ಎಡಗಾಲಿನಿಂದ ಒದೆಯುವುದು ಅವನ ಗಾಂಭೀರ್ಯಕ್ಕೆ ಮೀರಿದ ಔದ್ಧತ್ಯಗಳಾಗಿದ್ದು ಕವಿ ಈ ಅಂಶಗಳನ್ನು ಬಿಟ್ಟಿದ್ದರೂ ಕಾವ್ಯಕ್ಕೆ ಯಾವ ಕುಂದೂ ಉಂಟಾಗುತ್ತಿರಲಿಲ್ಲವೆಂಬುದನ್ನು ಗದಾಯುದ್ಧದ ಪಾತ್ರ ಚಿತ್ರಣ ಭಾಗದಲ್ಲಿ ಸರಿಯಾಗಿ ಗುರುತಿಸಿದ್ದಾರೆ.

ನಂತರ ೭ ರಿಂದ ೧೧ ಅಧ್ಯಾಯಗಳಲ್ಲಿ ಅಜಿತಪುರಾಣದ 'ವಸ್ತುವಿನ್ಯಾಸ' 'ಆಕರ ಪ್ರಭಾವ' 'ವರ್ಣನೆಗಳು ಮತ್ತು ರಸ ಪ್ರತಿಪಾದನೆ' 'ಪಾತ್ರಚಿತ್ರಣ' ಜೈನಧರ್ಮದಲ್ಲಿ ವೈಜ್ಞಾನಿಕ ದೃಷ್ಟಿ ಎಂಬ ವಿಷಯ ಪ್ರತಿಪಾದನೆಯಿದೆ. ರನ್ನ ತನ್ನ ಅಜಿತಪುರಾಣ ಕೃತಿಗೆ ಆರಿಸಿಕೊಂಡಿರುವ ವಸ್ತು ಗುಣಭದ್ರಾಚಾರ್ಯರ ಉತ್ತರ ಪುರಾಣದ ೧೪೩ ಶ್ಲೋಕಗಳಲ್ಲಿ ಅಡಕವಾಗಿದ್ದು ಸಗರನ ಕಥೆ, ವಾಲ್ಮೀಕಿ ರಾಮಾಯಣ, ಭಾರತ, ಭಾಗವತ, ವಿಷ್ಣು ಪುರಾಣಗಳಲ್ಲಿ ಕಾಣಸಿಗುವದನ್ನು ರಾಮಕೃಷ್ಣ ಅವರು ಉಲ್ಲೇಖಿಸಿದ್ದಾರೆ. ರನ್ನ ಆರಿಸಿಕೊಂಡ ವಸ್ತುವನ್ನು ಕಾವ್ಯಕ್ಕೆ ಅಳವಡಿಸುವಲ್ಲಿ ಸ್ವತಂತ್ರವಲ್ಲವಾದರೂ ಅಜಿತ ಪುರಾಣದ ಕಥಾವಿನ್ಯಾಸ, ಅತ್ತಿಮಬ್ಬೆಯ ಚಿತ್ರ, ಸಗರನ ವೃತ್ತಾಂತದಿಂದ ವಿಶಿಷ್ಟವಾಗಿರುವದನ್ನು ಸ್ಪಷ್ಟಪಡಿಸಿದ್ದಾರೆ. ಪಂಪ, ಪೊನ್ನರು ಸಹ ಕೆಲವು ಅಂಶಗಳನ್ನು ತಮ್ಮ ಪುರಾಣ ಕಾವ್ಯಗಳಲ್ಲಿ ಹೇಳದೆ ಬಿಟ್ಟಿದ್ದನ್ನು ತಾನು ಹೇಳುತ್ತೇನೆನ್ನುವ ಕವಿ ರನ್ನ ಪುರಾಣ ಮಾರ್ಗವನ್ನು ಹಿಂಬಾಲಿಸಿ ಅತ್ತಿಮಬ್ಬೆ, ಸಗರನ ವೃತ್ತಾಂತವನ್ನುಳಿದು ಉಳಿದೆಡೆಗಳಲ್ಲಿ ಧಾರ್ಮಿಕ ಕಟ್ಟುಪಾಡುಗಳಿಂದ ಅಜಿತ ಪುರಾಣ ನೀರಸವಾಗಿಸಿದ್ದನ್ನು ಸಮರ್ಥವಾಗಿ ಎತ್ತಿತೋರಿಸಿದ್ದಾರೆ. ಅಜಿತ ಪುರಾಣಕ್ಕೆ ಆಕರವಾದ ಗುಣಭದ್ರರ ಉತ್ತರ ಪುರಾಣದ ಪ್ರಥಮ ಕಥೆಯನ್ನು ಆಧರಿಸಿ ಪಂಪ, ಪೊನ್ನರಿಂದ ಪ್ರಭಾವಿತನಾಗಿ, ತನ್ನ ಮನೋಕೋಶದಲ್ಲಿ ತುಂಬಿರುವ ಅಸಂಖ್ಯ ಸಂಗತಿ, ಘಟನೆ, ಸನ್ನಿವೇಶಾಂಶಗಳ ಸ್ಮೃತಿರೂಪಾನುಭವಗಳನ್ನು ನೆಮ್ಮಿ ರನ್ನಕವಿ ಕಮ್ಮೈಸಿದ ಸಂಗತಿ ಮೂಲದಿಂದ ಭಿನ್ನವಾದ ಅಂಶಗಳನ್ನು ಗುರುತಿಸುವ ಮೂಲಕ ಚೆನ್ನಾಗಿ ಮೂಡಿಬಂದಿದೆ.

ಪಂಚಕಲ್ಯಾಣಗಳ ವರ್ಣನೆ, ಮತಪ್ರಕ್ರಿಯೆಗಳ ವರ್ಣನೆ, ಮಾನವ ಮತ್ತು ಪ್ರಕೃತಿ ಸೌಂದರ್ಯದ ವರ್ಣನೆಗಳಡಿಯಲ್ಲಿ ಅಜಿತ ಪುರಾಣದ ಕಾವ್ಯ ಸೌಂದರ್ಯವನ್ನು ಗುರುತಿಸುತ್ತಾ, 'ರಸಂತರಂಗಳಂ ಮುಟ್ಟಿ ನುಡಿದು ರಂಜಿಸವೇಡಾ' ಎಂದು ನವರಸಗಳನ್ನು ಪ್ರತಿಪಾದಿಸುವ ಕವಿರನ್ನನ ಹೇಳಿಕೆಗೆ ಅಜಿತಪುರಾಣದಲ್ಲಿ ಅಷ್ಟು ಅವಕಾಶ ದೊರಕಿಲ್ಲದಿರುವುದನ್ನು ಲೇಖಕರು ವರ್ಣನೆಗಳು ಮತ್ತು ರಸಪ್ರತಿಪಾದನೆ ಭಾಗದಲ್ಲಿ ಪ್ರತಿಪಾದಿಸಿದ್ದಾರೆ. ಅಜಿತ ಪುರಾಣದಲ್ಲಿ ಅತ್ತಿಮಬ್ಬೆ ಮತ್ತು ಸಗರ ಇವರಿಬ್ಬರನ್ನೂ ಬಿಟ್ಟರೆ ಉಳಿದ ಪಾತ್ರಗಳು ಪಾತ್ರಗಳೇ ಅಲ್ಲ, ಬೊಂಬೆಗಳು ಎನ್ನಬಹುದು ಎಂದು ಲೇಖಕರು ಅತ್ತಿಮಬ್ಬೆ ಅಜಿತಪುರಾಣದ ಒಂದು ಪಾತ್ರವೇ (ಪುಟ ೨೧೫) ಎಂಬ ಪ್ರಶ್ನೆಗೆ ಅಲ್ಲ ಎಂಬ ಉತ್ತರದ ಜೊತೆಗೆ ಪಾತ್ರಕ್ಕಿಂತಲೂ ಹೆಚ್ಚು ಎಂಬ ಉತ್ತರ ಲಭಿಸುತ್ತದೆ ಎನ್ನುವಲ್ಲಿ ಖಚಿತತೆ ಕಾಣುವುದಿಲ್ಲ. 'ಜೈನಧರ್ಮದಲ್ಲಿ ವೈಜ್ಞಾನಿಕ ದೃಷ್ಟಿ' ಎಂಬ ಅಧ್ಯಾಯದಲ್ಲಿ ವೈಜ್ಞಾನಿಕ ದೃಷ್ಟಿ ಎಂದರೆ ಶುದ್ಧ ವಿಜ್ಞಾನಗಳನ್ನು ಅನ್ವಯಿಸಿ ನೋಡುವುದೆಂದು ಭಾವಿಸಬೇಕಾಗಿಲ್ಲ. ವೈಚಾರಿಕ ದೃಷ್ಟಿ, ವಿಜ್ಞಾನ ದೃಷ್ಟಿಗಳೆರಡೂ ಸೇರಿರುವ ವಿಶಿಷ್ಟ ದೃಷ್ಟಿಕೋನವೆಂದು ಭಾವಿಸಿಕೊಳ್ಳಬೇಕು ಎನ್ನುವ ಲೇಖಕರು ಜೈನ ಧರ್ಮ ಜೀವ-ಅಜೀವ (organic - inorganic) ಪುದ್ಗಲ (matter)ಆಕಾಶ (space), ಧರ್ಮ, ಅಧರ್ಮಗಳನ್ನು (principles of motion) ಆಧುನಿಕ ಶುದ್ಧ ವಿಜ್ಞಾನ ಸಿದ್ಧಾಂತಗಳಿಗೆ ಹೋಲಿಸುವುದು ಹಾಸ್ಯಾಸ್ಪದವೆನಿಸುತ್ತದೆ. ಮೇಲುನೋಟಕ್ಕೆ ಇಲ್ಲಿ ಹೋಲಿಕೆ ಸಾಧ್ಯವಾದರೂ ಅವುಗಳ ಹಿಂದಿರುವ ದೃಷ್ಟಿಕೋನ ಮಾತ್ರ ಭಿನ್ನವೆಂಬುದನ್ನು ಯಾರೂ ಹೇಳಬೇಕಿಲ್ಲ. ಆದರೆ ಜೈನ ಧರ್ಮದ

ಈ ತರ್ಕಬದ್ಧತೆಯನ್ನು ಅಗತ್ಯ ಗಮನಿಸಬೇಕು. ಅದನ್ನು ಲೇಖಕರು ಚೆನ್ನಾಗಿ ಮಾಡಿದ್ದಾರೆ.

ಅನೇಕ ಕನ್ನಡ ಕವಿಗಳು ತಮ್ಮ ಕಾವ್ಯಗಳ ಪ್ರವೇಶ ಭಾಗದಲ್ಲಿ ಕಾವ್ಯ ಲಕ್ಷಣವನ್ನು ಸೂಚಿಸಿದಂತೆ ರನ್ನಕವಿಯೂ ವಿಶೇಷ ಗಮನಕೊಟ್ಟಿದ್ದಾನೆ. ಶಾಸ್ತ್ರಗ್ರಂಥಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ ಕವಿ ಅರ್ಥಕ್ಕೆ ಕುದಿದ ಕಾವ್ಯಶಕ್ತಿ, ಪ್ರತಿಭೆ, ಕಾವ್ಯಲಕ್ಷಣ, ಗುಣ, ವಾಚ್ಯಾರ್ಥ, ೩೬ ಅಲಂಕಾರ ೯ರಸ ಗುಣದೋಷಗಳನ್ನು ಕುರಿತು ಕಾವ್ಯ ಪ್ರಾರಂಭದಲ್ಲಿ ವಿವೇಚಿಸಿದ ವಿವೇಚನೆ ೧೨ನೆಯ ಅಧ್ಯಾಯವಾದ 'ರನ್ನನ ಕಾವ್ಯಮೀಮಾಂಸೆ'ಯಲ್ಲಿದೆ. ಹದಿಮೂರನೆಯ ಅಧ್ಯಾಯವಾದ 'ರನ್ನನ ಶೈಲಿ' ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಾನದಂಡಗಳಲ್ಲಿ ಶೈಲಿಯ ವ್ಯಾಖ್ಯಾನದೊಂದಿಗೆ ಪ್ರಾರಂಭಿಸಿ ಅವನ ಶೈಲಿಯ ಲಕ್ಷಣ 'ಶಕ್ತಿ' ಎಂಬ ನಿಲುಗಡೆಗೆ ಲೇಖಕರು ಬಂದು ತಲುಪಿರುವರಲ್ಲಿ ರಾಮಕೃಷ್ಣರೇ ಮೊದಲಿಗರಲ್ಲ. ನೇರ ಮತ್ತು ಸರಳವಾಗಿ 'ನವರಸಮಂ ತೇಜಿಯೆ ನುಡಿವುದು ಅವನ ವಿಶಿಷ್ಟತೆ. ಕವಿ ತನ್ನ ಕಾವ್ಯವನ್ನು ಎರಡನೂಱಱ ಕನ್ನಡದಲ್ಲಿ ಬರೆದಿದ್ದೇನೆಂದು ಹೇಳಿದ್ದಾನೆ. ಇಂದು ಈ ಎರಡಱುನೂಱಱ ಪ್ರದೇಶ ವಾದಗ್ರಸ್ತವಲ್ಲ. (ಬೆಳ್ವೊಲ -300 +ಪುಲಿಗೆರೆ- 300 =ಇಂದಿನ ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಕುಂದಗೋಳ, ಶಿಗ್ಗಾವಿ, ನವಲಗುಂದ, ನರಗುಂದ, ಗದಗ, ರೋಣ, ಸವಣೂರು, ಲಕ್ಷ್ಮೇಶ್ವರ, ಬೆಳಗಾಂವ ಜಿಲ್ಲೆಯ ಸವದತ್ತಿ, ರಾಯಚೂರ ಜಿಲ್ಲೆಯ ಯಲಬುರ್ಗಿ, ವಿಜಾಪೂರ ಜಿಲ್ಲೆಯ ಹುನಗುಂದ ಈ ತಾಲ್ಲೂಕಗಳ ೬೦೦ ಹಳ್ಳಿಗಳು). ಆದರೂ ಲೇಖಕರು ಮಳಖೇಡ, ಯಾದಗಿರಿ, ಕಂಪ್ಲಿಗಳು ಸೇರಿದಂತೆ ಈ ಎರಡಱುನೂಱು ಪ್ರದೇಶ ನಿರ್ದೇಶಿತವಾಗಿರಬೇಕೆನ್ನುವುದು ಸಮಂಜಸವಾದುದಲ್ಲ.

ರನ್ನನ ಕುರಿತು ಈವರೆಗೆ ನಡೆದ ಕೆಲಸವನ್ನೆಲ್ಲ ಸಾದ್ಯಂತವಾಗಿ ಗಮನಿಸಿ, ಆ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಮರುಮೌಲ್ಯಮಾಪನಕ್ಕೆ ತೊಡಗುವ ಇಲ್ಲಿನ ಕ್ರಿಯೆ ನಿಜಕ್ಕೂ ಸ್ವಾಗತಾರ್ಹವಾದುದಾಗಿದೆ.

ಒಬ್ಬ ಕವಿಯ ಶಕ್ತಿಯನ್ನು ಅನುಭವ ಮತ್ತು ಅಭಿವ್ಯಕ್ತಿ ರೀತ್ಯಾ ವಿಭಾಗಿಸಬಹುದೆನ್ನುವ ಲೇಖಕರು ಕವಿರನ್ನನ ಹೋರಾಟ ಜೀವನದಿಂದ ಬಂದ ವೈಯುಕ್ತಿಕ ಬದುಕಿನ ಛಲ ಮತ್ತು ಅಭಿಮಾನಗಳು ಅವನ ಕಾವ್ಯದ ಮೂಲಕ ಹೇಗೆ ಪ್ರಕಟಗೊಂಡಿವೆಯೆಂಬುದನ್ನು ಹಾಗೆ ತಾತ್ಸಾರ, ಶೋಕ, ಮತ್ತಾವುದೇ ಭಾವನೆಯನ್ನಾಗಲಿ ವ್ಯಕ್ತಪಡಿಸುವಾಗ ಅತ್ಯಂತ ತೀವ್ರವಾಗಿ ಶಕ್ತಿಯುತವಾಗಿ ನಿರ್ವಹಿಸುವುದನ್ನು ಅವನ ಕಾವ್ಯದ ಮೂಲಕ 'ಕವಿ'ಅಧ್ಯಾಯದಲ್ಲಿ ತೋರಿಸಿಕೊಟ್ಟಿದ್ದಾರೆ. ಕೊನೆಯ ಅಧ್ಯಾಯವಾದ ಸ್ಥಾನನಿರ್ದೇಶನ ಕವಿ-ಕಾವ್ಯ-ಸಹೃದಯರ ಕುರಿತಾದ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಾನದಂಡಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ರನ್ನನ ಸ್ಥಾನನಿರ್ದೇಶನವನ್ನು ಲೇಖಕರು ಸಮರ್ಥವಾಗಿ ಒದಗಿಸಿದ್ದಾರೆ. ಶಕ್ತಿಸಮನ್ವಿತ ನಾಟಕೀಯ ಶೈಲಿಯ ಕವಿ ರನ್ನನ ಭಾವಾಭಿವ್ಯಕ್ತಿ ನಿಜಕ್ಕೂ ವಿಶಿಷ್ಟವಾದುದು. ಆಧುನಿಕ ವಿಮರ್ಶೆಯ ಮಾನದಂಡಗಳನ್ನು ಚೆನ್ನಾಗಿ ಬಲ್ಲ ಎಂ. ರಾಮಕೃಷ್ಣ ಅವರು 'ರನ್ನ ಮತ್ತು ಅವನ ಕೃತಿಯ 'ಕುರಿತಾದ ಎಲ್ಲ ಆಯಾಮಗಳನ್ನು ಸಾದ್ಯಂತವಾಗಿ ಚರ್ಚಿಸಿ ವಿಮರ್ಶಿಸಿದ್ದಾರೆ. ಸಂಶೋಧನೆಗೆ ಅಗತ್ಯವಾದ ನೇರ, ಸರಳ ಭಾಷೆ ಈ ಪ್ರಬಂಧದ ವೈಶಿಷ್ಟ್ಯದಲ್ಲೊಂದು.

ಒಟ್ಟಾರೆ ೧೯೮೪ ನೆಯ ವರ್ಷದ ಸಂಶೋಧನ ಕ್ಷೇತ್ರದ ಒಂದೆರಡು ವೈಶಿಷ್ಟ್ಯಗಳನ್ನು ಇಲ್ಲಿ

ಪಟ್ಟಿಮಾಡಬಹುದು :

೧. ಇಲ್ಲವೆನ್ನುವಷ್ಟು ಸ್ವತಂತ್ರ ಗ್ರಂಥಗಳು ಹುಟ್ಟಿದ್ದು, ಬಿಡಿ ಲೇಖನಗಳ ಸಂಕಲನಗಳೇ ಅಧಿಕ ಸಂಖ್ಯೆಯಲ್ಲಿ ಬೆಳಕು ಕಂಡಿವೆ.

೨. ಒಂದೇ ಒಂದು ಪಿಎಚ್‌ಡಿ. ಮಹಾಪ್ರಬಂಧ ಪ್ರಕಟಗೊಂಡಿದೆ.

೩. ಸ್ತ್ರೀಯರ ಕೊಡುಗೆ ಇಲ್ಲವೇ ಇಲ್ಲ.

ಗಂಗವ್ವ ಮತ್ತು ಗಂಗಾಮಾಯಿ : ಒಂದು ಸಮೀಕ್ಷೆ

* ಜಿ.ಎಮ್.ಹೆಗಡೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಸ್ವೋಪಜ್ಞ ಬರಹಗಾರರಾದ ಶಂಕರ ಮೊಕಾಶಿ ಪುಣೇಕರ ಅವರು ಕಾವ್ಯ, ಕಾದಂಬರಿ, ವಿಮರ್ಶೆ, ಸಣ್ಣಕಥೆ, ಮೊದಲಾದ ಪ್ರಕಾರಗಳಲ್ಲಿ ಮಹತ್ವದ ಸಾಧನೆ ಮಾಡಿದ್ದಾರೆ. ಇಂಗ್ಲೀಷ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಸೃಜನಶೀಲತೆ ಪ್ರಕಟವಾಗಿರುವದು ಮೊಕಾಶಿಯವರ ಸಾಹಿತ್ಯಿಕ ವ್ಯಕ್ತಿತ್ವದ ವೈಶಿಷ್ಟ್ಯವಾಗಿದೆ. ಮೊಕಾಶಿ ಅವರು ಆಧುನಿಕ ಭಾರತೀಯ ಇಂಗ್ಲೀಷ ಸಾಹಿತ್ಯದಲ್ಲಿಯೂ ಗಣ್ಯ ಲೇಖಕ, ಕವಿ ವಿಮರ್ಶಕರಾಗಿದ್ದಾರೆ. ಕನ್ನಡ, ಇಂಗ್ಲೀಷ, ಸಂಸ್ಕೃತ ಸಾಹಿತ್ಯದ ಆಳವಾದ ವ್ಯಾಸಂಗದಿಂದ ಮೊಕಾಶಿ ವ್ಯಕ್ತಿತ್ವ ಪರಿಪೂರ್ಣವಾಗಿದೆ. ಸಮಕಾಲೀನ ಭಾರತೀಯ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವಿತವಾಗದೆ ತನ್ನ ಪರಂಪರೆಯ ನೆಲೆಯಲ್ಲೇ ಬೆಳವಣಿಗೆ ಹೊಂದಬೇಕೆಂಬ ದೃಢವಾದ ಆಶಯವನ್ನು ಮೊಕಾಶಿಯವರು ವ್ಯಕ್ತಪಡಿಸುತ್ತ ಬಂದಿದ್ದಾರೆ. ಬಹುಶಃ ಈ ಆಳವಾದ ತಿಳುವಳಿಕೆ ಮೊಕಾಶಿಯವರ ಸಾಹಿತ್ಯದ ಜೀವಂತ ಸತ್ವ ಎಂದರೆ ತಪ್ಪಾಗಲಿಕ್ಕಿಲ್ಲ. ಇದಕ್ಕೆ ಹಿನ್ನೆಲೆಯಾಗಿ ಮೊಕಾಶಿ ಅವರ ಮೊದಲ ಕಾದಂಬರಿಯಾದ 'ಗಂಗವ್ವ ಮತ್ತು ಗಂಗಾಮಾಯಿ' ಒಂದು ವೈಶಿಷ್ಟ್ಯಪೂರ್ಣ ಕೃತಿಯಾಗಿದೆ.

'ಗಂಗವ್ವ ಮತ್ತು ಗಂಗಾಮಾಯಿ' ಬಹು ಹಿಂದೆಯೇ ೧೯೫೭ ರಲ್ಲಿ ಪ್ರಕಟವಾಗಿದ್ದು ಅದು ಕನ್ನಡ ಕಾದಂಬರಿ ಪ್ರಪಂಚದಲ್ಲಿ ವಿನೂತನ ಪ್ರಯೋಗವಾಗಿ ಮೂಡಿಬಂದದ್ದನ್ನು ವಿಮರ್ಶಕರು ಗುರುತಿಸಿದ್ದಾರೆ. ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ 'ಗಂಗವ್ವ ಮತ್ತು ಗಂಗಾಮಾಯಿ' ಒಂದೆಂದು ಪ್ರಸಿದ್ಧ ವಿಮರ್ಶಕ ಡಾ.ಜಿ.ಎಸ್.ಆಮೂರ ಅವರು ವಿಶ್ಲೇಷಿಸಿದ್ದಾರೆ. ಅವರು ಹೇಳುವಂತೆ ಲೇಖಕನ ಸೃಜನಶೀಲತೆ ಮತ್ತು ಸ್ವೋಪಜ್ಞೆಯಗುಣ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿ ಮಹತ್ವ, ಕಾದಂಬರಿಯಲ್ಲಿ ಅವ್ಯಕ್ತವಾದ ಮೌಲ್ಯ ಪ್ರಜ್ಞೆ ಮತ್ತು ನೈತಿಕತೆ, ಪಾತ್ರಗಳ ಜೀವಂತತನ, ಪರಿಸರದ ಸೃಷ್ಟಿ, ಅನುಭವಕ್ಕೆ ಮೂರ್ತರೂಪಕೊಡುವ ಭಾಷೆ, ಪರಂಪರೆಯ ಅರಿವು ಮತ್ತು ಮಾರ್ಗಪ್ರವರ್ತಕ ಶಕ್ತಿ ಈ ಮೊದಲಾದ ಗುಣಗಳಿಂದ 'ಗಂಗವ್ವ ಮತ್ತು ಗಂಗಾಮಾಯಿ' ಕನ್ನಡದ ವಿಶಿಷ್ಟ ಕಲಾಕೃತಿಯೆಂಬುದು ಸತ್ಯನಿಷ್ಠ ವಿಚಾರವಾಗಿದೆ.

ಕಾದಂಬರಿಯ ಕಥನಕ್ರಿಯೆ:

'ಗಂಗವ್ವ ಮತ್ತು ಗಂಗಾಮಾಯಿ' ಕಾದಂಬರಿಯ ಕಥನಕ್ರಿಯೆ ಎರಡು ಭಾಗಗಳಲ್ಲಿ ಮೂವತ್ತೇಳು ಅಧ್ಯಾಯಗಳಲ್ಲಿ ೩೦೦ ಪುಟಗಳಷ್ಟು ವಿಸ್ತಾರವಾಗಿ ಬೆಳೆದಿದೆ. ಗಂಗವ್ವ ಎಂಬ ವಿಧವೆ ಕಾಶಿಯಾತ್ರೆ ಮಾಡಿ ಬರುವಾಗ ದಾರಿಯಲ್ಲಿ ಗಂಗಾಜಲವನ್ನು ಚೆಲ್ಲಿ ಬರುವ ಘಟನೆಯಿಂದ ಕಾದಂಬರಿ ಮೊದಲಾಗುತ್ತದೆ. ಗಂಗವ್ವ ತನ್ನ ಏಕೈಕ ಮಗ ಕಿಟ್ಟಿಯನ್ನು ಬಹಳ ಕಷ್ಟಪಟ್ಟು ಸಾಕಿ ಬೆಳಸಿದ್ದಾಳೆ. ಅವನು ಸಮಾಜದಲ್ಲಿ ಮನುಷ್ಯನಾಗಿ ಬಾಳಬೇಕೆಂಬ ಕನಸು ಕಂಡವಳು ಗಂಗವ್ವ. ಕಿಟ್ಟಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ ಬದುಕಿದ ಗಂಗವ್ವ ಭವಿಷ್ಯದ ಬದುಕಿನಲ್ಲಿ ಕನಸುಗಳನ್ನು ಹೆಣೆದವಳು. ಆದ್ದರಿಂದಲೇ ಸಾವಿನ ಸಂಕೇತವಾದ ಗಂಗಾಜಲವನ್ನು ಅವಳು ಚೆಲ್ಲಿದ್ದಾಳೆ. ಕಿಟ್ಟಿ ಬಾಲ್ಯದಲ್ಲೇ ತಂದೆಯನ್ನು

ಕಳೆದುಕೊಂಡಿದ್ದರೂ ಹೇಗೋ ಮೆಟ್ರಿಕ್ ಪರೀಕ್ಷೆ ಪಾಸುಮಾಡಿ ಮಾಮಲೆದಾರ ಕಚೇರಿಯಲ್ಲಿ ಗುಮಾಸ್ತನಾಗುತ್ತಾನೆ. ಕಿಟ್ಟಿಗೆ ತನ್ನ ತಾಯಿ ಗಂಗವ್ವ ಪಟ್ಟ ಪಾಡು ತಿಳಿಯದು. ಗಂಗವ್ವನ ತಮ್ಮ ರಾಘಪ್ಪ ಕುಂದಗೋಳದಿಂದ ಧಾರವಾಡಕ್ಕೆ ಬಂದು ನೆಲಸಿ ತನ್ನ ಹಳೆಯ ಸಂಬಂಧವನ್ನು ಮುಂದುವರಿಸಲು ಆಶಿಸುತ್ತಾನೆ. ಗಂಗವ್ವನಿಗೆ ರಾಘಪ್ಪನೆಂದರೆ ಬದ್ಧ ದ್ವೇಷ. ತನ್ನೆಲ್ಲ ಅಧೋಗತಿಗೆ ರಾಘಪ್ಪನೇ ಕಾರಣನೆಂದು ಅವಳು ಭಾವಿಸಿದ್ದಾಳೆ. ಆದರೆ ರಾಘಪ್ಪ ಮಾಮಲೇದಾರ ಕಿಟ್ಟಿಗೆ ತನ್ನ ಹಿರಿಯಮಗಳು ರತ್ನಾಳನ್ನು ಕೊಟ್ಟು ಮದುವೆ ಮಾಡಬೇಕೆಂದು ಆಶಿಸುತ್ತಾನೆ. ಆದರೆ ಇದಕ್ಕೆ ಗಂಗವ್ವನ ವಿರೋಧ ಪ್ರತಿಭಟನೆ ಆರಂಭವಾಗುತ್ತದೆ. ರಾಘಪ್ಪನ ಸಂಬಂಧವೇ ಬೇಡವೆಂದು ಮಗನಿಗೆ ಉಪದೇಶಿಸುತ್ತಾಳೆ. ರಾಘಪ್ಪನ ಬಣ್ಣದ ಮಾತಿಗೆ ಮರುಳಾಗಬಾರದೆಂದು ಬೋಧಿಸುತ್ತಾಳೆ. ಆದರೆ ಕಿಟ್ಟಿ ತಾಯಿಯ ಮಾತು ಕೇಳುವದಿಲ್ಲ. ಆಫೀಸಿನಲ್ಲಿ ಮಾಮಲೇದಾರರಿಂದ ಆಗುವ ಕಿರಿಕಿರಿಯಿಂದ ತನ್ನೊಳಗಿನ ದೌರ್ಬಲ್ಯವನ್ನು ಕಳೆದುಕೊಳ್ಳಲು ಮಾಮಲೇದಾರರ ಪರಿಚಯವಿರುವ ರಾಘಪ್ಪನ ಸ್ನೇಹದ ಮಾತಿಗೆ ಅವನತ್ತ ಒಲವು ಬೆಳೆಯುವುದು ಅನಿವಾರ್ಯವಾಗುತ್ತದೆ. ರಾಘಪ್ಪ ತನ್ನ ಮನೆಯಲ್ಲಿ ಮೆಹಬೂಬಜಾನಳ ಸಂಗೀತ ಕಚೇರಿ ಏರ್ಪಡಿಸಿ ಮಾಮಲೇದಾರರನ್ನುಆಹ್ವಾನಿಸುತ್ತಾನೆ. ಅಲ್ಲಿಗೆ ಮಾಮಲೆದಾರರ ಕೃಪೆಗೆ ಪಾತ್ರನಾಗುವ ಆಸೆಯಿಂದ ಹೋದ ಕಿಟ್ಟಿಗೆ ರಾಘಪ್ಪ ಅವನ ಉದ್ದೇಶವನ್ನು ನೆರವೇರಿಸುತ್ತಾನೆ. ಆಗಲೇ ಅವನು ರಾಘಪ್ಪನ ಮಗಳು ರತ್ನಾಳ ಪ್ರೇಮಪಾಶದಲ್ಲಿ ಬೀಳುವಂತಾಗುತ್ತದೆ. ರಾಘಪ್ಪನ ವೃತ್ತಾಂತವನ್ನು ಗಂಗವ್ವ ದೇಸಾಯಿಯವರಲ್ಲಿ ಬಂದು ಬಿತ್ತರಿಸಿ ಅವನು ಕಿಟ್ಟಿಯನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಹುನ್ನಾರದಲ್ಲಿರುವದನ್ನು ಅರಿಕೆ ಮಾಡುತ್ತಾಳೆ. ಗಂಗವ್ವನ ಕಷ್ಟವನ್ನು ಕಣ್ಣಾರೆ ಕಂಡ ದೇಸಾಯರು ಅವರ ಪತ್ನಿ ವೇಣೂಬಾಯಿ ಈ ಸಂಬಂಧ ತಪ್ಪಿಸಲು ಕಿಟ್ಟಿಗೆ ಶೀನಪ್ಪನ ಮಗಳನ್ನು ಮದುವೆ ಮಾಡಿಸಲು ಆಲೋಚಿಸಿ ಅವರ ಮಗಳನ್ನು ತೋರಿಸುತ್ತಾರೆ. ಆದರೆ ಇದು ಕಿಟ್ಟಿಗೆ ಮನಸ್ಸಿಲ್ಲ. ದೇಸಾಯರಿಗೆ ಪತ್ರ ಬರೆದು ತನಗೆ ಮದುವೆಯೇ ಬೇಡವೆಂದು ಕಿಟ್ಟಿ ತಿಳಿಸುತ್ತಾನೆ.

ರಾಘಪ್ಪನ ಮಗಳು ರತ್ನಾ ಚೆಲುವೆಯೆಂದೂ ತಾಯಿ ಚಂಪಕ್ಕನ ರೂಪವೆ ಮೈವೆತ್ತು ನಿಂತಂಥ ಹೆಣ್ಣನ್ನು ತಾನು ಮದುವೆಯಾಗುವದಕ್ಕೆ ತಾಯಿ ಗಂಗವ್ವನ ವಿರೋಧ ಕಿಟ್ಟಿಗೆ ಸರಿ ಕಾಣಿಸುವದಿಲ್ಲ. ರಾಘಪ್ಪ ಒಮ್ಮೆ ಸಿಕ್ಕಾಗ ತನ್ನ ದೃಢ ನಿರ್ಧಾರವನ್ನು ತಿಳಿಸುತ್ತಾನೆ. ರಾಘಪ್ಪ ಇದಕ್ಕಾಗಿ ಕಾಯುತ್ತಿದ್ದು ಈಗ ಹೊಸ ಉಪಾಯ ಹೂಡುತ್ತಾನೆ. ಗಂಗವ್ವನ ಹಿತಚಿಂತಕರಾದ ದೇಸಾಯರಲ್ಲಿಗೆ ಬಂದು ಗಂಗವ್ವ ತನ್ನ ಮೇಲೆ ವೃಥಾ ವಿರೋಧ ಮಾಡುತ್ತಿರುವದಾಗಿಯೂ ತನ್ನ ಮಗಳು ರತ್ನಾಳನ್ನು ಕಿಟ್ಟಿ ಮದುವೆಯಾಗುವದಾಗಿ ಹಟ ಹಿಡಿದಿರುವದಾಗಿಯೂ, ಓಣಿಯಲ್ಲೆಲ್ಲಾ ಕಿಟ್ಟಿಯೇ ರತ್ನಾಳ ವರನೆಂದು ಪ್ರಚಾರವಾಗಿದೆಯೆಂದೂ ಇದರಿಂದ ತನ್ನನ್ನು ಪಾರುಮಾಡಬೇಕೆಂದೂ ಬೇಡಿಕೊಳ್ಳುತ್ತಾನೆ. ಕಿಟ್ಟಿಯನ್ನು ತನ್ನ ದತ್ತುಮಗನನ್ನಾಗಿ ಸ್ವೀಕರಿಸಿ ಗಂಡುಮಕ್ಕಳಿಲ್ಲದ ತನ್ನ ಬಾಳನ್ನು ಸಾರ್ಥಕವಾಗಿಸಿಕೊಳ್ಳುವ ಆಸೆಯನ್ನು ವ್ಯಕ್ತಪಡಿಸುತ್ತಾನೆ. ದೇಸಾಯಿಯವರಿಗೆ ಈ ವಿಷಯ ಧರ್ಮಸಂಕಟವಾಗುತ್ತದೆ. ದೇಸಾಯಿಯರ ಸಂಧಾನದಿಂದ ಗಂಗವ್ವ ತನ್ನ ತವರು ಮನೆಯ ಆಸ್ತಿ ತನ್ನ ಮಗನಿಗೇ ಬರುತ್ತದೆಂಬ ಆಸೆಯಿಂದ ಮನಸ್ಸಿಲ್ಲದ ಮನಸ್ಸಿನಿಂದ ರಾಘಪ್ಪನ ಮಗಳು ರತ್ನಾಳನ್ನು ಸೊಸೆಯಾಗಿಸಿಕೊಳ್ಳಲು ಒಪ್ಪುತ್ತಾಳೆ.

ತನ್ನ ಮದುವೆ ಇಷ್ಟು ಸುಲಭವಾಗಿ ಕೈಗೂಡುವದಿಲ್ಲವೆಂದು ಭಾವಿಸಿದ್ದ ಕಿಟ್ಟಿಗೆ ರತ್ನಾಳನ್ನು ವಿವಾಹವಾಗಬೇಕೆಂಬ ತನ್ನ ಆಶಯಕ್ಕೆ ಗೆಲವು ದೊರಕಿರುವದಕ್ಕೆ ಸಂತಸವಾಗುತ್ತದೆ. ಕಿಟ್ಟಿಯ ಮದುವೆ

ಸುಸೂತ್ರವಾಗಿಯೇ ನಡೆಯಿತೆಂದು ಹೇಳುವಂತಿಲ್ಲ. ರಾಘುಪ್ಪ ಒಂದು ಸಾವಿರ ರೂಪಾಯಿ ಮದುವೆಯ ಪೂರ್ವದಲ್ಲಿ ಕಿಟ್ಟಿಗೆ ವರದಕ್ಷಿಣೆಯಾಗಿ ಕೊಡಬೇಕೆಂಬುದು ನಿರ್ಣಯವಾದರೂ ಅವನು ಗಂಗವ್ವನಿಗೆ ಮೋಸಮಾಡಲು ಬಯಸುತ್ತಾನೆ. ಹೇಗಿದ್ದರೂ ದೇಸಾಯರ ಹತ್ತಿರ ಗಂಗವ್ವ ಇಟ್ಟ ಸಾವಿರ ರೂಪಾಯಿ ಹಣವಿದೆ. ಅವನ್ನು ಕಡವಾಗಿ ತೆಗೆದುಕೊಂಡು ಕೊನೆಗೆ ಅದನ್ನು ಮುಳುಗಿಸಬೇಕೆಂದು ರಾಘುಪ್ಪನ ದುರಾಲೋಚನೆ. ಆದರೆ ಮದುವೆ ಮನೆಯಲ್ಲಿ ಬರಬೇಕಾದ ಹಣ ಬರದ ಹೊರತು ಮದುವೆ ನಡೆಯುವದಿಲ್ಲವೆಂದು ಗಂಗವ್ವ ಹಟಹಿಡಿದು ಕುಳಿತಾಗ ಮದುವೆಗೆ ಬಂದ ಮೆಹಬೂಬ ಜಾನ್ ಹಣ ತಂದುಕೊಟ್ಟು, ರಾಘುಪ್ಪನ ಮಾನ ಉಳಿಸುತ್ತಾಳೆ. ತನ್ನ ಅನಾರೋಗ್ಯದಲ್ಲೂ ಮೆಹಬೂಬಜಾನ್ ನಾಟಕಕಂಪನಿಗೆ ಹೋಗಿ ಕಾರ್ಯಕ್ರಮ ನೀಡಲು ಹೊರಡುತ್ತಾಳೆ.

ರಾಘುಪ್ಪನಿಗೂ ಮೆಹಬೂಬಜಾನಳಿಗೂ ಇರುವ ಸ್ನೇಹದ ಸಂಬಂಧಕ್ಕೆ ಇದು ಋಣವೆಂದು ಅವಳು ಭಾವಿಸುತ್ತಾಳೆ. ವಾಸ್ತವಿಕವಾಗಿ ಮೆಹಬೂಬಜಾನ್‌ಳ ಜೊತೆ ರಾಘುಪ್ಪನ ಸಂಬಂಧವು ಅವನ ಹೆಂಡತಿ ಚಂಪಕ್ಕನಿಗೆ ತಿಳಿದದ್ದೇ ಆಗಿದೆ. ತನ್ನ ಹೆಂಡತಿಯನ್ನು ರಾಘುಪ್ಪ ಹೆದರಿಸಿದ್ದರಿಂದ ಉಪಾಯ ಕಾಣದೆ ಚಂಪಕ್ಕ ಮೆಹಬೂಬಜಾನ್‌ಳನ್ನು ತನ್ನ ಅಕ್ಕ ಎಂದೇ ಭಾವಿಸಿದ್ದಳು. ಅವರಿಬ್ಬರಲ್ಲೂ ಅಕ್ಕರೆಯ ಸಂಬಂಧವಿತ್ತು. ಕಿಟ್ಟಿಯ ಗ್ರಹಸ್ಥಾಶ್ರಮದಿಂದ ರಾಘುಪ್ಪ ಗಂಗವ್ವರ ರೋಷ ತಗ್ಗುವದಿಲ್ಲ. ಇಬ್ಬರೂ ಹೊಸ ಸಂಬಂಧದಿಂದ ಪುಳಕಿತರಾಗಿ ಓಡಾಡದೆ ಅವರವರ ಮನೆಗಳಲ್ಲಿ ಹಳೆಯ ವೈರವನ್ನು ಮುಂದುವರಿಸುತ್ತ ಸಾಗುತ್ತಾರೆ.

ಕಿಟ್ಟಿಯ ಮದುವೆಯಿಂದಾಗಿ ಕ್ಷಣಿಕ ಗೆಲವು ಪಡೆದ ರಾಘುಪ್ಪ ಗಂಗವ್ವನ ಹಿತಚಿಂತಕರಾದ ದೇಸಾಯರನ್ನೂ ಗೆಲ್ಲುವ ಹೊಂಚುಹಾಕುತ್ತಾನೆ. ದೇಸಾಯರು ಮಗ ವಸಂತನ ವರ್ತನೆಯಿಂದ ಬೇಸತ್ತು ಅವನ ಶಿಕ್ಷಣವನ್ನು ನಿಲ್ಲಿಸಿ ತಮ್ಮ ಹಳ್ಳಿ ದೇಸೂರಿಗೆ ಹೊಲಮನೆ ನೋಡಿಕೊಳ್ಳಲು ಅಟ್ಟುತ್ತಾರೆ. ವಸಂತ ರಾಘುಪ್ಪರ ಮಧ್ಯೆ ಪರಿಚಯ ಬೆಳೆದು ಸ್ನೇಹವಾಗಿ ದೇಸಾಯರಿಗೆ ಗೊತ್ತಿಲ್ಲದಂತೆ ರಾಘುಪ್ಪನ ಮನೆಗೆ ಬರಲು ವಸಂತನು ಆರಂಭಿಸುತ್ತಾನೆ. ಈ ಬೆಳವಣಿಗೆಯಿಂದಾಗಿ ರಾಘುಪ್ಪನು ದೇಸಾಯರ ಮನೆತನದ ಭದ್ರಕೋಟೆಗೆ ಲಗ್ಗೆ ಹಾಕಿದಂತಾಗುತ್ತದೆ. ಮೊದಮೊದಲು ವಂಸತರಾಯನಿಗೆ ರಾಘುಪ್ಪ ನಾಟಕ ಕಂಪನಿಯ ಹುಚ್ಚು ಹಿಡಿಸಿ ತಂದೆಯಿಂದ ಸಹಾಯ ಪಡೆದು ನಾಟಕ ಕಂಪನಿ ಹಾಕುವಂತೆ ಪುಸಲಾಯಿಸುತ್ತಾನೆ. ದೇಸಾಯಿಯವರ ಸಮ್ಮತಿ ಸಿಗದೆ ಅದು ಮುರಿದು ಬಿದ್ದಾಗ ರಾಘುಪ್ಪ ಇನ್ನೊಂದು ತಂತ್ರ ಹೂಡುತ್ತಾನೆ. ತನ್ನ ಎರಡನೆಯ ಮಗಳು ಶಾಂತಾಳನ್ನು ವಸಂತರಾಯನಿಗೆ ಕೊಟ್ಟು ಮದುವೆ ಮಾಡುವ ಹೊಂಚು ಹಾಕುತ್ತಾನೆ. ತಾನೇ ಶಾಂತಾ ವಸಂತರ ಪ್ರಣಯ ಬೀಜ ಬಿತ್ತಿ ಅದಕ್ಕೆ ನೀರೆರೆಯುತ್ತಾನೆ. ರಾಘುಪ್ಪ ಹೀಗೆ ಮಾಡುವಲ್ಲಿ ಎರಡು ಉದ್ದೇಶವಿದೆ. ಮೊದಲನೆಯದಾಗಿ ದೇಸಾಯಿಯರ ಮೇಲೆ ವಿಜಯ ಸಾಧಿಸುವದು. ಎರಡನೆಯದಾಗಿ ದೊಡ್ಡ ವತನದಾರರಿಗೆ ತನ್ನ ಎರಡನೆಯ ಮಗಳನ್ನು ಕೊಟ್ಟು ಮದುವೆಮಾಡುವುದು. ಈ ಎರಡು ಉದ್ದೇಶಗಳ ಸಾಧನೆಗಾಗಿ ರಾಘುಪ್ಪ ಹಾಕಿದ ಹೊಂಚು ಕುತೂಹಲಕಾರಿಯಾದ ಬೆಳವಣಿಗೆ ಪಡೆದುಕೊಳ್ಳುತ್ತದೆ. ದೇಸಾಯಿಯವರ ಹತ್ತಿರ ಮಗ ವಸಂತರಾಯ ಆಸ್ತಿ ಪಾಲು ಕೇಳುವಂತೆ ರಾಘುಪ್ಪ ಉಪಾಯ ಸೂಚಿಸುತ್ತಾನೆ.ರಾಘುಪ್ಪನನ್ನು ಗುರುವೆಂದು ನಂಬಿ ಅವನ ಹೇಳಿಕೆ ಕೇಳಿ ಅಪ್ಪಣ್ಣ ಭಟ್ಟನ ಮೂಲಕ ತಂದೆಗೆ ವಸಂತರಾಯ ಪತ್ರ ಬರೆಯುತ್ತಾನೆ. ದೇಸಾಯರು ಮಗನನ್ನು ಮನೆಗೆ ಕರೆಸಿ ವಸಂತರಾಯನಿಗೆ ಛೀಮಾರಿ ಹಾಕುತ್ತಾರೆ. ಇದರಿಂದ ರಾಘುಪ್ಪ ನಿರುತ್ತೇಜಿತನಾಗದೆ ದೇಸಾಯರ ಜೊತೆ ಬಹಿರಂಗ ಯುದ್ಧಕ್ಕೆ ಸನ್ನದ್ಧನಾಗುತ್ತಾನೆ.

ಒಂದು ದಿನ ನೇರವಾಗಿ ದೇಸಾಯರ ಮನೆಗೆ ಬಂದು ತನ್ನ ಹೆಂಡತಿ ಚಂಪಕ್ಕ ಪುನಃ ಗರ್ಭಿಣಿಯಾಗಿದ್ದಾಳೆಂದೂ ಕಿಟ್ಟಿಯನ್ನು ದತ್ತು ತೆಗೆದುಕೊಳ್ಳುವ ವಿಚಾರಕ್ಕೆ ದೈವಸಮ್ಮತಿ ಇಲ್ಲವೆಂತಲೂ ಹೇಳುತ್ತಾನೆ. ರಾಘಪ್ಪನ ಧೂರ್ತತನಕ್ಕೆ ಅಳುಕದೆ ದೇಸಾಯಿಯವರು ಧೈರ್ಯದಿಂದ ಎದುರಿಸಲು ಸಿದ್ಧರಾಗುತ್ತಾರೆ.

ಕಿಟ್ಟಿಗೆ ರತ್ನಾಳನ್ನು ಮದುವೆಯಾಗಿ ನಾಲ್ಕಾರು ವರ್ಷಗಳಾದರೂ ಮಕ್ಕಳಾಗಲಿಲ್ಲ. ಇದರಿಂದ ಗಂಗವ್ವನ ಚಿಂತೆ ಹೆಚ್ಚುತ್ತದೆ. ಸಾಂಸಾರಿಕವಾಗಿ ತನ್ನ ಬಾಳು ಅಪೂರ್ಣವೆಂಬ ಭಾವನೆ ಕಿಟ್ಟಿಗಿದೆ. ಅಲ್ಲದೆ ಅತ್ತ ತವರು ಮನೆಯ ಹಾರ್ದಿಕ ಸಂಬಂಧವಿಲ್ಲದೆ, ಇತ್ತ ಅತ್ತೆ ಗಂಗವ್ವನ ಮಧುರ ಬಾಂಧವ್ಯವಿಲ್ಲದೆ ಕಿಟ್ಟಿಯ ಹೆಂಡತಿ ರತ್ನಾ ಇಕ್ಕಟ್ಟಿನ ದಾರಿಯಲ್ಲಿ ನಡೆಯುವಂತಾಗುತ್ತದೆ. ಗಂಗವ್ವ ತನ್ನ ತಮ್ಮ ರಾಘಪ್ಪನಿಂದಲೇ ಎಲ್ಲ ದುರ್ಗತಿಗೆ ಕಾರಣವಾಯಿತೆಂದು ಭಾವಿಸುತ್ತಾಳೆ. ಅವಳ ಹೃದಯದಲ್ಲಿ ಇನ್ನೂ ಬೆಂಕಿಯಜ್ವಾಲೆ ಇದೆ.

ಶಾಂತಾ ವಸಂತರ ಸ್ನೇಹ ಪ್ರಣಯ ಯಾವ ಹಾದಿ ಹಿಡಿಯುತ್ತದೆಂಬ ಸಂಕಟದಲ್ಲಿ ರಾಘಪ್ಪ ತೊಳಲಾಡುತ್ತಿರುವಾಗ ವಸಂತನನ್ನು ಒಂದು ದಿನ ನೇರವಾಗಿ ರಾಘಪ್ಪ ಕೇಳಿ ಬಿಡುತ್ತಾನೆ. ಆಗ ತನ್ನ ತಂದೆಯನ್ನು ಒಪ್ಪಿಸುವ ಜವಾಬ್ದಾರಿ ರಾಘಪ್ಪನದೇ ಎಂದೂ ಹೇಳುತ್ತಾನೆ. ತಾಯಿ ವೇಣೂಬಾಯಿಯ ಹತ್ತಿರ ತನ್ನ ಹಾಗೂ ಶಾಂತಾಳ ಪ್ರಣಯವನ್ನೂ ವಸಂತ ಹೇಳಿದ್ದು ಅದು ದೇಸಾಯರ ಕಿವಿಗೂ ಮುಟ್ಟುತ್ತದೆ. ರಾಘಪ್ಪನನ್ನು ಮೂರ್ಖನನ್ನಾಗಿಸಲು ಮುಂಬೈಯಿಂದ ಬಂದ ಅಚ್ಯುತನ ಪತ್ರವನ್ನು ಅವನ ಮುಖಕ್ಕೆ ಹಿಡಿಯಲು ದೇಸಾಯರು ಪ್ರತಿ ತಂತ್ರ ಹೂಡುತ್ತಾರೆ. ಈ ಯುದ್ಧ ಬಹಿರಂಗ ರೂಪ ಪಡೆಯುವಾಗ ರಾಘಪ್ಪನ ಹೆಂಡತಿ ಚಂಪಕ್ಕ ಬೇನೆಗೆ ಬಿದ್ದು ಆಸ್ಪತ್ರೆ ಸೇರುತ್ತಾಳೆ. ಪ್ರಸವ ವೇದನೆಯಲ್ಲಿ ಬಳಲಿದ ಚಂಪಕ್ಕನನ್ನು ಆಸ್ಪತ್ರೆಯಲ್ಲಿ ಬಿಟ್ಟು ತನ್ನ ಮಗಳು ಶಾಂತಾ ಮನೆಯಲ್ಲಿ ಒಬ್ಬಳೇ ಇದ್ದಾಳೆಂದು ತಿಳಿದು ಮನೆಯತ್ತ ರಾಘಪ್ಪ ಧಾವಿಸುತ್ತಾನೆ. ಮನೆಗೆ ಮುಟ್ಟುವಷ್ಟರಲ್ಲಿ ವಸಂತ ಅಲ್ಲಿಂದ ಹೊರಡುತ್ತಿರುವದು ತಿಳಿಯುತ್ತದೆ. ಮೊದಲೇ ಹತಾಶನಾದ ರಾಘಪ್ಪ ಬಸವಳಿದು ನಿಂತ ಶಾಂತಾಳ ಶೀಲವನ್ನು ಶಂಕಿಸಿ ಮನಸಾರೆ ಹೊಡೆಯುತ್ತಾನೆ. ಅನಂತರ ಆಸ್ಪತ್ರೆಗೆ ಹೋದ ರಾಘಪ್ಪನಿಗೆ ಚಂಪಕ್ಕ ಗಂಡು ಮಗುವನ್ನು ಹೆತ್ತು ತಾನು ಹಾಗೂ ಮಗು ಪ್ರಾಣಬಿಟ್ಟದ್ದು ತಿಳಿದು ಆಘಾತ ಇಮ್ಮಡಿಸುತ್ತದೆ. ದೇಸಾಯರು, ವೇಣುಬಾಯಿ, ರತ್ನಾ, ಗಂಗವ್ವ, ಕಿಟ್ಟಿ ಎಲ್ಲರೂ ದುಃಖದಲ್ಲಿ ರಾಘಪ್ಪನನ್ನು ಕೂಡಿಕೊಳ್ಳುತ್ತಾರೆ. ಹೆಂಡತಿ ಹಾಗೂ ಮಗನ ಅಂತ್ಯಸಂಸ್ಕಾರ ಮುಗಿದ ಮರುದಿನ ರಾತ್ರಿ ರಾಘಪ್ಪ ದೇಸಾಯಿಯರಿಗೆ ಒಂದು ಸುದೀರ್ಘ ಪತ್ರ ಬರೆದು ಅದನ್ನು ಕಿಟ್ಟಿಯ ಮೂಲಕ ಕಳಿಸಿಕೊಡುತ್ತಾನೆ. ಆ ಪತ್ರದಲ್ಲಿ ತನ್ನ ಅಂತರಂಗವನ್ನು ತೋಡಿಕೊಂಡು ಮಗಳು ಶಾಂತಾಳನ್ನು ವಸಂತನಿಗೆ ತಂದುಕೊಳ್ಳಬೇಕೆಂದು ಹೇಳಿ ನಡೆದ ಸಂಗತಿಯನ್ನೆಲ್ಲಾ ಬಿಚ್ಚಿಟ್ಟು ದೇಸಾಯರ ಹೃದಯದ ಭದ್ರ ಕೋಟೆಯನ್ನು ಭೇದಿಸುವ ಪ್ರಸ್ತಾವನೆ ಇಡುತ್ತಾನೆ. ಪತ್ರ ಓದಿದ ದೇಸಾಯರು ಬರುವದರೊಳಗಾಗಿ ರಾಘಪ್ಪ ನೇಣು ಹಾಕಿಕೊಂಡು ಸಾವನ್ನಪ್ಪುತ್ತಾನೆ. ರಾಘಪ್ಪನ ಪ್ರಚಂಡ ಅಸ್ತಿತ್ವ ಇಲ್ಲವಾದೊಡನೆ ಗಂಗವ್ವನ ಮನಸ್ಸು ಶೂನ್ಯವಾಗುತ್ತದೆ. ತಂದೆ, ತಾಯಿ ಕಳೆದುಕೊಂಡ ತಬ್ಬಲಿಗಳಾದ ರತ್ನಾ ಶಾಂತಾರಿಗೆ ಗಂಗವ್ವ ಸಮಾಧಾನ ಹೇಳುತ್ತಾಳೆ. ವಸಂತ ಶಾಂತಾರ ವಿವಾಹಕ್ಕೆ ದೇಸಾಯರು ಸಮ್ಮತಿಸುತ್ತಾರೆ. ಗಂಗವ್ವ ರಾಮೇಶ್ವರಕ್ಕೆ ಹೊರಟ ಕಾಶಿಯ ಪಂಡಾರಿಂದ ಗಂಗಾಜಲವನ್ನು ಪಡೆದು ಮನೆಯಲ್ಲಿ ಪೂಜೆಗಾಗಿ ಇರಿಸುತ್ತಾಳೆ. ಗಂಗಾಮಾಯಿ ಹೀಗೆ ಮನೆ ಸೇರುವ ಘಟನೆಯಿಂದಲೇ ಗಂಗವ್ವ ಮತ್ತು

4

ಗಂಗಾಮಾಯಿ ಕಾದಂಬರಿಯ ಕಥನ ಕ್ರಿಯೆ ಮುಕ್ತಾಯ ಪಡೆಯುತ್ತದೆ.

ಕಾದಂಬರಿಯ ಪಾತ್ರ ಪ್ರಪಂಚ :

ಗಂಗವ್ವ ಮತ್ತು ಗಂಗಾಮಾಯಿ ಕಾದಂಬರಿಯು ಪಾತ್ರರಚನೆಯಿಂದಲೂ ಮಹತ್ವಪೂರ್ಣವಾದುದು. ವ್ಯಕ್ತಿ ವ್ಯಕ್ತಿಗಳ ಸಂಘರ್ಷವನ್ನು ಕಾದಂಬರಿಕಾರರು ಇದರಲ್ಲಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿಯ ಪಾತ್ರಗಳು ಮಾನವ ಜೀವನದ ಬಗೆಬಗೆಯ ಮನೋಧರ್ಮ, ಸ್ವಭಾವ ಗುಣಗಳನ್ನು ಪ್ರತಿಮಿಸುತ್ತವೆ. "ಇಲ್ಲಿಯ ಕೆಲವೊಂದು ಪಾತ್ರಗಳಂತೂ ತಮ್ಮ ಸಜೀವತೆಯಿಂದ, ಆಂತರಿಕ ಶಕ್ತಿಯಿಂದ, ಸ್ವಭಾವ ವಿಲಕ್ಷಣತೆಯಿಂದ ಕಾದಂಬರಿಯ ಹೊರಗೂ ಜೀವಿಸಿರಬಲ್ಲವು. ಅವುಗಳ ಚಟುವಟಿಕೆಗಳು, ಧ್ಯೇಯ ಧೋರಣೆಗಳು ವಿಶ್ವಾಸ ಶ್ರದ್ಧೆಗಳು ಕಾದಂಬರಿಗಷ್ಟೇ ಸಿಮಿತವಾಗಿಲ್ಲ. ಮಗನ ಸಲುವಾಗಿ ಗಂಗೆಯನ್ನೂ ತಿರಸ್ಕರಿಸಿ, ತಮ್ಮನ ನಿರಂತರ ದ್ವೇಷವನ್ನು ಕಟ್ಟಿಕೊಂಡು ಕೊನೆಯವರೆಗೂ ಹೋರಾಡುವ ಗಂಗವ್ವನ ಛಲ, ಕಾಲಿನ ಹಿಮ್ಮಡ ಒಂದಕ್ಕೊಂದು ತಾಕಲಾಡಿದರೆ ಎಲ, ಹಿಂದೆ ಎಂದೂ ಹೀಗಾಗಿರಲಿಲ್ಲವಲ್ಲ ! ಎಂದು ಉದ್ಗಾರ ತೆಗೆಯುವ 'ರಾಘೋಬಾ ಭರಾರಿ'ಯ ಗೋಪುರವಾಗಿ ನಿಲ್ಲುವ ಅಹಂಭಾವ, ತನ್ನನ್ನು ಕೇಳದೆ ಆಸ್ತಿ ಮಾರಿದನೆಂಬ ಸಿಟ್ಟಿಗೆ ತಂದೆಯ ಶ್ರಾದ್ಧವನ್ನೂ ಕೂಡ ಮಾಡದ ದೇಸಾಯರ ಆತ್ಮಗೌರವ, ಪ್ರತಿಕ್ಷಣಕ್ಕೆ ಸೋತರೂ ಬಾಳನ್ನು ಹದಗೊಳಿಸಲೆತ್ನಿಸುವ ಕಿಟ್ಟಿಯ ಹಾರ್ದಿಕತೆ, ತನ್ನ ಯಜಮಾನನ ಗೌರವರಕ್ಷಣೆಗಾಗಿ ತನ್ನ ಜೀವನವನ್ನೇ ತ್ಯಾಗ ಮಾಡಿದ ಮೆಹಬೂಬಜಾನ್‌ಳ ಶ್ರದ್ಧೆ, ತಾಲೂಕ ಕಚೇರಿಯ ವಿಷಮ ವಾತಾವರಣದಲ್ಲಿಯೂ ತನ್ನ ತತ್ವವನ್ನು ಎಚ್ಚರದಿಂದ ಕಾಯ್ದುಕೊಳ್ಳುವ ಜಾರ್ಜಿಯ ಸಹಜ ಘನತೆ, ಹೆದರಿ ಹೆದರಿಸಿ ಹುಚ್ಚನಂತೆ ನಟಿಸಿ, ತನ್ನ ಜೀವನ ರಹಸ್ಯವನ್ನು ಸರ್ಪದಂತೆ ಕಾಯುವ ವೆಂಕಟರಾಯನ ಗೂಢ ಇತಿಹಾಸ ಇವೆಲ್ಲವುಗಳನ್ನು ಒಂದು ಕಾದಂಬರಿ ಹೇಗೆ ಪೂರ್ಣವಾಗಿ ತೆರೆದು ತೋರಿಸೀತು ? ಇಲ್ಲಿ ಪಾತ್ರನಿರ್ಮಾಣ ಕೇವಲ ಚಿತ್ರಲೇಖನವಾಗಿಲ್ಲ ಅಥವಾ ಮೂರ್ತಿಶಿಲ್ಪವೂ ಆಗಿಲ್ಲ. ತಂತಮ್ಮ ವ್ಯಕ್ತಿತ್ವಗಳ ಪ್ರಭಾವದಿಂದ ಜೀವನದ ರೂಪವನ್ನೇ ಬದಲಿಸುವ ಹಟ ತೊಟ್ಟ ಪಾತ್ರಗಳಿವು " ಎಂಬ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರ ಮಾತುಗಳು ಅರ್ಥಪೂರ್ಣವಾಗಿವೆ.

ಕಾದಂಬರಿಯ ಮುಖ್ಯ ಪಾತ್ರ ಕಿಟ್ಟಿಯದಾದರೂ ಆತನ ಪಾತ್ರ ಅಂತರ್ಮುಖಿವಾದುದು. ತನ್ನ ಪ್ರತಿಭೆಯಿಂದ ಜೀವನವನ್ನು ಬೆಳಗಿಸಿಕೊಳ್ಳುವ ಶಕ್ತಿ ಕಿಟ್ಟಿಗಿಲ್ಲ. ರತ್ನಾಳನ್ನು ಮದುವೆಯಾಗುವ ವಿಚಾರದಲ್ಲೂ, ತಾಯಿ ಹಾಗೂ ರಾಘಪ್ಪ, ವೈಮನಸ್ಸಿನಲ್ಲೂ ಕಿಟ್ಟಿ ಬೇರೆಯಾಗಿಯೇ ಉಳಿಯುತ್ತಾನೆ. ತನಗೆ ಸರಿಕಂಡದ್ದನ್ನು ಮಾಡುತ್ತ ಹೋಗುವ, ಅನ್ಯರ ಮಾತಿನಂತೆ ನಡೆಯುವ ಕಿಟ್ಟಿ, ತನ್ನ ವೈಯುಕ್ತಿಕ ನೆಲೆಯಲ್ಲೇ ಸದಾ ಹುಡುಕಾಟ ನಡೆಸುವವನಾಗಿದ್ದಾನೆ. ಗಂಗವ್ವ ಜಿದ್ದಿನ ಸ್ವಭಾವದವಳು. ರಾಘಪ್ಪ ಪ್ರತಿನಾಯಕನಾಗಿ ಕಾದಂಬರಿಯ ಕಥನ ಕ್ರಿಯೆಗೆ, ರಭಸಕ್ಕೆ ಕಾರಣಪುರುಷನಾಗಿದ್ದಾನೆ. ದೇಸಾಯರ ಪಾತ್ರ ಆತ್ಮಪ್ರತಿಷ್ಠೆ, ಗುಣಗೌರವದಿಂದ ಕೂಡಿರುವಂಥದು. ಜಾರ್ಜಿ, ಮೆಹಬೂಬಜಾನ್, ಚಿಂವಕ್ಕ, ರತ್ನಾ, ಶಾಂತಾ, ವಸಂತರಾಯ, ಮೊದಲಾದವರು ಮಾನವ ಸ್ವಭಾವದ ವಿಭಿನ್ನ ಗುಣಗಳ ಜೀವಂತ ಸಂಕೇತವಾಗಿದ್ದಾರೆ. ಗಂಗವ್ವ ಮತ್ತು ಗಂಗಾಮಾಯಿ ಕಾದಂಬರಿಯ ಮೂಲಕ ಮೊಕಾಶಿ ಅವರು ಕನ್ನಡ ಕಾದಂಬರಿಗಳಲ್ಲೇ ಒಂದು ಹೊಸ ಹಾದಿ ನಿರ್ಮಿಸಿದರೆನ್ನಬೇಕು. ಅದು ಮುಖ್ಯವಾಗಿ ಪಾತ್ರಗಳ ಬಹಿರಂಗ ಜೀವನದ ಜೊತೆಗೆ ಅಂತರಿಕ ಜೀವನವನ್ನು ತೆರೆಯುವ ಪ್ರಾಮಾಣಿಕ ಪ್ರಯತ್ನವಾಗಿದೆ.

ಕಾದಂಬರಿಯಲ್ಲಿ ದುರಂತ ಪ್ರಜ್ಞೆ:

ಗಂಗವ್ವ ಮತ್ತು ಗಂಗಾಮಾಯಿ ಕಾದಂಬರಿಯಲ್ಲಿಯ ದುರಂತಪ್ರಜ್ಞೆ ಅತ್ಯಂತ ಮಹತ್ವದ ವಿಷಯವಾಗಿದೆ. ಇಲ್ಲಿಯ ಪಾತ್ರಗಳು ಜೀವನದ ವಿಧವಿಧವಾದ ದುರಂತಕ್ಕೀಡಾಗಿರುವದು ಎದ್ದು ಕಾಣುವ ಸಂಗತಿಯಾಗಿದೆ. ಇದು ಮುಖ್ಯವಾಗಿ ಕಾಣುವುದು ರಾಘಪ್ಪನ ಪಾತ್ರದಲ್ಲಿ. ಶೇಕ್ಸಪಿಯರನ ದುರಂತ ನಾಯಕನಂತೆ ಅವನ ಚಿತ್ರಣವಿದೆ. ಗಂಗವ್ವ, ದೇಸಾಯರ ಜೊತೆಗೆ ಅವನು ನಡೆಸಿದ ಹೋರಾಟ, ಸಂಘರ್ಷ ವ್ಯಕ್ತಿ ಬದುಕಿನ ದುರಂತದ ಪರಾಕಾಷ್ಠೆಯ ಪ್ರತೀಕವಾಗಿದೆ. ರಾಘಪ್ಪನು ದೇಸಾಯರಿಗೆ ಬರೆದ ಕೊನೆಯ ಪತ್ರ ಅವನ ದುರಂತ ವ್ಯಕ್ತಿತ್ವದ ವಿಶ್ವರೂಪದರ್ಶನವಾಗಿದೆ. ಆದರಲ್ಲಿಯ ಮಾತುಗಳು ಮರ್ಮಭೇದಿಯಾಗಿವೆ. "ನೀರಿನಲ್ಲಿ ಕಲ್ಲು ಒಗೆದು ಅದೇ ದಿಕ್ಕಿನಲ್ಲಿ ತೆರೆಗಳು ಹೋಗಲಿವೆಯೆಂದರೆ ತೆರೆಗಳು ಕೇಳುತ್ತವೆಯೇ ? . . . . ನಾನು ಕವಿಯಂತೆ ಮಾತನಾಡುತ್ತಿಲ್ಲ. ನನ್ನ ಅನುಭವಗಳ ಸಾರವಾಗಿ ನನ್ನ ಕರ್ಮಗಳ ರೂಪಕವಾಗಿ ಈ ಪ್ರಶ್ನೆ ನನ್ನ ಮುಂದೆ ಸತತವಾಗಿ ಈ ನಾಲ್ಕು ವರ್ಷ ನಿಂತಿದೆ. . . ನನ್ನ ಭೀತಿಯ ವಿಷಯಳಾದ ಅಕ್ಕನಿಗೆ ನನ್ನ ಆಸ್ತಿ ಹತ್ತಬಾರದೆಂಬ ಉದ್ದೇಶದಿಂದ ನನ್ನ ಹೆಂಡತಿಯ ಜೀವವನ್ನೂ ಪಣಕ್ಕೆ ಹಚ್ಚಿ ಮಗನನ್ನು ಪಡೆಯಲು ಯತ್ನಿಸಿದೆನು. ನಾನು ಇದರಲ್ಲಿ ಗೆದ್ದಂತೆಯೇ ಆಗಿತ್ತು. ಆದರೆ ದೈವ ನನ್ನ ವಿರುದ್ಧ ಪಣವನ್ನೇ ತೊಟ್ಟಂತಾಯಿತು. ಉಪಾಯವಿಲ್ಲ." ಆತ್ಮಹತ್ಯೆ ಮಾಡಿಕೊಳ್ಳುವ ಮೊದಲು ರಾಘಪ್ಪನ ಅಂತರಂಗದಿಂದ ಬಂದ ಈ ಮಾತುಗಳನ್ನು ಪರೀಕ್ಷಿಸಿ ನೋಡಿದಾಗ ಮಾನವ ಸಹಜವಾದ ಅಹಂಕಾರದ ಉರುಬು, ಅದರ ಪರಾಕಾಷ್ಠೆಯಲ್ಲಿ ವ್ಯಕ್ತಿಯ ಪತನ, ವಿಧಿಯ ಕೈವಾಡ ಹೇಗೆ ಕಾರ್ಯಮಾಡಬಹುದೆಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ರಾಘಪ್ಪ ಆತ್ಮಹತ್ಯೆಗೆ ಮೊದಲು ಆಂತರಿಕ ತುಮುಲದಿಂದ ಬಳಲಿದ ಬಗೆಯು ಅವನ ಪತ್ರದಲ್ಲಿ ಅಂತಸ್ಥವಾಗಿದೆ. ಕಾದಂಬರಿಯ ಇತರ ಪಾತ್ರಗಳೂ ದುರಂತದ ನೆರಳಲ್ಲಿ ನಿಂತಿವೆ. "ತಮ್ಮ ಸ್ವಭಾವವನ್ನು ಕ್ರಿಯೆಯ ಮೂಲಕ ವ್ಯಕ್ತಪಡಿಸಲು ಸಾಧ್ಯವಿಲ್ಲದಿರುವದೇ ಇಲ್ಲಿಯ ದುರಂತಕ್ಕೆ ಕಾರಣವಾಗಿದೆ. ಒತ್ತಾಯ. ಪ್ರತಿಕ್ರಿಯೆ, ಸೇಡಿನ ಭಾವನೆ, ಆತ್ಮಹತ್ಯೆ, ನಿಷ್ಕ್ರೀಯತೆ, ಅವಿವೇಕ ಇವು ಇದರ ಪರಿಣಾಮಗಳಾಗಿವೆ. ಕಿಟ್ಟಿ ಬಲಹೀನನಾಗಿದ್ದಾನೆ. ಗಂಗವ್ವ ಒಂದು ಜಿದ್ದಿಗಾಗಿ ತನ್ನ ವ್ಯಕ್ತಿತ್ವವನ್ನು ಬಲಿಗೊಟ್ಟಿದ್ದಾಳೆ. ಚಂಪಕ್ಕನದು ಬೇನೆಯಿಂದ ರಾಹುಗ್ರಸ್ತವಾದ ಜೀವನ , ರಾಘಣ್ಣಾ ಹಾಗೂ ವಸಂತ ಇವರಿಬ್ಬರೂ ಕ್ರೀಯಾಶೀಲತೆಯ ಸ್ವಾತಂತ್ರ್ಯವಿದ್ದು ಸಂಯಮ ತಪ್ಪಿದವರು. ವೆಂಕಾಟಿ ಅರೆಹುಚ್ಚನಾಗಿದ್ದಾನೆ, ಮೆಹಬೂಬಜಾನ್‌ಳ ಜೀವನದ ದಾರಿ ಬಹಳ ಇಕ್ಕಟ್ಟಿನದು. ಈ ಸಂಚಿತದ ಬಂಧನವನ್ನಿಟ್ಟುಕೊಂಡು ಪ್ರಾರಬ್ಧವನ್ನು ನಡೆಸುವ ಈ ವ್ಯಕ್ತಿಗಳ ಬಾಳು ದುರಂತವಲ್ಲದೆ ಮತ್ತೇನು ? ಇಡೀ ಕಾದಂಬರಿಯ ಮೇಲೆ ಈ ದುರಂತದ ನೆರಳು ಬಿದ್ದಿದೆ. ಎಂಬ ಕುರ್ತಕೋಟಿಯವರ ಮಾತುಗಳು ಬದುಕಿನ ದಾರುಣತೆಯನ್ನು ಸಾರುತ್ತವೆ.

ಕಾದಂಬರಿಯಲ್ಲಿ ಚಿತ್ರಿತವಾದ ವಾಸ್ತವವಾದ :

ಗಂಗವ್ವ ಮತ್ತು ಗಂಗಾಮಾಯಿ ಕಾದಂಬರಿ ಐವತ್ತರ ದಶಕದಲ್ಲಿ ಬಂದ ಮಹತ್ವಪೂರ್ಣ ವಾಸ್ತವವಾದೀ ಕಾದಂಬರಿಯಾಗಿದೆ. ಕಾದಂಬರಿಯ ಘಟನೆಗಳು, ವಸ್ತು ಹಾಗೂ ಕ್ರಿಯೆಗಳ ಸ್ವರೂಪ

ನೈಜತೆಯ ಮಾರ್ಗದಲ್ಲಿ ಮುನ್ನಡೆದದ್ದನ್ನು ಕಾಣಬಹುದಾಗಿದೆ. ಮೊಕಾಶಿ ಅವರು ಲೇಖಿಕರ ಮಾತಿನಲ್ಲಿ ಹೇಳಿದಂತೆ ಕಾಃನ್ರಾಡನು (conard) Language of facts ಎಂದು ವರ್ಣಿಸಿದ ನಿರೂಪಣ ತಂತ್ರವನ್ನು ಬಹಳ ಯಶಸ್ವಿಯಾಗಿ ಪ್ರಯೋಗಿಸಿದ್ದು ಕಂಡುಬರುತ್ತದೆ. ಕಾದಂಬರಿಯ ಆರಂಭದಿಂದ ಕೊನೆಯವರೆಗೆ ರಭಸದ ಕ್ರಿಯೆ ಹಾಗೂ ಪ್ರತಿಕ್ರಿಯೆಗಳ ಮೂಲಕ ಸಂಭಾಷಣೆ, ಪಾತ್ರಗಳ ಜೀವಂತಿಕೆಯ ವಿಶಿಷ್ಟತೆಯಿಂದ ಸಮಕಾಲೀನ ಬದುಕನ್ನು ಸಂವೇದಿಸುವಂತೆ ಭಾಸವಾಗುತ್ತದೆ. ವಾಸ್ತವವಾದದ ತಿರುಳನ್ನು, ತತ್ವದ ನೆಲೆಯನ್ನು ಮೊಕಾಶಿಯವರು ಈ ಕಾದಂಬರಿಯಲ್ಲಿ ಕಲೆಯ ಸ್ಪರ್ಶ ನೀಡಿರುವದು ಬಹಳ ಮಹತ್ವದ್ದಾಗಿದೆ. ಆದರ್ಶವಾದದ ಬೆನ್ನು ಹತ್ತಿ ಹೊರಟ ಕನ್ನಡ ಕಾದಂಬರಿ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಈ ನೆಲದ ಮಡಿಲಲ್ಲಿ ಬದುಕುವ ಜೀವಂತ ಪಾತ್ರಗಳನ್ನು ಚಿತ್ರಿಸುವ ಮೂಲಕ ಮೊಕಾಶಿಯವರು ತಾತ್ವಿಕವಾಗಿ ಹೊಸ ಹಾದಿಯಲ್ಲಿ ಸಾಗಿದ್ದಾರೆನ್ನಿಸುತ್ತದೆ.

ಕಾದಂಬರಿಯಲ್ಲಿ ಜನಜೀವನ ಚಿತ್ರಣ :

ಉತ್ತರ ಕರ್ನಾಟಕದ ಜನಜೀವನದ ಒಳನೋಟಗಳನ್ನು ಗಂಗವ್ವ ಮತ್ತು ಗಂಗಾಮಾಯಿ ಕಾದಂಬರಿ ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಇಲ್ಲಿ ಬರುವ ಗಂಗವ್ವ, ದೇಸಾಯರು, ಕಿಟ್ಟಿ, ರಾಘಪ್ಪ ಮೊದಲಾದವರು ಬ್ರಾಹ್ಮಣ ಮನೆತನದ ಜೀವನದ ಪ್ರತೀಕಗಳಾಗಿವೆ. ಅಂದ ಮಾತ್ರಕ್ಕೆ ಇದರಲ್ಲಿ ಉಳಿದ ಜೀವನವಿಲ್ಲವೆಂದಲ್ಲ. ಮೆಹಬೂಬಜಾನ್, ಜಾರ್ಜಿ ಮೊದಲಾದವರ ಬದುಕೂ ಅಷ್ಟೇ ಪರಿಣಾಮಕಾರಿಯಾಗಿದೆ. ಉತ್ತರಕರ್ನಾಟಕದ ಜನಜೀವನ ಅದರಲ್ಲಿಯೂ ಸಾಮಾಜಿಕ ಸಂಬಂಧಗಳು, ಮದುವೆ, ತಮ್ಮನ ಮಗಳನ್ನೇ ಮಗನಿಗೆ ತಂದುಕೊಳ್ಳುವದು, ಮದುವೆಯಲ್ಲಿ ವರದಕ್ಷಿಣೆಗಾಗಿ ಜಗಳ, ಬ್ರಾಹ್ಮಣರ ವಿವಿಧ ಸಂಪ್ರದಾಯ, ನಂಬಿಕೆ, ಮಡಿ ಮೈಲಿಗೆ, ವಠಾರ, ಮೆಹಬೂಬಜಾನ್‌ಳ ಸಂಗೀತ ಕಚೇರಿ, ಕಲಾವಿದರು, ನಾಟಕ ಕಂಪನಿ, ದೇಸಾಯರು, ಗೌಡಿಕಿ, ಆಳುಮಕ್ಕಳು, ದತ್ತು ಪ್ರಕರಣ, ಹೀಗೆ ಒಟ್ಟು ಒಂದು ಜನಸಮುದಾಯದ ಜೀವಂತ ಚಿತ್ರವೇ ಮೂಡಿ ಇದರಲ್ಲಿ ಪ್ರಾದೇಶಿಕತೆ ಜೀವನದ ವೈಭವವನ್ನಾಗಿಸಿಕೊಳ್ಳುವ ವರ್ಣನೆಯಿದೆ.

ಕಾದಂಬರಿಯ ಜೀವನದರ್ಶನ :

ಗಂಗವ್ವ ಮತ್ತು ಗಂಗಾಮಾಯಿ ನೀತಿಪರವಾದ ಸಾಂಪ್ರದಾಯಿಕ ಕಾದಂಬರಿಯೆಂದೂ ಖ್ಯಾತವಾಗಿದೆ. ಇಲ್ಲಿ ಬರುವ ವಿಧವೆ ಗಂಗವ್ವ ಹಾಗೂ ಅವಳ ತಮ್ಮ ರಾಘಪ್ಪನ ನಡುವಿನ ಹೋರಾಟಕ್ಕೆ ನೈತಿಕ ನೆಲೆಯೇ ಮೂಲ ತಳಹದಿಯಾಗಿದೆಯೆಂದೂ ಅನ್ನಿಸುತ್ತದೆ. ತನ್ನ ಜೀವನವನ್ನು ಹಾಳುಮಾಡಿದ ರಾಘಪ್ಪನ ಜೊತೆಗೆ ಪುನಃ ಸಂಬಂಧವನ್ನು (ಕಿಟ್ಟಿ ರತ್ನಾ ಮದುವೆ ಮೂಲಕ) ಸ್ಥಾಪಿಸುವದು ಗಂಗವ್ವನಿಗೆ ಸುತಾರಾಂ ಇಷ್ಟವಿಲ್ಲ. ವೈರಿಯನ್ನು ಗುರಿಡಬೇಕೆಂಬ ಅವಳ ತತ್ವ ಕಿಟ್ಟಿಯ ಮದುವೆಯ ನಂತರವೂ ಮುಂದುವರಿಯುವುದು ಇದಕ್ಕೆ ಸಾಕ್ಷಿಯಾಗಿದೆ. "ರಾಘಪ್ಪ ಗಂಗವ್ವ ದೇಸಾಯರ ಹೋರಾಟ ಸಾಂಪ್ರದಾಯಿಕವಾದರೂ ಅದಕ್ಕೊಂದು ನೈತಿಕ ನೆಲೆ ಇದೆ. ಗಂಗವ್ವ ದೇಸಾಯರು ಕಾದಂಬರಿಯಲ್ಲಿ ನಿಷ್ಪಾಪ ಜೀವನದ, ನೈತಿಕ ಬಲದ ಸಂಕೇತವಾಗಿದ್ದಂತೆ ರಾಘಪ್ಪ ಅಸುರೀ ಶಕ್ತಿಯ ಅನೈತಿಕತೆಯ ಸಂಕೇತವಾಗಿದ್ದಾನೆ. ಅವರ ಹೋರಾಟದಲ್ಲಿ ಒಳ್ಳೆಯದೇ ಗೆಲ್ಲುತ್ತದೆಯಾದರೂ ಸಾಂಪ್ರದಾಯಿಕ ನೈತಿಕತೆಯಲ್ಲಿ ಕಾದಂಬರಿ ತೃಪ್ತಿಗೊಳ್ಳುವದಿಲ್ಲ. ರಾಘಪ್ಪನ ಮುಖಾಂತರ ಪಾಪದ ರಹಸ್ಯಮಯ

ಸ್ವರೂಪವನ್ನು ಅದು ತಿಳಿಯಲೆತ್ನಿಸುತ್ತದೆ" ಎಂದು ಡಾ. ಜಿ.ಎಸ್.ಆಮೂರ ಅವರು ಅಭಿಪ್ರಾಯ ಪಟ್ಟಿರುವುದು ಸತ್ಯನಿಷ್ಠ ವಿಚಾರವಾಗಿದೆ.

ಕಾದಂಬರಿಯ ಭಾಷೆ - ಶೈಲಿ:

ಸತ್ವಪೂರ್ಣ ಭಾಷೆಯ ಪ್ರಯೋಗ ಹಾಗೂ ಶೈಲಿಯ ದೃಷ್ಟಿಯಿಂದ ಗಂಗವ್ವ ಮತ್ತು ಗಂಗಾಮಾಯಿ ಬಹಳ ಯಶಸ್ವಿಯಾದ ಕಾದಂಬರಿಯಾಗಿದೆ. ಉತ್ತರ ಕರ್ನಾಟಕದ ಪ್ರಾದೇಶಿಕ ನುಡಿ ಸಂಪತ್ತನ್ನು ಲೇಖಕರು ಬಳಸಿರುವ ರೀತಿ ಕಾದಂಬರಿಯನ್ನು ಅನನ್ಯವಾಗಿಸಿದೆ. ಧಾರವಾಡ ಕನ್ನಡವು ಕಾದಂಬರಿಯ ಸಂಭಾಷಣೆಯ ಜೀವನಾಡಿಯಾಗಿದೆ. ಗಂಗವ್ವ, ದೇಸಾಯರ ಮಾತುಗಳು, ಅವರ ಸಾಂಪ್ರದಾಯಿಕ ವ್ಯಕ್ತಿತ್ವದ ಪ್ರತೀಕವಾಗಿವೆ. ರಾಘಪ್ಪನ ನಾಟಕೀಯ ಸಂಭಾಷಣೆ, ಮೆಹಬೂಬಜಾನ್‌ಳ ಉರ್ದುಮಿಶ್ರಿತ ಕನ್ನಡ, ಲೇಖಕರ ಸಂಸ್ಕೃತ ಪಾಂಡಿತ್ಯದಿಂದ ಹೊರಹೊಮ್ಮುವ ಅನುಭವಾಮೃತದ ನುಡಿಗಳು ಹೀಗೆ ಇಡೀ ಕಾದಂಬರಿಯ ಶೈಲಿ ಸಮ್ಮಿಶ್ರತೆಯಿಂದ ರೋಚಕವಾಗಿದೆ. ಲೇಖಕರ ಶೈಲಿ ಓದುಗರನ್ನು ಕುತೂಹಲದಲ್ಲಿ ಕೆರಳಿಸುವ ಅನೇಕ ಸನ್ನಿವೇಶಗಳು ಕಾದಂಬರಿಯಲ್ಲಿ ವ್ಯಾಪ್ತವಾಗಿವೆ. ಜನಜೀವನ ಚಿತ್ರಣಕ್ಕೆ ಒತ್ತುಕೊಡುವ ಲೇಖಕರು ನಿಸರ್ಗದ ವರ್ಣನೆಯನ್ನು ತರದಿರುವದು ಕಾದಂಬರಿಯಲ್ಲಿ ಕೊರತೆಯಾಗಿ ಕಂಡುಬರುವದಾದರೂ ಮಾನವಸೌಂದರ್ಯ ವರ್ಣನೆಯಲ್ಲಿ ಲೇಖಕರು ಸಿದ್ಧಹಸ್ತರಾಗಿರುವದು ಕಂಡುಬರುತ್ತದೆ. ಕಾದಂಬರಿಯಲ್ಲಿ ಬಂದ ಪತ್ರಶೈಲಿಯ ವೈಶಿಷ್ಟ್ಯವೇ ಬೆರಗುಗೊಳಿಸುವಂಥದು. ಅಚ್ಯುತನ ಮೂರು ಪತ್ರಗಳು ರಾಘಪ್ಪನ ಪೌರುಷವನ್ನು ತಗ್ಗಿಸುವಂತಿದ್ದರೆ, ವಸಂತರಾಯ ದೇಸಾಯರಿಗೆ ಆಸ್ತಿ ಹಿಸೆಗಾಗಿ ಬರೆಯುವ ಪತ್ರ ನಾಟಕೀಯವಾಗಿದೆ. ಇದೆಲ್ಲಕ್ಕಿಂತ ರಾಘಪ್ಪ ಆತ್ಮಹತ್ಯೆಗೆ ಮೊದಲು ದೇಸಾಯರಿಗೆ ಬರೆದ ಪತ್ರದ ಶೈಲಿ ಅವನ ದುರಂತ ವ್ಯಕ್ತಿತ್ವದ ಆತ್ಮಕಥನವಾಗಿ ಓದುಗರ ಹೃದಯವನ್ನು ಆರ್ದ್ರಗೊಳಿಸುತ್ತದೆ. ಪಾತ್ರಗಳ ಅಂತರಂಗ ದರ್ಶನದಲ್ಲಿ ಲೇಖಕರ ಶೈಲಿ ಭಾವಮಯವಾಗುವ ಸಂದರ್ಭಗಳೂ ಇವೆ.

ಕನ್ನಡ ಕಾದಂಬರಿ ಪ್ರಪಂಚದಲ್ಲಿ ಗಂಗವ್ವನ ಮತ್ತು ಗಂಗಾಮಾಯಿಯ ಸ್ಥಾನ :

ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ, ರಾವಬಹಾದ್ದೂರ ಅವರ ಗ್ರಾಮಾಯಣ, ಕಾರಂತರ ಬೆಟ್ಟದ ಜೀವ ಮೊದಲಾದ ಕಾದಂಬರಿಗಳು ಕನ್ನಡದ ಶ್ರೇಷ್ಠ ಪ್ರಾದೇಶಿಕ ಕಾದಂಬರಿಗಳಾಗಿರುವಂತೆ ಉತ್ತರ ಕರ್ನಾಟಕದ ಜನಜೀವನದ ನೈಜ ಸ್ಪರ್ಶವನ್ನು ಒದಗಿಸುವ ಸಮಕಾಲೀನ ಬದುಕಿನ ಜೀವಂತ ಚಿತ್ರಣವನ್ನು ಮಾಡುವ ಮೊಕಾಶಿಯವರ ಗಂಗವ್ವ ಮತ್ತು ಗಂಗಾಮಾಯಿ ಕನ್ನಡ ಕಾದಂಬರಿಯ ಇತಿಹಾಸದಲ್ಲಿ ವಿಶಿಷ್ಟವಾದ ಕಲಾಕೃತಿಯಾಗಿ ಸತತ ಮಹತ್ವ ಪಡೆಯುತ್ತದೆಂಬುದರಲ್ಲಿ ಸಂದೇಹವಿಲ್ಲ. ತಮ್ಮ ಪ್ರಥಮ ಕಾದಂಬರಿಯಲ್ಲೇ ಪ್ರೌಢವಾದ ಜೀವನದರ್ಶನವನ್ನು ನೀಡಿದ ಶಂಕರ ಮೊಕಾಶಿ ಅವರ ಗಂಗವ್ವ ಮತ್ತು ಗಂಗಾಮಾಯಿ ಪ್ರಾದೇಶಿಕ ಸೊಗಡಿನಿಂದ, ಜನಜೀವನ ಚಿತ್ರದಿಂದ ಸಾಂಪ್ರದಾಯಿಕತೆಯಿಂದ, ದುರಂತದರ್ಶನದಿಂದ, ಸತತ ಚೇತೋಹಾರಿಯಾಗಿದೆ.

ಅಡಿ ಟಿಪ್ಪಣಿಗಳು

೧. ಜಿ.ಎಸ್. ಅಮೂರ - ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳು, 'ಅರ್ಥಲೋಕ', ಪುಟ ೩೩-೩೫.

೨. ಕೀರ್ತಿನಾಥ ಕುರ್ತಕೋಟಿ : ಗಂಗವ್ವ ಗಂಗಾಮಾಯಿ ಮುನ್ನುಡಿ ಪುಟ ii - iii.

೩. ಶಂಕರ ಮೊಕಾಶಿ ಪುಣೇಕರ - ಗಂಗವ್ವ ಗಂಗಾಮಾಯಿ, ಪುಟ ೨೯೦-೨೯೧.

೪. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪುಟ - ೩೫೪.

೫. ಜಿ.ಎಸ್. ಅಮೂರ : ಕನ್ನಡದ ಹತ್ತು ಶ್ರೇಷ್ಠ ಕಾದಂಬರಿಗಳು, ಅರ್ಥಲೋಕ, ಪುಟ ೩೪.

ಪಂಪನ ಕೃತಿಗಳಲ್ಲಿ ಪ್ರತಿಮಾ ಸಂಪತ್ತು

* ಶಾಂತಿನಾಥ ದಿಬ್ಬದ

'ಪ್ರತಿಮೆ'ಯು ಅಲಂಕಾರಗಳ ಗುಂಪಿಗೆ ಸೇರುವ ಒಂದು ಪರಿಕರ. ಈ ಅಲಂಕಾರಗಳೆಲ್ಲ ಒಂದು ಬಗೆಯ ಉಕ್ತಿ ವೈಚಿತ್ರ್ಯಗಳು. ಆದರೆ ಕೆಲವು ಅಲಂಕಾರಗಳು ಕೇವಲ ಉಕ್ತಿವೈಚಿತ್ರ್ಯ ಮಾತ್ರಗಳಾಗಿ ವಿರಮಿಸದೆ ಕಾವ್ಯದ ಅಭಿವ್ಯಕ್ತಿ ಸಾಧ್ಯತೆಯನ್ನು ಹೆಚ್ಚಿಸುತ್ತವೆ. ಸಾಮಾನ್ಯವಾಗಿ ಎಲ್ಲ ಕಾವ್ಯಗಳು ಯತ್ನಿಸುವುದು ಎರಡು ಗುರಿಗಳನ್ನು ತಲುಪಲು: ಒಂದು ಕಿವಿಗೆ ಇಂಪು, ಇನ್ನೊಂದು ಅರ್ಥದ ಸ್ವಾರಸ್ಯ. ಉಪಮೆ-ರೂಪಕ - ಪ್ರತಿಮೆ, ಕವಿಸಮಯಗಳೆಲ್ಲ ಈ ಎರಡೂ ಕೆಲಸಗಳನ್ನು ನೀಗಿಸುತ್ತವೆ. ಓದುಗರಿಗೆ ಕಾವ್ಯ ಗ್ರಾಹ್ಯವೆನ್ನಿಸುವುದು ಇವುಗಳಿಂದಲೇ. 'ಕಾವ್ಯ ಗ್ರಾಹ್ಯ ಅಲಂಕಾರಾತ್' ಎಂದೂ 'ಸೌಂದರ್ಯಮಲಂಕಾರ' ಎಂದೂ ವಾಮನ ಹೇಳಿದ್ದು ಇದೇ ಕಾರಣದಿಂದ.

ಪ್ರತಿಭಾವಿಶೇಷದಿಂದ ಕೂಡಿದ ಕವಿಯ ಮನಸ್ಸು ಅಸಂಖ್ಯ ಸ್ಮೃತಿಚಿತ್ರಗಳ ಕೋಶವಾಗಿರುತ್ತದೆ. ಕವಿ ತನ್ನ ಅಮೂರ್ತ ಭಾವನೆಗಳಿಗೆ ಅಭಿವ್ಯಕ್ತಿಯನ್ನು ಒದಗಿಸುವಾಗ ಮೂರ್ತಪ್ರಪಂಚದ ಕೆಲವು ಚಿತ್ರಗಳನ್ನು ಆಶ್ರಯಿಸಬೇಕಾಗುತ್ತದೆ. ಇದನ್ನೇ ವಸ್ತುರೂಪಧಾರಣೆ "objectification"ಎಂದು ಮೀಮಾಂಸಕರು ಕರೆದಿದ್ದಾರೆ. ಕವಿ ತಾನು ತಿಳಿಸಬಯಸಿದ ಭಾವಕ್ಕೆ ತಕ್ಕ ಚಿತ್ರವೊಂದನ್ನು ಸಂಯೋಜಿಸಿ ತನ್ನ ಅಭಿವ್ಯಕ್ತಿಯನ್ನು ಇನ್ನಷ್ಟು ಸ್ಫುಟಗೊಳಿಸಿಕೊಳ್ಳುತ್ತಾನೆ. ಇದೊಂದು ಬಗೆಯ ರೂಪಣ ಕ್ರಿಯೆ.

ಅತೀತವಾದುದನ್ನು ಪ್ರತಿಮಿಸಲು ಮಾಡುವ ಒಂದು ಭಾವುಕ ಪ್ರಯತ್ನವೇ ಪ್ರತಿಮೆ. ಕಾರಣ ಪ್ರತಿಮೆಯೆಂಬುದು ಭಾವದೀಪ್ತವಾದ ಒಂದು ಶಬ್ದಚಿತ್ರ. ಬರೀ ಶಬ್ದಚಿತ್ರ ಮಾತ್ರವಲ್ಲ. ಸಂದರ್ಭವೊಂದರ ಬೌದ್ಧಿಕ ಹಾಗೂ ಭಾವುಕ ಸಂಕೀರ್ಣತೆಯನ್ನು ತಟ್ಟನೆ ಒಡಮೂಡಿಸುವ ಪ್ರಮುಖ ಅನುಭವವಿಶೇಷ ಅದಾಗಿರುತ್ತದೆ. ಹೀಗೆ ನೋಡಿದಾಗ ಪ್ರತಿಮೆಯು ಕವಿಯ ದರ್ಶನ-ಪ್ರತಿಭೆ ಹಾಗೂ ಲೋಕಾನುಭವ ಸಂಪತ್ತಿಗಳನ್ನು ಅವಲಂಬಿಸಿರುವಂಥದು. ಸಹಜತೆ ಹಾಗೂ ಸಂದರ್ಭೋಚಿತತೆಗಳಿಂದ ಪ್ರತಿಮೆಗಳಿಗೆ ಹೆಚ್ಚಿನ ಸಾರ್ಥಕತೆ ಒದಗುತ್ತದೆ. ಇದನ್ನೇ ಆನಂದವರ್ಧನ 'ಅಪೃಥಕ್‌ಯತ್ನನಿರ್ವರ್ತ್ಯ:' ಎಂದಿದ್ದಾನೆ. "ಕಾಲದ ಒಂದು ಕ್ಷಣದಲ್ಲಿ ಬೌದ್ಧಿಕ ಮತ್ತು ಭಾವನೆಗಳ ಸಂಕೀರ್ಣವನ್ನು ಸಮರ್ಪಕವಾಗುವಂತೆ ಯಾವುದು ಮಾಡುತ್ತದೆಯೋ ಅದೇ ಪ್ರತಿಮೆ "[೧].

ಪರಿಚಿತವನ್ನು ಅಪರಿಚಿತಕ್ಕೆ ಆರೋಪಿಸುವ ಮೂಲಕ ಪರಿಚಿತವನ್ನು ಇನ್ನಷ್ಟು ಸುಪರಿಚಿತವನ್ನಾಗಿ ಮಾಡುವ ವಿಧಾನ ಪ್ರತಿಮೆಯದು. ಅಂತೆಯೇ ವಿಮರ್ಶಕರು ಇದನ್ನು 'ಭಿನ್ನ ವಿಚಾರಗಳ ಪಕ್ಕ ಜೋಡಣೆ' (juxtaposition) ಎಂದಿದ್ದಾರೆ. ಒಂದು ವಿಚಾರವನ್ನು ಇನ್ನೊಂದರ ಮೇಲಿಡುವ 'ಮೇಲ್ಜೋಡಣೆ'ಯ ಕೆಲಸ ಇಲ್ಲಿಯ ವಿಶೇಷ. ಅದು ಚಿಕ್ಕದಾಗಿದ್ದರೂ ಚೊಕ್ಕವಾಗಿರುತ್ತದೆ. ವಿಸ್ತಾರಕ್ಕಿಂತ ಸಂಕ್ಷೇಪದತ್ತ, ಮುಚ್ಚಿಡುವುದಕ್ಕಿಂತ ತೆರೆದು ತೋರುವತ್ತ ಅದರ ಒಲವು. ಧ್ವನಿಗಿಂತ ಪ್ರತಿಮೆ ಭಿನ್ನವಾಗುವುದು ಇಲ್ಲಿಯೇ.

ಪ್ರತಿಮಾವಿಧಾನವು ಉಪಮೆ-ರೂಪಕ-ಪ್ರತೀಕಗಳ ಮೂಲಕವೂ ಮೈದೋರಬಹುದು.

---

೧. ಎಜ್ರಾಪೌಂಡ್‌ನ ವಿಚಾರ - ವಿಮರ್ಶೆಯ ಪರಿಭಾಷೆ ಪುಟ ೭೮

ವಿಶಾಲಾರ್ಥದಲ್ಲಿ ಉಪಮೆ-ರೂಪಕಾದಿಗಳೂ ಪ್ರತಿಮೆಗಳೇ. ಇವುಗಳ ನಡುವಿನ ವ್ಯತ್ಯಾಸ ತುಂಬ ಸೂಕ್ಷ್ಮವಾದದ್ದು. ಅದನ್ನು ಗೆರೆಯೆಳೆದು ತೋರುವುದು ಕಷ್ಟದ ಕೆಲಸವೇ. ಕಾವ್ಯನಿರ್ಮಾಣದ ಮೊದಲ ಹಂತವಾಗಿರುವ ಉಪಮೆ ಸಾದೃಶ್ಯಮೂಲವಾದದ್ದು. ಉಪಮೆಯ ವಿಸ್ತೃತರೂಪವೇ ರೂಪಕ. ಉಪಮೆಯಲ್ಲಾದ ಒಂದು ಬದಲಾವಣೆಯೇ ರೂಪಕವೆಂಬ ಅಭಿಪ್ರಾಯವೂ ಇದೆ. ಅದೇ ರೀತಿ ರೂಪಕಗಳು ಉಪಮೆಯ ಸಂಕ್ಷಿಪ್ತ ರೂಪಗಳೆಂಬ ತಿಳುವಳಿಕೆಯೂ ಕೆಲವರಲ್ಲಿದ್ದು, ಅದು ತಪ್ಪೆಂದು ಮತ್ತೆ ಕೆಲವರು ವಾದಿಸುತ್ತಾರೆ. ಉಪಮೆಗಿಂತ ರೂಪಕದ ಹೆಚ್ಚುಗಾರಿಕೆಯೇನೆಂದರೆ ಇಲ್ಲಿ ಉಪಮಾನ-ಉಪಮೇಯಗಳಲ್ಲಿಯ ಭೇದ ಮರೆಯಾಗುತ್ತದೆ. ಈ "ಉಪಮಾನ ಉಪಮೇಯುಗಳ ನಡುವೆ ಇರುವ ಭೇದವು ಮರೆಯಾಗುವಂತೆ ವರ್ಣಿತವಾಗುವ ಉಪಮೆಯೇ ರೂಪಕ"ವೆಂದು ದಂಡಿ ಹೇಳಿದ್ದಾನೆ. ಉಪಮಾನ-ಉಪಮೇಯಗಳ ನಡುವಿನ ಅಭೇದದ ಆರೋಪವೇ ರೂಪಕವೆಂಬ ಅಭಿಪ್ರಾಯವನ್ನು ಭಾಮಹ,ವಾಮನ, ಮಮ್ಮಟ ಮೊದಲಾದವರೆಲ್ಲ ಹೊಂದಿದ್ದಾರೆ. ಅಂತೆಯೇ "ಸಾಮ್ಯವಿದ್ದಾಗ ಉಪಮೆ, ಅತಿಸಾಮ್ಯವಿರುವಾಗ ರೂಪಕ" ಎಂಬ ಮಾತು ಮೊದಲಾಗಿದೆ. ಸೂಕ್ಷ್ಮವಾಗಿ ವಿಚಾರಿಸಿದಾಗ ಹೋಲಿಸಲ್ಪಡುವ ಎರಡು ಸಂಗತಿಗಳ ನಿಜವಾದ ಅಭೇದ ಇಲ್ಲಿರುವುದಿಲ್ಲ. ಆ ಅಭೇದದ ಆರೋಪ ಇಲ್ಲಿ ಮುಖ್ಯವಾಗಿರುತ್ತದೆ. ಇದರಿಂದಾಗಿಯೇ ಉಪಮೆಗಿಂತ ರೂಪಕದ ಪರಿಣಾಮ ಹೆಚ್ಚು ತೀವ್ರತರವಾಗಿರುತ್ತದೆ. ರೂಪಕವು ಎರಡು ವಸ್ತುಗಳ ನಡುವೆ 'ಸಾಮ್ಯತೆ' ಯನ್ನು ಸಾಧಿಸುವುದಕ್ಕಿಂತ ಹೆಚ್ಚಾಗಿ 'ಏಕತೆ'ಯನ್ನು ಸಾಧಿಸುವುದಾಗಿರುತ್ತದೆ. ಉಪಮೆಯ ಸ್ವಭಾವ ಹರಡಿಕೊಳ್ಳುವುದಾದರೆ, ರೂಪಕದ್ದು ಕೇಂದ್ರೀಕರಣಗೊಳ್ಳುವುದು. ಉಪಮೆ ತರ್ಕಬದ್ಧವಾದದ್ದು ಹಾಗೂ ವಿವೇಚನೆಯುಳ್ಳದ್ದು. ಆದರೆ ರೂಪಕವು ಅಲೌಕಿಕ ಹಾಗೂ ಉದ್ಧತವಾದದ್ದು. ಪ್ರತಿಮೆಯೆಂಬುದು "ಪೂರ್ವಾನುಭವಗಳನ್ನು ನೆನಪಿನ ಬಲದಿಂದ ತನ್ನಲ್ಲಿ ಪುನರ್ನಿರ್ಮಿಸಿಕೊಳ್ಳುವ ಅಥವಾ ಅನುಭವಗಳಿಗೆ ಶಬ್ದರೂಪವೊಂದರಲ್ಲಿ ಆಕಾರಕೊಡುವ ಕ್ರಿಯೆ". ಇದು ಒಂದು ರೀತಿಯ ಚಿತ್ರವಂತಿಕೆಯನ್ನು ತಂದುಕೊಡುತ್ತದೆ.

ಸ್ವಭಾವದ ದೃಷ್ಟಿಯಿಂದ ನೋಡಿದಾಗ ಎಲ್ಲ ರೂಪಕಗಳೂ ಪ್ರತಿಮೆಗಳೆ ಎನ್ನಬಹುದು. ಏಕೆಂದರೆ ಹೆಚ್ಚಾಗಿ ಎಲ್ಲ ಪ್ರತಿಮೆಗಳು ರೂಪಗೊಳ್ಳುವುದು ರೂಪಕಗಳ ರೂಪದಲ್ಲಿಯೆ.

"ಇದ್ದುದನ್ನು ಇದ್ದಂತೆ, ನಡೆದುದನ್ನು ನಡೆದಂತೆಯೆ ಚಿತ್ರಿಸಬೇಕು ಎಂಬ ಪ್ರಯತ್ನಕ್ಕೆ ಹೋಗದೆ ಇದ್ದದ್ದು ನಡೆದದ್ದು ತನಗೆ ಹೇಗೆ ಗೋಚರಿಸಿತೋ ಆ ತನ್ನ ಅನುಭವಕ್ಕೆ ಆಕಾರ ಕಲ್ಪನೆ ಮಾಡುವ ಪ್ರಯತ್ನದ ರೀತಿಯನ್ನು ಪ್ರತಿಮಾ ವಿಧಾನವೆಂದು ಕರೆಯುತ್ತೇವೆ. ಪ್ರತಿಮಾದೃಷ್ಟಿಗೆ ವಸ್ತುವಿಗಿಂತಲೂ ಆ ವಸ್ತು ಪ್ರಚೋದಿಸುವ ಅನುಭವವೇ ವಿಶೇಷವಾಗಿ ಮಾನ್ಯ ವಿಷಯ. ಅಲ್ಲದೆ ವಸ್ತುವಿಗಿಂತಲೂ ಆ ವಸ್ತುವಿಗೆ ಕಾರಣವಾದ ಅಥವಾ ಪ್ರೇರಣವಾದ ಶಕ್ತಿ ಅಥವಾ ಚೈತನ್ಯವೇ ಪ್ರತಿಮಾದೃಷ್ಟಿಗೆ ಅಗ್ರಗಣ್ಯವಾದ ಪರಮ ಪ್ರಯೋಜನದ ಕಲಾವಿಷಯ .... ಪ್ರತಿಮಾವಿಧಾನವು ತತ್ವನಿಷ್ಠ... ಪ್ರತಿಮಾ ವಿಧಾನದ ಆಶಯ ಅತೀಂದ್ರಿಯವಾಗಿ ವಿಷಯಕ್ಕೆ ಕಾರಣಸ್ವರೂಪವೂ ಪ್ರಯೋಜನ ಸ್ವರೂಪವೂ ಆಗಿ ಕಾಲಿಕಮಾತ್ರವಾಗಿರದೆ ಧ್ಯೇಯಾತ್ಮಕವೂ ಆಗಿರುವ ಭಾವಸತ್ಯ. ಅಥವಾ ತಾದಾತ್ಮ್ಯಕಸತ್ಯ .... ಪ್ರತಿಮಾದೃಷ್ಟಿ ಅಪೂರ್ವವಾಗಿ ಲೌಕಿಕವಾಗಿದ್ದರೂ ಸಾಧಾರಣವಾಗಿ ಅಲೌಕಿಕ, ಅದರ ಪ್ರಯೋಜನ ವಿಚಾರವಾಗಿಯೂ ಆ ಮಾತೇ ಸಲ್ಲುತ್ತದೆ"[೨]

೨. ತಪೋನಂದನ ಪುಟ ೧೦೩

"ಪ್ರತಿಮೆ ಎಂಬುದು ಮೂಲಾನುಭವಕ್ಕೆ ನಾವು ನೀಡುವ ಆಕಾರವಲ್ಲ. ಅದು ಮೂಲಾನುಭವವು ತನಗೆ ಅನಿವಾರ್ಯವೂ ಆಗಿರುವ ಸಹಜಧರ್ಮದ ಪ್ರೇರಣಾಶಕ್ತಿಯಿಂದ ಪಡೆಯುವ ರೂಪಧಾರಣೆ. ಅದೊಂದು ಅವತರಣಕ್ರಿಯೆ"[೩] ಈ ಪ್ರತಿಮಾಕ್ರಿಯೆ ಒಂದು ಬಗೆಯ ಸೃಷ್ಟಿಯೇ ಸರಿ. ಇದರಿಂದ ಕಲೆಯಲ್ಲಿ ಸತ್ಯ ಮೈದೋರುತ್ತದೆ.

ಕಾವ್ಯದಲ್ಲಿಯ ಪ್ರತಿಮಾವಿಧಾನವು ಬಹುರೂಪಿಯಾಗಿದ್ದು ಅದು ಕಾವ್ಯದ ಒಂದೊಂದೂ ಪರಿಕರದಿಂದ ಮೊದಲುಗೊಂಡು ಇಡೀ ಕಾವ್ಯದ ಒಟ್ಟು ರೂಪದಲ್ಲೂ ಕಂಡುಬರುವಂತಹದಾಗಿದೆ. ಕೆಲವೊಮ್ಮೆ ಇಡೀ ಕಾವ್ಯವೇ ಒಂದು ಮಹೋನ್ನತ ದರ್ಶನಧ್ವನಿಗೆ ಬೃಹತ್ ಪ್ರತಿಮೆಯಾಗಿ ನಿಲ್ಲಬಹುದು. ಬಹುಶಃ ಆನಂದವರ್ಧನನು ಗುರುತಿಸಿದ 'ಪ್ರಬಂಧ ಧ್ವನಿ' ಇಂತಹದೇ.

ಸೂಕ್ಷ್ಮವಾಗಿ ನೋಡಿದರೆ ಪ್ರತಿಮಾ ಪ್ರಪಂಚದ ಮೂಲಕ ಒಂದು ನಾಡಿನ ಒಂದು ಕಾಲದ ಅನುಭವ ಸಮಸ್ತವೂ ಪ್ರಕಟಗೊಳ್ಳುತ್ತಿರುತ್ತದೆ. ನಮ್ಮ ಪ್ರಾಚೀನ ಪುರಾಣ, ಧರ್ಮ, ನಿಸರ್ಗಗಳೆಲ್ಲವೂ ಈ ಪ್ರತಿಮೆಗಳಿಗೆ ಆಕರಗಳಾಗಬಹುದು. ಪ್ರತಿಮಾನಿರ್ಮಾಣದ ಮೂಲಕ ಕವಿ ತನ್ನ ಹೊಸ ಅನುಭವಗಳನ್ನು ಹಳೆಯ ನಂಬಿಕೆಗಳಿಂದ ಶ್ರೀಮಂತಗೊಳಿಸಿಕೊಳ್ಳುತ್ತಾನೆ. ಅದಕ್ಕಾಗಿ ಅತ ಅವೆರಡರ ನಡುವೆ ಸಾದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಇದರಿಂದಾಗಿಯೇ ಪ್ರತಿಮೆಗಳು ರೂಪಕಾತ್ಮಕವಾಗುತ್ತವೆ. ಮೇರು, ಕೈಲಾಸ, ಕಲ್ಪತರು, ಸ್ಪರ್ಶವೇದಿನಿ, ಕಾಮಧೇನು, ಐರಾವತ, ವಡಬ, ಸಪ್ತಸಾಗರ, ಕುಲಾದ್ರಿ, ಹರಚಾಪ, ಸುರಚಾಪ, ಇಕ್ಷುಚಾಪ, ಅಪ್ಸರಿ, ದಿಗ್ಗಜ, ದಿಕ್ಪಾಲ, ಆದಿಕೂರ್ಮ, ಆದಿಶೇಷ, ಮಂದರ, ವಾಸುಕಿ, ಅಮೃತ, ಕಾಲಕೂಟ, ಹರಜತಾ, ಶಂಖ, ಚಕ್ರ, ಗದಾ ಇತ್ಯಾದಿ ಇತ್ಯಾದಿ. ಆಕಾಶ, ಕಮಲ, ಚಂದ್ರ, ಸೂರ್ಯ, ಗಜ, ಹರಿಣ, ಸಿಂಹ, ಫಣಿ, ಸಮುದ್ರ, ಪರ್ವತ, ಪಲ್ಲವ, ರಂಭೆ, ಬಿಂಬ, ಶುಕ, ಪಿಕ, ಮಲಯಾನಿಲ, ಮಲಯಜ, ಜರೂತ ಇತ್ಯಾದಿ ಇತ್ಯಾದಿ ಎಂದೆಲ್ಲ ಇವುಗಳನ್ನು ಪಟ್ಟಿ ಮಾಡಬಹುದಾಗಿದೆಯಾದರೂ ಇವಿಷ್ಟೇ ಬರಬಹುದೆಂದಲ್ಲ.

ಸೃಷ್ಟಿವಿಧಾನಗಳನ್ನು ಗಮನಿಸಿ ಕುವೆಂಪು ಅವರು ಪ್ರತಿಮೆಗಳಲ್ಲಿ ಅವರೋಹಣ ಮತ್ತು ಆರೋಹಣಗಳೆಂಬ ಪ್ರಕಾರಗಳನ್ನು ಗುರುತಿಸುತ್ತಾರೆ. 'ಅತೀತ ಲೋಕಗಳಲ್ಲಿಯ ಯಾವುದಾದರೂ ಶಕ್ತಿ ಅಥವಾ ದೇವತೆ ಇಂದ್ರಿಯ ಪ್ರಪಂಚದಲ್ಲಿ ಪ್ರಕಟವಾಗಬೇಕಾದರೆ ಅದು ಇಲ್ಲಿಯ ಕಾಲ-ದೇಶ ನಾಮರೂಪಗಳ ಚೌಕಟ್ಟಿಗೆ ಇಳಿದು ಮೈದೋರುತ್ತದೆ. ಅದು ಯಾವ ಪ್ರಯತ್ನಪೂರ್ವಕವಾದ ಕೃತಿರಚನೆಯ ಫಲವೂ ಆಗಿರುವುದಿಲ್ಲ. ಅದು ಸಹಜ ಸಂಭವ. ಒಂದು ಉದ್ದೇಶ ಸಾಧನೆಗಾಗಿ ತನ್ನ ಇಚ್ಛಾಶಕ್ತಿಯಿಂದಲೇ ತನಗೆ ತಾನೆ ಆಗುವ ಅವತರಣ. ಅದು ಅವರೋಹಣ ಕ್ರಮದ್ದಾಗಿರುತ್ತದೆ. ಆರೋಹಣ ಕ್ರಮದಿಂದ ಸಿದ್ಧವಾಗುವ ಇನ್ನೊಂದು ರೀತಿಯ ಪ್ರತಿಮೆ ಭಕ್ತಿಭಾವಮಯ ಪ್ರಚೋದನೆಯಿಂದ ಪ್ರೇರಿತವಾದರೂ ಭಾವದೀಪ್ತಾಬುದ್ಧಿಯ ನೆರವನ್ನು ಪಡೆದು ಪ್ರಜ್ಞಾಪೂರ್ವಕವಾಗಿಯೆ 'ರಚಿತವಾಗಿರುತ್ತದೆ. ಹಾಗೆ ರಚಿತವಾಗುವ ಪ್ರತಿಮೆಯಲ್ಲಿ ಉಪಾಸಕನ ಶ್ರದ್ಧೆಯು ಭಕ್ತಿಯು ಮತ್ತು ಅಭೀಪ್ಸೆಯ ಮಹಿಮೆಯಿಂದ, ಕರೆಯಿಂದ ಆಹ್ವಾನದಿಂದ ಪ್ರಾಣಪ್ರತಿಷ್ಠೆಯಾಗಿ ಅತೀತದ ದೇವತಾಶಕ್ತಿಯ ಆವಾಹನವಾಗುತ್ತದೆ. ಅಂತಹ ವಿಗ್ರಹವನ್ನು 'ಜಾಗೃತ ಪ್ರತಿಮೆ'ಯೆಂದು ಕರೆಯುತ್ತಾರೆ. ಮೊದಲನೆಯದರಲ್ಲಿ ತನ್ನ ವಿಗ್ರಹವನ್ನು ತಾನೆ ಮಾಡಿಕೊಳ್ಳುವ ಶಕ್ತಿ

---

೩. ತಪೋನಂದನ ಪುಟ ೩೪

ಅವತರಿಸಿ ಪ್ರತಿಮೆಯಾಗಿ ಮೂಡುತ್ತದೆ. ಎರಡನೆಯದರಲ್ಲಿ ಮೂಡಿದ ವಿಗ್ರಹಕ್ಕೆ ಶಕ್ತಿ ಅವತರಿಸಿ 'ಜಾಗ್ರತ'ವನ್ನಾಗಿಸುತ್ತದೆ.

ಕೆಲವು ರೂಪಕಗಳು ಅನೇಕ ಜನ ಕವಿಗಳಿಂದ ಬಳಕೆಗೊಂಡು ಕೇವಲ ಕಾವ್ಯಭಾಷಾಸಂಪ್ರದಾಯಗಳಂತೆ ತೋರತೊಡಗಿದಾಗ ಅವೇ ಕವಿಸಮಯಗಳೆನ್ನಿಸುತ್ತವೆ. ಅವುಗಳನ್ನು 'ಮೃತರೂಪಕ'ಗಳೆಂದು ಕರೆಯಲಾಗುತ್ತದೆ. ಆದರೆ ಸಮರ್ಥ ಕವಿಯೊಬ್ಬ ಸತ್ತ ರೂಪಕಕ್ಕೂ ಹೊಸ ಜೀವಕಳೆ ತುಂಬಬಲ್ಲನೆಂಬುದನ್ನು ನಾವು ಅಲ್ಲಗಳೆಯಲಿಕ್ಕಾಗದು. ಆದ್ದರಿಂದ ಕೇವಲ ಪ್ರತಿಮೆಯ ಪೌರಾಣಿಕತೆ ಹಾಗೂ ರೂಪಕದ ಪ್ರಾಚೀನತೆಗಳನ್ನು ಗುರುತಿಸಿ ಇವುಗಳಿಂದ ಕಾವ್ಯ ಸಶಕ್ತವಾಗಲಾರದೆಂದು ನಾವು ಹೇಳುವ ಹಾಗಿಲ್ಲ. ಏಕೆಂದರೆ ಪ್ರತಿಮೆ-ರೂಪಕಗಳಿಗೆ ಸಾರ್ಥಕ್ಯ ತಂತಾನೆ ಒದಗುವುದಿಲ್ಲ. ಅವುಗಳಿಗೆ ಕವಿಪ್ರತಿಭೆಯ ಸ್ಪರ್ಶವಾದಾಗ ಮಾತ್ರ ಅವು ಆಕರ್ಷಕವಾಗುತ್ತವೆ.

ಭಾರತೀಯ ಮತ್ತು ಪಾಶ್ಚಾತ್ಯ ಮೀಮಾಂಸಕರಿಬ್ಬರಲ್ಲೂ ಅಲಂಕಾರಗಳ ಸಂದರ್ಭದಲ್ಲಿ ಈ ಪ್ರತಿಮೆಯ ವಿಚಾರ ಬಂದಿದೆ. ಅಭಿವ್ಯಕ್ತಿ ಮಾಧ್ಯಮದಲ್ಲಿ ಅಲಂಕಾರಗಳ ಅನಿವಾರ್ಯತೆಯನ್ನು ಇಬ್ಬರೂ ಬಹುದಿನಗಳಿಂದ ಒಪ್ಪುತ್ತಾ ಬಂದಿದ್ದಾರೆ. ಭಾರತದಲ್ಲಿ ಭರತ-ಭಾಮಹಾದಿಗಳಲ್ಲಿ ಹಾಗೂ ಪಾಶ್ಚಾತ್ಯರಲ್ಲಿ ಅರಿಸ್ಟಾಟಲ್, ಲಾಂಗಿನಸ್ ಮೊದಲಾದವರಲ್ಲಿ ಇದರ ಚರ್ಚೆ ನಡೆದಿದೆ. ಇತ್ತೀಚೆಗೆ ಅಂದರೆ ಇಪ್ಪತ್ತನೆಯ ಶತಮಾನದಲ್ಲಿ ಎಜ್ರಾಪೌಂಡ್ ಹಾಗೂ ಅವನ ಗೆಳೆಯರಿಂದ "Im-agism"ಎಂಬ ಒಂದು ಸಾಹಿತ್ಯ ಚಳುವಳಿಯೇ ಪಾಶ್ಚಾತ್ಯರಲ್ಲಿ ನಡೆಯಿತು. ಪ್ರತಿಮೆ ಕೇವಲ ಅಲಂಕಾರಿಕವಾದದ್ದಲ್ಲ. ಕವನದ ಕ್ರಿಯಾತ್ಮಕ ಅಂಶವೆಂಬ ವಿಚಾರ ಪಾಶ್ಚಾತ್ಯರ ಇತ್ತೀಚಿನ ವಿಮರ್ಶೆಯಲ್ಲಿ ಗಟ್ಟಿಗೊಂಡಿರುವುದು ಕಾಣುತ್ತದೆ. ಹಿಂದಿನ ರೂಪಕವನ್ನೇ ಇಂದು ಪಾಶ್ಚಾತ್ಯರೂ ಪ್ರತಿಮೆ ಎಂದು ಭಾವಿಸಿರುವಂತೆ ತೋರುತ್ತದೆ. ರೂಪಕದ ಅವತಾರದ ಬಗ್ಗೆ ಭಾರತೀಯರೂ ಇದೇ ರೀತಿ ವಿಚಾರಿಸಿದ್ದಾರೆ. "ಉಪಮಾಲಂಕಾರದಿಂದ ಸಾದೃಶ್ಯಸೂಚಕ ಶಬ್ದವನ್ನು ಕಿತ್ತು ಹಾಕಿದರೆ ಬರುವ ಲಬ್ಧವೆ ರೂಪಕಾಲಂಕಾರ ಎಂಬ ಲೆಕ್ಕಾಚಾರ ನಡೆದಂತಿದೆ" ಎಂದು ವಿದ್ವಾಂಸರು ಗುರುತಿಸಿದ್ದಾರೆ.

ಈ ಅಂಶಗಳ ಬೆಳಕಿನಲ್ಲಿ ಮಹಾಕವಿ ಪಂಪನ ಕೃತಿಗಳಲ್ಲಿ ಬಂದಿರುವ ಪ್ರತಿಮಾ ಸಂಪತ್ತನ್ನು ವಿಶ್ಲೇಷಿಸಬಹುದಾಗಿದೆ.

ಭಾರತವು ಲೌಕಿಕ ಕಾವ್ಯ. ಧರ್ಮ ಹಾಗೂ ಅದರ ಸಾಧನೆಗಳು ಅಲ್ಲಿ ಲೌಕಿಕದ ಪರಿಧಿಯಲ್ಲಿಯೇ ನಡೆಯುತ್ತವೆ. ಅಂತೆಯೇ ಅಲ್ಲಿ ಜೀವನಚಿತ್ರಗಳು ಹೆಚ್ಚಾಗಿ ಯಥಾರ್ಥವಾಗಿ ಅಂದರೆ ಅವು ಇರುವಂತೆಯೇ ರೂಪಗೊಂಡಿವೆ. ಹೀಗಾಗಿ ಅಲ್ಲಿ ಪ್ರಕೃತವನ್ನು ದಾಟಿ ಹೊರಗೆ ಹೋಗಿ ಸ್ವಚ್ಛಂದವಾಗಿ ಕಲ್ಪನೆ ಮಾಡುವ ಅವಕಾಶ ಕವಿಗೆ ಅಷ್ಟಾಗಿ ದೊರೆತಂತಿಲ್ಲ.

ಆದರೆ ಆದಿಪುರಾಣದ ಕಥೆ ಬೇರೆ, ಉದ್ದೇಶ ಬೇರೆ. ಅದು ಅಲೌಕಿಕ (ಆಗಮಿಕ) ಕಾವ್ಯ. ಅಲೌಕಿಕ ಸಿದ್ಧಿ ಅದರ ಅಂತಿಮ ಗುರಿ. ಹೀಗಾಗಿ ಅಲ್ಲಿಯ ಪಾತ್ರಗಳು, ಪ್ರಸಂಗಗಳು ಸ್ವಾಭಾವಿಕವಾಗಿ ಈ ಲೋಕದ ಪರಿಧಿಯನ್ನು ದಾಟಿಬಿಡುತ್ತವೆ. ಅವು ಲೋಕಲೋಕಗಳಲ್ಲಿ ಜನ್ಮ ಜನ್ಮಗಳಲ್ಲಿ ಸಂಚರಿಸಿ ಮನುಷ್ಯ ಪ್ರಯತ್ನ ಮತ್ತು ಕಲ್ಪನೆಗೆ ನಿಲುಕಬಹುದಾದ ಅತ್ಯುನ್ನತ ಪದವಿಯನ್ನು ಸಂಪಾದಿಸಿಕೊಳ್ಳುತ್ತವೆ. ಇದರಿಂದಾಗಿ ಆದಿಪುರಾಣದಲ್ಲಿ ತನ್ನ ಕಲ್ಪನೆಯ ಭೂಮತೆಯನ್ನು

ಸಾಧಿಸಿಕೊಳ್ಳುವುದು ಕವಿಗೆ ತುಂಬ ಸುಲಭವಾದಂತೆ ತೋರುತ್ತದೆ. ಹೀಗಾಗಿ ಪ್ರತಿಮೆಗಳು ಪಂಪನ ಎರಡೂ ಕೃತಿಗಳಲ್ಲಿ ಸಮಪ್ರಮಾಣದಲ್ಲಿ ಬಂದಿಲ್ಲ. ಅಷ್ಟೇ ಅಲ್ಲ ಹೆಚ್ಚಿನ ಉತ್ಕೃಷ್ಟ ಪ್ರತಿಮೆಗಳು ನಮಗೆ ಕಾಣಸಿಗುವುದು ಆದಿಪುರಾಣದಲ್ಲಿಯೇ ಎಂದು ಅನ್ನಿಸುತ್ತದೆ.

ಹಾಗಿದ್ದರೂ ಒಳ್ಳೆಯ ಸಾಹಿತ್ಯವೆಲ್ಲವೂ ಪ್ರತಿಮಾ ಕ್ಷೇತ್ರವೇ ಆಗಿರುತ್ತದೆ. ಪಂಪನ ಕೃತಿಗಳಿಗೂ ಈ ಮಾತು ಅನ್ವಯಿಸುತ್ತದೆ. ಒಂದನ್ನು ಇನ್ನೊಂದನ್ನಾಗಿ ನಿರ್ದೇಶಿಸುವಲ್ಲಿಯೇ ಒಬ್ಬ ಕವಿಯ ಕಲೆಗಾರಿಕೆ ಹುದುಗಿದೆ. ಪಂಪ ಆ ಕಲೆಯಲ್ಲಿ ಸಿದ್ಧಹಸ್ತ. ಅವನ ಎರಡೂ ಕೃತಿಗಳಲ್ಲಿ ಹೇರಳವಾದ ಸಂಖ್ಯೆಯ ವೈವಿಧ್ಯಮಯ ಪ್ರತಿಮೆಗಳು ಲಭ್ಯವಿದ್ದು, ಅವುಗಳಲ್ಲಿ ಮಹತ್ವದ ಕೆಲವನ್ನು ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

ಮೊದಲನೆಯದಾಗಿ ಆತನ ವಿಕ್ರಮಾರ್ಜುನ ವಿಜಯ, ಇತಿಹಾಸಪುರುಷನಾದ ಅರಿಕೇಸರಿಯನ್ನು ಪುರಾಣಪುರುಷನಾದ ಅರ್ಜುನನಿಗೆ ಹೋಲಿಸಿದುದರ ತಂತ್ರವೇ ಮೂಲತಃ ಒಂದು ಪ್ರತಿಮಾಕ್ರಿಯೆಯಾಗಿರುವುದನ್ನು ನಾವು ಈ ಕೃತಿಯಲ್ಲಿ ಕಾಣುತ್ತೇವೆ. ಈ ಅರ್ಥದಲ್ಲಿ ಇಡೀ ವಿಕ್ರಮಾರ್ಜುನ ವಿಜಯವೇ ಒಂದು ಪ್ರಸಂಗ ಪ್ರತಿಮೆಯೆಂದರೂ ನಡೆದೀತು.

ಪಂಪಭಾರತ ಆರಂಭಗೊಳ್ಳುವುದೇ ಒಂದು ಮಹಾ ಪ್ರತಿಮೆಯಿಂದ: ಶ್ರೀಯನರಾತಿಸಾಧನಪಯೋನಿಧಿಯೊಳ್ ಪಡೆದುಂ ಧರಿತ್ರಿಯಂ ಜೀಯೆನೆ ಬೇಡಿಕೊಳ್ಳದೆ . . . "(ಪಂ.ಭಾ-೧-೧) ಸಮುದ್ರಮಥನದಲ್ಲಿ ದೇವಾಧಿದೇವತೆಗಳು ಲಕ್ಷ್ಮಿಯನ್ನು ಪಡೆದಂತೆ ಅರಿಕೇಸರಿಯು ಶತ್ರು ಸಮೂಹವೆಂಬ ಸಮುದ್ರವನ್ನು ತನ್ನ ಖಡ್ಗದಿಂದ ಮಥಿಸಿ ರಾಜ್ಯಲಕ್ಷ್ಮಿಯನ್ನು ಪಡೆದನೆಂಬುದು ಇಲ್ಲಿಯ ಅದ್ಭುತ ಕಲ್ಪನೆ. ಈ ಪೌರಾಣಿಕ ಪ್ರತಿಮೆ ಆರಂಭದಿಂದಲೇ ಕಾವ್ಯಕ್ಕೆ ಒಂದು ಬಗೆಯ ಗಂಭೀರ ಸುಂದರತೆಯನ್ನು ಒದಗಿಸಿದೆಯೆನ್ನಬಹುದು. ಅರಿಕೇಸರಿಯ ಅಗಾಧ ವ್ಯಕ್ತಿತ್ವ ಪಂಪನಿಗೆ ಕಂಡದ್ದು ಹೀಗೆ:

" ಮುಳಿಸುಲಲಾಟನೇತ್ರ ಶಿಖಿ ಮೆಚ್ಚೆ ವಿನೂತರಸಪ್ರಸಾದಮು
ಜ್ಜಳ ಜಸಸಮಾಗಸಂಗತಲಸದ್ಧಸಿತಂ ಪ್ರಭುಶಕ್ತಿ ಶಕ್ತಿ ನಿ
ರ್ಮಳ ಮಣಿಭೂಷಣಂ ಫಣಿವಿಭೂಷಣಮಾಗೆ ನೆಗಳ್ತೆಯಂ ಪುದುಂ
ಗೊಳಿಸಿದನೀಶ್ವರಂ ನೆಗಳ್ಬುದಾರ ಮಹೇಶ್ವರನೀಗೆ ಭೋಗಮುಂ "(ಪಂ.ಭಾ.೧-೨)

ಇಲ್ಲಿ ಅರಿಕೇಸರಿಯ ಸಿಟ್ಟು, ಶಾಂತಿ, ಯಶಸ್ಸು, ಶಕ್ತಿ, ನೆಗಳ್ತೆಗಳನ್ನೆಲ್ಲ ಶಿವನ ಗುಣಗಳಿಗೆ ಹೋಲಿಸುವ ಮೂಲಕ ಅರಿಕೇಸರಿಯ ಹೆಗ್ಗಳಿಕೆಯನ್ನು ಸಾರಲಾಗಿದೆ. ಇಲ್ಲಿಯ ಪ್ರತಿಯೊಂದೂ ಅನ್ವಯಗಳನ್ನು ಕಲ್ಪಿಸಿ ಆನಂದಿಸಬೇಕು. ಪಂಪನ ಸಹಜಕಾವ್ಯಸ್ಫುರಣೆಯ ಅತ್ಯಾಕರ್ಷಕ ಉದಾಹರಣೆ ಇದಾಗಿದೆ.

ಸಕಲಗುಣಗಳಿಂದ ಕೂಡಿದ ತನ್ನ ಕಾವ್ಯಕನ್ನಿಕೆಯನ್ನು ಅರಿಕೇಸರಿಗೆ ಅರ್ಪಿಸಿದ ವಿಚಾರವನ್ನು ಪಂಪ ತಿಳಿಸುವುದೂ ಇನ್ನೊಂದು ಪ್ರತಿಮಾ ಚಿತ್ರದ ಮೂಲಕವೇ. "ಆ ಸಕಳಾರ್ಥಸಂಯುತಮಳಂಕೃತಿಯುಕ್ತಮುದಾತ್ತವೃತ್ತಿವಿನ್ಯಾಸಮನೇಕಲಕ್ಷಣಗುಣಪ್ರಭವಂ . . . . ಕೂಸುಮನೀವುದೀವುದರಿಕೇಸರಿಗಲ್ಲವಸ್ತುಗೀವುದೇ "(ಪಂ. ಭಾ.೧-೯) ತಾನು ರಚಿಸಿದ ಕೃತಿಗೆ

ಆಕರವಾಗಿ ನಿಂತ ಕೃತಿ ಎಂಥದು ? ವ್ಯಾಸಮುನೀಂದ್ರರುಂದ್ರವಚನಾಮೃತವಾರ್ದಿಯಂತೆ !

ಹಸ್ತಿನಾಪುರದ ಕೆರೆಗಳು "ಗಗನತಳಮೆ ಪರಿದು ಬಿಳ್ದುದೆನಿಪ ಬಹುತಟಾಕ"ಗಳು. (ಪಂ.ಭಾ.೧-೫೮) ಶಂತನು ಮತ್ಸ್ಯಗಂಧಿಯ ಕೈ ಹಿಡಿಯುವ ಪ್ರಸಂಗದಲ್ಲಿ ಪಂಪ ಮತ್ತೊಂದು ಹಳೆಯ ಸಾಮಾಜಿಕ ರೂಢಿಯನ್ನೇ ಸಾದೃಶ್ಯವನ್ನಾಗಿ ಬಳಸಿದ್ದಾನೆ. ಅವಳ ಕೈಯನ್ನು ಆತ ಹಿಡಿದ ಚಿತ್ರ "ನಲ್ಮೆಗೆ ದಿಬ್ಯ"ವನ್ನು ಹಿಡಿದಂತೆ ಕಂಡಿತೆನ್ನುವ ಪಂಪನ ಮಾತಿನ ಹಿಂದೆ ಕವಿಯ ಸಾಂಸ್ಕೃತಿಕ ಪ್ರಜ್ಞೆ ಇರುವುದನ್ನು ನಾವು ಗುರುತಿಸಬೇಕು.

ಕೂಸಾಗಿದ್ದ ಕರ್ಣನನ್ನು ಕುಂತಿ ಮಡುವಿನಲ್ಲಿ ಹಾಕಿದ ಪ್ರಸಂಗ ಪಂಪ ಸೃಷ್ಟಿಸಿದ ಇನ್ನೊಂದು ಶಬ್ದಚಿತ್ರವಾಗಿದೆ.

"ಬಾಳದಿನೇಶ ಬಿಂಬದ ನೆಳಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂ
ದ್ರಾಳಯದಿಂದಮುರ್ಚಿದ ಫಣಾಮಣಿಮಂಗಳ ರಶ್ಮಿಯೋ ಕರಂ
ಮೇಳಿಸಿದಪ್ಪುದೆನ್ನರ್ದೆಯನೆಂದು ಬೋದಿಲ್ಲನೆ ಪಾಯ್ದು ನೀರೊಳಾ
ಬಾಳನನಾದಮಾದರದೆ ಕಂಡೊಸೆದಂ ನಿಧಿಗಂಡನಂತೆವೋಲ್ "(ಪಂ.ಭಾ.೧-೯೬)

ಇಲ್ಲಿ ಪರಿಚಿತವನ್ನು ಹಲವಾರು ನೈಸರ್ಗಿಕ ಪ್ರಸಂಗಗಳಿಗೆ ಹೋಲಿಸುವ ಮೂಲಕ ಪಂಪ ಈ ಒಟ್ಟು ಪ್ರಸಂಗಕ್ಕೆ ಭವ್ಯತೆಯನ್ನು ಒದಗಿಸಿದುದನ್ನು ಕಾಣಬಹುದಾಗಿದೆ.

ಪಾಂಡುರಾಜನ ಕಣ್ಣಲ್ಲಿ ಸ್ತ್ರೀಯರು ಕಾಣುವುದು "ಅನಂಗಜಂಗಮಲತಾ ಲಲಿತಾಂಗಿಯರಾಗಿ".ಸಾಧಾರಣದಿಂದ ಕಾವ್ಯ ಅದ್ಭುತತೆಗೇರುವುದು ಇಂಥ ಶ್ರೀಮಂತ ಕಲ್ಪನೆಗಳಿಂದಲೇ.

ಮುಂದೆ ಕುಂತಿಯ ಗರ್ಭದಲ್ಲಿ ಜರುಗಿದ ಧರ್ಮರಾಜನ ಜನನದ ಪ್ರಸಂಗಕ್ಕಾಗಿ ಪಂಪ ವಿಶೇಷವಾದ ಪ್ರತಿಮೆಯೊಂದನ್ನು ನಿರ್ಮಿಸಿಕೊಂಡಿದ್ದಾನೆ.

"ವನನಿಧಿಯಿಂದಂ ಚಂದ್ರಂ ವಿನತೋದರದಿಂ ಗರುತ್ಮನುದಯಾಚಳದಿಂ
ದಿನಪನೊಗೆವಂತೆ ಪುಟ್ಟಿದನನಿವಾರ್ಯ ಸುತೇಜನೆನಿಪನಿನಜನ ತನಯಂ"(ಪಂ.ಭಾ.೧-೧೨೧)

ಇದೂ ಕೂಡ ನೈಸರ್ಗಿಕ ಪ್ರಸಂಗವನ್ನು ಬಳಸಿಕೊಂಡು ರಚಿಸಿದ ಒಂದು ಪ್ರತಿಮೆಯಾಗಿದೆ. ಇಷ್ಟು ಹೇಳಿದರೆ ಪಂಪನಿಗೆ ಸಮಾಧಾನವಿಲ್ಲ. ಅಂತೆಯೇ ಆತ "ಧರ್ಮನೊಂದಿಗೆ ಧರ್ಮವೂ ಹುಟ್ಟಿತು" ಎಂದು ಹೇಳುತ್ತಾನೆ.

ಕೌರವರ ಹುಟ್ಟಿನ ಪ್ರಸಂಗದಲ್ಲಿ ಪಂಪ ಮತ್ತೆ ಪೌರಾಣಿಕ ಪ್ರಸಂಗವಾದ ಸಮುದ್ರ ಮಥನ ಪ್ರಸಂಗವನ್ನೇ ಉಪಯೋಗಿಸಿಕೊಳ್ಳುತ್ತಾನೆ.

"ಪೊಸೆದೊಡೆ ಪಾಲ್ಗಡಲಂ ಮಗುಳ್ದಸುರರ್ ಪೊಸೆದಲ್ಲಿ ಕಾಳಕೂಟಾಂಕುರಮಂ
ದಳದಳಮೊಗೆದಂತೊಗೆದುವು ಬಸಿರಿಂ ನೂರೊಂದು ಪಿಂಡಮರುಣಾಕೀರ್ಣ" ಪಂ.ಭಾ.೧-೧೩೦

ಭೀಮನ ಗದೆಯ ಘಟನೆಯಿಂದ ವೈಶಂಪಾಯ ಸರೋವರದಲ್ಲಿ ದೊರಕುವ ದುರ್ಯೋಧನನನ್ನು ಸಂಕೇತಿಸಲು ಪಂಪ ಇದೇ ಪ್ರಸಂಗವನ್ನು ಬಳಸಿದ್ದಾನೆ.(ಪಂ.ಭಾ ೧೩-೮೨)

ಇಂದ್ರನನ್ನು ಕುಂತಿ ಆಹ್ವಾನಿಸಿದಾಗ ಆತ ಬರಲು ತಗಲುವ ಸಮಯವೆಷ್ಟು? ಅದನ್ನು ಪಂಪನ ಮಾತಿನಲ್ಲೇ ಕೇಳಿರಿ "ನೆನೆದ ಮನಂ ಪೆರಗುಳಿದತ್ತೆನೆ . . . . "ಅತ ಪ್ರತ್ಯಕ್ಷನಾಗಿಬಿಟ್ಟನಂತೆ. (ಪಂ.ಭಾ.೧-೧೩೮). ಇಂದ್ರನ ಅಂಶದಿಂದ ಹುಟ್ಟಿದ ಅರ್ಜುನನ ಜನನದ ಪ್ರಸಂಗವು ಪಂಪ ಸೃಷ್ಟಿಸಿದ ಅತ್ಯಪೂರ್ವ ಪ್ರತಿಮೆಗಳಲ್ಲಿ ಒಂದಾಗಿದೆ. "ಕುಲಗಿರಿಗಳ ಬಿಣ್ಪುಮಂ ಧರಾತಳದ ತಿಣ್ಪುಮಂ ಆದಿತ್ಯನ ತೇಜದಗುಂತಿಯುಮಂ ಚಂದ್ರನ ಕಾಂತಿಯುಮಂ ಮದನನ ಸೌಭಾಗ್ಯಮುಮಂ ಕಲ್ಪತರುವಿನುದಾರಶಕ್ತಿಯುಮನೀಶ್ವರನ ಪ್ರಭುಶಕ್ತಿಯುಮಂ ಜವನ ಬಲ್ಲಾಳ್ತನಮುಮಂ ಸಿಂಹನ ಕಲಿತನಮುಮಂ ಅವರವರ ದೆಸೆಗಳಿಂ ತೆಗೆದೊರದುಮಾಡಿ ಕುಂತಿಯ ದಿವ್ಯಗರ್ಭೋದರಮೆಂಬ ಶುಕ್ತಿಪುಟೋದರದೊಳ್ ತನ್ನ ದಿವ್ಯಾಂಶಮೆಂಬ ಮುಕ್ತಾಫಲೋದ ಬಿಂದುವನಿಂದ್ರಂ ಸಂಕ್ರಮಿಸಿ ನಿಜನಿವಾಸಕ್ಕೆ ಪೋದನ್ "(ಪಂ.ಭಾ. ೧-೧೩೯ ವ.) ಕಥಾನಾಯಕನಾದ ಅರ್ಜುನನ ಗುಣಾತಿಶಯವನ್ನು ಸಾಧಿಸಲು ಪಂಪ ಈ ನಿಸರ್ಗದಲ್ಲಿ ದೊರೆಯಬಹುದಾದ ಸರ್ವಶ್ರೇಷ್ಠ ಗುಣಗಳನ್ನೆಲ್ಲ ಇಲ್ಲಿ ಸಾರ್ಥಕವಾಗಿ ಬಳಸಿಕೊಂಡಿದ್ದಾನೆ. ಈ ಒಂದೊಂದೂ ಸಾದೃಶ್ಯವನ್ನು ಕಲ್ಪಿಸಿಕೊಂಡು ಆಸ್ವಾದಿಸಬೇಕು.

ಹೀಗೆ ಪ್ರತಿಮಾನಿರ್ಮಾಣದ ಸಂದರ್ಭದಲ್ಲಿ ಪಂಪನಿಗೆ ಆಕರಗಳಾಗಿ ನಿಂತವು ಎರಡು ಮೂಲಗಳು. ಒಂದು ಪುರಾಣ, ಇನ್ನೊಂದು ನಿಸರ್ಗ. ಸಮುದ್ರಮಥನದ ಒಂದೇ ಪ್ರಸಂಗವನ್ನು ಆತ ನಾಲ್ಕಾರು ಕಡೆಗಳಲ್ಲಿ ದುಡಿಸಿಕೊಂಡಿದ್ದಾನೆ. ಭೀಮಪ್ರತಿಜ್ಞೆಯ ಸಂದರ್ಭದಲ್ಲಿಯ "ಸುರಸಿಂಧುಪ್ರಿಯಪುತ್ರ ಕೇಳ್ ಕಳಶಜಾ ನೀಂ ಕೇಳ್, ಕೃಪಾ ಕೇಳ್ ಮಂದರದಿಂದಂಬುಧಿಯಂ ಕಲಕಿದ ಸುರಪ್ರಧ್ವಂಸಿಯವೋಲ್ ಬಾಹುಮಂದರದಿಂದಂ ವೈರಿ ಬಲಾಬ್ಧಿಘೂರ್ಣಿಸೆ ಬಿಗುರ್ತೀ ಕೌರವರ್ ಕೂಡೆನೂರ್ವರುಮಂ ಕೊಲ್ವೆನಿದೆನ್ನ ಪೂಣ್ಕೆ ನುಡಿದೆಂ ನಿಮ್ಮೀ ಸಭಾಮಧ್ಯದೊಳ್ "(ಪಂ.ಭಾ. ೭-೧೫) ಎಂಬಲ್ಲಿಯ ಹೋಲಿಕೆ ಪಂಪಭಾರತದ ಆರಂಭದಲ್ಲಿಯೂ ಬಂದಿದೆ. ಆದರೂ ಒಂದೊಂದು ಸಂದರ್ಭದಲ್ಲಿ ಪಂಪ ಅದನ್ನು ಬೇರೆ ಬೇರೆ ಅರ್ಥದಲ್ಲಿ ಬಳಸಿಕೊಂಡದ್ದು ತುಂಬ ಔಚಿತ್ಯಪೂರ್ಣವಾಗಿದೆ. ಸಾಮಾನ್ಯದೃಷ್ಟಿಗೆ ವಾಚ್ಯವೆನ್ನಿಸಬಹುದಾದ ಈ ಪ್ರಸಂಗಗಳು ಅಸದಳವಾದ ಪರಿಣಾಮ ಬೀರುವುದು ಕುತೂಹಲದ ಸಂಗತಿಯಾಗಿದೆ.

ಪಾಂಡವರು ಅಜ್ಞಾತವಾಸ ಪ್ರಸಂಗದಲ್ಲಿ ಛದ್ಮವೇಷಧಾರಗೆ ಮಾಡಬೇಕಾಗಿ ಬಂದುದನ್ನು ಪಂಪ "ಎಳೆಯುಂ ವಿಕ್ರಮದಿಂ ತರಲ್ ಮಹಿಧರಂ ಮುನ್ ಪಂದಿಯಾದಂತೆ(ಪಂ.ಭಾ. ೮-೫೫) ಎಂಬ ಪುರಾತನ ಪ್ರಸಂಗಕ್ಕೆ ಹೋಲಿಸುತ್ತಾನೆ.

ಪಂಪಭಾರತದ ವೈಶಂಪಾಯನಸರೋವರ ಪ್ರಸಂಗವು ಪಂಪ ಸೃಷ್ಟಿಸಿದ ಮತ್ತೊಂದು ಅತ್ಯುತ್ತಮ ಪ್ರಸಂಗಪ್ರತಿಮೆಯಾಗಿದೆ. ಅದನ್ನು ಕವಿ ನಮಗೆ ಪರಿಚಯಿಸುವ ರೀತಿಯೇ ಹಾಗಿದೆ. "ಇದು ಪಾತಾಳ ಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮೂಡಿದ ಕೂಪಂ ಪೆರತಲ್ತಿದುಗ್ರ ಲಯಕಾಳಾಂಬೋಧರಚ್ಛಾಯೆ ತಾ ಪುದಿದಿರ್ದತ್ತು ಸರೋವರಂ ಬಕ ಬಳಾಕಾನೀಕ ರಾವಾಕುಳಂ "(ಪಂ.ಭಾ ೧೩-೭೨.) ಕೇಳಿದಾಕ್ಷಣ ಭೀಭತ್ಸ ಭಯಾನಕವಾದ ಚಿತ್ರವೊಂದು ನಮ್ಮ ಕಣ್ಣೆದುರಿಗೆ

ಮೂಡಿಬಿಡುತ್ತದೆ. ಇಲ್ಲಿ ಪಂಪ ಬಳಸಿದ ಮೂರು ರೂಪಕಗಳು ದುರ್ಯೋಧನನ ಜೀವಿತಸ್ಥಿತಿ ಹಾಗೂ ಅವಸಾನಗಳಿಗೆ ಕಿತ್ತಿದ ಅರ್ಥಪೂರ್ಣಪ್ರತಿಮೆಗಳಾಗಿವೆ. ದುರ್ಯೋಧನನ ಕುಸಿತ, ಅಸಹಾಯಕತೆಯಿಂದ ಆತ ಕಂಗೆಟ್ಟು ನಿಂತಿರುವ ರೀತಿಗಳನ್ನು ತಿಳಿಸುತ್ತಾ ಮುಂದೆ 'ಪೆರತಲ್ತು ಇದು ಉಗ್ರ ಲಯಕಾಳಾಂಬೋಧರಚ್ಛಾಯೆ ತಾನೆ ದಲೆಂಬಂತಿರೆ' ಎಂಬ ಹೇಳಿಕೆ ದುರ್ಯೋಧನನಿಗೆ ಒದಗಿರುವ ಘೋರ ಆಘಾತ ಮತ್ತು ಅಂತ್ಯಗಳನ್ನು ಸ್ಪಷ್ಟವಾಗಿ ಸಾರಿ ಹೇಳುತ್ತದೆ. ಮಾತು ಕಾವ್ಯವಾಗಿ ಪರಿಣಮಿಸುವುದು ಇಂಥಲ್ಲಿಯೇ. ಇಲ್ಲಿಯ ರೂಪಕಗಳನ್ನು ಕವಿ ಕೇವಲ ಅಲಂಕಾರಮಾತ್ರಗಳಾಗಿ ಬಳಸಿಲ್ಲ. ಅವುಗಳಿಂದ ಏನೋ ಒಂದು ಹೆಚ್ಚಿನದನ್ನು ಸೂಚಿಸಲು ಆತ ಯತ್ನಿಸಿದ್ದಾನೆ. ಅದೇ ದರ್ಶನ, ಅದೇ ಧ್ವನಿ, 'ಪಾತಾಳ ಬಿಲಕ್ಕೆ ದಲ್ ಬಾಗಿಲ್' ಎಂಬುದು ಇಲ್ಲಿ ಕೇವಲ ಸರೋವರದ ಆಳಮಾತ್ರವನ್ನು ಸೂಚಿಸುವುದಿಲ್ಲ. ಅದು ದುರ್ಯೋಧನನ ಪತನದ ಆಳ, ಅದರ ಆಳ ಪಾತಾಳದವರೆಗೂ ಇದೆ. ಘೋರಾಂಧಕಾರಕ್ಕೆ ಮಾಡಿದ ಕೂಪಂ' ಎಂಬುದು ಕೇವಲ ಕಪ್ಪಾದ ನೀರು ಮಾತ್ರವಲ್ಲ ದುರ್ಯೋಧನನ ಅಪಕೀರ್ತಿ ಹಾಗೂ ಅವನ ಬದುಕಿಗೆ ಕವಿದ ಘೋರ ಅಂಧಕಾರಗಳು ಎಂದಂತೆ. 'ಉಗ್ರ ಲಯಕಾಳಾಂಬೋಧರಚ್ಛಾಯೆ' ಎಂಬ ರೂಪಕದಲ್ಲಿಯ 'ಲಯ' ಮತ್ತು 'ಕಾಲ' ವೆಂಬ ಶಬ್ದಗಳಂತೂ ದುರ್ಯೋಧನನಿಗೆ ಒದಗಿದ ಅವಸಾನವನ್ನು ಘಂಟಾಘೋಷವಾಗಿ ಸಾರಿ ಹೇಳುವಂತಿವೆ. ಒಟ್ಟಾಗಿ ದುರ್ಯೋಧನನ ಮರಣವೇ ಸರೋವರದ ರೂಪ ಧರಿಸಿ ನಿಂತಿದೆಯೋ ಎಂಬಂತೆ ಈ ಪ್ರಸಂಗ ಮೂಡಿ ಬಂದಿದೆ. ಇಲ್ಲಿ ಬಂದಿರುವ ಎಲ್ಲ ರೂಪಕಗಳು ಸಹಜವಾಗಿದ್ದು ಸ್ವಭಾವೋಕ್ತಿಗಳಾಗಿವೆ.

ಇದರ ನಂತರದ ಪದ್ಯ (೧೩-೭೩) ದಲ್ಲಿ ಬಂದಿರುವ 'ಇಲ್ಲಿ ಬಾಳ್ವರಂ ಕದಡದಿರ್' ಎಂಬ ಮಾತು ತುಂಬ ಧ್ವನಿಪೂರ್ಣವಾಗಿದೆ. ಊಹಿಸಿದಷ್ಟೂ ಅದರ ಅರ್ಥ ಹೆಚ್ಚಾಗುತ್ತಲೇ ಹೋಗುತ್ತದೆ. "ಸುಖದಿಂದ ಬದುಕಿದ್ದ ನಿನ್ನ ಸಹೋದರರನ್ನು ಸಹಚರರನ್ನು ಹಾಳು ಮಾಡಿದ ನೀನು ಈ ಕೊಳವನ್ನು ಪ್ರವೇಶಿಸಿ ಇಲ್ಲಿಯ ಜೀವರಾಶಿಯನ್ನಷ್ಟು ಹಾಳು ಮಾಡಬೇಡ. . . . ಇತ್ತ ಬಾರದಿರು ಸಾರದಿರು" ಎಂದು ಸರೋವರದಲ್ಲಿಯ ಪಕ್ಕಿಗಳು ದುರ್ಯೋಧನನಿಗೆ ಹೇಳಿದವಂತೆ. ಬಹುಶಃ ದುರ್ಯೋಧನನಿಗೆ ಒದಗಿದ ದುಸ್ಥಿತಿಯನ್ನು ಪ್ರಕಟಿಸಲು ಇದಕ್ಕಿಂತ ಸಶಕ್ತವಾದ ಪರಿಣಾಮಕಾರಿಯಾದ ತಂತ್ರ ಇನ್ನೊಂದು ಸಿಗಲಿಕ್ಕಿಲ್ಲ.

•

ದುರ್ಯೋಧನ ಕೊಳದಲ್ಲಿ ಮುಳುಗುವ ಸನ್ನಿವೇಶ ಒಂದು ನಿಸರ್ಗಪ್ರತಿಮೆಯಾಗಿದೆ. "ಬೆಳಗಿ ಸಮಸ್ತ ಭೂವಳಯಮಂ ನಿಜತೇಜದಿನಾಂತ ದೈತ್ಯರು ತಳವೆಳಗಾಗೆ ಕಾದಿ ಬೆಳತೆಯ್ದು ಬಳಲ್ದಪರಾಂಬುರಾಶಿಯೊಳ್ ಮುಳುಗುವ ತೀವ್ರ ದೀಧಿತಿವೊಲಾ ಕೊಳದೊಳ್ ಫಣಿರಾಜ ಕೇತನಂ ಮುಳಿಗಿದನಾರ್ಗಮೇಂ ಬಿದಿಯಂ ಕಟ್ಟಿದುದಂ ಕಳೆಯಲ್ಕೆ ತೀರ್ಗುಮೇ "(ಪಂ.ಭಾ -೧೩-೭೪.) ತನ್ನ ಬೆಳಕಿನಿಂದ ಇದುವರೆಗೆ ಕತ್ತಲೆಯೆಂಬ ದೈತ್ಯನೊಂದಿಗೆ ಹೋರಾಡಿ ದಣಿದ ಸೂರ್ಯ ಸಂಜೆಯ ಹೊತ್ತಿಗೆ ಸಮುದ್ರದಲ್ಲಿ ಇಳಿದನಂತೆ. ವಾಸ್ತವವಾಗಿ ಪಂಪ ಇಲ್ಲಿ ಪ್ರತಿನಾಯಕನಾದ ದುರ್ಯೋಧನನ ಘನತೆ-ಗೌರವಗಳನ್ನು ಹೆಚ್ಚಿಸಿದ್ದಾನೆ. ಅಂತೆಯೇ ಕುವೆಂಪು ಇದನ್ನು "ಪ್ರತಿನಾಯಕನಿಗೆ ಉಜ್ವಲವಾದ ತೇಜಸ್ಸಿನ ಉಪಮಾಕಿರೀಟವನ್ನಿಟ್ಟ ಪ್ರಸಂಗ " ವೆಂದು ಗುರುತಿಸಿದ್ದಾರೆ.

ಸರೋವರದಿಂದ ಮೇಲೇಳುವ ದುರ್ಯೋಧನನ ಚಿತ್ರ ಸಮುದ್ರ ಮಥನದಲ್ಲಿ ಉದಿಸಿದ ಕಾಲಕೂಟ" ದ ಹಾಗೆ ಕವಿಯ ಕಣ್ಣಿಗೆ ಕಾಣುತ್ತದೆ.(ಪಂ.ಭಾ.೧೩-೮೨).

ತಾನು ಸರೋವರದಲ್ಲಿ ಮುಳುಗಬೇಕಾಗಿ ಬಂದ ಪ್ರಸಂಗವನ್ನು ಸಮರ್ಥಿಸಿಕೊಳ್ಳುತ್ತಾ ಪಾಂಡವರಿಗೆ ದುರ್ಯೋಧನ ನೀಡುರುವ

"ಎಳೆ ಮುಂ ದೈತ್ಯನ ಕೈಗೆ ಪೋಗೆ ತರಲೆಂದೀ ಚಕ್ರಿ ಮುನ್ನ ರಸಾ
ತಳಮಂ ಪೊಕ್ಕುದುಮೀ ಮಹೋಗ್ರ ರಣದೊಳ್ ನಿಮ್ಮೊಂದು ಕೆಯ್ಬಿಳ್ದ ಭೂ
ತಳಮಂ ಮತ್ತೆ ತರಲ್ ವಿಶುದ್ಧನಿಯಮ ಪ್ರಾರಂಭದಿಂದಾನುಮೀ
ಕೊಳನಂ ಪೊಕ್ಕುದುಮಾವ ದೋಷಮೆನಗಿಂ ಮಾರಾಂಪರಾರ್ ತೋರಿರೇ" (ಪಂ.ಭಾ.೧೩-೮೪)

ಎಂಬಲ್ಲಿ ಪಂಪ ಮತ್ತೊಂದು ಹಳೆಯ ಪ್ರಸಂಗವನ್ನು ಉಪಯೋಗಿಸಿಕೊಂಡಿದ್ದಾನೆ.

ತನ್ನ ಪ್ರತಿಜ್ಞಾಪೂರ್ವಕೆಯ ನಂತರ ದುಶ್ಯಾಸನನ ಎದೆಯನ್ನು ಬಗೆದು ಅವನ ರಕ್ತ ಕರುಳುಗಳಿಂದ ದ್ರೌಪದಿಯ ಮುಡಿ ಕಟ್ಟುವ ಸನ್ನಿವೇಶದ ಭೀಮನ ಚಿತ್ರವನ್ನು ಪಂಪ "ಹಿರಣ್ಯಾಕ್ಷನ ಉರವನ್ನು ಭೇದಿಸಿದ ನಾರಸಿಂಗ" ನಿಗೆ ಹೋಲಿಸಿದ್ದಾನೆ.(ಪಂ.ಭಾ. ೧೨-೧೫೨)

ಪಂಪ ಭಾರತದ ಬೇರೆ ಬೇರೆ ಸಂದರ್ಭಗಳಲ್ಲಿ ಬಂದಿರುವ ಮತ್ತೆ ಕೆಲವು ಪ್ರತಿಮೆಗಳು ಹೀಗಿವೆ : ಮುನಿಶಾಪಕ್ಕೆ ಪಕ್ಕಾದ ಪಾಂಡುರಾಜನು ಅದನ್ನು ಮರೆತು ಮಾದ್ರಿಯನ್ನು ಅಪ್ಪಿದ ಪ್ರಸಂಗ ಪಂಪನ ಪ್ರತಿಮಾನಿರತ ಕಣ್ಣುಗಳಿಗೆ ಮಾದ್ರಿಯ 'ಬಾಹುಪಾಶಂಗಳೆ ಯಮ ಪಾಶಂಗಳಾಗಿ' ಕಾಣುತ್ತವೆ. ತಾರುಣ್ಯದಲ್ಲಿ ಭೀಮ 'ದಶಸಹಸ್ರಮದೇಭಳ' ನಾಗಿ ಕಾಣುತ್ತಾನೆ.

ದುರ್ಯೋಧನನಿಂದ ಅಂಗರಾಜ್ಯ ಪಡೆದ ಕರ್ಣನ ವರ್ತನೆ ಕರ್ಣನ ತಂದೆ ಸೂರ್ಯದೇವನಿಗೆ ಸರಿಬರಲಿಲ್ಲವಾದ್ದರಿಂದ 'ಮುಂದೆ ಅರ್ಜುನನಿಂದ ನೀನೂ ಹೀಗೆಯೇ ಅಸ್ತಂಗತನಾಗಬೇಕಾಗುತ್ತದೆ ನೋಡು' ಎಂದು ಕರ್ಣನಿಗೆ ಹೇಳುವಂತೆ ಅಂದು ಸೂರ್ಯ ಮುಳುಗಿದನಂತೆ. (ಪಂ.ಭಾ. ೨-೮೬) ಇದೇ ರೀತಿ ಪಂಪ ಭಾರತದುದ್ದಕ್ಕೂ ಅನೇಕ ಸೂರ್ಯೋದಯ ಸೂರ್ಯಾಸ್ತ, ಚಂದ್ರೋದಯ ಪ್ರಸಂಗಗಳು ಬಂದಿದ್ದು ಅವೆಲ್ಲ ಒಂದಲ್ಲ ಒಂದು ವಿಶೇಷ ಪ್ರಸಂಗದ ಸಂಕೇತಗಳಾಗಿ ಬಳಕೆಗೊಂಡಿರುವುದನ್ನು ನೋಡಬಹುದು. (ನೋಡಿ :ಪಂ.ಭಾ.೨-೯೩,೩-೨೭,೪-೪೬,೪-೫೨.೧೧-೨೪,೧೧-೫೧, ೧೧ ೧೦೬,೧೧-೧೫೪,೧೨-೧೦೮,೧೨-೨೧೦, ಇತ್ಯಾದಿ).

ಹಿಡಿಂಬೆಯು ಪಂಪನ ರಸಗಣ್ಣುಗಳಿಗೆ 'ಖೇಚರಿಯೊ ಭೂಚರಿಯೋ' ಆಗಿ ಕಾಣುತ್ತಾಳೆ. (ಪಂ.ಭಾ.೩-೧೪) ಅವಳ ಬರುವಿಕೆ 'ಮದನನ ಕೈಯ್ಯಿಂ ಬರ್ದುಂಕಿ ಬಂದ ಅಲರಂಬಿನ ಹಾಗೆ' ಇತ್ತೆಂದು ಕವಿ ಹೇಳುತ್ತಾನೆ. ಸಾಮಾನ್ಯವು ಅಸಮಾನ್ಯವಾಗುವುದು ಇಂಥ ಸಾದೃಶ್ಯಗಳಿಂದಲೇ. ನೀಲಾಂಜನೆ ನೃತ್ಯರಂಗಕ್ಕೆ ಬರುವಾಗಲೂ ಪಂಪ ಇದೇ ಹೋಲಿಕೆಯನ್ನು ಬಳಸುತ್ತಾನೆ.

ವೇಶ್ಯೆಯೊಬ್ಬಳು ತನ್ನ ಕಚ್ಚೆ ಕಟ್ಟಿಕೊಳ್ಳುವ ಪ್ರಸಂಗ ಪಂಪನಂಥ ದೈತ್ಯಶಕ್ತಿಯ ಕವಿಯ ಕೈಗೆ ಸಿಕ್ಕರೆ ಹೇಗಾಗಿಬಿಡುತ್ತದೆ ನೋಡಿ : 'ರೂಪದಲ್ಲಿ ಕಾಮನನ್ನು, ವೈಭವದಲ್ಲಿ ಇಂದ್ರರನ್ನೇ ಒಪ್ಪಲಾರದ ನಾನು ಮಿಕ್ಕ ಗಂಡಸರನ್ನು ಒಪ್ಪೇನೆಯೆ ? ಅವರನ್ನು ನನ್ನ ಕಚ್ಚೆಯಲ್ಲಿ ಹಾಕಿ ಕಟ್ಟಿ ಬಿಡುತ್ತೇನೆ' ಎನ್ನುವ ಓರ್ವ ಜಂಬಗಾತಿ ಅರ್ಜುನನನ್ನು ಕಂಡಾಕ್ಷಣ ತಡೆಯದೆ ಸೋರುವ ತನ್ನ ಕಾಮರಸವನ್ನು ತಾಳಲಾರದೆ ಇರ್ಕ್‌ಚ್ಚೆಯನ್ನು ಕಟ್ಟಬೇಕಾಗಿ ಬಂತಂತೆ. (ಪಂ.ಭಾ. ೩.೮).

ರಾತ್ರಿಯ ಕತ್ತಲು ಹಬ್ಬುವ ರೀತಿ ಹೀಗಿದೆ.

'ಮಸಿಯಿಂದಂ ಜನಮೆಲ್ಲಮಂದಿತಿಸುತಂ ಮುಂ ಪೇಳ್ವನೋ ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ ಗಂಧೇಭಚಮಣಗಳಂ ಪಸರಂಗೆಯ್ವನೋ ಶಂಭುವಂಬ ಬಗೆಯಿಂತಳ್ಕೊಯ್ಯು ಕಳ್ವೇರಿ ಸೂಚಿಸಲಾರ್ಗಂ ವಶಮಾಗದಂತು ಕವಿದಿತ್ತುದ್ದಾಮ ಭೀಮಂತಾಮಂ"(ಪಂ.ಭಾ.೪-೪೯).

ವೇಶ್ಯೆಯರ ಕಾಮಾಗ್ನಿಯ ವರ್ಣನೆಯೂ ತುಂಬ ಪರಿಣಾಮಕಾರಿಯಾಗಿ ಮೂಡಿ ಬಂದಿದೆ.(ಪಂ.ಭಾ.4-59). ಅವರ ಮನಸ್ಸಿನಲ್ಲಿ ಬಲಿಪಶುಸಮೇತವಾದ ಕಾಮನ ಯಜ್ಞ ನಡೆದಿತ್ತೆಂಬುದು ಕವಿಕಲ್ಪನೆ. ಅವರ ಮನಸ್ಸೇ ಹೋಮಭೂಮಿ, ಕಾಮಾತುರರೇ ಪಶುಗಳು, ಚಿಗಿತುನಿಂತ ಮಾಮರಗಳೆ ಯೂಪಸ್ತಂಭಗಳು, ಕಾಮಾಗ್ನಿಯೇ ಹೋಮಾಗ್ನಿ, ಚಂದನ ಕರ್ಪೂರಾದಿಗಳೇ ಉರುವಲುಗಳಾಗಿ ಆ ಬೆಳ್ದಿಂಗಳಲ್ಲಿ ಅವರು ಕಾಮನ ಹೋಮಕ್ಕೆ ವೇದಿಕೆಯಾದಂತೆ. ಕೃಷ್ಣನ ವಿಶ್ವರೂಪದರ್ಶನ (೯-೬೦)ವನ್ನು ಕವಿ

"ಮೂರಡಿ ಮಾಡಿದಂದು ನೆಲನೆಲ್ಲಮನಾ ಬಲಿಗಾದ ರೂಪಮೆ" ಎಂಬ ತ್ರಿವಿಕ್ರಮ ಪ್ರಸಂಗದ ಜೊತೆಗೆ ಹೋಲಿಸಿದ್ದಾನೆ.

ಭೀಷ್ಮನ ವೀರಪಟ್ಟಪ್ರಸಂಗ 'ಭಗವತಿಯೇರುವೇಳ್ವ' ಪ್ರಸಂಗದ ಹಾಗೆ (೧೦-೧೭) ಕಾಣುತ್ತದೆ.

ಹೀಗೆ ಭಾರತದ ಬೇರೆ ಬೇರೆ ಪ್ರಸಂಗಗಳಲ್ಲಿ ಪಂಪ ಹಲವಾರು ಬಿಡಿಬಿಡಿ ರೂಪಕಗಳನ್ನು ಸಾರ್ಥಕವಾಗಿ ಬಳಸಿದ್ದು ಅವುಗಳಲ್ಲಿ ಹೆಚ್ಚಿನವೆಲ್ಲ ಸ್ವತಂತ್ರವಾದ ಸುಂದರ ಶಬ್ದಚಿತ್ರಗಳಾಗಿವೆ.

ತನ್ನ ಕವಿತ್ವ ಸಮುದ್ರದ ಹಾಗೆ ಗಂಭೀರವೂ ನಿತ್ಯನೂತನವೂ ಆಗಿದೆಯೆಂಬುದನ್ನು ಪಂಪ ತನ್ನ ಆದಿಪುರಾಣದಲ್ಲಿ "ನಿಚ್ಚಂ ಪೊಸತರ್ಣ್ಣವಂಬೊಲತಿಗಭೀರಂ ಕವಿತ್ವಂ"(ಆ.ಪು. ೧-೨೭) ಎಂಬ ಹೋಲಿಕೆಯ ಮೂಲಕ ತಿಳಿಸಿದ್ದಾನೆ.

ಚಿಗಿತುನಿಂತ ಮಾಮರಗಳನ್ನು ಪಂಪ " ಬಸಂತದೊಳ್ ಬಸದಿಯ ಬಾಗಿಲಂ ತೆರೆದ ಮಾಳ್ಕೆಯೊಳಿರ್ದುವು ಬಂದ ಮಾವುಗಳ್ "(ಆ.ಪು.೧-೬೬.) ಎಂದಿರುವುದು ಆದಿಪುರಾಣದ ಧಾರ್ಮಿಕ ಭೂಮಿಕೆಗ ಉಚಿತವೇ ಆಗಿದೆ.

ಅತಿಬಲ ಮಹಾರಾಜ ತನ್ನ ಬಿಳಿಗೂದಲನ್ನು ಕಂಡು ನಿರ್ವೇಗ ಹೊಂದಿದನೆಂದು ಹೇಳುವಲ್ಲಿ "ಅಂತು ಮೇಲೆ ಬಂದ ಕೃತಾಂತ ರಾಜವಾಹಿನಿಯ ಸಿತಾಪತಾಕೆಗಳನನುಕರಿಸುವ ಪಲಿತಂಗಳಂ ದರ್ಪಣದೊಳ್ ನೋಡಿ ಕಂಡು . . . . . (ಆ.ಪು. ೧-೭೯)ವ. ಎಂಬ ಬಿಳಿಗೂದಲು ಅವನಿಗೆ ಯಮನ ಧ್ವಜದಂತೆ ಕಂಡವಂತೆ. ಇದಕ್ಕಿಂತ ಮೊದಲು ಸಂಸಾರಮೋಹದಲ್ಲಿ ಸಿಲುಕಿ ಕೆಡಬೇಡ ಎಂದು ಬುದ್ಧಿವಾದ ಮಾಡುವಂತೆ ಆತನ ಕಿವಿಯ ಪಕ್ಕದ ಬಿಳಿಗೂದಲು ಕಂಡು ಬಂದವಂತೆ ' ಎಂಬ ಪಂಪನ ಕಲ್ಪನೆಯೂ (೧-೭೯) ತುಂಬ ಪರಿಣಾಮಕಾರಿಯಾಗಿದೆ.

ಲಲಿತಾಂಗನಿಗೆ ಸ್ವಯಂಪ್ರಭೆ ಕಂಡದ್ದು ಹೀಗೆ :

"ಅದು ಸುಖದೊಂದು ಪಿಂಡಮದು ಪುಣ್ಯದ ಪುಂಜಮದಂಗಜಂಗೆ ಬಾಳ್ ಮೊದಲದು ಚಿತ್ತಜಂಗೆ ಕುಲದೈವಮದಂಗಜಚಕ್ರವರ್ತಿಗೆತ್ತಿದ ಪೊಸವಟ್ಟಮಂತದು ಮನೋಜನ ಕೈಪಿಡಿಯೆಂದು ಮಾಣ್ಬೆನಾ ಸುದತಿಯಂ". ಅವಳು ಸುಖದ ಪಿಂಡ, ಪುಣ್ಯದ ಪುಂಜ, ಕಾಮನ ಖಡ್ಗ, ಕಾಮನ ಕುಲದೈವ, ಕಾಮಚಕ್ರವರ್ತಿಗೆ ಕಟ್ಟಿದ ಹೊಸಪಟ್ಟ, ಒಟ್ಟಾರೆ ಅವಳು 'ಮನೋಜನ ಕೈಪಿಡಿ'. . . . . . ಹೀಗೆ ಸ್ವಯಂಪ್ರಭೆಯ ರೂಪ ಈ ಒಂದೊಂದೂ ಸಾದೃಶ್ಯದ ಮೂಲಕ ಶ್ರೀಮಂತಗೊಳ್ಳುತ್ತ ಹೋಗುತ್ತದೆ. (ಆ.ಪು. ೨-೭೪).

ತನ್ನ ಪ್ರಿಯತಮನಾದ ಲಲಿತಾಂಗನನ್ನು ಕಳೆದುಕೊಂಡ ಸ್ವಯಂಪ್ರಭೆಯ ರೋದನದ ಚಿತ್ರವಂತೂ ಹೃದಯವಿದ್ರಾವಕವಾಗಿದೆ. "ಮದನನ ಕೈದುವೆಲ್ಲಿದನ್ ಅನಂಗನ ಕೈಪೊಡೆಯೆಲ್ಲಿದನ್ ವಿಳಾಸದ ಕಣಿಯೆಲ್ಲಿದಂ ಚದುರಪ್ಪಾಟ್ಟಿದನೆಲ್ಲಿದಂ ವಿನೋದದ ಮೊದಲೆಲ್ಲಿದಂ ಸೊಬಗಿನ ನಾಗರಮೆಲ್ಲಿದನಿಟ್ಟೆಯಾಣ್ಮನೆಲ್ಲಿದನೆರ್ದೆಯಾಣ್ಮನೆನ್ನರಸನೆಲ್ಲಿದನೋ ಲಲಿತಾಂಗ ವಲ್ಲಭಂ(೩-೧೫).

ವಜ್ರಜಂಘ ಶ್ರೀಮತಿಯರ ಸಹಮರಣದ ಪ್ರಸಂಗವು ಒಂದು ಸುಂದರ ಶಬ್ದಚಿತ್ರವಾಗಿದೆ. ಕಾಳಸರ್ಪದಂತಿರುವ ಸಾವು ಹೇಗೆ ಕ್ಷಣದಿಂದ ಕ್ಷಣಕ್ಕೆ ಮನುಷ್ಯರನ್ನು ನುಂಗಿ ಹಾಕುತ್ತದೆಯೆಂಬುದನ್ನು

"ಮೊದಲೊಳ್ ನೀಳ್ದು ಪೊದಳ್ದು ಪರ್ವಿ ಪರೆಪಂ ಕೈಕೊಂಡುಮುಂದೈಸಿ
ಮಾಣದೆ ತನ್ನಂದದೊಳೇಳ್ಗೆಗುಂದದೆ ನಿರುದ್ಧೋಚ್ಛ್ವಾಸಮಪ್ಪನ್ನೆಗಂ
ಪುದಿದಾದಂಪತಿಯಂ ಪುದುಂಗೊಳಿಸಿ ಲೋಕಾಶ್ಚರ್ಯಮಂ ಮಾಡಿ ಕೊಂ
ಡುದು ಕೃಷ್ಣಾಗರು ಧೂಪವಧೂಮಮನಿವಹಂ ಕೃಷ್ಣೋರಗಂ ಕೊಲ್ವವೊಲ್ (ಆ.ಪು. ೫-೨೩).

ಎಂಬ ಪದ್ಯದಲ್ಲಿ ಪಂಪ ತಿಳಿಸಿದ್ದಾನೆ. ಆದಿಪುರಾಣದ ಆದಿನಾಥನ ಜನ್ಮಾಭಿಷೇಕ ಪ್ರಸಂಗವು ಒಂದು ಮಹಾಪ್ರತಿಮೆಯಾಗಿದೆ. "ಆ ತ್ರೈಲೋಕ್ಯನಾಥೋದಯಮನರುಪವಂತಾ ತ್ರಿಲೋಕಕ್ಕಮಾಗಳ್ ತ್ರಿದಶಾನೇಕಾನಕಂಗಳ್ ಮೊಳಗಿದವು" ಎಂಬಲ್ಲಿ ಲೋಕಗಳ ಒಡೆಯನ ಉದಯದ ಸೂಚನೆಯನ್ನು ಮೂರು ಲೋಕಗಳಿಗೆ ತಿಳಿಸುವಂತೆ ವಾದ್ಯಘೋಷವಾಯಿತೆಂಬುದು ಇಲ್ಲಿಯ ಬೃಹತ್ ಕಲ್ಪನೆ. ಆದಿನಾಥ ಇಲ್ಲಿ ಹುಟ್ಟಿದ ತಕ್ಷಣ ದೇವೇಂದ್ರನ ಕಿರೀಟ ಅಲ್ಲಿ ಅವನತವಾಯಿತೆಂಬಲ್ಲಿ ಪಂಪ ಆದಿನಾಥನ ಮಹತಿಯನ್ನು ಸ್ಪಷ್ಟಪಡಿಸುತ್ತಾನೆ. ಈ ವಿಷಯವನ್ನರಿತ ಇಂದ್ರ ತಕ್ಷಣ ತನ್ನ ಆಸನದಿಂದ ಎದ್ದು ಅಲ್ಲಿಯೆ 'ಮೂರು ಸೂಳ್ ಪೊಡೆವಟ್ಟ' ನಂತೆ. ಆದಿನಾಥನ ಘನತೆಗೆ ಇದಕ್ಕಿಂತ ಹೆಚ್ಚಿನದು ಇನ್ನೇನು ಬೇಕು ?ಒಟ್ಟಾರೆ ಈ ಪ್ರಸಂಗವೇ ಒಂದು ಭವ್ಯ ಶಬ್ದಚಿತ್ರದಂತಿದೆ.

"ತ್ರಿಜಗನ್ನಾಥನ ಮಜ್ಜನಕ್ಕೆ ಮಣಿಪೀಠಾಕಾರದಂತಾಗಿ ಪಿ
ಶ್ರಜಗತ್ಪೂಜಿತವಾಗಿ ಪೆಂಪುವಡೆದಾ ಹೈಮಾಚಳೇಂದ್ರಕ್ಕೆ ಕ
ಲ್ಪಜರಂ ಪೋಗಲೆ ಸನ್ನೆಗಯ್ಯೆ ಭಗವಜ್ಜನ್ಮಾಭಿಷೇಕೋತ್ಸವ
ಧ್ವಜಮಂ ಪೊಲ್ತುದು ರತ್ನರಂಜಿತ ಭುಜದಂಡಂ ಸುರಾಧೀಶನಾ (ಆ.ಪು. ೭-೪೮)

ತ್ರಿಜಗನ್ನಾಥನ ಮಜ್ಜನಕ್ಕಾಗಿಯೇ ನಿರ್ಮಿಸಲ್ಪಟ್ಟ ಮಣಿಪೀಠದಂತಿರುವ ಹೈಮಾಚಲಕ್ಕೆ

ದೇವತೆಗಳೆಲ್ಲರೂ ಹೋಗಿ ಎಂದು ತಿಳಿಸಲು ದೇವೇಂದ್ರ ಕೈಸನ್ನೆ ಮಾಡುತ್ತಿದ್ದನಂತೆ. ಆಗ ಆ ರತ್ನ ರಂಜಿತವಾದ ಭುಜಾದಂಡವೇ ಜನ್ಮಾಭಿಷೇಕ ಪ್ರಸಂಗದಲ್ಲಿ ಜರುಗಿದ ದೇವತೆಗಳ ನರ್ತನ, ಅದರಲ್ಲಿ ಭಾಗವಹಿಸಿದ ಐರಾವತಗಳ ವರ್ಣನೆಯಂತೂ ಕಲ್ಪನಾತೀತವಾಗಿದೆ. (ಆ.ಪು. ೭-೫೨,೫೩,೫೪,೫೫).

> " ನೆಗಳ್ದೈರಾವತದಂತಿಗಾದುದು ಮೊಗಂ ಮೂವತ್ತೆರಳ್ ನೋಳ್ಪೊಡಾ
> ಮೊಗಮೊಂದರೊಳೆಂಟು ಕೋಡವರೊಳಂತೊಂದೊಂದರೊಳ್ಪೂಗೊಳಂ
> ನೆಗಳೊಂದೊಂದೊಂದೆಸೆದಿರ್ಕ್ಕುಮಾ ಕೊಳಗಳಂತೊಂದೊಂದರೊಳ್ ಚಿತ್ರಪ
> ತ್ರಗಣಂ ಪದ್ಮಿನಿ ನಾಡೆ ಚೆಲ್ವನೊಳಕೊಂಡೊಂದೊಂದೆ ಕಣ್ಗೊಪ್ಪುಗುಂ " ೭-೫೩
> ಪೊಸಪೂವಬ್ಜಿನಿಯೊಂದರೊಳ್ ಸೊಗಯಿಕುಂ ಮೂವತ್ತೆರಳ್ ಪೂವಿನೊಳ್
> ಪೊಸಗಂಪಂ ಮದಿದೊಪ್ಪಿ ತೋರುವೆಸಳ್ಗಳ್ ಮೂವತ್ತೆರಳ್ ಚೆಲ್ವಿನ
> ಪ್ಪೆಸಳೋರೊದರ ಮೇಲೆ ಲೀಲೆ ಮಿಗೆ ಮೂವತ್ತಿರ್ವರೋರಂತೆ ನ
> ರ್ತಿಸೆ ದೇವಾಂಗನೆಯರ್ ಬೆಡಂಗನೊಳಕೊಂಡತ್ತಿಂದ್ರರುಂದ್ರದ್ವಿಪಂ "೭-೫೪.

ಈ ಪದ್ಯಗಳ ವಿವರಗಳನ್ನಿಷ್ಟು ಬಿಡಿಬಿಡಿಯಾಗಿಯೇ ಸವಿಯುವುದು ಲೇಸು. ಹಿಮಾಲಯಕ್ಕಿಂತ ಹಿರಿದಾದ ಆ ಐರಾವತಕ್ಕೆ ಮೂವತ್ತೆರಡು ಮುಖಗಳು. ಒಂದೊಂದು ಮುಖದಲ್ಲಿ ಎಂಟೆಂಟು ಬಿಳಿಯ ದಂತಗಳು. ಒಂದೊಂದು ದಂತದ ತುದಿಯಲ್ಲಿ ಒಂದೊಂದು ಸರೋವರ, ಆ ಸರೋವರಗಳಲ್ಲಿ ಪೂಗೊಳಗಳು, ಒಂದೊಂದು ಪೂಗೊಳದಲ್ಲಿ ಒಂದೊಂದು ತಾವರೆ, (ಒಂದು ಸರೊವರವನ್ನು ಒಂದೇ ಒಂದು ಹೂವು ವ್ಯಾಪಿಸಿರಬೇಕೆಂದರೆ ಆ ಹೂವಿನ ಗಾತ್ರ ಎಷ್ಟು ದೊಡ್ಡದಾಗಿರಬೇಕೆಂಬುದನ್ನು ನೀವೇ ಊಹಿಸಿಕೊಳ್ಳಿ) ಆ ಒಂದೊಂದು ತಾವರೆಯಲ್ಲಿ ಮೂವತ್ತೆರಡು ಎಸಳುಗಳು, ಒಂದೊಂದು ಎಸಳಿನ ತಾವರೆಯಲ್ಲಿ ಮೂವತ್ತೆರಡು ಜನ ದೇವನರ್ತಕಿಯರು ನರ್ತಿಸುತ್ತಿದ್ದಾರೆ. ಅದೂ ಹೇಗೆ ? ನೆಲವನ್ನು ಮೆಟ್ಟಿದರೊ ಮೆಟ್ಟದರೋ ಎಂಬಂತೆ'. ಈ ಎಲ್ಲ ಬಿಡಿ ಪರಿಕರಗಳಿಂದೊಡಗೂಡಿದ ಆ ಐರಾವತ (ರುಂದ್ರ ದ್ವಿಪ) ವನ್ನು ಕಂಡಾಗ ನಾವು ಖಂಡಿತವಾಗಿ ಮೂಕವಿಸ್ಮಿತರಾಗಿಬಿಡುತ್ತೇವೆ. ಈ ಪ್ರಸಂಗದ ಅನುಭೂತಿಯ ಬಗ್ಗೆ ಬರೆಯುತ್ತಾ ಕುವೆಂಪು "ಪುಣ್ಯವಿದ್ದಷ್ಟು ಊಹಿಸಿಕೊಳ್ಳಿ, ಅರ್ಹತೆಗೆ ತಕ್ಕಂತೆ ಅನುಭೂತಿ " ಎಂದು ತಮ್ಮ ವರ್ಣನಾಶಕ್ತಿಯೂ ಅಸಹಾಯಕವಾದುದನ್ನು ಸೂಚಿಸಿದ್ದಾರೆ. ಕುವೆಂಪು ಅವರು ಹೇಳಿದ್ದು ಸರಿಯೇ ಆಗಿದೆ. ಏಕೆಂದರೆ ಇಲ್ಲಿಯ ಪ್ರತಿಯೊಂದು ಕಲ್ಪನೆಯನ್ನು ನಾವು ಊಹಿಸುತ್ತಾ ಹೋದರೆ ಕೊನೆಗೆ ನಮ್ಮ ಸಂಖ್ಯಾಜ್ಞಾನವೂ, ಕಲ್ಪನಾ ಶಕ್ತಿಯೂ ಮುಗ್ಗರಿಸಿ ಬಿಡುತ್ತದೆ. ಏನೋ ತಿಳಿದುಕೊಳ್ಳಲಿಕ್ಕೆ ಹೋಗಿ, ತಿಳಿದುಕೊಳ್ಳುವುದು ದೂರ ಉಳಿಯಿತು : ನಮ್ಮನ್ನೇ ನಾವು ಮೈಮರೆತು ಬಿಡಬೇಕಾಗುತ್ತದೆ. ಕಣ್ಣಿಂದ ಇದನ್ನು ನೋಡುವುದಂತೂ ಸಾಧ್ಯವಿಲ್ಲ. ಅಂತೆಯೇ ಕೇವಲ ಕಲ್ಪನೆಯಲ್ಲೇ ಇದನ್ನು ಊಹಿಸಿಕೊಳ್ಳಬೇಕಷ್ಟೇ. ಇದೇ ನಿಜವಾದ ಕಾವ್ಯದ ಮಹೋನ್ನತ ಪರಿಣಾಮ. ಪಂಪ ಇದನ್ನು ಸಾಧಿಸುವಲ್ಲಿ ನಿಸ್ಸೀಮ. ಇಂಥ ಪ್ರತಿಮಾಪ್ರಸಂಗಗಳನ್ನು ಆತ ನೀರು ಕುಡಿದಷ್ಟು ಸುಲಭವಾಗಿ ಸೃಷ್ಟಿಸಿಬಿಡುತ್ತಾನೆ.

ಮೇಲಿನ 'ಮೆಟ್ಟದರೋ ಮೆಟ್ಟಿದರೊ' ಎಂಬ ಕಲ್ಪನೆಯಂತೂ ಸುಕೋಮಲಕ್ಕಿಂತ ಸುಕೋಮಲವಾಗಿದೆ. 'ನವಕಮಲದಳಗಳ ಹಾಸಿಗೆ ಆ ನರ್ತಕಿಯರ ಕಾಲಿಗೆ ಒರಟಾಗಿ ತಾಗುತ್ತವೆಯಂಬ

ಭಯದಿಂದ ಅವರು ನೆಲವನ್ನು ಮುಟ್ಟಿಯೂ ಮುಟ್ಟದಂತೆ ತಮ್ಮ ಪಾದಗಳನ್ನು ಎತ್ತಿ ಇಡುತ್ತಿದ್ದರಂತೆ." ಇದನ್ನು ಮೀರಿ ಬರೆಯಲು ಇನ್ನು ಸಾಧ್ಯವಿಲ್ಲ ಎನ್ನಿಸಿಬಿಡುತ್ತದೆಯಲ್ಲವೆ ? ಪಂಪನಂಥ ದೊಡ್ಡ ಕವಿಗಳು ಇಂಥಲ್ಲೆಲ್ಲ ತಮ್ಮ ಅಭಿವ್ಯಕ್ತಿ ಸಾಧ್ಯತೆಯ ಗರಿಷ್ಠತೆಯನ್ನು ಸಾಧಿಸುವುದು ಪ್ರತಿಮೆಗಳಿಂದಲೇ ಎಂಬುದನ್ನು ನಾವು ಒಪ್ಪಲೇಬೇಕು.

ಆ ಸನ್ನಿವೇಶ ಇಷ್ಟಕ್ಕೇ ಮುಗಿಯಲಿಲ್ಲ. ಅಭಿಷೇಕಕ್ಕಾಗಿ ಸಮೆಯಲಾದ ವೇದಿಕೆ ಹೇಗಿತ್ತು ? ಪಂಪನನ್ನು ಕೇಳಿ : "ಅದು ನೂರು ಯೋಜನೆ ವಿಷ್ಕಂಭವಾಗಿದೆ. ಐನೂರು ಯೋಜನ ವಿಸ್ತಾರವಾಗಿದೆ. ಎಂಟು ಯೋಜನ ಉತ್ಸೇಧವಾಗಿದೆ, ಅಷ್ಟಮೀ ಚಂದ್ರಾಕೃತಿಯಲ್ಲಿ ಭೀಮರಮ್ಯವಾಗಿದೆ. "ಅಭಿಷೇಕಕ್ಕೆ ಬಳಸುವ ನೀರು ಎಂಥದು ?

"ಕ್ಷೀರಾಬ್ಧಿಯ ನೀರಲ್ಲದೆ ಧೀರನ ಮಜ್ಜನಕ್ಕೆ ಪೆರವು ನೀರ್ ತಗವೆಂದು
ವಾರಾಶಿವರಂ ಸುರಜನ ದಾರಿ ಮನೋಹಾರಿ ನೀಳ್ಪುವೆರಡುಂ ಕೆಲದೊಳ್"
ಅಷ್ಟಯೋಜನ ಗಂಭೀರೈಕಯೋಜನ ಮುಖವಿಸ್ತಾರಶಾಂತಕುಂಭಕುಂಭಂಗಳ್ "

ಆ ಬಂಗಾರದ ಕೊಡಗಳ ಹೊಟ್ಟೆಯ ವ್ಯಾಸ ಎಂಟು ಯೋಜನ ಬಾಯಿಯ ವ್ಯಾಸ ಒಂದು ಯೋಜನ. ಕ್ಷೀರಾಬ್ಧಿಯ ನೀರನ್ನು ಅವರು ಅಭಿಷೇಕಸ್ಥಳದಿಂದ ವಾರಿಧಿಯವರೆಗೆ ಎರಡು ಸಾಲುಗಳಲ್ಲಿ ನಿಂತು ತ್ವರಿತವಾಗಿ ತುಂಬಿ ಸಾಗಿಸುವ ದೃಶ್ಯವು "ನಕ್ಷತ್ರಗಳ ಒಂದು ಅಖಂಡಮಾಲೆಯೇ ಮೇರುಗಿರಿಶಿಖರದಿಂದ ಕ್ಷೀರಸಾಗರದವರೆಗಿನ ದೀರ್ಘದೂರದಲ್ಲಿ . . .ಬೈಗಿನ ಹೆಮ್ಮುಗಿಲಿಗೆ ಚುಕ್ಕಿಗಳಂಚು ಕಟ್ಟಿದಂತೆ " ಕಾಣುತ್ತಿತ್ತಂತೆ.(ಆ.ಪು.೭-೮೨,೮೩)ಇಂದ್ರನ ನರ್ತನದ ಪರಿ ಹೀಗಿದೆ.

" ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ ಸಭೆ
ದೇವಮರ್ತ್ಯಸಭೆ ಸಂದಾರಾಧ್ಯನೀಶಂ ಜಗದ್ಗುರು ತನ್ನೃತ್ಯ ಫಲಂತ್ರಿವರ್ಗಫಲಂ "
(ಆ.ಪು. ೭-೧೨೭)

ಆದಿಪುರಾಣದ ನೀಲಾಂಜನೆಯ ನೃತ್ಯಪ್ರಸಂಗ. ಅಲ್ಲಿ ನಾವು ಎದುರುಗೊಳ್ಳುವ ಇನ್ನೊಂದು ಉತ್ತಮ ಪ್ರಸಂಗವಾಗಿದೆ. ನೃತ್ಯರಂಗಕ್ಕೆ ಅವಳು ಬರುವ ಪರಿಯೇ ಪರಿ.

"ಎಸಿಸಿದ ನೀಲಾಂಜನೆ ಕಬ್ಬಿನ ಬಿಲ್ಲಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆಸಿಸುತ್ತೊಳಪೊಕ್ಕಳ್ ಭೋಂಕನೆ ನಿಖಿಲ ಜನಾಂತರಂಗಮಂ ರಂಗಮುಮಂ'(ಆ.ಪ. ೮-೧೯).
ಕಬ್ಬಿನ ಬಿಲ್ಲಿನಿಂದ ಕಾಮನು ಪ್ರೇಕ್ಷಕರತ್ತ ಎಸೆದ ಬಾಣವೋ ಎಂಬಂತೆ ಅವಳು ಪಾದಾರ್ಪಣಗೈದಳಂತೆ. ಹಾಗೆ ಬಂದ ಅವಳು ಏಕಕಾಲದಲ್ಲಿ ರಂಗವನ್ನೂ ಜನತಾಂತರಂಗವನ್ನೂ ಪ್ರವೇಶಿಸಿದಳಂತೆ. ಒಂದನ್ನು ಇನ್ನೊಂದಕ್ಕೆ ಬೆಸೆಯುವ ಮೂಲಕ ಸನ್ನಿವೇಶಕ್ಕೆ ಅರ್ಥವಂತಿಕೆ ತರುವ ಅತ್ಯುತ್ತಮ ಪ್ರಯತ್ನ ಇದಾಗಿದೆ. ಅವಳ ನರ್ತನ ಭಂಗಿಯೇ ಭಂಗಿ. "ನಿಲ್ತವು ರಸಂಗಳಲ್ಲಿ ಮಡಲ್ತನೆ ಭಂಗಿಯೊಳನಂಗ ಜಂಗಮಲತೆವೊಲ್ ನಿಲ್ತು ಜವನಿಕೆಯ ಮರೆಯೊಳ್ ಪೊಲ್ಮಲವಳ್ ಮುಗಿಲಮರೆಯ ವಿದ್ಯುಲ್ಲತೆಯಂ "(ಆ.ಪು. ೮-೨೦). ರಸಗಳ ಅಣೆಕಟ್ಟೇ ಇಲ್ಲಿ ನಿರ್ಮಾಣಗೊಂಡಿದೆಯೋ ಎಂಬಂತೆ ರಸವೇ ಮಡುಗಟ್ಟಿನಿಂತಹಾಗಿತ್ತು ಅವಳ ಭಂಗಿ. ತೆರೆಯ ಹಿಂದಿನ ಅವಳು ನಿಜವಾಗಿ ಮುಗಿಲ ಮರೆಯ ವಿದ್ಯುಲ್ಲತೆಯೇ." ತನ್ನ ವಸ್ತ್ರ-ಪಡವೆಗಳನ್ನು ಅವಳು

ಕವಿಗಳ ಕೈಗೆ ದೊರೆತ ಪದಗಳ ಪ್ರಸಂಗಗಳೂ ಸಹಿತ ಧನ್ಯತೆಯನ್ನನುಭವಿಸುತ್ತವೆಂದೆನ್ನಬಹುದು.

ಹೀಗೆ ಪಂಪ ತನ್ನ ಎರಡೂ ಕೃತಿಗಳಲ್ಲಿ ಅಸಂಖ್ಯಪ್ರತಿಮೆಗಳನ್ನು ನಿರ್ಮಿಸಿದ್ದು, ಅವು ಅವನ ವ್ಯಾಪಕ ಲೋಕಾನುಭವ, ದರ್ಶನದೀಪ್ತಿ ಹಾಗೂ ಅಪೂರ್ವ ಪ್ರತಿಭಾಸಂಪನ್ನತೆಗಳಿಗೆ ಸಾಕ್ಷಿಗಳಾಗಿವೆ. 'ಅಪೂರ್ವವಸ್ತು ನಿರ್ಮಾಣಕ್ಷಮತೆಯೇ ಪ್ರತಿಭೆ' ಯೆಂಬ ಮೀಮಾಂಸಕರ ವಿಚಾರಕ್ಕೆ ಪಂಪನ ಪ್ರತಿಭೆ ಒಂದು ಹೇಳಿ ಮಾಡಿಸಿದ ಉದಾಹರಣೆಯಾಗಿದೆ. ಪ್ರತಿಮೆ-ರೂಪಕಾದಿಗಳ ಬಳಕೆಯ ಬಗ್ಗೆ ಮೀಮಾಂಸಕರು ಇಟ್ಟುಕೊಂಡಿದ್ದ ಎಲ್ಲ ವಿಚಾರಗಳೂ ಪಂಪನ ಕೃತಿಗಳಲ್ಲಿ ಸಾಕಾರಗೊಂಡಿವೆ. ಅವನಲ್ಲಿ ಅವು ಕೇವಲ ಅಲಂಕಾರಗಳಾಗಿ ಮಾತ್ರ ಬಂದಿಲ್ಲ. ಸ್ವತಃ ಅಲಂಕಾರ್ಯಗಳಾಗಿಯೂ ಬಂದಿವೆಯೆಂಬುದು ನಿಸ್ಸಂದೇಹ. ಅಂತೆಯೇ

"ಅತಿಸುಭಗಗೆ ಸಂದ ಸರಸ್ವತಿಗೀತನ ಲಲಿಲವಾಗ್ವಿಳಾಸಮೆ ದಲಲಂ
ಕೃತಿಯವೊಲೆಸೆದಪುದು ಜಗತ್ ಪ್ರತೀತನೀತನೆ ಸರಸ್ವತೀಮಣಿಹಾರಂ" (ಆ.ಪು.೧-೨೮)

ಎಂದು ಪಂಪ ತನ್ನ ಕವಿತಾಚಾತುರಿಯ ಬಗ್ಗೆ ಹೇಳಿಕೊಂಡಿದ್ದು ಅತ್ಯಂತ ಉಚಿತವಾಗಿದೆ. ಲಲಿತ ವಾಗ್ವಿಲಾಸಗಳಿಂದ ಪಂಪನ ಕೃತಿಗಳು ಶ್ರೀಮಂತವಾಗುರುವುದು ಮುಖ್ಯವಲ್ಲ. ಪಂಪನಂಥ ಕವಿಗಳಿಂದ ನಾಡಿನ ಸರಸ್ವತೀ ಭಾಂಡಾರ ಧನ್ಯವಾಗಿರುವುದು ಮುಖ್ಯ. ಇದು ನಮ್ಮ ನಾಡಿನ ಪುಣ್ಯ.

'ಬಳ್ಳಿಗವರ್ತ್ತೆ', 'ಕವರ್ತ್ತೆ' : ಒಂದು ಟಿಪ್ಪಣಿ

* ಶ್ರೀನಿವಾಸ ವೆಂ. ಪಾಡಿಗಾರ

ಪಟ್ಟದಕಲ್ಲಿನಲ್ಲಿರುವ ಚಾಲುಕ್ಯ ಇಮ್ಮಡಿ ವಿಕ್ರಮಾದಿತ್ಯನ ಆಡಳಿತಾವಧಿಗನ್ವಯಿಸುವ (ಕ್ರಿ.ಶ.೭೩೩-೪೪) ಎರಡುಶಾಸನಗಳಲ್ಲಿ 'ಬಳ್ಳಿಗವರ್ತ್ತಿ','ಬಳ್ಳಿಗವರ್ತ್ತೆ ಎಂಬ ಅಪರೂಪದ ಶಬ್ದ ಬಳಸಲ್ಪಟ್ಟಿದೆ. ಪರಿಷತ್ತಿನ ನಿಘಂಟಿನ ಪ್ರಕಾರ[೧] ಬಳ್ಳಿ= ವೀಳೆಯದೆಲೆಯ ಬಳ್ಳಿ, ಕವರ್ತೆ=ತೆರಿಗೆ ; ಅಂತಾಗಿ ಬಳ್ಳಿಗವರ್ತ್ತೆ= "ವೀಳೆಯದೆಲೆಯ ಮೇಲೆ ಹಾಕುತ್ತಿದ್ದ ತೆರಿಗೆ"ಎಂದಿದೆ. ಆದರೆ 'ಬಳ್ಳಿಗವರ್ತ್ತೆ' ಪ್ರಯೋಗಿಸಲ್ಪಟ್ಟಿರುವ ಸಂದರ್ಭ ಮಾತ್ರ ನಿಘಂಟು ನೀಡಿರುವ ಅರ್ಥವನ್ನು ಪುಷ್ಟೀಕರಿಸುವಂತೆ ಕಾಣುವುದಿಲ್ಲ.

ಪ್ರಸ್ತುತ ಶಬ್ದ ಬಳಕೆಯಾಗಿರುವ ಸಂದರ್ಭವನ್ನು ಸೂಚಿಸುವ ಶಾಸನಭಾಗಗಳು, ಪಾಠಗಳು ಇಂತಿವೆ.

೧. ಸ್ವಸ್ತಿ ಶ್ರೀ ವಿಕ್ರಮಾದಿತ್ಯಭಟಾರಮ್ಮೂಮೆ ಕಂಚಿಯಾನ್ಮೂಮೆ ಪರಾಜಿಸಿದೊರಾ ಶ್ರೀ ಲೋಕಮಹಾದೇವಿಯರಾ ಈ ಲೋಕೇಶ್ವರ ಮಾಡಿದ ಸೂತ್ರಧಾರಿಗೆ ಮೂಮೆ ಪೆರ್ಜ್ಜೆಜಿಪುಗೆಯ್ದು ಬಣಕ್ಕೆ ಈ ವಿಷಯದ ಬಿನ್ನಣಿಗಳಾ ಬಳ್ಳಿಗವರ್ತ್ತೆಯನುತಿಪಿದೆ ....[೩]

೨. ಶ್ರೀ ಸ್ವಸ್ತಿ ವಿಕ್ರಮಾದಿತ್ಯ ಶ್ರೀ ಪ್ರಿಥಿವೀವಲ್ಲಭ ಮಹಾದೇವಿಯರಾ ದೇಗುಲಮಾನ್ ಮಾಡಿದ ಸೂತ್ರಧಾರಿ ಶ್ರೀ ಗುಣ್ಡನ್ ಅನಿವಾರಿತಾಚಾರಿಗೆ ಮೂಮೆ ಪೆರ್ಜ್ಜೆಜಿಪು ಪಟ್ಟಮಂ ತ್ರಿಭುವನಾಚಾರಿಯೆನ್ಸು ಪೆಸರಿತ್ತು ಪ್ರಾಸಾದಾಜ್ಞಯ್ದು ಪ್ರಿಥಿವಿಯಾ ಬಿನ್ನಾಣಿಗಳಾ ಬಳ್ಳಿಗವಾರ್ತ್ತೆ ಇಲ್ಲ. . . .[೨]

ಮೇಲಣ ಎರಡೂ ಸಂದರ್ಭಗಳಲ್ಲಿ 'ದೇಗುಲಮಾನ್ ಮಾಡಿದ ಸೂತ್ರಧಾರಿ''ಪ್ರಾಸಾದಜ್ಞಯ್ದು ಬಿನ್ನಾಣಿ'ಗಳಿಗೆ ಸಂಬಂಧಿಸಿದಂತೆ'ಬಳ್ಳಿಗವರ್ತ್ತೆ'ಯ ಉಲ್ಲೇಖವಿರುವದುಸ್ಪಷ್ಟವಿದೆ. 'ಬಿನ್ನಾಣಿ' ಎಂದರೆ ಚತುರ, ಜಾಣ, ಕರಕುಶಲಿ, ಕುಶಲಕಾರ್ಯಗಳಲ್ಲಿ ನೈಪುಣ್ಯವುಳ್ಳವನು.[೪] ಶಾಸನೋಲ್ಲಿಖಿತ ಬಿನ್ನಾಣಿಗಳು ದೇಗುಲ ನಿರ್ಮಾಣಕಾರ್ಯದಲ್ಲಿ ಪಾತ್ರವಹಿಸಿದ ಸೂತ್ರಧಾರಿ-ರೂವಾರಿ ವರ್ಗದ ಜನ. ಅಂದಮೇಲೆ ವೀಳೆಯದೆಲೆಯ ಮೇಲಿನ ತೆರಿಗೆಯನ್ನು ಮನ್ನಾ ಮಾಡಲಾಯಿತೆಂದು 'ಬಳ್ಳಿಗವರ್ತ್ತೆಗೆ' ಅರ್ಥಹಚ್ಚುವದು ಸಮಂಜಸವಾಗಲಾರದು. 'ಬಳ್ಳಿ', 'ಬಳಿ', 'ಬೀತಿ' ಪದಕ್ಕೆ 'ವಂಶ', 'ಕುಲ', 'ಮನೆತನ' ಎಂಬ ಅರ್ಥವಿರುವದು ತಿಳಿದ ಸಂಗತಿ. ಆದ್ದರಿಂದ ಬಳ್ಳಿ+ ಕವರ್ತ್ತೆಗೆ ಕುಲದ ಮೇಲಿನ, ಮನೆತನದ ಮೇಲಿನ ತೆರಿಗೆ ಎಂದು ಅರ್ಥನೀಡುವದು ಸಾಧುವೆನಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ, ಲೋಕೇಶ್ವರ 'ವಿರೂಪಾಕ್ಷ' ದೇವಾಲಯ ನಿರ್ಮಿಸಿದ ಸೂತ್ರಧಾರಿ-ರೂವಾರಿ ಮನೆತನದ ಮೇಲಿನ ತೆರಿಗೆಯನ್ನು ಮನ್ನಾ ಮಾಡಲಾಯಿತೆಂದು ವ್ಯಕ್ತವಾಗುತ್ತದೆ.

'ಕವರ್ತ್ತೆ'ಗೆ ಸಂಬಂಧಿಸಿದಂತೆ ಇನ್ನೊಂದು ಸಂಗತಿ ಇಲ್ಲಿ ವಿಚಾರಣೀಯ. ಒಂದು ರೀತಿಯ 'ತೆರಿಗೆ' ಎಂಬರ್ಥದಲ್ಲಿ ಇದು ಕೆಲ ಶಾಸನಗಳಲ್ಲಿ ಬಳಕೆಯಾಗಿದೆ. "ದಣ್ಡದೊಳಂ

ಕವರ್ತ್ತೆಯೊಳವಪುತ್ರಿಕ ದ್ರವ್ಯದ ದಶವಣ್ಣದೊಳಂ ಪುಟ್ಟಿದ ದ್ರವ್ಯಮಂ . . . ದೇಯಿಂಗಟಿಗೆ" "ಮನೆದೆಱೆ ಮದುವೆದೆಱೆ . . . ಕವರ್ತ್ತೆ ಸೇಸೆ ಒಸಗೆ" . . . ಮುಂತಾದ ಹೇಳಿಕೆಗಳಲ್ಲಿ 'ಕವರ್ತ್ತೆ'ಒಂದು ನಿರ್ದಿಷ್ಟರೀತಿಯ ತೆರಿಗೆಯಾಗಿತ್ತು ಎಂಬುದರ ಸೂಚನೆಯಿದೆ. ಬಾದಾಮಿಯ ಜಂಬುಲಿಂಗದೇವಾಲಯದ ಕಂಬದ ಮೇಲಿನ ಕ್ರಿ.ಶ. ೮ನೇ ಶತಮಾನದ ಶಾಸನವೊಂದರಿಂದ ಆ ಊರ "ಸಮ್ಮಗಾಜರ ಕವಪ್ತೆ"ಯನ್ನು ಬಿಟ್ಟ ವಿಷಯ ತಿಳಿಯುತ್ತದೆ"[2]. ಬಿನ್ನಾಣಿಗಳಾ ಬಳ್ಳಿಗವರ್ತ್ತೆ". "ಸಮ್ಮಗಾಜಿ ಕವಪ್ತೆ" ಎಂಬೀ ಪ್ರಯೋಗಗಳು ಕರಕುಶಲ ಕಾರ್ಮಿಕ ವೃತ್ತಿಯನ್ನವಲಂಬಿಸಿದ್ದ ಒಜರು. ಸಮಗಾರರು, ಕಂಬಾರರು, ಮುಂತಾದವರ ಮನೆತನಗಳ ಮೇಲೆ ಹಾಕಲಾಗುತ್ತಿದ್ದ "ವೃತ್ತಿ ತೆರಿಗೆ"ಎಂಬರ್ಥದಲ್ಲಿ"ಕವರ್ತ್ತೆ"ಬಳಸಲ್ಪಡುತ್ತಿತ್ತೆಂದು ನಿರ್ದೇಶಿಸುತ್ತವೆ.

ಅಡಿಟಿಪ್ಪಣಿಗಳು

೧. ಕನ್ನಡ ನಿಘಂಟು, ಸಂಪುಟ ೬,ಪು. ೬೩೩೬ 'ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೦'.

೨. ಇಂಡಿಯನ್ ಆಂಟಿಕ್ವೇರಿ, ಸಂಪುಟ ೧೦,ಪು. ೧೬೪

೩. ಅದೇ, ಪು. ೧೬೪ - ೬೫

೪. ಕನ್ನಡ ನಿಘಂಟು, ಸಂಪುಟ ೭, ಪು.೬೪೬೭

೫. ಎಪಿಗ್ರಾಫಿಯಾ ಇಂಡಿಕಾ, ಸಂಪುಟ ೨೦,ಪು. ೬೮, ಸಾಲು ೪೦ (ಕ್ರಿ.ಶ. ೧೦೧೨)

೬. ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್ ೧೯೩೨, ಪು. ೧೭೨, ಸಾಲು ೩೦ (ಕ್ರಿ.ಶ. ೧೦೬೯).

೭. ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್, ಸಂಪುಟ ೧ ನಂ. ೪., ಪು.೯.

ಮೇಲೆ ಮತ್ತು ಕೆಳಗೆ

• ಡಿ.ಬಿ.ಢಂಗ

ಇದು
ನಾವಿರುವ ಮನೆ.
ಇದರಲ್ಲೂ
ಮೇಲ್ಮಹಡಿ, ಕೆಳಮಹಡಿ.
ಮೇಲ್ಮಹಡಿಯಲ್ಲಿ
ಕಾಣುವ ಚಿತ್ರ
ಬಲು ವಿಚಿತ್ರ.
ಕಿಟಕಿಯಲ್ಲಿ ಸೂಸುತ್ತಿರುವ
ಹಿತವಾದ ಗಾಳಿ, ಬೆಳಕು
ಸುತ್ತಲೂ ಗೋಡೆ ಮೇಲಿನ ಚಿತ್ರ
ಪಟಗಳ ಮೇಲೆ
ಕುದರೆ ಏರಿ ಹೊರಟ
ಆಧುನಿಕ ರಾಜರು
ಮೈತುಂಬ ವೇಷ ಭೂಷಣ ಅಲಂಕಾರ
ಜೊತೆಗೆ ರಾಣಿಯರು
ಕಾರು -ಮೋಟರ್ ಸೈಕಲ್‌ಗಳ ಹಾಗೆ
ಈ ಕುದುರೆಗಳ ವೇಗ
ಲಗಾಮು ಜಗ್ಗಿದರೂ ನಿಲ್ಲುವಂತಿಲ್ಲ
ಅಪಘಾತದ ಅಂಜಿಕೆ
ಇಲ್ಲವೇ ಇಲ್ಲ.

ಕೆಳಮಹಡಿಯಲ್ಲಿ
ಸುತ್ತಲು ಕತ್ತಲೆ
ಅದರಲ್ಲೂ ಮಿನಿ ಮಿನಿ ದೀಪ
ತೊಲೆಗಳಿಗೆ ಹೆಣೆದ ಜೇಡನ ಬಲೆ
ಕ್ರಿಮಿ ಕೀಟ.
ಕೆಲ ಚಿತ್ರಗಳತ್ತ ಕಣ್ಣು ಹೊರಳಿಸಿದಾಗ
ಆ ಸ್ಥಾನಕ್ಕಾಗಿ ಹೋರಾಡುತ್ತ
ಹೊಟ್ಟೆ, ಬಟ್ಟೆಗಾಗಿ ಮಾತ್ರ ಬೇಟೆಯಾಡುತ್ತ
ಬಿಲ್ಲು-ಬಾಣ ಹಿಡಿದು ಕೊರಗುತ್ತ
ನಿಂತ ಸೈನಿಕರು
ಮೇಲ್ಮಹಡಿ ಬೀಳದಂತೆ
ಕೆಳ ಮಹಡಿಗೆ ಆಧಾರ ಸ್ತಂಬಗಳಾಗಿ ನಿಂತವರು.
ಕೆತ್ತು ಎಂದಾಗ ಕೆತ್ತುವದು
ಮೆತ್ತು ಎಂದಾಗ ಮೆತ್ತುವದು
ಇದೊಂದೇ ಇವರ ಕೆಲಸ
"ಯಥಾ ರಾಜಾ ತಥಾ ಪ್ರಜಾ"
ಎನ್ನುವ ಮಾತು ಸುಳ್ಳಲ್ಲ.
ಮೇಲಿನಂತೆ ಕೆಳಗೆ ಇರಬೇಕಲ್ಲ
ಕೆಳಗೆ ನಿಂತ ಜನ
ಮೈಮೇಲಿನ ಧೂಳ ಝಾಡಿಸಿ
ಮೇಲ್ಮಹಡಿಗೆ ಬರುವದೆಂತು ?
ನಿರೀಕ್ಷಿಸುತ ನಿಂತಿವೆ ಇಂದು.

ಮದ್ದಗಿರಿ, ಚೆನ್ನರಾಯದುರ್ಗ, ಮಿಡಿಗೇಶಿ ದೊರೆಗಳ ವಂಶಾವಳಿ

* ಬಿ.ಆರ್.ಹಿರೇಮಠ

ಪ್ರಾಚೀನ ಕರ್ನಾಟಕದ ವೀರಶೈವ ಅರಸುಮನೆತನಗಳಲ್ಲಿ ಅತ್ಯಂತ ಪ್ರಮುಖವಾದುದು, 'ಮಹಾನಾಡ ಪ್ರಭು'ಗಳದು. ತೋಂಟದ ಸಿದ್ಧಲಿಂಗೇಶ್ವರರ ಧರ್ಮರಕ್ಷೆ, ಈ ಅರಸುಮನೆತನದ ರಾಜರಕ್ಷೆಗಳಲ್ಲಿ ವೀರಶೈವ ಧರ್ಮ, ಸಾಹಿತ್ಯ, ಸಮಾಜ. ಸಂಸ್ಕೃತಿಗಳು ಸಮೃದ್ಧವಾಗಿ ಸಾಗಿಬರಲು ಸಾಧ್ಯವಾಯಿತು. ಇಂಥ ಮಹತಿಯನ್ನು ಹೊಂದಿದ ಈ ಅರಸುಮನೆತನದ ಸಮಗ್ರವಾದ ಅಧ್ಯಯನ ಇನ್ನೂ ಆಗಬೇಕಾಗಿದೆ. ಇಲ್ಲಿ ಪ್ರಕಟವಾಗುತ್ತಿರುವ ಈ ಅರಸುಮನೆತನದ ವಂಶಾವಳಿ ಈ ರೀತಿಯ ಅಧ್ಯಯನ ಕೈಕೊಳ್ಳುವವರಿಗೆ ಪ್ರಧಾನ-ಪೋಷಕ ಹಾಗೂ ಪೂರಕ ಆಕರ ಸಾಮಗ್ರಿಯೆನಿಸಿದೆ.

ಚಾರಿತ್ರಿಕ ಮಹತಿಯನ್ನು ಹೊಂದಿರುವ ಈ ವಂಶಾವಳಿಯನ್ನು ತುಮಕೂರ ಜಿಲ್ಲೆಯ ಮಧುಗಿರಿ ತಾಲೂಕಿನ ಶಂಭೋನಹಳ್ಳಿಯಲ್ಲಿರುವ ಮಹಾನಾಡಪ್ರಭುಗಳ ವಂಶಸ್ಥರ ಹತ್ತಿರವಿರುವ ದಾಖಲೆಗಳಿಂದ ಸಂಗ್ರಹಿಸಲಾಗಿದೆ. ಈ ಅರಸುಮನೆತನದ ವಂಶಸ್ಥರ ಮನೆಯಲ್ಲಿ 'ಮಹಾನಾಡಪ್ರಭು'ಗಳಿಗೆ ಸಂಬಂಧಿಸಿದ ಹಲವಾರು ದಾಖಲೆಗಳ ಸಂಗ್ರಹವಿದೆ. ಇಲ್ಲಿಯ ಕಡತ, ಕಾಗದ ಮೊದಲಾದ ದಾಖಲೆಗಳಲ್ಲಿ ವೈವಿಧ್ಯಪೂರ್ಣ ವಿಷಯವಿದೆ.

ಶಂಭೋನಹಳ್ಳಿಯಲ್ಲಿರುವ ಮಹಾನಾಡಪ್ರಭುಗಳ ವಂಶಸ್ಥರ ಮನೆಯಲ್ಲಿರುವ 'ವಂಶಾವಳಿ'ಗಳು ಏಕರೂಪದವುಗಳಾಗಿರುವುದಿಲ್ಲ. ಇವುಗಳಲ್ಲಿ ಕೆಲವು ಅಪೂರ್ಣವಾಗಿದ್ದರೆ, ಇನ್ನು ಕೆಲವು ಕಾಲದಿಂದ ಕಾಲಕ್ಕೆ ಪ್ರತಿಮಾಡಿದವುಗಳಾಗಿರುತ್ತವೆ. ಈ 'ವಂಶಾವಳಿ'ಗಳನ್ನು ಹೆಚ್ಚಾಗಿ ಈ ಅರಸುಮನೆತನದವರೇ ಪ್ರತಿಮಾಡಿದ್ದಾರೆ. ಹೀಗೆ ಪ್ರತಿಮಾಡುವಾಗ ಆಯಾ ಕಾಲದ ಈ ಅರಸುಮನೆತನದವರು ಕೆಲವು ಸಲ ಮೂಲದ ವಂಶಾವಳಿಗೆ ತಮ್ಮ ಸಮಕಾಲೀನದ ವರೆಗಿನ ಅರಸರ ವಿವರಗಳನ್ನು ಬರೆದು ಸೇರಿಸಿ, ವಂಶಾವಳಿಯನ್ನು ವಿಸ್ತರಿಸಿದ್ದು ಕಂಡುಬರುತ್ತದೆ.

ಮಹಾನಾಡಪ್ರಭುಗಳ ಈ ವಂಶಾವಳಿಯನ್ನು ದಾಖಲೆಗಳಲ್ಲಿ 'ಮದ್ದಗಿರಿ, ಚೆನ್ನರಾಯದುರ್ಗ, ಮಿಡಿಗೇಶಿ ದೊರೆಗಳ ವಂಶಾವಳಿ'ಯೆಂದು ಕರೆಯಲಾಗಿದೆ. ಕೆಲವು ದಾಖಲೆಗಳಲ್ಲಿ ಇದನ್ನು 'ಸನ್ನದು', 'ಕೈಫಿಯತ್ತು', 'ರಾಯರೇಖೆ' ಎಂದೂ ಹೆಸರಿಸಲಾಗಿದೆ.

ಕ್ರಿ.ಶ. ೧೭೪೯ ರಲ್ಲಿ ಸಿದ್ಧಪಡಿಸಲಾದ ಈ ಮೂಲ ವಂಶಾವಳಿಯನ್ನು ೧೯೦೮ ಹಾಗೂ ೧೯೪೫ ರಲ್ಲಿ ಮುಮ್ಮಡಿ ಚಿಕ್ಕಪ್ಪಗೌಡರ ವಂಶೋದ್ಭವರಾದ ಚೆನ್ನಪ್ಪಗೌಡರ ಮಗ ಅಣ್ಣಯ್ಯಪ್ಪಗೌಡರು ಪ್ರತಿ ಮಾಡಿದ ಸಂಗತಿ ವಂಶಾವಳಿಗಳ ಅಂತ್ಯದಲ್ಲಿರುವ "ಸನ್ ೧೯೦೮ ನೇ ಇಸ್ವಿ ಅಗಸ್ಟ ತಾರೀಖು ೨೩ಕ್ಕೆ ಸರಿಯಾದ-ಕೀಲಕನಾಮ ಸಂವತ್ಸರದ ಶ್ರಾವಣ ಶುದ್ಧ ೫ಯಲ್ಲೂ ಪುಷ್ಯಮಿ ನಕ್ಷತ್ರದಲ್ಲಿ ಯೀಶಾಬ್ದಿ ಮುಂಮಡಿ ಚೆನ್ನಬಸಪ್ಪ ಗೌಡರ ಕೊಮಾರ ಅಣ್ಣಯ್ಯಪ್ಪಗೌಡ ಬರೆದ ಸಾಮಿಲ್", "ಸಂನ್ನು ಸಾವಿರದ ವಂಬೈನೂರ ನಲವತ್ತು ಹೈದನೆ ಯಿಸವಿ ಡಿಸೆಂಬರು ೧೦ರಲ್ಲಿ ಅಸಲಿಗೆ ಸರಿಯಾದ ನಕಲ್ ಬರೆದಿರುತ್ತೇವೆ, ಅಸಲು ಸಿತಲವಾದ್ದರಿಂದ. ಬರೆದಾತ ಈ ವಂಶಾಭಿವೃದ್ಧಿಯ ಚೆಂನಬಸಪ್ಪ ಅರಶಿನವರ

ಕೊಮಾರ ಅಂಣ್ಣೆಯಪ್ಪಾ ಗೌಡ ಬರದಾತ "- ಈ ವಿವರಗಳಿಂದ ಸ್ಪಷ್ಟವಾಗುತ್ತದೆ. ಇನ್ನೊಂದು ದಾಖಲೆಯ ಅಂತ್ಯದಲ್ಲಿರುವ "ಅಸಲಿಗೆ ಸರಿಯಾದ ನಕಲ್ ೧೮೯೯ನೇ ಇಸ್ವಿ ಜುಲೈ ತಾರೀಖು ಮಾಹೆ ಮರ್ಕ್ಯುಂ ೧೫ನೇ ವಿಕಾರಿ ಸಂವತ್ಸರದ ಆಷಾಢ ಶುದ್ಧ ೮ ಭಾನುವಾರ -ಪೂರ್ವದ ಪ್ರತಿ ನಕಲ್ ತಯಾರ ಆಗಿದೆ" ಎಂಬ ಉಲ್ಲೇಖದಿಂದ ಈ ವಂಶಾವಳಿಯನ್ನು ೧೮೯೯ ರಿಂದಲೇ ಪ್ರತಿ ಮಾಡುತ್ತ ಬಂದಿರುವುದು ವಿದಿತವಾಗುತ್ತದೆ.

ಮಹಾಪ್ರಭುಗಳ ರಾಜಾಶ್ರಯದಲ್ಲಿ ರಚಿತವಾದ "ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ" ಕೃತಿ, ಈ ಅರಸುಮನೆತನದ ಅಧ್ಯಯನಕ್ಕೆ ಉಪಯುಕ್ತ ಪ್ರಧಾನ ಆಕರಸಾಮಗ್ರಿಯೆನಿಸಿದೆ. ಈ ಕೃತಿಯಲ್ಲಿ ಮುಮ್ಮಡಿ ಚಿಕ್ಕಭೂಪಾಲ (ಸಪ್ಪೇಂದ್ರ)ನ ವರೆಗೆ ಮಾತ್ರ ವಿವರಗಳಿರುತ್ತವೆ. ಮುಮ್ಮಡಿ ಚಿಕ್ಕಪ್ಪಗೌಡನ ತರುವಾಯದ ಅರಸರ ವಿವರಗಳು ಪ್ರಸ್ತುತ ವಂಶಾವಳಿಯಿಂದ ಮಾತ್ರ ಲಭಿಸುತ್ತವೆ. ಹೀಗಾಗಿಬಿಮಹಾನಾಡ ಪ್ರಭು' ಅರಸುಮನೆತನದ ಸಮಗ್ರ ಅಧ್ಯಯನಕ್ಕೆ ಇಲ್ಲಿಯ ವಂಶಾವಳಿ ಮಹತ್ವದ ಮೂಲ ಆಕಾರ ಸಾಮಗ್ರಿಯಾಗಿ ನಿಲ್ಲುತ್ತದೆ. ಚಾರಿತ್ರಿಕ ಮಹತ್ವವನ್ನು ಹೊಂದಿರುವ ಮಹಾನಾಡಪ್ರಭುಗಳ ವಂಶಾವಳಿಯ ಪೂರ್ಣಪಾಠ ಹೀಗಿದೆ :

ಉತ್ತರದೇಶದಲ್ಲಿ ಸೊನ್ನಲಾಪುರವೆಂಬ ಪಟ್ಟಣದಲ್ಲಿ ಸಿದ್ಧರಾಮೇಶ್ವರ ಸ್ವಾಮಿಯವರು ದೊರೆತನ ಮಾಡಿಕೊಂಡು ಬಹುದಿವಸ ರಾಜ್ಯ ಪರಿಪಾಲನೆ ಮಾಡಿಕೊಂಡು ಇದ್ದರು. ಇವರ ವಂಶೋದ್ಭವರಾದಂಥ ವೀರೇಗೌಡರು ಮುಂತಾಗಿ ಏಳುಮಂದಿ ಅಣ್ಣತಮ್ಮಂದಿರು ಶರಣ ಸಂತತಿಯಾಗಿ ಅವರ ಸಾನಿಧ್ಯದಲ್ಲಿ ಇದ್ದುಕೊಂಡು ಇರಲಾಗಿ ಸಿದ್ಧರಾಮೇಶ್ವರ ಸ್ವಾಮಿಯವರು ಬಹಳ ತಪೋನಿಷ್ಠರಾದ ಕಾರಣ ಜ್ಞಾನದೃಷ್ಟಿಯಿಂದ ಭೂತಭವಿಷದ್ವರ್ತಮಾನವನ್ನು ತಿಳಿದು. ಈ ಶರಣ ಸಂತತಿಯಾಗಿ ಇರುವಂಥ ವೀರೇಗೌಡರು ಮುಂತಾದ ಏಳುಮಂದಿ ಅಣ್ಣತಮ್ಮಂದಿರನ್ನು ಸಮೀಪಕ್ಕೆ ಕರೆದು. ಹಿರಿಯನಾದಂಥ ವೀರೇಗೌಡಗೆ ಆಜ್ಞಾಪಿಸಿದ ವಿವರ :

ನೀನು ಪುಣ್ಯವಂತ, ಅದೃಷ್ಟಶಾಲಿಯಾಗಿ ದೊರೆತನಕ್ಕೆ ಯೋಗ್ಯಸ್ತನಾಗಿ ಕಾಣಪಟ್ಟದ್ದರಿಂದ ನೀವು ಏಳುಮಂದಿಯೂ ಇಲ್ಲಿ ಇರಲು ಕೆಲಸವಿಲ್ಲ. ಏಳು ಬಂಡಿ ದ್ರವ್ಯವನ್ನು ತೆಗೆದುಕೊಂಡು ದಕ್ಷಿಣದೇಶಕ್ಕೆ ಹೋಗಿ. ನೀವು ಆ ದೇಶಕ್ಕೆ ಹೋಗುವಾಗ ಮಧ್ಯಮಾರ್ಗದೊಳು ನೊಳಬಾಸುರನೆಂಬ ರಾಕ್ಷಸ ತಗಲುತ್ತ ಇದ್ದಾನೆ. ಅವನನ್ನು ಸಂಹಾರಮಾಡಿದ ಹತ್ಯಪರಿಹಾರಾರ್ಥವಾಗಿ ಐದುಕಡೆ ಈಶ್ವರ ಪ್ರತಿಷ್ಠೆ ಮಾಡಿ ನೊಣಬೇಶ್ವರರಾಯನೆಂಬ ಹೆಸರು ಇಟ್ಟರೆ, ನೀವು ಏಳ್ನಾಡಪ್ರಭುಗಳು

ಶಂಭೋನಹಳ್ಳಿಯಲ್ಲಿರುವ ಈ ಅರಸುಮನೆತನದವರ ಹತ್ತಿರವಿರುವ ದಾಖಲೆಗಳಲ್ಲಿ ಈ ಕೆಳಗಿನ ಭಾಗವೂ ಆರಂಭದಲ್ಲಿ ಇರುವುದನ್ನು ಗಮನಿಸಬೇಕು.

ವಿಜಯನಗರ ಸಂಸ್ಥಾನದ ಅರಸುಗಳ ವಂಶಾವಳಿ
ಶ್ರೀಮದಿಂದಿರಾಕಟಾಕ್ಷ ವೀಕ್ಷಣಸುಧಾರಸದಭಿಷೇಚನ ಸಂಪ್ರಾಪ್ತ ಸಾಮ್ರಾಜ್ಯವೈಭವ ರಿಪುರಾಜ ವೈರಿ ಗರ್ವ ನಿರ್ಭೇದನ, ಶ್ರೀಮನ್ ಮಹಾಮಂಡಿತ ಚಂಡವಿಕ್ರಮ ಕದನ ಪ್ರಚಂಡ ಮಂಡಲೇಶ್ವರ ನಿಕುಂಬರಾಯ ಕೊಮಾರರಾಮನಾಥ ಪಂಚಪಿರಂಗಿ ಬಿರುದಾಂಕಿತ ಗೋಣಾಂಕ ಚಕ್ರೇಶ್ವರ ಬಿರುದ ನಿಭಂದಜಿಗನೆಂಬ ರಾಯರ ಗಂಡನತುಳ ಪಕ್ಷಿಕಪಾಲಕ ಚತುಸ್ಸಮುದ್ರ ರಾಜ್ಯಧರ್ಮಪ್ರತಿಪಾಲಕ ಶ್ರೀ ವಿರೂಪಾಕ್ಷಸ್ವಾಮಿಯ ವರಪ್ರಸಾದಕ್ಕೆ ಪ್ರತಿಪಕ್ಷ ವರಭೂಪಾಲ ಧರಣೀವರಾಹ ಬಿರುದಾಂಕಿತ ಮುಕ್ಕಣ್ಣ ಕರಾರಿ ಸಾಳುವಗಂಡ ಸುಗುಣ ಚೂವರ ಸಕಲ ಗುಣಾಭಿರಾಮ ಧರೆ ಸಾಹಸ ಭೀಮ ವಿಜಯ ಪ್ರತಾಪ ದಕ್ಷಿಣ ಬಾಹುಬಲ ಉದ್ದಂಡ ನಾಯಕ ಶಿವಗಿರಿ ನಿವಾಸ ಆತ್ರೇಯ ಸಗೋತ್ರ ಕ್ಷತ್ರಿಯಾಚಾರ್ಯರವರು ವಿಜಯನಗರ ಮಾಂಬಾ ಪುತ್ರ ವರಹ ತಿರುದುಲಾಚಾರ್ಯರವರು ವಿಜಯನಗರ ಪಟ್ಟಣದಲ್ಲಿ ಶ್ರೀವೀರಧರ್ಮಸಿಂಹಾಸನ ಪೃಥ್ವೀ ಸಾಮ್ರಾಜ್ಯಂಗೈಯುತಿರಲು
ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ |
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ||
ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಗಳು ೧೪೬೬ನೇ ತಾರಣ ಸಂವತ್ಸರದ ಮಾಘ ಶುದ್ಧ ೫ ಸ್ಥಿರವಾರದಲ್ಲು ಶ್ರೀಮದಿಂದಿರಾ ಕಟಾಕ್ಷವೀಕ್ಷಣ ಸುಧಾರಸದಭಿಷೇಚನ ಸಂಪ್ರಾಪ್ತ ಸಾಮ್ರಾಜ್ಯ ವೈಭವರಿವು

ಆಗುತ್ತಿದ್ದೀರಿಯೆಂದು ಶ್ರೀ ಸಿದ್ಧರಾಮೇಶ್ವರ ಸ್ವಾಮಿಯವರು ಏಳುಬಂಡಿ ದ್ರವ್ಯವನ್ನು ಕೊಟ್ಟು ನಾವು ಈ ಸ್ಥಳದಲ್ಲಿ ಇರುವುದಿಲ್ಲ. ಕಲ್ಯಾಣಪಟ್ಟಣಕ್ಕೆ ಹೋಗುತ್ತೇವೆಂದು ಹೇಳಿ ಹೊರಟುಹೋದರು. ಅವರ ಅಪ್ಪಣೆಪ್ರಕಾರ ಈ ಏಳು ಮಂದಿ ಅಣ್ಣತಮ್ಮಂದಿರು ದ್ರವ್ಯವನ್ನು ಸಾಗಿಸಿಕೊಂಡು ಷಹರ ಬಿದರೆಯೆಂಬ ಪಟ್ಟಣಕ್ಕೆ ಬಂದು, ಅಲ್ಲಿ ಕೆಲವು ದಿವಸ ಇದ್ದರು. ಅಲ್ಲಿನ ಶಾನಭೋಗ ಮಲ್ಲರಸಯ್ಯನ ಕೊಮಾರ(ರು) ಹಿರೇಮಗ ಹರಿನರಸಯ್ಯ, ಚಿಕ್ಕಮಗ ತಿಮ್ಮರಸಯ್ಯ ಎಂಬುದಾಗಿ ಇಬ್ಬರು ಮಕ್ಕಳು ಇರುತ್ತಿದ್ದುದರಿಂದ ವೀರೇಗೌಡರು ಹರಿನರಸಯ್ಯನ ಸಂಗಡ ಅಪ್ಪಣೆ ಕೊಟ್ಟ ವಿವರ :

ನಮ್ಮನ್ನು ದಕ್ಷಿಣದೇಶಕ್ಕೆ ಹೋಗಿ ಎಂಬುದಾಗಿ ಗುರುಗಳ ಅಪ್ಪಣೆಯಾಗಿದೆ. ಇಲ್ಲಿ ನಿಲ್ಲುವುದಕ್ಕೆ ಇಲ್ಲವೆಂಬುದಾಗಿ ಈ ಹರಿನರಸಯ್ಯನ ಸಂಗಡ ಹೇಳಿದ್ದರಿಂದ ನಾನು ನಿಮ್ಮ ಸಂಗಡ ಬರುತ್ತಿದ್ದೇನೆ. ನಿಮಗೆ ದೊರೆತನವಾದಲ್ಲಿ ನನಗೆ ಅನ್ನಸ್ಥಿತಿ ಮಾಡಿಕೊಡುವುದಾಗಿ ಅಪ್ಪಣೆಯಾದಲ್ಲಿ ಬರುತ್ತಿದ್ದೇನೆಂದು ಕೇಳಿಕೊಂಡದ್ದರಿಂದ ನಮಗೆ ದೊರೆತನ ಆದದ್ದೇ ಉಂಟಾದರೆ ಪ್ರಧಾನತ್ವ ಕೊಟ್ಟುನಮ್ಮ ಸಮ್ಮುಖದಲ್ಲಿರಿಸಿಕೊಳ್ಳುತ್ತೇವೆಂದು ಅಪ್ಪಣೆ ಕೊಟ್ಟದ್ದರಿಂದ, ಹರಿನರಸಯ್ಯನ ಕರೆದುಕೊಂಡು ದಕ್ಷಿಣದೇಶವನ್ನು ಕುರಿತು ದ್ರವ್ಯವನ್ನು ಸಾಗಿಸಿಕೊಂಡು ಬರುತ್ತಿರಲಾಗಿ, ಮಧ್ಯ ಮಾರ್ಗದಲ್ಲಿ ನೋಣಬಾಸುರನೆಂಬ ರಾಕ್ಷಸ ಬಂದು ತಗುಲಿದ್ದರಿಂದ . ಆ ರಾಕ್ಷಸನನ್ನು ಅತಿಧೈರ್ಯಪರಾಕ್ರಮದಿಂದ ಸಂಹಾರ ಮಾಡಿ ಬಿಟ್ಟು, ಅಲ್ಲಿಂದ ಬರುವಾಗ ಮಧ್ಯಮಾರ್ಗದಲ್ಲಿ ತುಂಗೋಟಿ ಎಂಬ ಪಟ್ಟಣವಿರಲಾಗಿ, ಈ ಪಟ್ಟಣಕ್ಕೆ ಗೌಡಗಳು : ತುರುಬಿನ ಮಾರೇ ಗೌಡ ಚಳ್ಳಗುರು ಮಾರೇಗೌಡ ಸಹ ಇಬ್ಬರು ಅಣ್ಣತಮ್ಮಂದಿರು ಇರುತ್ತಿದ್ದರು. ಈ ತುಂಗೋಟಿ ಎಂಬ ಪಟ್ಟಣದ ಬಳಿಗೆಬಂದು, ಈ ಸ್ಥಳದಲ್ಲಿ ಎರಡು ಮೂರು ದಿವಸವಿದ್ದು ಇರಲಾಗಿ, ಈ ತುಂಗೋಟಿ ಪಟ್ಟಣದ ಗೌಡಗಳು ಬಹಳ ಉಪಚಾರಮಾಡಿ ನಿಲ್ಲಿಸಿಕೊಂಡ ಕಾರಣ ನಾವು ಇಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ. ಮುಂದಕ್ಕೆ ಹೋಗಬೇಕೆಂಬುದಾಗಿ ವೀರೇಗೌಡರು ಮುಂತಾಗಿ ಹೇಳುವುದರಿಂದ ಈ ತುರುಬಿನ ಮಾರೇಗೌಡರು ಚಳ್ಳಗುರು ಮಾರೇಗೌಡರು ಸಹ ಹೇಳಿಕೊಂಡ ವಿವರ

ನಾವು ಸಕ್ಕರದಿಂದ ಬಂದು ಈ ಅರಣ್ಯದಲ್ಲಿ ನಿಂತು, ಇಲ್ಲಿ ಇದ್ದಂಥ ಗಿಡಗಂಟಿ ಯಾವತ್ತು ಕಡಿಸಿ, ಹೊಸದಾಗಿ ಕೋಟೆ ಕೊತ್ತಲ ಮುಂತಾಗಿ ಕಟ್ಟಿಸಿ ಗ್ರಾಮವನ್ನು ನಿರ್ಮಾಣಮಾಡಿದ್ದೇವೆ. ನಮ್ಮಲ್ಲಿ ಲೆಕ್ಕಪತ್ರ ಬರೆಯುತಕ್ಕವರು ಯಾರೂ ಇಲ್ಲ. ಈ ಹರಿನರಸಯ್ಯನವರನ್ನು ಇಲ್ಲಿ ಇಟ್ಟು ನೀವು ಮುಂದಕ್ಕೆದಯಮಾಡಿಸಿ, ಎಲ್ಲಿ ಸ್ಥಳ ನೋಡಿ ಹೊಸದಾಗಿ ಕೋಟೆ ಕೊತ್ತಲ ಮುಂತಾದವು ಕಟ್ಟಿಸಿ ಒಂದು ಪಟ್ಟಣವನ್ನು ನಿರ್ಮಾಣ ಮಾಡಿಸಿಕೊಂಡು ನಿಂತ ಕಡೆಯಿಂದ ಹೇಳಿ ಕಳುಹಿಸುತ್ತಿದ್ದೇನೆ. ಈ ಸ್ಥಳಕ್ಕೂ ಆ ಸ್ಥಳಕ್ಕೂ ತಾವೇ ಯಾವಂದರು ಹೊರತು ಮತ್ತೆ ಬೇರೆಯಲ್ಲವೆಂಬುದಾಗಿ ಹೇಳಿ ಕೊಂಡದ್ದರಿಂದ ಆದೇ ಮೇರೆಗೆ ನಾವು ನಿಂತ ಕಡೆಯಿಂದ ಹೇಳಿ ಕಳುಹಿಸಿಕೊಡುತ್ತೇನೆ 'ಹೊರಟು ಬಾ' ಎಂಬುದಾಗಿ ಅಪ್ಪಣೆ ಕೊಟ್ಟು, ಮುಂದಕ್ಕೆ ದಯಮಾಡಿಸಿದರು. ಆ ತರುವಾಯ ಮಧ್ಯಮಾರ್ಗದಲ್ಲಿದ್ದ ಕಾನನವನ್ನು ಕಡಿಸಿ ಗುಡಾರ ಹಾಕಿಸಿಕೊಂಡು ನಿಂತು, ಅಲ್ಲಿ ಒಂದು ಗ್ರಾಮವನ್ನು ಕಟ್ಟಿಸಬೇಕೆಂದು ಶಾಲಿವಾಹನ ಶಕವರುಷಂಗಳು ೧೨೬೯ ನೇ ಸರ್ವಜಿತು ಸಂವತ್ಸರದ ಮಾರ್ಗಶಿರ ಶುದ್ಧ ೧೫ರಲ್ಲಿ ಪ್ರಥಮ ಕೋಟೆ ಕೊತ್ತಳ ಹಾಕಿಸಿ, ಇದಕ್ಕೆ 'ಕೋರಾ' ಎಂಬುದಾಗಿ ಹೆಸರು ಇಟ್ಟು, ಈ ಏಳುಮಂದಿಯೂ ಕೆಲವು ದಿವಸ ಆ ಗ್ರಾಮದಲ್ಲಿಯೇ ಇದ್ದರು. ಅಷ್ಟರಲ್ಲಿ ಕೆಲವು ದಿವಸದ ಮೇಲೆ ತಮ್ಮೊಳಗೆ ತಾವೇ ಆಲೋಚನೆಮಾಡಿಕೊಂಡು ಸ್ವತಂತ್ರರಾಗಿರಬೇಕೆಂದು ಈ ಐದುಜನ ಐದುಬಂಡಿ ದ್ರವ್ಯವನ್ನು

ಸಾಗಿಸಿಕೊಂಡು ಹೋಗಿ ಅರಣ್ಯದಲ್ಲಿ ಳಿದುಕೊಂಡು ಗಿಡಗಂಟಿಗಳನ್ನು ಕಡಿಸಿ ಪ್ರತ್ಯೇಕ ಪ್ರತ್ಯೇಕವಾಗಿ ನಿಂತು ನಾಲ್ಕು ದಿಕ್ಕಿನಲ್ಲಿ ನಾಲ್ಕು ನೊಣಬೇಶ್ವರದೇವರ ಪ್ರತಿಷ್ಠೆಮಾಡಿಸಿ ಇರುವರು. ಹೆಂಜೇರು-ಹೇಮಾವತಿ ಬಳಿ ಒಂದು, ಚೋಳೂರು-ಬಿದರೆ ಬಳಿ ಒಂದು, ಎಣ್ಣೆಗೆರೆ ಬಳಿ ಒಂದು, ಚೌಳೂರು ಬಳಿ ಒಂದು -ಈ ಪ್ರಕಾರ ದೇವಸ್ಥಾನಗಳ ನಿರ್ಮಾಣ ಮಾಡಿಸಿಕೊಂಡು ಅವರು ನಿಂತ ಗ್ರಾಮಗಳು:

ಚೆನ್ನಪ್ಪಗೌಡರು ತೆರೆಯೂರ ಎಂಬ ಗ್ರಾಮವನ್ನು ಕಟ್ಟಿಸಿಕೊಂಡು ನಿಂತರು. ಸಂಗಪ್ಪಗೌಡರು ಚೌಳೂರು ಎಂಬ ಗ್ರಾಮವನ್ನು ಕಟ್ಟಿಸಿಕೊಂಡು ನಿಂತರು. ಕಾಳಚಿಕ್ಕಪ್ಪ ಗೌಡರು ಗುಬ್ಬಿ-ಹೊಸಹಳ್ಳಿಯೆಂಬ ಗ್ರಾಮವನ್ನು ಕಟ್ಟಿಸಿಕೊಂಡು ನಿಂತರು. ರಾಮಪ್ಪಗೌಡರು ಎಣ್ಣೆಗೆರೆಯೆಂಬ ಗ್ರಾಮವನ್ನು ಕಟ್ಟಿಸಿಕೊಂಡು ನಿಂತರು. ಹಿರೇ ಚಿಕ್ಕಪ್ಪಗೌಡರು ಬಿದರೆ (ಗ್ರಾಮವನ್ನು) ಕಟ್ಟಿಸಿಕೊಂಡು ನಿಂತರು. ಈ ಪ್ರಕಾರ ಐದುಜನ ಇರುತ್ತಿದ್ದರು. ಇವರಲ್ಲಿ ಒಬ್ಬರು ಕಾಳಣ್ಣಗೌಡರು 'ಕೋರಾ' ಎಂಬ ಗ್ರಾಮವನ್ನು ಆಬಾದು ಮಾಡಿಸಿಕೊಂಡು ನಿಂತರು. ಜ್ಯೇಷ್ಠಪುತ್ರರಾದಂಥ ಹಿರೇಗೌಡರು ಒಂದು ಬಂಡಿ ದ್ರವ್ಯವನ್ನು ಸಾಗಿಸಿಕೊಂಡು ಬಂದು ಮಹಾದುಷ್ಟ ಮೃಗಗಳಿರುವಂಥ ಮಹಾ ಅರಣ್ಯದಲ್ಲಿ ಗುಡಾರ ಹಾಕಿಸಿ ನಿಂತು ಧೈರ್ಯ ಶೌರ್ಯ ಪರಾಕ್ರಮದಿಂದ ಮೃಗಗಳ ಸಂಹಾರಮಾಡಿ ಅಲ್ಲಿ ಒಂದು ಗ್ರಾಮವನ್ನು ನಿರ್ಮಾಣ ಮಾಡಬೇಕೆಂಬುದಾಗಿ ಕಾನನವನ್ನು ಕಡಿಸಿ, ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ ಶಾಲಿವಾಹನ ಶಕವರುಷಂಗಳು ೧೩೭೧ ನೇ ವಿಕ್ರಮಸಂವತ್ಸರದ ವೈಶಾಖ ಶುದ್ಧ ೨ ಶುಕ್ರವಾರ ಅಭಿಜಿತ್ ಮುಹೂರ್ತದಲ್ಲಿ ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ ಗ್ರಾಮ ನಿರ್ಮಾಣ ಮಾಡಿಸಿ ದೇವಸ್ಥಾನ ಕಟ್ಟಿಸಿ ದೇವರಪ್ರತಿಷ್ಠೆ ಮಾಡಿಸಿ ಅದಕ್ಕೆ ರಾಮೇಶ್ವರ ಎಂಬುದಾಗಿಯೂ ನೊಣಬೇಶ್ವರ ಎಂಬುದಾಗಿಯೂ ದೇವರುಗಳ ಪ್ರತಿಷ್ಠೆ ಮಾಡಿಸಿ, ಗ್ರಾಮಕ್ಕೆ 'ಮುಮ್ಮಡಿಪಟ್ಟಣ'ವೆಂಬುದಾಗಿ ಹೆಸರಿಟ್ಟು, ಕೆಲವು ಕಾಲ ಸುಖದಲ್ಲಿದ್ದರು. ಅಷ್ಟರಲ್ಲಿ ವೀರೇಗೌಡರು ಅದೇ ಪ್ರಕಾರ ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಇವರ ಕೊಮಾರ ಮುಮ್ಮಡಿ ಹಿರೇಚಿಕ್ಕಪ್ಪಗೌಡರು ಹಸುಮಕ್ಕಳಾಗಿರುವಲ್ಲಿ ಇವರಿಗೆ ವೈರಿಗಳಾದಂಥ ಮೊಗಲರ ದಂಡು ಬಂದು ಮುಮ್ಮಡಿ ಪಟ್ಟಣವನ್ನು ಠಾಣ್ಯ ಹಾಕಿಸಿಕೊಂಡು ಸಿಕ್ಕಿದವರನ್ನು ಬಿಡದೆ ಹೊಡೆಯುತ್ತ ಬಂದಲ್ಲಿ ದೊಡ್ಡೇಗೌಡರು ಯುದ್ಧಕಾಲದಲ್ಲಿ ವೀರಸ್ವರ್ಗಸ್ಥರಾದರು. ಹಿರೇಚಿಕ್ಕಪ್ಪಗೌಡರು ಸಣ್ಣವರಾಗಿದ್ದುದರಿಂದ ಇವರ ಕೈಗೆ ಸಿಕ್ಕದೆ ಬಂದು, ತುಂಗೋಟಿ ಪಟ್ಟಣದಲ್ಲಿ ತುರುಬಿನ ಮಾರೇಗೌಡನ ಮೊಮ್ಮಗ ಮಾರೇಗೌಡ ಎಂಬವನಿಗೆ ಆರುಮಂದಿ ಮಕ್ಕಳಿರಲಾಗಿ ಈ ಮುಮ್ಮಡಿ ಪಟ್ಟಣದಿಂದ ಬಂದಂಥವರನ್ನು ಸಂತಯಿಸಿ, ಇವರನ್ನು ಹಿಡಿಯಬೇಕೆಂದ ಹಿಂದಲಿಂದ ಬಂದಂಥ ವೈರಿಗಳನ್ನು ಈ ಮಾರೇಗೌಡನ ಆರುಮಂದಿಮಕ್ಕಳು ಕೆಲವು ಫೌಜನ್ನು ತೆಗೆದುಕೊಂಡು ಅತಿ ಶೌರ್ಯ ಪರಾಕ್ರಮದಿಂದ ಹಿಮ್ಮೆಟ್ಟಿಸಿದರು. ಆ ತರುವಾಯ ಯಥಾ ಪ್ರಕಾರ ಚಿಕ್ಕಪ್ಪಗೌಡರು ತುಂಗೋಟಿಪಟ್ಟಣದಿಂದ ಮುಮ್ಮಡಿಪಟ್ಟಣಕ್ಕೆ ಬಂದು ಗ್ರಾಮವನ್ನು ಬಸ್ತಿಮಾಡಿಕೊಂಡು ಕೆಲವು ಫೌಜು ಜಮೆ ಮಾಡಿಕೊಂಡು ಸುಖದಲ್ಲಿರುತ್ತಿರುವಲ್ಲಿ ದೇವರ ಅನುಗ್ರಹದಿಂದ ಒಂದಾನೊಂದು ದಿವಸ ಸ್ವಪ್ನದಲ್ಲಿ ಬಿಜ್ಜಮಹಾದೇವಿ ಎಂಬ ದೇವರು ಬಂದು ಹೇಳಿದ್ದರಿಂದ ಆ ದೇವರ ವಾಕ್ಯಾನುಸಾರವಾಗಿ ಅಲ್ಲಿ ಒಂದು ಪಟ್ಟಣವನ್ನು ನಿರ್ಮಾಣಮಾಡಬೇಕೆಂದು ಸ್ಥಳ ನೋಡುವ ನಿಮಿತ್ತ ಸ್ವಾರಿ ಹೊರಟುಬಂದು ಅರಣ್ಯದಲ್ಲಿ ತಿರುಗುತ್ತಿರಲಾಗಿ ಒಂದು ಶ್ವಾನವನ್ನು ಕುಂದಲಿ ತರುಬಿಕೊಂಡು ಬರುತ್ತಿರಲಾಗಿ ಆ ಕುಂದಲಿಮಹಿಯನ್ನು ಇವರು ನೋಡಿ ಆಶ್ಚರ್ಯಪಟ್ಟು, ಇದು ಗಂಡು ಭೂಮಿ ಈ ಸ್ಥಳದಲ್ಲಿ ಒಂದು ಪಟ್ಟಣವನ್ನು ಅಗತ್ಯ ಕಟ್ಟಿಸಬೇಕೆಂದು ನಿಶ್ಚಯಮಾಡಿ, ಆ ಕ್ಷಣವೇ ಚೋಳರಾಯರ

ಬಳಿಗೆ ಹೋಗಿ ಅವರ ಅಪ್ಪಣೆ ತೆಗೆದುಕೊಂಡು ಬಂದು ಸುತ್ತುಮುತ್ತಲಿದ್ದ ಗಿಡಗಂಟಿ ಯಾವತ್ತು ಕಡಿಸಿ ಕೋಟೆಕೊತ್ತಳಹಾಕತಕ್ಕ ಬಗ್ಗೆ ಶಾಲಿವಾಹನ ಶಕವರುಷಂಗಳು ೧೪೪೬ ಪಾರ್ಥಿವನಾಮ ಸಂವತ್ಸರ ಫಾಲ್ಗುಣ ಶು೧೦ ಭಾನುವಾರ ಸೂರ್ಯೋದಯ ಕಾಲ ಮೂಹೂರ್ತದಲ್ಲಿ ಕೋಟೆ ಹಾಕತಕ್ಕ ಬಗ್ಗೆ ಗ್ರಾಮವನ್ನು ನಿರ್ಮಾಣಮಾಡಿ ಸ್ವಪ್ನಾನುಸಾರವಾಗಿ ಬಿಜ್ಜಮಹಾದೇವಿಯ ಹೆಸರುಂಟಾಗಬೇಕೆಂದು 'ಬಿಜವರ'ವೆಂಬುದಾಗಿ ಹೆಸರಿಟ್ಟು ಶ್ರೀ ವೀರಭದ್ರ ದೇವಸ್ಥಾನ ಕಟ್ಟಿಸಿ, ದೇವರ ಪ್ರತಿಷ್ಠೆಮಾಡಿಸಿ ಕೆರೆ ಸಹ ಕಟ್ಟಿಸಿ ಇವರುಗಳಿಗೆ ಗುರುಗಳಾದಂಥ ತೋಂಟದಸಿದ್ಧಲಿಂಗೇಶ್ವರ ದೇವರ ಭಜನೆಯಂ ಮಾಡಿಕೊಂಡು ಕೆಲವುದಿವಸದ ಮೇಲೆ ಹರಿನರಸಯ್ಯನ ಮೊಮ್ಮಗ ಮಲ್ಲರಸಯ್ಯ ಎಂಬವನನ್ನು ತುಂಗೋಟಿಪಟ್ಟಣದಲ್ಲಿದ್ದಂಥವನನ್ನು ಕರೆಸಿಕೊಂಡು ಸಮೀಪದಲ್ಲಿಟ್ಟುಕೊಂಡು ಲೆಕ್ಕಪತ್ರ ಬರೆಯುತಕ್ಕ ಬಗ್ಗೆ ಈತನನ್ನೇ ಖಾವಂದನನ್ನು ಮಾಡಿಕೊಂಡು ಪ್ರಧಾನತ್ವ ಕೊಟ್ಟು ಸನ್ನಿಧಾನದಲ್ಲಿ ರಾಜ್ಯಪರಿಪಾಲನೆ ಮಾಡಿಕೊಂಡು ಸುಖದಲ್ಲಿರುತ್ತಿದ್ದರು. ಆ ತರುವಾಯ ಇದಕ್ಕೆ ಸಮೀಪದಲ್ಲಿ ಮತ್ತೊಂದು ಗ್ರಾಮವನ್ನು ಕಟ್ಟಿಸಬೇಕೆಂಬುದಾಗಿ ಗಿಡಗಂಟಿ ಯಾವತ್ತು ಕಡಿಸಿ ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ ಶಾಲಿವಾಹನಶಕವರುಷಂಗಳು ೧೫೧೫ನೇ ವಿಜಯಸಂವತ್ಸರದ ಕಾರ್ತಿಕ ಶು೧೫ ಗುರುವಾರ ಸೂರ್ಯೋದಯಕಾಲದಲ್ಲಿ ಪ್ರಥಮ ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ ಪಂಚದೇವಸ್ಥಾನ ಕಟ್ಟಿಸಿ ದೇವರ ಪ್ರತಿಷ್ಠೆಯನ್ನು ಮಾಡಿಸಿ ಇದಕ್ಕೆ 'ಸಿದ್ಧಾಪುರ' ವೆಂಬುದಾಗಿ ಹೆಸರಿಟ್ಟು ಕೆರೆ ಸಹ ಕಟ್ಟಿಸಿ ಈ ಸ್ಥಳದ ಶಾನುಭೋಗಿಕೆಯನು ಮಲ್ಲರಸಯ್ಯ ಎಂಬವಗೆ ಗೊತ್ತುಮಾಡಿ ಇರುತ್ತಿರಲಾಗಿ, ಈ ಗ್ರಾಮದ ದಕ್ಷಿಣ ದಿಕ್ಕಿಗೆ ಸಮೀಪವಾಗಿ ಒಂದು ಬೆಟ್ಟವಿರಲಾಗಿ , ಆ ಬೆಟ್ಟ ಹತ್ತಿ ನೋಡುವಾಗ ಜಲಸಮೃದ್ಧವಾಗಿ ತೋರಿದ್ದರಿಂದ ಗಿಡಗಂಟಿ ಯಾವತ್ತು ಕಡಿಸಿ ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ ಶಾಲಿವಾಹನ ಶಕವರುಷಂಗಳು ೧೫೨೪ನೇ ಶುಭಕೃತುಸಂವತ್ಸರದ ಮಾರ್ಗಶಿರ ಶು ೧೫ ಸೋಮವಾರ ಗೋಧೂಳಿಲಗ್ನದಲ್ಲಿ ಪ್ರಥಮ ಕೋಟೆ ಕೊತ್ತಳ ಹಾಕತಕ್ಕ ಬಗ್ಗೆ (ಗ್ರಾಮ ನಿರ್ಮಾಣ ಮಾಡಿ), ಇದಕ್ಕೆ 'ಮಧುಗಿರಿ'ಯೆಂಬುದಾಗಿ ಹೆಸರಿಟ್ಟು ಬೆಟ್ಟದ ಮೇಲೆ ಶ್ರೀ ಗೋಪಾಲಕೃಷ್ಣಸ್ವಾಮಿದೇವಸ್ಥಾನ ಕಟ್ಟಿಸಿ, ದೇವರ ಪ್ರತಿಷ್ಠೆ ಮಾಡಿಸಿ ಇದಕ್ಕೆ ಅನೇಕವಾದ ಗ್ರಾಮಗಳನ್ನು ನಿರ್ಮಾಣ ಮಾಡಿಸಿ ರಾಜ್ಯಪರಿಪಾಲನೆಯನ್ನು ಮಾಡಿಕೊಂಡು ಸುಖದಲ್ಲಿರುತ್ತಿರಲಾಗಿ, ಇದಕ್ಕೆ ಸಮೀಪದಲ್ಲೊಂದು ಬೆಟ್ಟ ದಕ್ಷಿಣ ದಿಕ್ಕಿನಲ್ಲಿದ್ದುದರಿಂದ ಸಂಚಾರ ನಿಮಿತ್ತವಾಗಿ ಸ್ವಾರಿಹೊರಟು ಅಲ್ಲಿಗೆ ಹೋಗಿ ಬೆಟ್ಟ ಹತ್ತಿ ನೋಡುವಾಗ ಜಲಸಮೃದ್ಧಿಯಾಗಿ ದೃಷ್ಟಿಗೆ ಸೌಖ್ಯವಾಗಿ ತೋರಿದ್ದರಿಂದ ಗಿಡಗಂಟಿ ಯಾವತ್ತು ಕಡಿದು ಕೋಟೆಕೊತ್ತಳ ಹಾಕತಕ್ಕ ಬಗ್ಗೆ ಶಾಲಿವಾಹನ ಶಕವರುಷಂಗಳು ೧೫೩೬ನೇ ಆನಂದಸಂವತ್ಸರದ ಮಾಘ ಬಹುಳ ೫ ಬುಧವಾರ ಪ್ರಥಮ ಕೋಟೆಕೊತ್ತಳ ಹಾಕತಕ್ಕ ಬಗ್ಗೆ ಗ್ರಾಮ ನಿರ್ಮಾಣ ಮಾಡಿ, ಇದಕ್ಕೆ ಇವರ ಮಕ್ಕಳಾದಂಥ ಮುಮ್ಮಡಿ ಚೆನ್ನಪ್ಪಗೌಡರೆಂದು ಹೆಸರಿಟ್ಟು ಇದಕ್ಕೆ ಅನೇಕವಾದ ಗ್ರಾಮಗಳನ್ನು ನಿರ್ಮಾಣಮಾಡಿಸಿ ಈ ಸ್ಥಳಗಳಲ್ಲೂ ರಾಜ್ಯ ಪರಿಪಾಲನೆ ಮಾಡಿಕೊಂಡು ಸುಖದಲ್ಲಿರುತ್ತಲಿದ್ದರು. ಈ ಮಧುಗಿರಿಗೆ ಉತ್ತರದಿಕ್ಕಿನಲ್ಲೊಬ್ಬ ನಾಗರೆಡ್ಡಿಯೆಂಬವನು ಸ್ತ್ರೀ ಸಮೇತವಾಗಿ ಪೂರ್ವದೇಶದಿಂದ ಬಂದು ಒಂದು ಗೊಲ್ಲರಹಟ್ಟಿಯಲ್ಲಿ ನಿಂತನು. ಅವನು ವಿಷ್ಣುಭಕ್ತನಾಗಿಯೂ ಸದಾ ದೇವರ ಸ್ಮರಣೆಯಿಂದ ಬ್ರಾಹ್ಮಣಸೇವಾ ನಿರತನಾಗಿಯೂ ಇರುತ್ತಿರಲಾಗಿ, ಒಂದಾನೊಂದು ಕಾಲದಲ್ಲಿ ಒಂದು ದಿವಸ ಸ್ವಪ್ನದಲ್ಲಿ ಶ್ರೀ ವೆಂಕಟರಮಣಸ್ವಾಮಿಯವರ ವಾಕ್ಯಾನುಸಾರವಾದ ಕಾರಣ ಪರ್ವತದ ಸಮೀಪದಲ್ಲಿದ್ದುದರಿಂದ ಈ ನಾಗರೆಡ್ಡಿಯು ಪರ್ವತದ ಮಗ್ಗುಲಲ್ಲಿ ಅಗಿಸಿ ನೋಡಲಾಗಿ ಅನೇಕವಾದ ದ್ರವ್ಯ ಸಿಕ್ಕಿದುದರಿಂದ ಶ್ರೀ ವೆಂಕಟರಮಣ ಸ್ವಾಮಿಯ ದೇವಸ್ಥಾನ ಕಟ್ಟಿಸಿ ದೇವರ ಪ್ರತಿಷ್ಠೆಯನ್ನು

ಮಾಡಿಸಿ ಬೆಟ್ಟದ ಮೇಲೆ ಕೋಟೆ ಕೊತ್ತಳ ಮುಂತಾದವುಗಳನ್ನು ಹಾಕಿಸಿದ್ದರಿಂದ ತನ್ನ ಸ್ತ್ರೀಯಾದಂಥವಳು ತನ್ನ ಹೆಸರಿಡಬೇಕೆಂಬುದಾಗಿ ಕೇಳಿಕೊಂಡದ್ದರಿಂದ ಈ ಬೆಟ್ಟಕ್ಕೆ 'ಮಿಡಿಗೇಶಿ' ಯೆಂಬುದಾಗಿ ಹೆಸರಿಟ್ಟು ಬೇಡತ್ತೂರು ಮುಂತಾದ ಗ್ರಾಮಗಳನ್ನು ನಿರ್ಮಾಣಮಾಡಿಸಿ ಈ ಸ್ಥಳದಲ್ಲಿರುತ್ತಿದ್ದನು. ಮಧುಗಿರಿಗೂ ಮಿಡಿಗೇಶಿಗೂ ಮಧ್ಯ ಅವರಗಲ್ಲುಗುಟ್ಟೆಯ ಬಳಿ ಒಂದು ಕೆರೆಯನ್ನು ಈ ನಾಗರೆಡ್ಡಿ ಕಟ್ಟಿಸುತ್ತಿದ್ದನು. ಈ ಕೆರೆ ನೋಡುವ ನಿಮಿತ್ತ ಮಿಡಿಗೇಶಿಯಿಂದ ಈ ನಾಗರೆಡ್ಡಿ ಬಂದನು. ಮಧುಗಿರಿಯಿಂದ ಬಿಜವರದ ಮುಮ್ಮಡಿ ಹಿರೇಚಿಕ್ಕಪ್ಪಗೌಡರು ಸ್ವಾರಿ ಹೊರಟು ಬಂದಿದ್ದ ಕಾರಣ ಈ ಉಭಯತ್ರರಿಗೂ ಈ ಕೆರೆ ಬಳಿ ಭೆಟ್ಟಿಯಾಗಿ, ಆ ತರುವಾಯ ಮಧುಗಿರಿಯಿಂದ ಬಂದಿದ್ದ ಚಿಕ್ಕಪ್ಪಗೌಡರ ಕಡೆಯವರು ನಾಗರೆಡ್ಡಿ ಹಿಂದೆ ಮಿಡಿಗೇಶಿಗೆ ಬಂದರು. ಹಿರೇಚಿಕ್ಕಪ್ಪಗೌಡರು ಮಧುಗಿರಿಗೆ ದಯಮಾಡಿಸಿದರು. ಈ ನಾಗರೆಡ್ಡಿಯು ತನ್ನ ಮನೆಗೆ ಬಂದಂಥವರಿಗೆ ದುರ್ವಾಕ್ಯದ ಮಾತುಗಳನ್ನಾಡಿದ್ದರಿಂದ; ಈ ಮಾತುಗಳನ್ನು ಊಳಿಗದವರು ಮುಖವಚನ ಕೇಳಿದ ಕೂಡಲೆ ಬಂದು ಚಿಕ್ಕಪ್ಪಗೌಡರಿಗೆ ಶ್ರುತಪಡಿಸಲಾಗಿ ಹಿರೇಚಿಕ್ಕಪ್ಪಗೌಡರು ಬಹಳ ಕೋಪರಾಗಿ ಯುದ್ಧ ಸನ್ನದ್ಧರಾಗಿ ಮಂದಿಮಕ್ಕಳ ಕರೆದುಕೊಂಡುಬಂದು ಮಿಡಿಗೇಶಿದುರ್ಗವನ್ನು ಠಾಣ್ಯ ಹಾಕಿಕೊಂಡರು. (ನಾಗರೆಡ್ಡಿಯು) ತನ್ನ ಸ್ತ್ರೀ ಸಮೇತವಾಗಿ ಓಡಿಹೋದನು. ಅಷ್ಟರಲ್ಲೇ ಮಹಾಕಾನನವಾಗಿದ್ದಂಥ ಗಿಡಗಂಟೆಗಳನ್ನು ಯಾವತ್ತು ಕಡಿಸಿ ಮಹಾ ಪ್ರಯಾಸದಿಂದ ಕೋಟೆ ಕೊತ್ತಳ ಹಾಕಿಸಿ ಗುಂಡುಮಲೆ, ಗುರುಬೆಟ್ಟ, ಸಿದ್ಧಗಿರಿಯೆಂಬ ಪ್ರಬಲಸ್ಥಳಗಳನ್ನೂ ಅನೇಕವಾದ ಗ್ರಾಮಗಳನ್ನೂ ನಿರ್ಮಾಣ ಮಾಡಿಸಿ ಮಧುಗಿರಿ ಚೆನ್ನರಾಯದುರ್ಗ ಮಿಡಿಗೇಶಿ ಮುಂತಾದವುಗಳನ್ನು ರಾಜ್ಯಪರಿಪಾಲನೆ ಮಾಡಿಕೊಂಡು ಸುಖದಲ್ಲಿರುತ್ತಿದ್ದರು. ಆ ತರುವಾಯ ಹಿರೇಚಿಕ್ಕಪ್ಪಗೌಡರು ಸಹಿತವಾಗಿ ಸಕಲವಾದ ಪಾಳೆಯಪಟ್ಟಿನವರು ಚೋಳರಾಯನ ಕಾದುಕೊಂಡಿರುತ್ತಿರುವಾಗ ಒಂದಾನೊಂದು ದಿವಸ ಎಲ್ಲರೂ ಏಕರಾಗಿ ಚೋಳರಾಯನ ಕೂಡೆ ಚಿಕ್ಕಪ್ಪಗೌಡರ ಮೇಲೆ ಕ್ಷುದ್ರ ಹೇಳಿದ ಕಾರಣ, ಈ ವರ್ತಮಾನವನ್ನು ಚಿಕ್ಕಪ್ಪಗೌಡರು ಕೇಳಿ ಸಿಟ್ಟು ಮಾಡಿಕೊಂಡು ಮಧುಗಿರಿಗೆ ಹೊರಟುಬಂದರು. ಬಂದ ತರುವಾಯ ಎರಡು ಮೂರು ವೇಳೆ ಚೋಳರಾಯರು ಹೇಳಿ ಕಳಿಸಿದರೂ ಹೋಗದೆ ಬಂದಂಥ ಜನರ ವಿಮುಖಮಾಡಿ ಕಳುಹಿಸಿದ್ದರಿಂದ ಚೋಳರಾಯರು ಬಹಳ ಕೋಪಮಾಡಿಕೊಂಡು ಸೈನ್ಯಸಮೇತವಾಗಿ ತಾವೇ ಬಂದು ಮಧುಗಿರಿಗೆ ಮುತ್ತಿಗೆ ಹಾಕಿದರು. ಚತುರಂಗ ಮಾರ್ಬಲ ಸಮೇತವಾಗಿ ಸಿದ್ದಾಪುರದ ಕೆರೆ ಬಳಿಗೆ ಪಟ್ಟೆಪೇರೆ ಹಾಕಿಸಿಕೊಂಡಿರಲಾಗಿ ಚಿಕ್ಕಪ್ಪಗೌಡರು ಕೆಲವು ಜನ ಕಳ್ಳಬಂಟರನ್ನು ಸಹ ತರಿಸಿ ಕಳುಹಿಕೊಟ್ಟರು. ಅರ್ಧರಾತ್ರಿಯಲ್ಲಿ ದಂಡಿನ ಮಧ್ಯದಲ್ಲಿದ್ದಂಥ ಮಂಚದ ಮೇಲೆ ಧೈರ್ಯದಿಂದ ಮಲಗಿ ನಿದ್ರೆಮಾಡುವಂಥ ರಾಯರನ್ನು ಅರಕೆಯಿಲ್ಲದಂತೆ ಮಂಚಸಹಿತವಾಗಿ ಮಧುಗಿರಿ ಬೆಟ್ಟದ ಕುಂಬಿ ಮೇಲೆ ಶ್ರೀ ಗೋಪಾಲಕೃಷ್ಣಸ್ವಾಮಿಯವರ ದೇವಸ್ಥಾನಕ್ಕೆ ಮೇಲುಕಟ್ಟು ಠಾಣಾದೀವಿಗೆ ಕದಳಿಮಂಟಪ ಧೂಪದಕಡ್ಡಿ, ಸಾಂಬ್ರಾಣಿ ಗಂಧಪರಿಮಳಯುಕ್ತವಾದ ಸ್ಥಳ ಮಾಡಿಸಿ ಆ ಸ್ಥಳದಲ್ಲಿ ಮಂಚವನ್ನಿರಿಸಿ ಮೈಗಾವಲಿಗೆ ಆಜ್ಞಾನುಸಾರವಾಗಿ ನಡೆದು ಕೊಳ್ಳುವಂತೆ ಹತ್ತುಜನ ಸಿಬ್ಬಂದಿಯಿಟ್ಟು ನಿದ್ರೆ ತಿಳಿದೆದ್ದ ಮೇಲೆ ಶೀಘ್ರ ನಮಗೆ ಕಳಿಸಿಯೆಂಬುದಾಗಿ ಜನರಿಗೆ ತಾಕೀತು ಮಾಡಿ ಚಿಕ್ಕಪ್ಪಗೌಡರು ಸಮೀಪದೊಳಿರಲಾಗಿ ಸೂರ್ಯೋದಯ ಕಾಲಕ್ಕೆ ರಾಯರಿಗೆ ನಿದ್ರೆ ತಿಳಿದೆದ್ದು ನೋಡಿದಲ್ಲಿ ಮೊದಲು ನಾವು ಇಳಿದಿದ್ದ ಸ್ಥಳವಲ್ಲ, ಹೊರಗೆ ನೋಡಿದರೆ ಮಹಾಅರಣ್ಯವಾಗಿದೆ. ನಾವಿರುವ ಸ್ಥಳ ನೋಡಿದರೆ ಆಶ್ಚರ್ಯವಾಗಿದೆಯೆಂಬುದಾಗಿ ತನ್ನೊಳಗೆ ತಾನೇ ಆಲೋಚನೆ ಮಾಡುತ್ತಿರಲಾಗಿ ರಾಯರು ಎದ್ದು ವೃತ್ತಾಂತವನ್ನು ಸಮೀಪದಲ್ಲಿದ್ದಂಥ ಚಿಕ್ಕಪ್ಪಗೌಡರಿಗೆ ಊಳಿಗದವರು ತಿಳಿಸಲಾಗಿ, ಅವರು

ಬರುತ್ತಿದ್ದಂಥವನನ್ನು ಈ ರಾಯರು ಕಂಡು ಇನ್ನೇನು ಮಾಡಿಯಾರೆಂಬುದಾಗಿ ಮನಸ್ಸಿನಲ್ಲಿ ತಿಳಿದು ಭಯೋತ್ಪತ್ಯದಿಂದಿರಲಾಗಿ , ಇವರ ದರುಶನ ಮಾತ್ರದಿಂದ ರಾಯರ ಮನಸ್ಸಿನಲ್ಲಿದ್ದಂಥ ಸಂದರ್ಭವನ್ನು ತಿಳಿದು ಸುಮ್ಮನಿದ್ದುದರಿಂದ ರಾಯರು ಏನು ನಿಮಿತ್ತ ನಮ್ಮನ್ನು ಕಳ್ಳಬಂಟರಿಂದ ಮಂಚ ಸಹಿತ ತರಿಸಿದಿರಿ? ಮುಂದಣ ಯೋಚನೆ ಏನು ? ಎಂಬುದಾಗಿ ಗಾಬರಿಪಟ್ಟು ಚಿಕ್ಕಪ್ಪಗೌಡರನ್ನು ಕೇಳಲಾಗಿ, ಈ ಮಾತಿಗೆ ಚಿಕ್ಕಪ್ಪಗೌಡರು ಶ್ರುತಪಡಿಸಿದ್ದು :

ತಮ್ಮ ಚಿತ್ತಕ್ಕೆ ಮತ್ತೊಂದು ಪರ್ಯಾಯವಾಗಿ ತಿಳಿಕೆಲಸವಿಲ್ಲ. ನನ್ನನ್ನು ಎರಡುಮೂರು ವೇಳೆ ಬರಹೇಳಿ ಅಪ್ಪಣೆಯಾಗಿತ್ತಾದರೂ ಬರಲಿಲ್ಲವಾಗಿ ಎನ್ನ ಶಿಕ್ಷೆ ಮಾಡಿಯಾರು ಎಂಬುದಾಗಿ ತಿಳಿದುಕೊಂಡು ನನ್ನ ವಿಚಾರ ಯಾವತ್ತು ಏಕಾಂತದಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದು ಈ ಯತ್ನ ಮಾಡಿದೆನೇ ಹೊರತು ಮತ್ತೆ ಬೇರೆಯಿಲ್ಲ. ತಾವು ಯೋಚನೆತಂದುಕೊಳ್ಳ ಕೆಲಸವಿಲ್ಲವೆಂಬುದಾಗಿ ಪ್ರಮಾಣಪೂರ್ವಕವಾಗಿ ಅತಿವಿನಯಮಾಡಿ ಅರಿಕೆ ಮಾಡಿಕೊಂಡದ್ದರಿಂದ ರಾಯರು ಮನಸ್ಸಿಗೆ ತಂದು ಫೌಜಿನಲ್ಲಿ ನಾವು ಇಲ್ಲದ್ದು ಕಂಡು ಗಾಬರಿಪಟ್ಟಾರು, ಈ ವೃತ್ತಾಂತವನ್ನು ತಿಳಿಸಬೇಕೆಂದಾಗಿ ರಾಯರು ಅಪ್ಪಣೆಕೊಟ್ಟದ್ದರಿಂದ ಫೌಜಿನಲ್ಲಿರುವಂಥವರಿಗೆ ಈ ಸಮಾಚಾರ ತಿಳಿಸಲಾಗಿ, ಬಹಳ ಸಂತೋಷಿತರಾಗಿ ಎಲ್ಲರೂ ನೆಮ್ಮದಿಯಾದರು. ಇಲ್ಲಿ ಒಪ್ಪತ್ತು ಎರಡೊತ್ತು ರಾಯರನ್ನು ನಿಲ್ಲಿಸಿಕೊಂಡು ಅವರ ಚಿತ್ತ ವೃತ್ತಿಗೆ ಸರಿಯಾಗಿ ನಡೆದುಕೊಂಡಿದ್ದ ತರುವಾಯ ದುರ್ಗದಿಂದ ರಾಯರು ಚಿಕ್ಕಪ್ಪಗೌಡರು ಸಹ ದಂಡಿಗೆ ಸಾಗಿಬಂದರು. ಇಲ್ಲಿ ಚಿಕ್ಕಪ್ಪಗೌಡರಿಗೆ ಮೆಚ್ಚಿ ರಾಯರು ಅನೇಕ ಬಿರುದಾವಳಿಗಳನ್ನು ಕೊಟ್ಟು ಪಟ್ಟಾಭಿಷೇಕಮಾಡಿಸಿ ಪುತ್ರ ಕಳತ್ರಾದಿಯುಕ್ತವಾಗಿ ರಾಜ್ಯಪರಿಪಾಲನೆ ಮಾಡಿಕೊಂಡು ಸುಖದಲ್ಲಿರು ಎಂದು ಅಪ್ಪಣೆಕೊಟ್ಟದ್ದರಿಂದ ಅದೇ ಮೇರೆಗೆ ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಏತತ್ ಪುತ್ರರಾದ ಮುಮ್ಮಡಿ ಚೆನ್ನಪ್ಪಗೌಡರು ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಇವರ ಪುತ್ರರಾದ ಮುಮ್ಮಡಿ ಕಾಳಚಿಕ್ಕಪ್ಪಗೌಡರು ಬಹಳ ಬುದ್ಧಿವಂತರಾದ ಕಾರಣ ಪುತ್ರರಿಗೆ ರಾಜ್ಯಪರಿಪಾಲನೆ ಭಾರವನ್ನು ಒಪ್ಪಿಸಿ ಸುಖದಿಂದಿರುತ್ತಿದ್ದರು. ಆ ತರುವಾಯ ಈ ಕಾಳಚಿಕ್ಕಪ್ಪಗೌಡರು ಸ್ವಪಿತ್ರಾಮಹರ್ಜಿತ ಚೋಳರಾಯದತ್ತ ಬಿರುದಾವಳಿಯುಕ್ತರಾಗಿರುತ್ತಿದ್ದಲ್ಲಿ ಚೋಳರಾಯರು ಸ್ವರ್ಗಸ್ಥರಾದ ಕಾರಣ ಇವರ ಕೊಮಾರ ಶ್ರೀ ರಂಗರಾಯರಿಗೂ ಡಿಳ್ಳಿಯವರಿಗೂ ಕೆಲವು ಯುದ್ಧ ಪ್ರಸಕ್ತಿಯಾದಾಗ ಇವರೊಂದು ಪಯಣ ಹಿಂದಕ್ಕೆ ಬಂದರು. ಬರುವಾಗ ಇಳಿದಿದ್ದ ಸ್ಥಳದಲ್ಲಿ ನಾಮದ ಪೆಟ್ಟಿಗೆ, ವಂಕಿಣಿಯೆಂಬ ಆಯುಧಸಹ ಮರೆತುಬಂದಿದ್ದ ಕಾರಣ, ಜ್ಞಾಪಿಸಿಕೊಂಡು ಈ ಬಗೆಯ ವಸ್ತುಗಳೆರಡನ್ನೂ ಯಾರು ತಂದಾರುಯೆಂದು ಸಕಲಸೈನ್ಯವನ್ನು ಕುರಿತು ಪರಾಂಬರಿಸಲಾಗಿ ಈ ಮುಮ್ಮಡಿ ಕಾಳಚಿಕ್ಕಪ್ಪಗೌಡರು ನಾವು ತರಿಸಿಕೊಡುತ್ತೇವೆಂದು ಹೇಳಿ ಆ ಕ್ಷಣದಲ್ಲಿ ಅದಕ್ಕೆ ತಕ್ಕ ಸನ್ನಾಹಮಾಡಿ ಕೆಲವು ಜನರನ್ನು ಕಳುಹಿಸಿಕೊಟ್ಟ ಕಾರಣ ಇವರು ಹೋಗಿ ಮೊದಲು ಇಳಿದಿದ್ದ ಸ್ಥಳದಲ್ಲಿ ನೋಡುವಾಗ ನಾಮದ ಪೆಟ್ಟಿಗೆ, ವಂಕಿಣಿಯೆಂಬ ಆಯುಧಸಹವಿದ್ದ ಕಾರಣ ಈ ಬಗೆಯ ವಸ್ತುಗಳೆರಡನ್ನೂ ತೆಗೆದುಕೊಂಡು ಬರುತ್ತಿದ್ದಲ್ಲಿ, ಡಿಳ್ಳಿಯವರ ಕಡೆಯ ಫೌಜಿನವರು ಕಂಡು ಬೆನ್ನಟ್ಟಬರಲಾಗಿ ಅವರನ್ನು ಹಿಮ್ಮೆಟ್ಟಿಸಿ ಶತ್ರುಗಳ ಸಮೀಪದಲ್ಲಿದ್ದಂಥ ವಸ್ತುಗಳೆರಡನ್ನೂ ತಂದು ಈ ಮುಮ್ಮಡಿ ಕಾಳಚಿಕ್ಕಪ್ಪಗೌಡರ ವಶಕ್ಕೆ ಕೊಟ್ಟದ್ದರಿಂದ ಇವರು ತೆಗೆದುಕೊಂಡು ಹೋಗಿ ಮಹಾರಾಜ ಶ್ರೀರಂಗರಾಯರಿಗೆ ವಸ್ತುಗಳೆಗಡನ್ನೂ ಒಪ್ಪಿಸಿದ ಕಾರಣ ರಾಯರು ಬಹಳ ಸಂತೋಷಪಟ್ಟು ಈ ಕಾಳಚಿಕ್ಕಪ್ಪಗೌಡರಿಗೆ ವಂಕಿಣಿಯೆಂಬ ಆಯುಧ, ಶಂಖಚಕ್ರಾಂಕಿತ ಹರಿದ್ರಾಧ್ವಜಪಟ್ಟ, ನಾಭಿಘಂಟೆ, ವ್ಯಾಘ್ರುಚರ್ಮ, ಮುಕ್ಕಣ್ಣಾಜ್ಯಾದಿ

ಅನೇಕ ಬಿರುದಾವಳಿಗಳನ್ನು ಕೊಟ್ಟು ಬಹಳ ಸನ್ಮಾನ ಮಾಡಿದರು. ಈ ಮುಮ್ಮಡಿ ಕಾಳಚಿಕ್ಕಪ್ಪಗೌಡರು ಮಧುಗಿರಿಗೆ ಬಂದು ಚೆನ್ನರಾಯದುರ್ಗ ಮಿಡಿಗೇಶಿ ಮುಂತಾದ ದೇಶದಲ್ಲಿ ದೇವಬ್ರಾಹ್ಮಣ ವಿದ್ವಜ್ಜನರಿಗೆ ಅನೇಕವಾಗಿ ಗ್ರಾಮಸ್ವಾಸ್ಥೆಗಳ ಕೊಟ್ಟು ದಿಗಂತವಿಖ್ಯಾತವಾದ ಧರ್ಮಕೀರ್ತಿಗಳ ಸಂಪಾದಿಸಿಕೊಂಡು ಜಂಗಮರಿಗೆ ಮಠಮಾನ್ಯ ಭೂಮಿಸ್ವಾಸ್ಥೆಗಳ ಕೊಟ್ಟು ಸುಖದಲ್ಲಿ ರಾಜ್ಯಪರಿಪಾಲಿಸಿಕೊಂಡಿರಲಾಗಿ ಘಟ್ಟದಲ್ಲಿ ಹೋಳುವ್ಯಾಪಾರ ಮಾಡುವಂಥ ಶೆಟ್ಟಿ ವರ್ತಕರ ಮೇಲೆ ದಂಡು ಬಂದಲ್ಲಿ ಪೇಚು ಬಂದು ಬಹಳ ಶ್ರಮವಾಗಿ ಈ ವರ್ತಕರು ತರುತ್ತಿದ್ದಂಥ ಪೈರನ್ನು ರಾಣೇಬಿದಲೂರ ಬಸಪ್ಪ ನಾಯಕರು ಅಟಕಾಯಿಸಿ, ಬಂದಂಥ ಸರಕು ಉಗ್ರಾಣಕ್ಕೆ ದಾಖಲು ಮಾಡಿಸಿ, ಈ ವರ್ತಕರನ್ನು ಯಾವತ್ತು ಬಂದೀಖಾನೆಯಲ್ಲಿಟ್ಟದ್ದರಿಂದ, ಈ ವರ್ತಕರು ತಮ್ಮ ತಮ್ಮ ಸೀಮೆಗಳ ಪಾಳೆಯಗಾರರಿಗೆ ಎರಡು ಮೂರಾವರ್ತಿ ಬಿನ್ನವತ್ತಳೆ ಬರೆದುಕೊಂಡಾಗಲೂ ಇವರನ್ನು ವಿಚಾರಿಸದಿದ್ದ ಕಾರಣ ವರ್ತಕರು ಯಾರಿಗೆ ಬರೆದು ಕೊಂಡರೂ ನಮ್ಮನ್ನು ವಿಚಾರಿಸುವುದಿಲ್ಲ. ನಮ್ಮ ಅದೃಷ್ಟವೇ ಸರಿಯೆಂಬುದಾಗಿ ಅವರವರೇ ಮಾತನಾಡಿಕೊಂಡು ಎಲ್ಲರಿಗೂ ಬರೆದಾಯಿತು. ಇನ್ನೊಬ್ಬರಿದ್ದಾರೆ ಅವರಿಗಾದರೂ ಬರೆದಲ್ಲಿ ಅವರಾದರೂ ವಿಚಾರಿಸಾರೆಂದಲ್ಲಿ ಈ ಬಿಜವರದ ಮುಮ್ಮಡಿ ಕಾಳಚಿಕ್ಕಪ್ಪಗೌಡರಿಗೆ ಬಿನ್ನವತ್ತಳೆ ಬರೆದುಕೊಂಡದ್ದರಿಂದ ಇವರು ಈ ಬಿನ್ನವತ್ತಳೆ ವಿಚಾರಿಸಿ, ಇವರ ಕಡೆಯಿಂದ ಬಿದಲೂರ ಬಸಪ್ಪನಾಯಕರಿಗೆ ಕಾಗದ ಬರೆದು ಕಳುಹಿಸಿದರೂ ಮನಸ್ಸಿಗೆ ತಾರದೆ ಬಂದ ಕಾಗದವನ್ನು ಅನಾದರಣೆಮಾಡಿದ್ದರಿಂದ ಈ ವರ್ತಮಾನವನ್ನು ಇವರು ತಿಳಿದು, ಬಹಳ ಕೋಪದಿಂದ ಕಾಗದ ಬರೆದ ಕಾರಣ ಬಂದೀಖಾನೆಯಲ್ಲಿದ್ದಂಥ ಶೆಟ್ಟಿವರ್ತಕರನ್ನು ಬಿಟ್ಟು ಇವರ ಪೈರನ್ನು ಇವರಿಗೆ ಬಿಡಿಸಿಕೊಟ್ಟದ್ದರಿಂದ ಛಪ್ಪನ್ನಾರು ದೇಶದ ಶೆಟ್ಟಿವರ್ತಕರು ಬಹಳ ಸಂತೋಷಪಟ್ಟು "ಶ್ರೀ ಮನ್ಮಹಾನಾಡಪ್ರಭು"ಯೆಂಬ ಬಿರುದು ಕೊಟ್ಟು ಘಟ್ಟದಲ್ಲಿ ಇವರಿಗೆ ಸೂರ್ಯಚಂದ್ರಾದಿಗಳುಳ್ಳ ಪರ್ಯಂತರವೂ ನಡೆದು ಬರುವ ಹಾಗೆ ರುಸುಂ ಮಾಡಿಕೊಟ್ಟರು. ಈ ಪ್ರಕಾರ ಕಾಳಚಿಕ್ಕಪ್ಪಗೌಡರು ಬಹುಕಾಲ ರಾಜ್ಯಪರಿಪಾಲನೆ ಮಾಡುತ್ತಿದ್ದರು. ಇವರ ಪುತ್ರರಾದ ಮುಮ್ಮಡಿ ವೀರಪ್ಪಗೌಡರು ಅದೇ ಮೇರೆಗೆ ಬಹುಕಾಲ ರಾಜ್ಯ ಪರಿಪಾಲನೆ ಮಾಡುತ್ತಿದ್ದರು. ಇವರ ಮಕ್ಕಳು ಮುಮ್ಮಡಿ ಸಂಗಪ್ಪಗೌಡರು. ಇವರ ಮಕ್ಕಳು ಮುಮ್ಮಡಿ ಶಾಕಪ್ಪಗೌಡರು, ಇವರ ಮಕ್ಕಳು ಮುಮ್ಮಡಿ ಸಪ್ಪೇಗೌಡರು. ಇವರ ಮಕ್ಕಳು ಮುಮ್ಮಡಿ ಚಿಕ್ಕಪ್ಪಗೌಡರು- ಈ ಮುಂತಾದವರು ಬಹುಕಾಲದಿಂದ ರಾಜ್ಯಪರಿಪಾಲನೆ ಮಾಡಿಕೊಂಡು ಸುಖದಲ್ಲಿರುತ್ತಿದ್ದರು. ತದನಂತರದಲ್ಲಿ ಮುಮ್ಮಡಿ ರಾಮಪ್ಪಗೌಡರು, ತಿಮ್ಮಪ್ಪಗೌಡರು ಎಂಬ ಇಬ್ಬರು ಮಕ್ಕಳಿದ್ದರು. ಇವರಲ್ಲಿ ರಾಮಪ್ಪಗೌಡರು ಜೇಷ್ಠಪುತ್ರರಾದ ಕಾರಣ ಪಟ್ಟಾಭಿಷೇಕರಾಗಿ ರಾಜ್ಯಪರಿಪಾಲನೆ ಮಾಡುತ್ತಿರಲಾಗಿ ಇವರ ತಮ್ಮಂದಿರು ತಿಮ್ಮಪ್ಪಗೌಡರಿಗೂ ಇವರಿಗೂ ಅಂತಃಕಲಹ ಪ್ರಾಪ್ತವಾಗಿ ಈ ತಿಮ್ಮಪ್ಪಗೌಡರಿಂದ ಮೈಸೂರು ಸಂಸ್ಥಾನಕ್ಕೆ ಸೂಚಿತವಾದ ಕಾರಣ ಅಲ್ಲಿಂದ ಆಳಿದ ಮಹಾಸ್ವಾಮಿಯವರು ಕೆಲವು ಫೌಜು ಜಮೆ ಮಾಡಿಕೊಂಡು ಕಳುಹಿಸಿಕೊಟ್ಟು ಮಧುಗಿರಿ ಚೆನ್ನರಾಯದುರ್ಗ ಮುಂತಾಗಿ ಠಾಣ್ಯಹಾಕಿಕೊಂಡು, ಈ ರಾಮಪ್ಪಗೌಡರು ತಿಮ್ಮಪ್ಪಗೌಡರು ಇಬ್ಬರನ್ನೂ ಸಕುಟುಂಬ ಸಹಿತವಾಗಿ ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋದರು. ಅಲ್ಲಿ ಇರುತ್ತಿದ್ದ ಹಾಗೆ ರಾಮಪ್ಪಗೌಡರ ಪುತ್ರರಾದ ಚಿಕ್ಕಪ್ಪಗೌಡರು, ಇವರೂ ಕುಟುಂಬಸಹಿತವಾಗಿ ಅತಿಸಾಹಸ ಧೈರ್ಯದಿಂದ ಶ್ರೀರಂಗಪಟ್ಟಣದಿಂದ ಹೊರಟುಬಂದು ಕೆಲವು ಫೌಜು ಜಮಾಯಿಸಿಕೊಂಡು ಮಿಡಿಗೇಶಿ ಮಾತ್ರ ಠಾಣ್ಯ ಹಾಕಿಕೊಂಡು ೨೫ ಸಾವಿರ ವರಹ ಸೀಮೆ ಮಟ್ಟಿಗೆ ಗ್ರಾಮಗಳ ಬಂದೋಬಸ್ತು ಮಾಡಿಕೊಂಡು ರಾಜ್ಯಪರಿಪಾಲನೆ ಮಾಡಿಕೊಂಡು ಸುಖದಲ್ಲಿರುತ್ತಿದ್ದರು. ಆ ತರುವಾಯ ಇವರ

ಪುತ್ರರಾದ ಮುಮ್ಮಡಿ ತೋಟಪ್ಪಗೌಡರು ಪಟ್ಟಾಭಿಷಿಕ್ತರಾಗಿ ರಾಜ್ಯ ಪರಿಪಾಲನೆ ಮಾಡಿಕೊಂಡು ದೇವರ ಪಾದ ಸೇರಿದ್ದರಿಂದ ಈ ಸಮಯ ಅನುಸರಿಸಿ ರಾಜಶ್ರೀ ಮಲ್ಲರಾಜಯ್ಯ ಅರಸಿನವರು ಇಲ್ಲಿನ ಪೂರ್ವೋತ್ತರವನ್ನು ಮೈಸೂರಿಗೆ ಬರೆಯಿಸಿ ಕಳುಹಿಕೊಟ್ಟರು. ಮಹಾರಾಜಶ್ರೀ ಆಳಿದ ಮಹಾಸ್ವಾಮಿಯವರ ಅಪ್ಪಣೆ ತರಿಸಿಕೊಂಡು ಮಿಡಿಗೇಶಿದುರ್ಗವನ್ನು ಠಾಣ್ಯ ಹಾಕಿಕೊಂಡರು. ಇವರ ಕುಟುಂಬ ಮಕ್ಕಳು ಮರಿಗಳು ಸಹ ಅನ್ನಸ್ಥಿತಿ ವಸ್ತ್ರಕ್ಕೆ ಸಹ ಇಲ್ಲವೆಂದು ಅತಿದೈನ್ಯಪಟ್ಟು ಅಲ್ಲಿಯ ನಾಯಕ ಹೈದರನಾಯಕರ ಮುಖಾಂತರ ರಾಜಶ್ರೀ ಮಲ್ಲರಾಜಯ್ಯ ಅರಸಿನವರಿಗೆ ಹೇಳಿಸಲಾಗಿ ಇವರು ಮೈಸೂರಿಗೆ ಬರೆಸಿ ಕಳುಹಿಸಲಾಗಿ ಆಳಿದ ಮಹಾಸ್ವಾಮಿಯವರ ಅಪ್ಪಣೆ ತರಿಸಿಕೊಂಡು ಇವರ ಉದರ ಪೋಷಣೆ ಬಗ್ಗೆ ತೆರಿಯೂರ ಹೋಬಳಿ ಗ್ರಾಮಗಳು ಎರಡೂವರೆ ಸಾವಿರ ವರಹದ ಸೀಮೆಯನ್ನು ಈ ಮಟ್ಟಿಗೆ ಕೊಡಿಸಿಕೊಟ್ಟದ್ದರಿಂದ ಈ ತೆರಿಯೂರ ಹೋಬಳಿಯಲ್ಲಿರುತ್ತಿದ್ದರು. ಆ ತರುವಾಯ ಇದೇ ಅಲ್ಲೀನಾಯಕ ಹೈದರನಾಯಕರ ಮುಖಾಂತರ ಮಹಾರಾಜಶ್ರೀ ಆಳಿದ ಮಹಾಸ್ವಾಮಿಯವರಿಗೆ ಶ್ರುತಪಡಿಸಲಾಗಿ ಕೆಲವು ಹಣಕಾಸು ಖಂಡನೆಮಾಡಿಕೊಂಡು ಮುಮ್ಮಡಿ ತೋಟಪ್ಪಗೌಡರ ಪುತ್ರರಾದ ಮುಮ್ಮಡಿ ದೊಡ್ಡ ಕಣ್ಣಪ್ಪಗೌಡರಿಗೆ ಮಿಡಿಗೇಶಿ ಸಂಸ್ಥಾನವನ್ನು ಅಪ್ಪಣೆಕೊಡಿಸಿದ್ದರಿಂದ ನಿಗದಿ ಮೇರೆಗೆ ಹಣಕಾಸು ತೆತ್ತುಕೊಂಡು ಕೆಲವುದಿವಸ ಸೀಮೆ ಅನುಭವಿಸಿಕೊಂಡು ಸುಖದಲ್ಲಿರುತ್ತಿದ್ದರು. ಆ ತರುವಾಯ ಪಾರ್ಥಿವನಾಮ ಸಂವತ್ಸರದಲ್ಲಿ ಮಿಡಿಗೇಶಿದುರ್ಗವನ್ನು ಠಾಣ್ಯ ಹಾಕಿಕೊಂಡರು. ಈಚೆಗೆ ಮುಮ್ಮಡಿ ದೊಡ್ಡ ಕಣ್ಣಪ್ಪಗೌಡರ ಮಕ್ಕಳು ಮುಮ್ಮಡಿ ಚೆನ್ನಬಸಪ್ಪಗೌಡರು ವಿರೋಧಿ ಕೃತ ಸಂವತ್ಸರದಲ್ಲಿ ಮಿಡಿಗೇಶಿದುರ್ಗವನ್ನು ಠಾಣ್ಯ ಹಾಕಿಕೊಂಡು ಒಂಬತ್ತು ತಿಂಗಳವರೆಗೆ ಸೀಮೆಯನ್ನಾಳಿಕೊಂಡಿರುತ್ತಿದ್ದರು. ಆ ತರುವಾಯ ಸುಲ್ತಾನನ ಮಕ್ಕಳು ಬಂದು ಮಾಲೂರ ಬಳಿ ಫೌಜು ಇಳಿದಲ್ಲಿ ಮಿಡಿಗೇಶಿಯನ್ನು ಠಾಣ್ಯ ಹಾಕಿಕೊಂಡರು. ಆ ತರುವಾಯ ಮುಮ್ಮಡಿ ಚೆನ್ನಪ್ಪಗೌಡರು ವಿರೋಧಿಕೃತ ಸಂವತ್ಸರದ ಶ್ರಾವಣ ಮಾಸದಲ್ಲಿ ಮಿಡಿಗೇಶಿಬೆಟ್ಟವನ್ನು ಹಜರತ್‌ವಾಲಿ ಸಮೆಂಡ್ರು ಬಹಾದ್ದೂರವರ ಅಪ್ಪಣೆ ಮೇರೆಗೆ ಕಿಲ್ಲೆ ಠಾಣ್ಯ ಹಾಕಿಕೊಂಡು ಮಿಡಿಗೇಶಿ ಸೀಮೆ ಯಾವತ್ತು ಆಳಿಕೊಂಡು ರಾಜ್ಯ ಅನುಭವಿಸಿಕೊಂಡಿರಲಾಗಿ ಫಾಲ್ಗುಣ ಮಾಸದಲ್ಲಿ ಟೀಪುಸುಲ್ತಾನನಿಗೂ ಮೊಗಲ ಮರಾಠಾ ಅವರಿಗೂ ಇಂಗ್ರೇಜು ಬಹಾದ್ದೂರವರಿಗೂ ಸಲ್ಲಾ ಆದ ಕಾರಣ ಮುಮ್ಮಡಿ ಚೆನ್ನಬಸಪ್ಪಗೌಡರು ಸಂಸ್ಥಾನ ಬಿಟ್ಟು, ವೇಮಲ ಪಾಳೆಯಗಾರನ ಬಳಿಗೆ ಹೊರಟುಹೋಗಿ, ಅಲ್ಲಿ ಒಂಬತ್ತು ತಿಂಗಳಿದ್ದು ಕಣಿವೆಯ ಕೆಳಗೆ ಹೋಗಿ ಬೊಮ್ಮೇರಾಜು ಮಗಲವೆಂಕಟಗಿರಿ ಮುಂತಾದ ಕಡೆಯಿದ್ದು ಅಲ್ಲಿಂದ ಕೃಷ್ಣಗಿರಿಗೆ ಹೋಗಿ, ಅಲ್ಲಿ ಕರ್ನಲ್ ರೀಟ್ಸ್ ಸಾಹೇಬ ಬಹಾದ್ದೂರವರ ಬಳಿಗೆ ಹೋಗಿ ಕಾಣಿಸಿಕೊಂಡು ತಮ್ಮ ವಿಚಾರ ಯಾವತ್ತು ಹೇಳಿಕೊಳ್ಳಲಾಗಿ ರೀಟ್ ಸಾಹೇಬರು ಅಪ್ಪಣೆ ಕೊಟ್ಟ ವಿವರ :

ನಮ್ಮ ಕಂಪಣಿಫೌಜು ದಂಡುಸಹಿತವಾಗಿ ಬರುತ್ತಿದೆ. ಬಂದ ಕೂಡಲೆ ಹೊರಟು ಬೆಂಗಳೂರಿಗೆ ಬರುತ್ತೇನೆ. ನೀವು ಹೋಗಿ ನಿಮ್ಮ ಮಂದಿ ಮಕ್ಕಳ ಜಮಾಯಿಸಿಕೊಂಡು ನಿಮ್ಮ ಸಂಸ್ಥಾನ ಠಾಣ್ಯ ಹಾಕಿಕೊಂಡು ನಮ್ಮ ಕಂಪಣಿ ದಂಡಿಗೆ ಬರತಕ್ಕ ರಸದ್ದು ಮುಂತಾದವು ಸರಾಗವಾಗಿ ಬರುವಂತೆ ಮಾಡಿಸಿಯೆಂದು ಅಪ್ಪಣೆ ಕೊಟ್ಟದ್ದರಿಂದ ಮುಮ್ಮಡಿ ಚೆನ್ನಪ್ಪಗೌಡರು ಮಗಲವೆಂಕಟಗಿರಿ [illegible] ಬಂದು ಅಲ್ಲಿಂದ ಹೊರಟುಬರಬೇಕೆಂದಿರಲಾಗಿ ಪುನಃ ರೀಟ್ ಸಾಹೇಬ ಬಹಾ[illegible]ರ ಪತ್ರ ಬಂದಲ್ಲಿ ಜನರಲ್ ಸಾಹೇಬರವರನ್ನು ಭೆಟ್ಟಿ ನಿಮಿತ್ತವಾಗಿ ಆಮೂಲಗಡದ ಬಳಿಗೆ ಹೋಗಿ ಹಾಜರಿರುವಂತೆ ಬರೆದಿದ್ದೇನಷ್ಟೆ. ಅಲ್ಲಿಗೆ ಬರುವುದಕ್ಕೆ ಪುರಸತ್ತಿಲ್ಲವಾಗಿ ನೀವೆ ಕೃಷ್ಣಗಿರಿ ಬಳಿಗೆ ಬಂದಿದ್ದರೆ ಜನರಲ್

ಸಾಹೇಬರವರ ಭೆಟ್ಟಿಮಾಡಿಸಿ ಜವಾಬ ತೆಗೆದುಕೊಂಡು, ಆ ತರುವಾಯ ಅಪ್ಪಣೆ ಕೊಡಿಸುತ್ತಿದ್ದೇವೆಯೆಂಬುದಾಗಿ ಉತ್ತರ ಬಂದುದರಿಂದ ಆ ಕ್ಷಣವೇ ಚೆನ್ನಪ್ಪಗೌಡರು ಅಲ್ಲಿಂದ ಹೊರಟು ಕೃಷ್ಣಗಿರಿಗೆ ಬಂದು ರೀಟ್ ಸಾಹೇಬರವರನ್ನು ಕಂಡು ರೀಟ್ ಸಾಹೇಬರವರು ಅಪ್ಪಣೆ ಕೊಟ್ಟದ್ದನ್ನು ನೀವು ಇಲ್ಲಿಗೆ ಬರುವಾಗ ಜನರಲ್ ಸಾಹೇಬರವರು ಠಾಕುಠಾಕು ದಂಡುಸಹಿತವಾಗಿ ಮುಂದಕ್ಕೆ ಶ್ರೀರಂಗಪಟ್ಟಣ ತೆಗೆದುಕೊಳ್ಳುವುದಕ್ಕೆ ಹೊರಟುಹೋದರು. ನಾವು ಹಿಂದಿನಿಂದ ನಿಮ್ಮ ವಿಚಾರಕ್ಕೆ ನಾವು ಜನರಲ್ ಸಾಹೇಬರಿಗೆ ಶ್ರುತ ಪಡಿಸಿ ಇಸ್ತಿಯಾರನಾಮೆ ಕಳುಹಿಸುತ್ತೇವೆ. ನೀವು ಮುಂಚಿತವಾಗಿ ಜಲ್ದು ನಿಮ್ಮ ಸಂಸ್ಥಾನ ಮಧುಗಿರಿ ಚೆನ್ನರಾಯದುರ್ಗ ಮಿಡಿಗೇಶಿ ಮೊದಲಾದ ಸ್ಥಳಗಳು ಠಾಣ್ಯ ಹಾಕಿಕೊಂಡು ನಿಮ್ಮ ಸಂಸ್ಥಾನಕ್ಕೆ ಸೇರಿದ ಸೀಮೆ ಯಾವತ್ತು ಅನುಭವಿಸಿಕೊಂಡು ಬಿದರೆ ಕಡೆಯವರು ಯಾರಾದರೂ ಬಂದಲ್ಲಿ ಅವರಿಗೆ ತರುಬಿಮಾಡಿ ಆಗಿಂದಾಗ ಕಂಪಣಿದಂಡಿಗೆ ರಸದು ಕೊಳ್ಳೆ ದನಕರು ಮುಂತಾದವು ಸರಾಗವಾಗಿ ಬರುವಂತೆ ಮಾಡಿಸಿ, ನಡೆದ ವರ್ತಮಾನಕ್ಕೂ ಆಗಿಂದಾಗ ನಮಗೆ ಬರೆದು ಕಳುಹಿಸುತ್ತಬರುವಿರೆಂಬುದಾಗಿ ಕರ್ನಲ್ ಸಾಹೇಬರು ಅಪ್ಪಣೆ ಕೊಟ್ಟಿದ್ದರಿಂದ ಅಪ್ಪಣೆ ಮೇರೆಗೆ ಮುಮ್ಮಡಿ ಚೆನ್ನಪ್ಪಗೌಡರು ಅಲ್ಲಿಂದ ಹೊರಟು ಬಂದು ಮಧುಗಿರಿ ಚೆನ್ನರಾಯದುರ್ಗ ಮಿಡಿಗೇಶಿ ಸೀಮೆಗೆ, ಬಂದು ಕೆಳಗಣ ಸೀಮೆ ಯಾವತ್ತು ಕಟ್ಟಿಕೊಂಡು ಬೇಡತ್ತೂರು ಎಂಬ ಗ್ರಾಮದಲ್ಲಿ ಇರುತ್ತಿದ್ದರು. ಅಷ್ಟರಲ್ಲಿ ಜನರಲ್ ಹಾರವಿಸ್ ಸಾಹೇಬ ಬಹದ್ದೂರವರು ಸನ್ನದು ಬಂದ ಈ ವಿವರ ಟೀಪು ಸುಲ್ತಾನರು ಪರಸೀಸರ ಇತ್ತ ಪಾಕು ಮಾಡಿಕೊಂಡು ಇಂಗ್ರೇಜರು ಪೇಶ್ವೆಯರು ನಿಜಾಮದೌಲ್ಲಾ -ಈ ಮೂರು ಸರಕಾರದವರ ಸಂಗಡ ದ್ವೇಷಮಾಡಿಕೊಂಡು ಪರಸೀಸರು ಬರುವುದನ್ನು ಸೀಮೆಯನ್ನು ಯಾವತ್ತು ಹಾಳುಮಾಡಿಕೊಂಡು ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳಬೇಕೆಂಬುದಾಗಿ ಯೋಚನೆ ಮಾಡಿದ್ದರಿಂದ ಈ ಮೂರು ಸರಕಾರದವರ ಫೌಜು ತಯಾರು ಮಾಡಿ ನಮ್ಮ ಸ್ವಾಧೀನಕ್ಕೆ ಕೊಟ್ಟಿರುವುದರಿಂದ ನಾವು ಫೌಜು ಸಹಿತವಾಗಿ ನಿಮ್ಮ ಸರಹದ್ದಿಗೆ ಬಂದು ಇರುವುದರಿಂದ ನಾವು ನಿಮಗೆ ಉಪದ್ರವಕೊಡತಕ್ಕದ್ದಿಲ್ಲ. ಸಕಲ ವಿಷಯದಲ್ಲೂ ನಿಮ್ಮನ್ನು ಕಾಪಾಡಿಕೊಂಡು ಬರುತ್ತಿದ್ದೇವೆಯೆಂಬುದಾಗಿ ಈ ಬಗ್ಗೆ ಕರ್ನಲ್ ಅಲಕ್‌ಸಾಬ್ ರೀಟ್ ಬಹಾದ್ದೂರವರಿಗೆ ಮೈಸೂರು ಸೀಮೆಯಷ್ಟು ಕಂಪಣಿ ಇಲಾಖೆಗೆ ಸೇರುತ್ತೆ. ಈ ದರೋಬಸ್ತು ಸೀಮೆ ಸುಬೇದಾರಿ ಸಿದ್ದಂತು ಕರಾರು ಮಾಡಿಸಿಯಿದ್ದೆಯಾಗಿ ನೀವು ನಿಮ್ಮ ಸಂಸ್ಥಾನಕ್ಕೆ ಹೋಗಿ ನಿಮ್ಮ ಕೆಲಸದಲ್ಲಿ ಇದ್ದುಕೊಂಡು ಕಂಪಣಿ ಕೆಲಸದ ಸರಬರಾಜದಲ್ಲಿ ಇದ್ದುಕೊಂಡು ರಸದು ಕೊಳ್ಳೆ ಮುಂತಾದವು ದಂಡಿಗೆ ಕಳುಹಿಸುತ್ತ ಬರುವುದು, ಶತ್ರುಗಳ ಬಾತಮಿ ವರ್ತಮಾನವು ತರಿಸಿ ಬರೆಸಿ ಕಳುಹಿಸುತ್ತ ಬರುವುದುಯೆಂದು ಕವುಲು ನಾಮೆ ಬಂರದ್ದರಿಂದ ಅದೇ ಮೇರೆಗೆ ಕಂಪನಿದಂಡಿಗೆ ಸಾಗತಕ್ಕ ರಸದು ಕೊಳ್ಳೆ ಮುಂತಾಗಿ ಆಗಿಂದಾಗ್ಗೆ ಕಳುಹಿಸುತ್ತ ಸೀಮೆ ಅನುಭವಿಸುತ್ತ ಕಿಲ್ಲೆಗಳು ಠಾಣ್ಯ ಹಾಕಿಕೊಳ್ಳಬೇಕೆಂದು ಇದ್ದಲ್ಲಿ ಇಷ್ಟರಲ್ಲೇ ರೀಟ್ ಸಾಹೇಬರು ನಮ್ಮ ವಕೀಲರ ಸಂಗಡ ಹೇಳಿಕಳುಹಿಸಿದಂಥದ್ದು ನಮ್ಮ ಕಂಪನಿ ಇಲಾಖೆ ತಪ್ಪಿ ರಾಜ್ಯ ಯಾವತ್ತು ಮೈಸೂರು ಸಂಸ್ಥಾನಕ್ಕೆ ಸೇರಿತು. ನೀವು ಅಲ್ಲಿ ಇರ ಕೆಲಸವಿಲ್ಲ. ಬೆಂಗಳೂರಿಗೆ ಹೊರಟುಬರುವುದೆಂದು ಅಪ್ಪಣೆಕೊಟ್ಟದ್ದರಿಂದ ಚೆನ್ನಬಸಪ್ಪಗೌಡರು ಬೆಂಗಳೂರಿಗೆ ಬಂದು ರೀಟ್ ಸಾಹೇಬರವರನ್ನು ಕಾಣಿಸಿಕೊಂಡಲ್ಲಿ ಸರವಾರ ಸಾಹೇಬರು ಅಪ್ಪಣೆ ಕೊಟ್ಟಿದ್ದು ನಿಮ್ಮ ವಕೀಲರನ್ನು ಚೆನ್ನಪಟ್ಟಣಕ್ಕೆ ಕಳುಹಿಸಿದಲ್ಲಿ ನಾವು ಅಲ್ಲಿ ಹೇಳಿ ಸನ್ನದು ಮಾಡಿಸಿಕೊಡುತ್ತೇವೆಂದು ಅಪ್ಪಣೆಕೊಟ್ಟದ್ದರಿಂದ ನಮ್ಮ ಕಡೆ ವಕೀಲರು ತಿಪ್ಪಯ್ಯ ಶಿವರಾಮಯ್ಯನ ಸಹ ಕಳುಹಿಸಿಕೊಟ್ಟಲ್ಲಿ ಇದ್ದಲ್ಲಿ ಅಲ್ಲೇ ಕೆಲಸಜಾಹೀರ ಮಾಡಿಕೊಂಡು ಇರಲಾಗಿ ಇಷ್ಟರಲ್ಲೇ ಕರ್ನಲ್ ರೀಟ್‌ಸಾಹೇಬ್

ಬಹಾದ್ದೂರವರು ಇಲ್ಲಿಗೆ ಹೊರಟು ಬಂದದ್ದರಿಂದ ನಮ್ಮ ಕಡೆ ವಕೀಲರು ಸ್ಥಳ ನೋಡುವ ನಿಮಿತ್ತವಾಗಿ ಬಂದರು. ಆ ತರುವಾಯ ಚೆನ್ನಬಸಪ್ಪಗೌಡರು ಕೆಲವು ದಿವಸ ಕಂಪಣಿ ಸೀಮೆಯಲ್ಲಿದ್ದುಕೊಂಡಿದ್ದು ಆಂಗೀರಸ ಸಂವತ್ಸರದಲ್ಲಿ ಸ್ವರ್ಗಸ್ಥರಾದರು. ಈ ಚೆನ್ನಪ್ಪಗೌಡರ ಸಾಕ್ಷಾತ್ ಅಣ್ಣಂದಿರು ದೊಡ್ಡಕಣ್ಣಯ್ಯಗೌಡರ ಕುಮಾರ ಮುಮ್ಮಡಿ ತೋಟದರಾಯಪ್ಪ ಗೌಡರು ಕಂಪಣಿ ಸೀಮೆಗೆ ಕಂಡು ಕೇಳದ ಕಡೆ ಹೋಗಿ ಬರುತ್ತ ಮಧುಗಿರಿ ತಾಲೂಕು ಬಿಜವರದ ಹೋಬಳಿ ಪೈಕಿ ಶಂಭೋನಹಳ್ಳಿ ಗ್ರಾಮದಲ್ಲಿ ಇದ್ದುಕೊಂಡು ಕಂಪಣಿ ದೌಲತ್ತಿಗೂ ಮೈಸೂರು ಆಳಿದ ಮಹಾಸ್ವಾಮಿಯವರ ದೌಲತ್ತಿಗೂ ಶ್ರೇಯಸ್ಸು ಚಿಂತನೆ ಮಾಡಿಕೊಂಡಿರುತ್ತಿದ್ದರಿಂದ ನಮ್ಮ ಅನ್ನಸ್ಥಿತಿ ನಮಗೆ ದಯಮಾಡಿಸಿಕೊಟ್ಟು ಸುತ್ತಮುತ್ತಲಿನ ಸೀನು ಕಾಪಾಡಿಕೊಂಡು ಬರಬೇಕೆಂದು ಬರೆಸಿಕೊಟ್ಟ ರಾಯರೇಖೆ ಕೈಫಿಯತ್ತು*.

---

*ಹಾಜರು ಸನ್ನದು :
ರೀಟ್ ಸಾಹೇಬರು ಕೃಷ್ಣಗಿರಿಯ ಬಳಿಗೆ ನಮ್ಮನ್ನು ಬರುವಂತೆ ಬರೆದು ಕಳುಹಿಸಿದ ಸನ್ನದು. ಬರದ ಮರಕೂಮ್ ತಾರೀಖು
೨೯ನೇ ಸನ್ ಸಾವಿರದ ೧೭೯೯ನೇ ಇಸವಿ ಜನವರಿಯಲ್ಲಿ ಬರದ ಸನ್ನದು ಒಂದು.
ಜನರಲ್ ಹಾರಿಸ್ ಸಾಹೇಬರು ಬಹದ್ದೂರವರು ಕೌಲು ಸನ್ನದು ಬರದ ಮರಕೂಮ್ ತಾರೀಖು ೭ನೇ ಮಾಹೆ ಮಾರ್ಚ
ಸನ್ ಸಾವಿರದ ೧೭೯೯ ಇಸವಿ ಬಾಬ್ತು ಸನ್ನದು ಒಂದು. ಅಸಲು ಇದ್ದದು ಗೈರವಿದೆ ಹಾಜರ ಇಲ್ಲ (ಮೂ).
ಇದರ ತರುವಾಯ ಸೇರಿಸಿದ ಮುಂದಿನವರ ವಂಶಾವಳಿ ಹೀಗಿದೆ :
ಮೇಲ್ಕಂಡ ಮುಮ್ಮಡಿ ದೊಡ್ಡಕಣ್ಣಪ್ಪಗೌಡರು ಮಕ್ಕಳು ಮುಮ್ಮಡಿ ತೋಟದ ರಾಯಗೌಡರು ಶಂಬೋನಹಳ್ಳಿಗೆ ಸೇರಿ ಇಲ್ಲಿ
ಶಿವಾಚಾರ್ಯರಾದ ಪಂಚಾಚಾರ್ಯರಾದಂಥ ವೀರಶೈವಮತದಲ್ಲಿ ಕೆಲವು ಮತ ಸಂಭಾಷಣೆ ಅಂದರೆ ಆಚಾರ ವಿಚಾರ ವಾಲ್ಮೀಕಿ
ಮತಸ್ಥರಿಂದ ಕಾಣಿಕೆ ವಗೈರೆ ಎಲ್ಲಾ ವಿಷಯದಲ್ಲೂ ಅನುಕೂಲವಾಗಿರುತ್ತಾ ಇರುವಲ್ಲಿ ಇವರ ಮಕ್ಕಳು ಮುಮ್ಮಡಿ ದೊಡ್ಡ
ಕಣ್ಣಪ್ಪಗೌಡರು ಇದೇ ಮೇರೆಗೆ ನಡೆಸುತ್ತಾ ಬಹುಮಾನಂಗಳಲ್ಲಿ ನಡೆಸುತ್ತಾ ಬಂದರು. ಇವರ ಮಕ್ಕಳು ಮುಮ್ಮಡಿ
ಚಿಕ್ಕಪ್ಪಗೌಡರು ಮುಂತಾಗಿ ರಾಜ್ಯದಲ್ಲಿ ಆಚಾರಬಾಬಿನಲ್ಲಿ ಕೇವಲ ಬದಲಾಗಿಯು ಮುಖ್ಯವಾಲ್ಮೀಕಿ ವಂಶಸ್ಥರ ಆಚಾರ ಬಾಬು
ಕಾಣಿಕೆ ವಗೈರೆಯನ್ನು ಎತ್ತಿಕೊಂಡು ಬಹಳಸಂತೋಷಿತರಾಗಿದ್ದು, ಈ ಮಧ್ಯೆ ಬಿಜ್ಜಾವರದ ಕೆರೆ ಒಡೆದು, ಅನೇಕ ಬಿರುದುಗಳು
ಅನೇಕ ದ್ರವ್ಯ ಸಹ ಕೊಚ್ಚಿಕೊಂಡು ಹೋಗಿ, ಪ್ರಾಣಮಾತ್ರ ಉಳಿಸಿಕೊಂಡು ಪುತ್ರವಂತರಾಗಿ ಪಟ್ಟಾಭಿಷೇಕರಾಗಿ ಸುಖದಲ್ಲಿ
ಇದ್ದರು. ಆ ತರುವಾಯ ಇವರು ಸ್ವರ್ಗಸ್ಥರಾದರು. ಇವರ ಮಕ್ಕಳು ಮುಮ್ಮಡಿ ತೋಟದರಾಯರು ಸಕಲವಾದ
ಕಾರ್ಯಗಳನ್ನು ನಡಸುತ್ತಾ ಇರುವಲ್ಲಿ ಇವರೂ ದೈವಾಧೀನರಾದರು. ಆ ತರುವಾಯ ಇವರ ಮಕ್ಕಳು ಮುಮ್ಮಡಿ
ದೊಡ್ಡಕಣ್ಣಪ್ಪಗೌಡರು ಬಹಳ ಆಚಾರ-ವಿಚಾರ ಮತ್ತು ನಾಯಕ ಮಂಡಲದಲ್ಲಿ ಕಾಣಿಕೆ ಮತ್ತು ಆಚಾರ ಬಾಬುಗಳಲ್ಲಿ
ಸಂಸ್ಥಾನಗಳ ಗೌರವಕ್ಕೆ ಹಾನಿ ತರದೆ ತಾವು ಸಂತೋಷದ ಕಾಲಕ್ಕೆ ದೈವಾಧೀನರಾದರು. ಇವರ ಪುತ್ರರಾದ ಚೆನ್ನಬಸಪ್ಪಗೌಡರು
ಪಟ್ಟಾಭಿಷೇಕರಾಗಿ ಇವರು ತಕ್ಕ ಆಚಾರ ಬಾಬು ಕರ್ತವ್ಯಗಳು ನಡೆಸುತ್ತಾ ಇರಲಾಗಿ ಕೆಲವು ದಿವಸದ ಮೇಲೆ ದೈವಾಧೀನರಾದರು.
ಇವರ ಪುತ್ರರಾದ ಮುಮ್ಮಡಿ ಚಿಕ್ಕಪ್ಪಗೌಡರಿಗೆ ಪಟ್ಟಾಭಿಷೇಕವಾಗಿರುವುದು. ಇವರಿಗೆ ಪುತ್ರರಿಲ್ಲವಾದರಿಂದ ತಮ್ಮಂದಿರು
ಮುಮ್ಮಡಿ ಅಣೆಯಪ್ಪಗೌಡರ ಮಕ್ಕಳು ದೊಡ್ಡಕಣ್ಣಪ್ಪಾಜಿಗೆ ಪಟ್ಟಾಭಿಷೇಕವಾಗಿರುತ್ತದೆ, ಇದೇ ಈಶ್ವರನಾಮ ಸಂವತ್ಸರದ
ವೈಶಾಖ.

ಆಂಧ್ರ ಸಾಹಿತ್ಯದಲ್ಲಿ ಪ್ರಬಂಧ

* ವಿ. ಕಮಲಮ್ಮ

ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ೧೬ ನೆಯ ಶತಮಾನವನ್ನು ಉತ್ಕೃಷ್ಟವಾದ ಸಾಹಿತ್ಯ ಹೊರಬಂದುದರಿಂದ ಸುವರ್ಣಯುಗವೆಂದೂ, ವಿಶಿಷ್ಟವಾದ ಸಾಹಿತ್ಯ ಪ್ರಕ್ರಿಯೆಯಾದ ಪ್ರಬಂಧಗಳು ಮೂಡಿ ಬಂದುದರಿಂದ ಪ್ರಬಂಧಯುಗವೆಂದೂ, ಶ್ರೇಷ್ಠವಾದ ಸಾಹಿತ್ಯ ಹೊರಬರಲು ಶ್ರೀ ಕೃಷ್ಣದೇವರಾಯ ಕಾರಣನಾದುದರಿಂದ ಕೃಷ್ಣದೇವರಾಯ ಯುಗವೆಂದೂ ಕರೆಯುವರು. ಕೃಷ್ಣದೇವರಾಯ ಸ್ವತಃ ಕವಿಯಾಗಿದ್ದು ಕವಿ, ಪಂಡಿತರನ್ನು ಪೋಷಿಸುತ್ತಿದ್ದನು. ಈತನ ಆಸ್ಥಾನದಲ್ಲಿ ಅಷ್ಟದಿಗ್ಗಜಗಳೆಂಬ ಹೆಸರಿನ ಮಹಾಕವಿಗಳಿದ್ದರು. ರಾಯರ ಕಾಲದಲ್ಲಿ ರಚಿತವಾದ ಕಾವ್ಯಗಳು ವಿಶಿಷ್ಟವಾದ ಲಕ್ಷಣಗಳಿಂದ ಕೂಡಿರುವುದರಿಂದ, ಇವುಗಳನ್ನು ಪ್ರಬಂಧಗಳೆಂದು ಕರೆಯುವರು.

ಆಂಧ್ರ ಸಾಹಿತ್ಯದಲ್ಲಿ ಪ್ರಬಂಧ ಸುಪ್ರಸಿದ್ಧವಾದುದು. ಪ್ರಬಂಧ ಎಂದರೆ ಪ್ರಕೃಷ್ಟವಾದ ಬಂಧ ಎಂದು ಅರ್ಥ. ಮಹಾಭಾರತ ಮೊದಲಾದುವುಗಳ ಹಾಗೆ ಈ ಪ್ರಬಂಧಗಳು ಅನುವಾದಗಳಲ್ಲ. ತೆಲುಗು ಕವಿಗಳ ಸ್ವತಂತ್ರವಾದ ರಚನೆಗಳಾದುದರಿಂದ ಈ ಪ್ರಬಂಧಗಳಿಗೆ ತೆಲುಗು ಸಾಹಿತ್ಯದಲ್ಲಿ ಪ್ರತ್ಯೇಕವಾದ ಸ್ಥಾನ, ಗೌರವ ಇದೆ. ಇವು ೧೬ ನೆಯ ಶತಮಾನದಲ್ಲಿಯೇ ಹುಟ್ಟಿ, ಪರಿಪೂರ್ಣ ವಿಕಾಸ ಹೊಂದಿದ ಹಾಗೆ ತೆಲುಗು ಸಾಹಿತ್ಯ ಚರಿತೆಗಳಿಂದ ತಿಳಿದುಬರುತ್ತದೆ.

ಸ್ಥೂಲದೃಷ್ಟಿಗೆ ಕಾವ್ಯ, ಪ್ರಬಂಧ ಎರಡೂ ಒಂದೇ ರೀತಿಯಾಗಿದೆ. ಸಂಸ್ಕೃತದಲ್ಲಿ ಅಲಂಕಾರ ಶಾಸ್ತ್ರಜ್ಞರು, ಕವಿಗಳು ಪ್ರಬಂಧವನ್ನು ಸಾಮಾನ್ಯವಾಚಿಯಾಗಿ ಉಪಯೋಗಿಸಿರುವರು. ಇವರು ಇತಿಹಾಸ, ಮಹಾಕಾವ್ಯ, ದೃಶ್ಯಕಾವ್ಯ, ಅಲಂಕಾರ ಶಾಸ್ತ್ರ ಮೊದಲಾದ ಸರ್ವ ಗ್ರಂಥಗಳನ್ನೂ ಪ್ರಬಂಧ ಎಂದೇ ಕರೆದಿರುವರು. ತೆಲುಗು ಕವಿಗಳು ಕೂಡ ಪ್ರಬಂಧ ಶಬ್ದವನ್ನು ಸಾಮಾನ್ಯವಾಚಿಯಾಗಿ ಉಪಯೋಗಿಸಿರುದರಲ್ಲಿ ಸಂಸ್ಕೃತ ಕವಿಗಳನ್ನೇ ಅನುಸರಿಸಿರುವರು. ಆದರೆ ತೆಲುಗು ಸಾಹಿತ್ಯದಲ್ಲಿ, ೧೬ ನೇ ಶತಮಾನದಲ್ಲಿ ಒಂದು ಪ್ರತ್ಯೇಕ ಪ್ರಕ್ರಿಯೆಯಾಗಿ ಶೋಭಿಸಿದೆ.

ಪ್ರಾಚೀನಾಂಧ್ರ ಕವಿಗಳು ಕಾವ್ಯ, ಪ್ರಬಂಧ ಭೇದಕ್ಕೆ ಅಷ್ಟಾಗಿ ಗಮನ ಕೊಟ್ಟಿಲ್ಲ. ಆದಿ ಕವಿ ನನ್ನಯ್ಯ ಭಟ್ಟ ತನ್ನ ಕೃತಿ ಮಹಾಭಾರತವನ್ನು ಕಾವ್ಯವೆಂದೇ ಕರೆದಿರುವನು. ನನ್ನ ಜೋಡು ತನ್ನ 'ಕುಮಾರ ಸಂಭವ' ಕೃತಿಯಲ್ಲಿ ಒಂದು ಕಡೆ ಆ ಕೃತಿಯನ್ನು ಪ್ರಬಂಧ ಎಂದೇ ಕರೆದಿರುವನು. ತೆಲುಗು ಕಾವ್ಯಗಳಲ್ಲಿ ಪ್ರಬಂಧ ಶಬ್ದವನ್ನು ಮೊಟ್ಟಮೊದಲು ಉಪಯೋಗಿಸಿರುವುದು ಈತನೇ. ತಿಕ್ಕನ ತನ್ನ ಭಾರತವನ್ನು 'ಪ್ರಬಂಧ ಮಂಡಲಿ' ಎಂದು ಕರೆದಿರುವನು. ಅನಂತರ ಕೇತನ, ಮಂಚನ, ಎರ್ರನ, ಶ್ರೀನಾಥ, ಪಿಲ್ಲಲ ಮರ್ರಿ ವೀರಭದ್ರ, ನಂದಿ ಮಲ್ಲಯ, ಘಂಟ ಸಿಂಗನ ಮೊದಲಾದವರು ಕಾವ್ಯ ಶಬ್ದದ ಜೊತೆಗೆ ಪ್ರಬಂಧ ಶಬ್ದವನ್ನು ಉಪಯೋಗಿಸಿರುವರು. ಪಾಲ್ಕುರಿಕಿ ಸೋಮನಾಥನು ಪುರಾಣ ಪ್ರಬಂಧವೆಂದೂ, ಗದ್ಯ ಪದ್ಯಾದಿ ಪ್ರಬಂಧವೆಂದೂ, ಹೇಳಿರುವನು. ಶ್ರೀನಾಥನು 'ಭೀಮೇಶ್ವರ ಪುರಾಣ' ವನ್ನು ಪ್ರಬಂಧವೆಂದು ತಿಳಿಸಿರುವುದಲ್ಲದೆ, 'ಹರವಿಲಾಸ'ವನ್ನು ಶೈವ ಪ್ರಬಂಧವೆಂದು ಕರೆದಿರುವನು. ಪಿಡುಪರ್ತಿ ಸೋಮನ ಶ್ರೀನಾಥನ 'ಪಂಡಿತಾರಾಧ್ಯ ಚರಿತ್ರ'ವನ್ನು ಪದ್ಯ

ಪ್ರಬಂಧವೆಂದು ಹೇಳಿರುವನು. ಬಾಣಕವಿಯ'ಕಾದಂಬರಿ'ಯನ್ನು ಗದ್ಯಪ್ರಬಂಧವೆಂದು 'ವರಾಹಪುರಾಣ' ಕರ್ತಹರಿಭಟ್ಟು ಹೇಳಿರುವನು. ಪ್ರಬಂಧ ಪರಮೇಶ್ವರ ಎಂಬ ಬಿರುದನ್ನು ಪಡೆದ ಎರ್ರನ ಕವಿಯು ತನ್ನ 'ನೃಸಿಂಹ ಪುರಾಣ' ವನ್ನು ಪ್ರಬಂಧ ಎಂದೇ ಕರೆದಿರುವನು. ಈ ಪುರಾಣ ಭಕ್ತಿ ಪ್ರಬಂಧ ಶಾಖೆಗೆ ಸೇರಿದೆ.

ಬೀದಿ ನಾಟಕವಾದ 'ಕ್ರೀಡಾಭಿರಾಮಮು', ವೀರರ ಕಥೆಯಾದ 'ಪಲ್ನಾಟಿವೀರ ಚರಿತ್ರ' ಕೂಡ ಪ್ರಬಂಧಗಳೆಂದೇ ವ್ಯವಹಾರದಲ್ಲಿವೆ.

ಪ್ರಬಂಧ ಭೇದಗಳನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು ಪ್ರಬಂಧ ವಾಙಯ ವಿಕಾಸದಲ್ಲಿ ಪ್ರಬಂಧ ವಿಧಗಳನ್ನು ವಿವರಿಸಿರುವರು. ಛಂದೋ ಭೇದವನ್ನನುಸರಿಸಿ ಪ್ರಬಂಧಗಳು ನಾಲ್ಕು ವಿಧ. ೧. ಪದ್ಯ ಪ್ರಬಂಧ. ೨. ಗದ್ಯ ಪ್ರಬಂಧ ೩. ಪದ್ಯಗದ್ಯ ಪ್ರಬಂಧ ೪. ದ್ವಿಪದ ಪ್ರಬಂಧ.

ವಿಷಯ ಭೇದವನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಪ್ರಬಂಧ ೩ ವಿಧವಾಗಿ ಕಾಣಬರುತ್ತದೆ. ೧. ಪುರಾಣ ಪ್ರಬಂಧ ೨. ಭಕ್ತಿ ಪ್ರಬಂಧ. ಈ ಭಕ್ತಿ ಪ್ರಬಂಧವನ್ನು ಶೈವ, ವೈಷ್ಣವ ಭೇದದಿಂದ ಮತ್ತೆರಡು ವಿಧವಾಗಿ ಹೇಳಬಹುದು. ೧. ಶೈವ ಪ್ರಬಂಧ ೨. ವೈಷ್ಣವ ಪ್ರಬಂಧ. ಇವು ಅಲ್ಲದೆ ರಸಭೇದವನ್ನು ಅನುಸರಿಸಿ 'ಶೃಂಗಾರ ಪ್ರಬಂಧ' ಎನ್ನುವ ಮತ್ತೊಂದು ಮುಖ್ಯವಾದ ಭೇದವಿದೆ.

ತೆಲುಗು ಸಾಹಿತ್ಯ ಚರಿತ್ರೆಕಾರರು ಕಾವ್ಯ, ಪ್ರಬಂಧ ಶಬ್ದಗಳಿಗೆ ಅರ್ಥ ಭೇದವನ್ನು ಕಲ್ಪಿಸಿರುವರು. ಕೃಷ್ಣದೇವರಾಯರ ಯುಗದಲ್ಲಿಯ ಕಾವ್ಯಗಳಿಗೆ 'ಪ್ರಬಂಧ' ಎಂಬ ಹೆಸರು ರೂಢವಾಗಿದೆ. ಈ ಪ್ರಸಿದ್ಧವಾದ ಪ್ರಬಂಧ ರಚನೆ ೧೬ ನೆಯ ಶತಮಾನದಲ್ಲಿ ಅಕಸ್ಮಾತ್ತಾಗಿ ಜರುಗಿಲ್ಲ. ಅದಕ್ಕೆ ಕ್ರಮ ಪರಿಣಾಮವಿದೆ. ನನ್ನಯ್ಯ ಭಾರತ ಪುರಾಣವಾದರೂ ಅದರ ರಚನೆ ಪ್ರಬಂಧೋನ್ಮುಖವಾಗಿಯೇ ನಡೆದಿದೆ ಎನ್ನುವುದು ಪಂಡಿತರ ಅಭಿಪ್ರಾಯ. ಎರ್ರನ ಕವಿ ವರ್ಣನೆಯ ವಿಷಯದಲ್ಲಿ ಪ್ರಬಂಧ ಕವಿಗಳಲ್ಲಿ ಪ್ರಥಮಾಚಾರ್ಯ: ಶ್ರೀನಾಥ ಮಾಹಾಚಾರ್ಯ. ಆಂಧ್ರ ಪ್ರಬಂಧಾವತರಣ ಸಾರಾಂಶವನ್ನು ಪಿಂಗಳಿ ಲಕ್ಷ್ಮೀಕಾಂತಂ ಅವರು ಈ ರೀತಿ ಸಂಕ್ಷಿಪ್ತವಾಗಿ ಹೇಳಿರುವರು -"ಮಹಾಭಾರತ(ತೆಲುಗು)ದಲ್ಲಿ ಬೀಜವಾಗಿದ್ದು, ಎರ್ರನನಲ್ಲಿ ಅಂಕುರಿಸಿ, ಸೋಮನನಲ್ಲಿ ಮೊಳಕೆ ದೊಡ್ಡದಾಗಿ ಪ್ರಬಂಧಲತೆ, ಶ್ರೀನಾಥನಲ್ಲಿ ಕೊಂಬೆ ರೆಂಬೆಗಳಿಂದ ಶೋಭಿಸಿದೆ. ಅದು ಪುಷ್ಪ ಫಲಗಳನ್ನು ಕೊಟ್ಟದ್ದು ರಾಯರ ಕಾಲದಲ್ಲಿ. 'ಮನು ಚರಿತ್ರ' ಆ ಬಳ್ಳಿಯಲ್ಲಿ ಅರಳಿದ ಮೊದಲ ಹೂ, ಹಣ್ಣಾದ ಮೊದಲ ಫಲ'.

ತೆಲುಗು ಭಾಷೆಯಲ್ಲಿ ಪ್ರಬಂಧದ ಲಕ್ಷಣಗಳನ್ನು ತಿಳಿಸುವ ಪ್ರತ್ಯೇಕ ಲಕ್ಷಣ ಗ್ರಂಥಗಳಿಲ್ಲ. ತೆಲುಗಿನಲ್ಲಿ ಮೊದಲ ಅಲಂಕಾರ ಗ್ರಂಥ ಬರೆದ ವಿನ್ನಕೋಟ ಪೆದ್ದನ, ಕಾವ್ಯಾಲಂಕಾರ ಚೂಡಾಮಣಿಯಲ್ಲಿ ಪ್ರಬಂಧ ಲಕ್ಷಣಗಳನ್ನು ಬರೆದಿರುವನು. ಕವಿಗಳಾದ ಪೆದ್ದನ, ಮಂಚನ, ತಿಕ್ಕನ ಮೊದಲಾದವರು ಪ್ರಬಂಧದ ಲಕ್ಷಣಗಳನ್ನು ವಿವರಿಸಿರುವರು. ಇವರೆಲ್ಲರೂ ಹೇಳಿರುವ ಲಕ್ಷಣಗಳನ್ನು ಕ್ರೋಡೀಕರಿಸಿ ಕೆಳಕಂಡ ರೀತಿಯಲ್ಲಿ ಹೇಳಲಾಗಿದೆ.

೧. ಪ್ರಬಂಧಗಳು ಅನುವಾದಗಳಲ್ಲ.

೨. ಕವಿಗಳು ಪ್ರಬಂಧದ ಕಥೆಯನ್ನು ಪ್ರಸಿದ್ಧವಾದ ಪುರಾಣ ಇತಿಹಾಸದಿಂದ ತೆಗೆದುಕೊಂಡು, ನೂತನ ಕಲ್ಪನಾ ಸಾಮರ್ಥ್ಯದಿಂದ ಸ್ವತಂತ್ರ ರಚನೆ ಮಾಡಿರುವರು. ಸೂರನ್ನ ಕವಿಯ 'ಕಳಾ ಪೂರ್ಣೋದಯ'ದಲ್ಲಿ ಕಥೆ ಕೂಡ ಕಲ್ಪನೆಯಾಗಿದೆ.

೩. ಅಷ್ಟಾದಶ ವರ್ಣನೆಗಳು ಇರಬೇಕು.

ಪುರ, ಸಮುದ್ರ, ಪರ್ವತ, ಋತುಗಳು, ಚಂದ್ರೋದಯ, ಸೂರ್ಯೋದಯ, ಉದ್ಯಾನ, ಜಲಕ್ರೀಡೆ, ಮಧುಪಾನ, ಸುರತ, ವಿಪ್ರಲಂಬ, ಪ್ರಯಾಣ, ಸ್ವಯಂವರ, ಪುತ್ರೋತ್ಸವ ಮಂತ್ರ, ದೂತ್ಯ(ರಾಯಭಾರ), ಯುದ್ಧ ವಿಜಯೋತ್ಸವ. ಈ ವರ್ಣನೆಗಳು ೧೮ ರಿಂದ ೩೩ ವರ್ಣನೆಗಳವರೆಗೆ ಬೆಳೆದಿವೆ ಎಂದು ಅಪ್ಪಕವಿಯು ಹೇಳಿರುವರು.[೩]

ಮ || ಪುರಮುನು ಋತುಷಟ್ಕಮುನು ಪ್ರಯಾಣಮ್ಮುನು
ಶೈಲಂಬು ವೇಟಯು ಸಾಗರಂಬು
ಮೌನೀಂದ್ರ ಪುಣ್ಯಾಶ್ರಮಂಬುನು ಮಂತ್ರಂಬು
ದ್ಯೂತಂಬು ಪಿವಸನದ್ಭುತ ರಣಂಬು
ವಿಜಯಂಬು ಮಧ್ಯಪಾನಜ ವಿಕಾರಂಬುನು
ವನವಿಹಾರಂಬುನು ವಾರಿ ಕೇಳಿ
ಕನ್ಯಾಂಗ ಸೌಂದರ್ಯ ಕಥನಂಬು ಹಿಮಕರಾ
ಭ್ಯುದಯಂಬು ವಿಪ್ರಲಂಬೋ ಚಿತಂಬು
ಗೀ || ಪದ್ಮ ಮಿತ್ರೋದಯಂಬುನು ಬರಿಣಯಂಬು
ಸುರತಮುನು ಹೃದಂಬುನು ಸುತಜನನಮು
ನನಗ ಇರುವದಿರೆಂಡು ವರ್ಣನಲ ಗೂರ್ಚಿ
ಚೆಪ್ಪವಲಯ ಪ್ರಬುಧಂಬು ಶ್ರೀನಿವಾಸ .

ಅಪ್ಪಕವೀಯಮು : ಪ್ರಥಮಾಶ್ವಾಸ ಮು. ೩೮ ಪ.

ಪುರ, ಋತುಗಳು, ಪ್ರಯಾಣ, ಪರ್ವತ, ಬೇಟೆ, ಸಾಗರ, ಆಶ್ರಮ, ಮಂತ್ರ, ದ್ಯೂತ, ಯುದ್ಧ, ವಿಜಯ, ಮಧ್ಯಪಾನ, ವನವಿಹಾರ, ಜಲಕ್ರೀಡೆ, ಸ್ತ್ರೀ, ಚಂದ್ರೋದಯ, ವಿಪ್ರಲಂಬ, ಸೂರ್ಯೋದಯ, ವಿವಾಹ, ಸುರತ, ಗರ್ಭಿಣಿ, ಮತ್ತು ಸುತಜನನ.

೪. ಒಬ್ಬ ನಾಯಕ, ಒಬ್ಬ ನಾಯಕಿಗೆ ಸೇರಿದ ಕಥೆ.

೫. ಔಚಿತ್ಯ ಸ್ಫೂರ್ತಿ, ನಾಟಕೀಯತೆ, ಪದ್ಯರಚನಾ ನೈಪುಣ್ಯತೆ, ವ್ಯಂಗ್ಯ ವೈಭವದಿಂದ ಕೂಡಿರುತ್ತದೆ.

೬. ಪ್ರಬಂಧ ಕವಿಗಳು ಅಲಂಕಾರಪ್ರಿಯರು. ಉತ್ಪ್ರೇಕ್ಷೆ, ಅತಿಶಯೋಕ್ತಿ ಅಲಂಕಾರಗಳನ್ನು ಹೆಚ್ಚಾಗಿ ಬಳಿಸಿರುವರು. ಶಬ್ದಾಲಂಕಾರಕ್ಕೂ ಪ್ರಾಧಾನ್ಯತೆ ಇದೆ. ಈ ಕವಿಗಳದು ಆಲಂಕಾರಿಕವಾದ ಶೈಲಿ.

೭. ಶೃಂಗಾರ ರಸಕ್ಕೆ ಪ್ರಾಧಾನ್ಯತೆ ಇದ್ದು, ಉಳಿದ ರಸಗಳು ಪೋಷಕ ರಸಗಳಾಗಿರುತ್ತವೆ.

೮. ಸಂಸ್ಕೃತ ಸಮಾಸ ಭೂಯಿಷ್ಠವಾದ ರಚನೆಯಿಂದ ಕೂಡಿರುತ್ತವೆ. ರಾಯರ ಕಾಲದಲ್ಲಿಯ ಪ್ರಬಂಧದ ಸಾಮಾನ್ಯ ಲಕ್ಷಣಗಳಿವು. ಇವುಗಳಲ್ಲಿ ಯಾವುದಾದರೂ ಒಂದು ಲಕ್ಷಣ ಇರದಿದ್ದರೂ ಪ್ರಬಂಧ ಎಂದೇ ಕರೆಯುವರು. ರಾಯರ ಕಾಲದಲ್ಲಿ ಬಂದ ಪ್ರಬಂಧಗಳೆಲ್ಲಾ ಚಂಪೂಕಾವ್ಯಗಳಾಗಿರುವುದು ಗಮನಾರ್ಹ. 'ಪ್ರಬಂಧ ಕಾಲದ ಕವಿಗಳ ದೃಷ್ಟಿ ಲೌಕಿಕ ದೃಷ್ಟಿ, ಕಾವ್ಯ ಆನಂದ ಕೊಟ್ಟರೆ ಸಾಕು ಎಂದು ಇವರ ಹೇಳಿಕೆ. ಧರ್ಮ ನೀತಿಯನ್ನು ಬೋಧಿಸುವುದನ್ನು ಇವರು ಪ್ರಯತ್ನ ಮಾಡರು' ಎನ್ನುವುದು ತೆಲುಗು ಸಾಹಿತ್ಯ ಚರಿತ್ರೆಕಾರರ ಅಭಿಪ್ರಾಯ.

ಪ್ರಬಂಧ ರಚನೆ ೧೮ ನೆಯ ಶತಮಾನದ ವರೆಗೆ ಸಾಗಿದೆ. ನಂತರ ಕುಂಠಿತವಾಗಿ ೧೯ ನೆ ಶತಮಾನವನ್ನು ಕ್ಷೀಣ ಪ್ರಬಂಧಯುಗವೆಂದು ಕರೆಯುವರು. ರಾಯರ ಕಾಲದ ಕೆಲವು ಪ್ರಬಂಧಗಳು: ಶ್ರೀ ಕೃಷ್ಣದೇವರ ಆಮುಕ್ತ ಮಾಲ್ಯದ, ಅಲ್ಲಸಾನಿ ಪೆದ್ದನನ ಮನುಚರಿತ್ರೆ, ನಂದಿತಿಮ್ಮನನ ಪಾರಿಜಾತಪಹರಣ, ದೂರ್ಜಟಿಯ ಶ್ರೀ ಕಾಳಹಸ್ತೀಶ್ವರ ಮಹಾತ್ಮ್ಯ, ಮಲ್ಲನನ ರಾಜಶೇಖರ ಚರಿತ್ರ, ರಾಮಭದ್ರ ಕವಿಯ ರಾಮಾಭ್ಯುದಯ, ಪಿಂಗಳಿ ಸೂರನನ ಕಳಾಪೂರ್ಣೋದಯ, ಪ್ರಭಾವತಿ ಪ್ರದ್ಯುಮ್ನ, ರಾಮರಾಜ ಭೂಷಣನ ವಸುಚರಿತ್ರ, ರಾಮಕೃಷ್ಣನ ಪಾಂಡುರಂಗ ಮಹಾತ್ಮ್ಯ, ಘಟಿಕಾಚಲ ಮಹಾತ್ಮ್ಯ ಮೊದಲಾದುವನ್ನೂ ಗಮನಿಸಬಹುದು.

ಗ್ರಂಥ ಋಣ

೧. ತೆಲುಗು ಸಾಹಿತ್ಯ ಸಮೀಕ್ಷೆ, ಮೊದಲ ಸಂಪುಟಮು (೧೫೦೦)ವರಕು) ಜಿ. ನಾಗಯ್ಯ, ನವ್ಯ ಪರಿಶೋಧಕಪ್ರಚುರಣಲು, ತಿರುಪತಿ ೧೯೯೦.

೨. ಕಾವ್ಯ ಲೋಕಮು ರಚಯಿತ ಡಾ. ನಂಡೂರಿ ರಾಮಕೃಷ್ಣಾಚಾರ್ಯ ತೆಲುಗು ಅಕಾಡಮಿ.ಹೈದರಾಬಾದು ೧೯೯೧.

೩. ಆಂಧ್ರ ಸಾಹಿತ್ಯ ಚರಿತ್ರ ಸಂಗ್ರಹಮು, ಪುಟ ೧೧೪ -೧೧೫.

೪. ಬಂಧ ವಾಙ್ಮಯ ವಿಕಾಸಮು (ರಾಯಲ ಯುಗಮ್), ಮೊದಟಿ ಸಂಪುಟಮು ಡಾ || ಪಲ್ಲಾ ದುಗ್ಗಯ್ಯ ಆಂಧ್ರ ರಚಯಿತಲ ಸಹಕಾರ ಸಂಘ ಮುದ್ರಗಾಲಯಮು, ಹೈದರಾಬಾದು.

೫. ಆಂಧ್ರ ಸಾಹಿತ್ಯ ಚರಿತ್ರ ಡಾ. ಪಿಂಗಳಿ ಲಕ್ಷ್ಮಿಕಾಂತಂ. ಗಂಗಾಧರಾ ಪಬ್ಲಿಕೇಷನ್ಸ್, ರಾಮಮಂದಿರಂ ವೀದಿ. ವಿಜಯವಾಡ. ೧೯೮೫.

೬. ತೆಲುಗುಸಾಹಿತ್ಯ ಚರಿತ್ರ ಡಾ . ವೈದ್ಯುಲ ಕೃಷ್ಣರಾವು ಶ್ರೀ ವಾಡಪಲ್ಲಿ ಚಕ್ರಪಾಣಿರಾವು ತೆಲುಗು ಅಕಾಡಮಿ, ಹೈದರಾಬಾದು ೧೯೮೬.

೭. ಆಂಧ್ರ ಸಾಹಿತ್ಯ ಚರಿತ್ರ ಸಂಗ್ರಹಮುಖಂಡವಲ್ಲಿ ಲಕ್ಷ್ಮೀರಂಜನಂ, ವೆಂಕಟರಮಣ ಪಬ್ಲಿಕೇಷನ್ಸ್, ಹೈದರಾಬಾದು, ೧೯೬೫.

ಸಿದ್ಧರೇವಣದೇವನ ಉಲ್ಲೇಖವಿರುವ ಕಕ್ಕೇರಿಯ ಶಾಸನ

* ಹನುಮಾಕ್ಷಿ ಗೋಗಿ

ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಒಂದು ಚಿಕ್ಕಹಳ್ಳಿ ಕಕ್ಕೇರಿ. ಸುರಪುರದಿಂದ ನೈಋತ್ಯಕ್ಕೆ ಸುಮಾರು ೨೫ ಕಿ.ಮಿ.ಗಳ ಅಂತರದಲ್ಲಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ರಸ್ತೆ ಮತ್ತು ಬಸ್‌ಸಂಚಾರ ವ್ಯವಸ್ಥೆಯನ್ನು ಪಡೆದುಕೊಂಡಿದೆ. ಶರಣ ಡೋಹರ ಕಕ್ಕಯ್ಯನ ಅಂಕಿತವೂ ಆರಾಧ್ಯದೈವವೂ ಆದ ಕಕ್ಕೇಶ್ವರದೇವರ ದೇವಸ್ಥಾನವು ಈ ಹಳ್ಳಿಯಲ್ಲಿದೆ. ಡೋಹರ ಕಕ್ಕಯ್ಯನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಂಶಗಳು ಇಲ್ಲಿ ದೊರೆಯಬಹುದೇನೋ ಎಂಬ ಕಾರಣದಿಂದಾಗಿ ಊರಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದಾಗ ಹನುಮಾನ್ ದೇವರ ಗುಡಿಯಲ್ಲಿ ಆಳೆತ್ತರದ ಎರಡು ವೀರಗಲ್ಲು (ಒಂದು ತುಱುಗೋಳಿಗೆ ಸಂಬಂಧಿಸಿದ್ದು)ಗಳು ಕಂಡುಬಂದವು. ಒಂದು ವೀರನಿಂದೊಡಗೂಡಿದ ಮಹಾಸತಿಯ ಶಿಲ್ಪವಿದ್ದು ಅದರಲ್ಲಿ ಲಿಪಿ ಇರುವುದಿಲ್ಲ. ಕಕ್ಕೇಶ್ವರ ದೇವಸ್ಥಾನದಲ್ಲಿಯ ಕಂಬವೊಂದರ ಮೇಲೆ ಶಾಸನವಿದ್ದು, ಅದರ ಪಠ್ಯವನ್ನಿಲ್ಲಿ ಪ್ರಕಟಿಸಲಾಗಿದೆ.

ಕಲ್ಯಾಣ ಚಾಲುಕ್ಯ ಭೂಲೋಕಮಲ್ಲದೇವರ ಕಾಲದ ಶಾಸನವಿದಾಗಿದ್ದು, ಕಂಬದ ಪೂರ್ವಮುಖದಲ್ಲಿರುವ ೭-೮ ನೆಯ ಸಾಲುಗಳಲ್ಲಿ ಬರುವ "ಸ್ವಸ್ತಿ ಶ್ರೀಮತು ಪ್ಲವಂಗ ಸಂವತ್ಸರದ ಚೈತ್ರ ಸುದ್ಧ ಪಂಚಮೆ ಸೋಮವಾರದಂದು" ಎನ್ನುವ ಮಿತಿಯು ಕ್ರಿ.ಶ. ೧೧೨೭ ನೆಯ ಮಾರ್ಚ ೨೧ಕ್ಕೆ ಸರಿಹೊಂದುತ್ತದೆ.

ಹಗರಟಗೆ ನಾಡನ್ನಾಳಿದ ಹೈಹಯ ವಂಶದವರ ಸಕಲಪ್ರಶಸ್ತಿಗಳನ್ನು ಒಳಗೊಂಡ ಈ ಶಾಸನ ಅದೇ ವಂಶಕ್ಕೆ ಸೇರಿದ ಮಹಾಮಂಡಳೇಶ್ವರ ಮಲ್ಲಿರೇವರಸರು ಆಳುವಾಗ ತಾವು ಕಟ್ಟಿಸಿದ ರೇವೇಶ್ವರದೇವರ ಅಂಗಭೋಗ, ಧೂಪಾರತಿ, ನೈವೇದ್ಯಗಳಿಗಾಗಿ "ಹಗರಿಟ್ಟಗೆಯ ಶ್ರೀ ಸ್ವಯಂಭುಯುಗ್ರಭೀಮೇಶ್ವರದೇವರ ಮುದಿನೀರ ಮಾರೇಶ್ವರದೇವರ ಕಕ್ಕೇಶ್ವರದೇವರ ಮಹಾಸ್ಥಾನಂಗಳಾಚಾರ್ಯರಾದ ಸಿದ್ಧರೇವಣದೇವನ ಶಿಷ್ಯ ಬ್ರಹ್ಮರಾಶಿಪಂಡಿತರ ಕಾಲ್ಕರ್ಚಿ " ಬಿಟ್ಟ ಭೂದತ್ತಿಯನ್ನು ಮತ್ತು ಸುಂಕದತ್ತಿಗಳನ್ನು ವಿವರಿಸುತ್ತದೆ. ಪ್ರಖ್ಯಾತವಾದ ಶೈವ ಸಿಂಹಪರ್ಷೆಯ ಮಲೆಯಾಳ ಪಂಡಿತನ ಶಿಷ್ಯಪರಂಪರೆಯಲ್ಲಿ ಬರುವ ಬ್ರಹ್ಮರಾಶಿ ಪಂಡಿತನ ಉಲ್ಲೇಖ ಈ ಭಾಗದ ಅನೇಕ ಶಾಸನಗಳಲ್ಲಿ ಬರುತ್ತಿದ್ದು ಆತ ಸಿದ್ಧರೇವಣದೇವನ ಶಿಷ್ಯನೆಂದು ಈ ಶಾಸನದಲ್ಲಿ ಉಲ್ಲೇಖಗೊಂಡದ್ದು ತುಂಬ ಮಹತ್ವದ ಅಂಶವಾಗಿದೆ. ಇದೇ ಸಿದ್ಧರೇವಣದೇವನನ್ನು ಮತ್ತು ಆತನ ಪವಾಡಗಳನ್ನು ಉಲ್ಲೇಖಿಸುವ ಇದೇ ಭಾಗದ ಶಿರವಾಳ (ಶಹಾಪುರ ತಾ. ಗುಲ್ಬರ್ಗ ಜಿಲ್ಲೆ) ಶಾಸನ ಸುಪ್ರಸಿದ್ಧವಾದುದು ಎನ್ನುವುದನ್ನು ಇಲ್ಲಿ ನೆನೆಯಬಹುದಾಗಿದೆ.

ಕಕ್ಕೇರಿಯ ಕಕ್ಕಯ್ಯನ ಗುಡಿಯ ಬಲಭಾಗ ಮೊದಲನೆಯ ಕಂಬದ ಮೂರು ಮುಖಗಳಲ್ಲಿ ಈ ಶಾಸನವಿದೆ. ೧' ಅಗಲ ೧' ಉದ್ದದ ಅಳತೆಯ ಚೌಕಟ್ಟಿನಲ್ಲಿ ೧/೨ಗಾತ್ರದ ಅಕ್ಷರಗಳನ್ನು ಕೆತ್ತಲಾಗಿದೆ. ಶಾಸನದ ಮೇಲೆಲ್ಲ ಎಣ್ಣೆ ಸುರಿದಿರುವುದರಿಂದ ಎಣ್ಣೆ ಕಮಟಿನಲ್ಲಿ ಅಕ್ಷರಗಳು ಹೂತು ಹೋಗಿವೆ.

ಶಾಸನದ ಪೂರ್ಣಪಾಠ ಕೆಳಗಿನಂತಿದೆ:

ಕಂಬದ ದಕ್ಷಿಣ ಮುಖ

೧ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವೀ ವಲ್ಲಭ
೨ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರ
೩ ಕಂ ಸತ್ಯಾಸ್ರಯಕುಲತಿಲಕ ಚಾಳುಕ್ಯಾಭರಣಂ
೪ ಶ್ರೀಮತ ಭೂಲೋಕಮಲ್ಲದೇವರ ವಿಜಯರಾಜ್ಯಮು
೫ ತ್ತರೋತ್ತರಾಭಿವ್ರಿದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕ ತಾ
೬ ರಂಬರಂ ಕಲ್ಯಾಣದ ನೆಲೆವೀಡಿನೊಳು ಸುಖಸಂಕ
೭ ಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ।। ಸ್ವಸ್ತಿ ಸಮ
೮ ದಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಮಾಹಿಶ
೯ ತಿಪುರವರಾಧೀಶ್ವರಂ ಮಧ್ಯದೇಶಾಧೀಶ್ವರ ಅಹಿಯವಂ
೧೦ ಶೋದ್ಭವಂ ವಿವೇಕ ವನಜೋದ್ಭವಂ ಕ್ಷತ್ರಿಯ ಪವಿತ್ರಂ
೧೧ ರೂಪಮಾಂಧಾತಂ ನುಡಿದಂತೆ ಗಂಡ ಭ್ರಿಗುಮದಾಚಾ
೧೨ ರ್ಯ್ಯಮಾಕಾಲಭೈರವ ವಾರಿಗೆದಪ್ಪುವ ಮಂಡಳಿಕರಗಂಡ
೧೩ ಜಗದೊಬ್ಬಗಂಡ ಗಂಡಭೇರುಂಡಂ ಹಬ್ಬೆ (?) ರಾಯಕಟಕ
೧೪ ಮುಂನ್ನಿಜಿವಂ ಶ್ರೀಮತು ಭೂಲೋಕಮಲ್ಲರಾಯನ ಅ
೧೫ ಡಱು ನಾಮಾದಿ ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾ
೧೬ ಮಂಡಳೇಶ್ವರಂ ಮಲ್ಲಿರೇವರಸರುಂ ಭೈರವನಸಿಯಸೋ

ಕಂಬದ ಪೂರ್ವಮುಖ

೧ ಸಮಸ್ತ ಗುಣಸಂಪಂನ ಸುಜನಪ್ರಸಂನ ಬೀಡಿ ಮುಂನಿಜಿವಂ
೨ ತೊತ್ತಳದುಳಿವಂ ನರಜಡರ ಕಾಲಂ ಕಿರ್ತಿಗೆನಲು ನೆರೆದೆತ್ತಿ
೩ ರಿವಂ ಸರಣೆನೆಕಾವಂ ಕಲಿನಾಯಕ ಮುಕದರ್ಪ್ಪಣಂ ಮಂ
೪ ಡಳಿಕ ಮಜಿದೇವರಹನಂನಂ ಸಾಹಸೋತ್ತುಂಗ ರೇವೆಯ
೫ ನಾಯಕನಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ
೬ ಮತು ಕಕ್ಕೇಜಿ ಬಂಮೆಯನಾಯಕ ಮಾದೆಯನಾಯ
೭ ಕಂ ಸ್ವಸ್ತಿ ಶ್ರೀಮತು ಪ್ಲವಂಗ ಸಂವತ್ಸರದ ಚೈತ್ರಸುದ್ಧ ಪಂಚ
೮ ಮೆ ಸೋಮವಾರದಂದು ಶ್ರೀ ರೇವೇಸ್ವರದೇವರ ಅಂಗಭೋಗ

೯ ಕಂ ಧೂಪಾರಿತಿ ನಿವೇದ್ಯಕಂ ಆಸ್ಥಾನದಾಚಾರ್ಯ್ಯ ಬ್ರಹ್ಮರಾ
೧೦ ಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ ಊ
೧೧ ರಿಂ ಪಡುವಲೂ ಕೆರೆಯೊಳಗೆ ಕಕ್ಕೇಸ್ವರದೇವರ ಕೆಯ್ಯ ಕೊಳ
೧೨ ಗದ ಕೆಯಿಂ ತೆಂಕಲು ಸರ್ಬ್ಬನಮಸ್ಯವಾಗಿ ಕೊಟ್ಟಕೆಯಿ ಮುಂ
೧೩ ಜನ ಕೋಲು ಮತ್ತರು ೧೩ ಸ್ವಸ್ತಿ ಶ್ರೀಮತು ಕಕ್ಕೇಱ ಸಾಮಂತ
೧೪ ಱಳಿಯ ರೇವೆಯನಾಯಕನು ಮಗ ಬಂಮ್ಮೆಯನಾಯ
೧೫ ಕ ಮಾದಿಯನಾಯಕ ಶ್ರೀ ರೇವೇಸ್ವರದೇವರ ಸೋ. ಜೀರ್ಣ್ನೋ
೧೬ ದ್ಧಾರ ಧೂಪಾರಿತಿ ನಿವೇದ್ಯಕೆಂದು ಹಗರಿಟ್ಟಗೆಯ ಶ್ರೀ
೧೭ ಸ್ವಯಂಬುಯುಗ್ರ ಭೀಮೇಶ್ವರದೇವರ ಮುದಿನೀರ ಕುಮಾ
೧೮ ರೇಸ್ವರದೇವರ ಕಕ್ಕೇಶ್ವರದೇವರ ಯಿಂತಪ್ಪ

ಕಂಬದ ಉತ್ತರಮುಖ

೧ ಮಹಾಸ್ಥಾನಂಗಳಾಚಾರ್ಯ್ಯ ಸಿದ್ಧರೇವಣದೇವನ ಷಿಸ್ಯ ಬ್ರಹ್ಮರಾ
೨ ಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ
೩ ಯೂರಿಂ ಮೂಡಣ ಕಲಿದೇವರ ಕೆಯ್ಯ ತರುಗಳತ್ತಿಗೆ
೪ ಯ ಕೆಯ್ಯಂ ತೆಂಕ ಸರ್ಬ್ಬನಮಸ್ಯವಾಗಿ ಕೊಟ್ಟ ಕೆಯಿ ಮುಂ
೫ ಜನ ಕೋಲ ಮತ್ತರು ೧೩ ಅಂತು ಯರಡು ಸ್ಥಳ ಉಂ
೬ ಕೂಡಿ ಯಿಪ್ಪತ್ತಾಱು ಮತ್ತರು ಯೀ ದೇವರ ನಂದಾದೀವಿ
೭ ಗೆಗೆ ಗಾಣ ೧ ದೇವಮಾನ ೧ ಭಣ್ಣಸಹಿತ ಹೊಂಗೆ ಕೊ
೮ ಟ್ಟಲ್ಲಿ ಮಾನ ೧ ಕೊಂಡಲ್ಲಿ ಮಾನ ೧ ಸೆಟ್ಟಿಯರುಂ ಮುಂಮು
೯ ರಿದಂಡಂಗಳುಂ ದೇವರ ವೀಳೆಯಕ್ಕೆ ಅಡಕೆ ಹೊಂಗೆ ಕೊಟ್ಟಲ್ಲಿ
೧೦ ೧೦ ಕೊಂಡಲ್ಲಿ ೧೦ ಹನ್ನವಣಿಗ ಸಾಸಿರ್ಬ್ಬರು ದೇವರ ವೀಳೇ ಯಕ್ಕೆ
೧೧ ಯೆಲೆ ಹೇಱಿಂಗೆ ೫೦ ಹೋಱಿಗೆ ೨೫ ಹೊತ್ತಳಕ್ಕೆ ೧೨ ದೇವ
೧೨ ರ ಹಿಂದೆ ತೋಂಟ ಮ ೧ ಯೀ ಧರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ ವಾರಣಾ
೧೩ ಸಿಯಲು ಕೋಟಿ ಕವಿಲೆಯಂ ಚತುರ್ವ್ವೇದ ಪಾರಗರಪ್ಪ ಬ್ರಾ
೧೪ ಹ್ಮಣರ್ಗ್ಗೆ ದಾನವಂ ಕೊಟ್ಟ ಫಲಮಕ್ಕು ।। ಯೀ ಧರ್ಮ್ಮಕಾವ
೧೫ ಸೋರ್ವ್ವನಪಾಯಮುಂ ಚಿಂತಿಸಿದಂಗೆ ವಾರಣಾಸಿಯಲು ಕೋಟಿ ಕ
೧೬ ವಿಲೆಯುಂ ಚತುರ್ವ್ವೇದ ಪಾರಗರಪ್ಪ ಬ್ರಾಹ್ಮಣರುಮನಳಿದ
೧೭ [ದೋಷಂ ಸಾರ್ಗ್ಗುಂ]

ಇನ್ನೊಂದು ಕಂಬದ ಉತ್ತರಮುಖದಲ್ಲಿ

'ಸಾಧಾರಣ ಸಂವತ್ಸರ'ದ ಉಲ್ಲೇಖವಿದೆ. ಉಳಿದ ಭಾಗವೆಲ್ಲ ಎಣ್ಣೆಕಮಟಿನಲ್ಲಿ ಮುಚ್ಚಿಹೋಗಿದೆ.

ಆರನೆಯ ಇಂದ್ರಿಯ

* ಎ.ಎಸ್.ಧರಣೇಂದ್ರಯ್ಯ

ನಮ್ಮ ಪರಿಸರದ ಪ್ರತ್ಯಕ್ಷಜ್ಞಾನ ಪಂಚೇಂದ್ರಿಯಗಳ ಮೂಲಕ ನಮಗೆ ಸಾಧ್ಯವಾಗುತ್ತದೆ. ಇದು ಸರ್ವಸಮ್ಮತ ಸಂಗತಿ. ಆದರೆ ಲೋಕದ ಕೆಲವು ವಿದ್ಯಮಾನಗಳ ಪ್ರತ್ಯಕ್ಷಜ್ಞಾನವು ಈ ಇಂದ್ರಿಯಗಳ ಹಂಗಿಲ್ಲದೇ ನಮಗೆ ದೊರೆಯಬಲ್ಲದು ಎಂಬ ಅಭಿಪ್ರಾಯ ನಮ್ಮ ಕುತೂಹಲವನ್ನು ಕೆರಳಿಸುತ್ತದೆ. 'ಅದು ಹೇಗೆ ಸಾಧ್ಯ?' ಎಂಬ ಶಂಕೆಗೆ ಆಸ್ಪದ ಕೊಡುತ್ತದೆ. ಆರನೇ ಇಂದ್ರಿಯದ ಮೂಲಕ ಅದು ಸಾಧ್ಯವೆಂದಾಗ ನಮ್ಮ ವಿಮರ್ಶಾತ್ಮಕ ಮನಸ್ಸು ಅದರ ಸತ್ಯಾಸತ್ಯತೆಗಳ ಪರಿಶೀಲನೆಗೆ ತೊಡಗುತ್ತದೆ.

ನಮ್ಮ ಮನಸ್ಸೇ ನಮ್ಮ ಆರನೇ ಇಂದ್ರಿಯವೆಂಬುದು ಕೆಲವರ ಅಭಿಮತ. ಇಂದ್ರಿಯಗಳಿಗೆ ಅಗೋಚರವಾದ ವಿದ್ಯಮಾನಗಳನ್ನು ಕಾಣುವ ಕೇಳುವ ವಿಶಿಷ್ಟಶಕ್ತಿ ಈ ಮನಸ್ಸಿಗಿದೆ ಎಂದು ಅವರು ಹೇಳುತ್ತಾರೆ. ತಮ್ಮ ಹೇಳಿಕೆಯನ್ನು ಪುಷ್ಟೀಕರಿಸಲು ಅವರು ಮಾನವ ಸಂಸ್ಕೃತಿಯಲ್ಲಿನ ಪುರಾಣಪುಣ್ಯಕಥೆಗಳು, ಕಲೆ, ಸಾಹಿತ್ಯಗಳು ಹಾಗೂ ಪವಾಡ ಪುರುಷರೆನಿಸಿದವರ ಜೀವನ ಚರಿತ್ರೆಗಳಲ್ಲಿ ನಿರೂಪಿತವಾಗಿರುವ ಪ್ರಸಂಗಗಳನ್ನು ಮುಂದೊಡ್ಡುತ್ತಾರೆ ಹಾಗೂ ಜಾನಪದದಲ್ಲಿ ಭೂತ, ಪ್ರೇತ, ಪಿಶಾಚಿಗಳ ಬಗ್ಗೆ ಹಾಸುಹೊಕ್ಕಾಗಿರುವ ಪ್ರಬಲ ನಂಬಿಕೆಗಳನ್ನು ಉಲ್ಲೇಖಿಸುತ್ತಾರೆ. ಮುನಿಶಾಪಕ್ಕೆ ಬಲಿಯಾಗಿ ಕಲ್ಲಿನಂತೆ ಬಿದ್ದು ಶತಶತಮಾನಗಳಿಂದ ಕೊರಗಿ ಸೊರಗಿದ್ದ ಅಹಲ್ಯೆಯ ಕ್ಷೀಣಕರೆ ಶ್ರೀರಾಮನ ಮನಸ್ಸಿಗೆ ನೇರವಾಗಿ ಗೋಚರಿಸುತ್ತದೆ. ಸ್ಮಶಾನ ಸದೃಶವಾಗಿದ್ದ ಗೌತಮಾಶ್ರಮದ ಚರಾಚರವಸ್ತುಗಳೆಲ್ಲಾ ಶ್ರೀರಾಮನ ಆಗಮನದಿಂದ ಸಪ್ರಾಣಿಸುತ್ತವೆ. ಹಸ್ತಿನಾವತಿಯಲ್ಲಿ ದುಷ್ಟರ ಕೈಯಲ್ಲಿ ಸಿಲುಕಿಕೊಂಡು ಮಾನಹಾನಿಯ ಸಂಕ್ಷೋಭೆಯಲ್ಲಿ ಮುಳುಗಿದ್ದ ದ್ರೌಪದಿಯ ಆರ್ತನಾದ ದೂರದ ದ್ವಾರಕೆಯಲ್ಲಿದ್ದ ಶ್ರೀಕೃಷ್ಣನಿಗೆ ಕೇಳಿಸುತ್ತದೆ. ಆಹಾರಾರ್ಥಿಯಾಗಿ ಅರಮನೆ ಮುಂದೆ ಬಂದ ವೃಷಭಮುನಿಯ ದರ್ಶನಮಾತ್ರದಿಂದಲೇ ಶ್ರೇಯಾಂಕರಾಜನಿಗೆ ಪೂರ್ವಜನ್ಮ ಸ್ಮರಣೆ ಯುಂಟಾಗುತ್ತದೆ. ಶಕುನಿಯು ತನ್ನ ಮನೋಬಲದಿಂದ ದಾಳಗಳ ಗತಿಯನ್ನು ನಿಯಂತ್ರಿಸುತ್ತಾನೆ. ಹೀಗೆ ಪುರಾಣಗಳಲ್ಲಿ ಮಾತ್ರವಲ್ಲದೆ, ಜಾನಪದ ಕಥನ ಕವನಗಳಲ್ಲಿಯೂ ಅತೀಂದ್ರಿಯಾನುಭವಗಳ ಪ್ರಸ್ತಾಪ ಬರುತ್ತದೆ. ನಡುರಾತ್ರಿ ಹಳ್ಳಿಯಗೌಡನ ಕನಸಿನಲ್ಲಿ ಗ್ರಾಮದೇವತೆ ಕಾಣಿಸಿಕೊಂಡು 'ನನ್ನ ಸೌಭಾಗ್ಯವನ್ನು ಉಳಿಸು' ಎಂದು ಕೇಳಿಕೊಂಡಾಗ, ದಿಗ್ಭ್ರಾಂತನಾಗಿ ಮೇಲೆದ್ದ ಗೌಡನು, ಜನಸಮೇತ ಕೆರೆಯ ಸಮೀಪಕ್ಕೆ ಹೋಗಿ ತುಂಬುಪ್ರವಾಹದ ಹೊಳೆಯ ಆಘಾತಕ್ಕೆ ಸಿಕ್ಕಿ ಒಡೆಯಲಿದ್ದ ಕೆರೆಯ ಸಮೀಪಕ್ಕೆ ಹೋಗಿ ತುಂಬುಪ್ರವಾಹದ ಹೊಳೆಯ ಆಘಾತಕ್ಕೆ ಸಿಕ್ಕಿ ಒಡೆಯಲಿದ್ದ ಕೆರೆಯ ಏರಿಯನ್ನು ದುರಸ್ತಿ ಮಾಡಿಸಿ, ಹಳ್ಳಿಯನ್ನು ಅಪಾಯದಿಂದ ಪಾರುಮಾಡುತ್ತಾನೆ. ಪುರಾಣ ಮತ್ತು ಜಾನಪದಗಳಲ್ಲಿ ಮಾತ್ರವಲ್ಲದೆ, ಅಂತರ ಗ್ರಹಯಾನಕ್ಕೆ ಸಜ್ಜಾಗುತ್ತಿರುವ . ಈ ವಿಜ್ಞಾನ ಯುಗದಲ್ಲೂ ಅತೀಂದ್ರಿಯಾನುಭವಗಳ ವರದಿಗೇನೂ ಕೊರತೆಯಿಲ್ಲ. ಕಥೆ ಕಾದಂಬರಿಗಳಲ್ಲಿ ವೃತ್ತಪತ್ರಿಕೆಗಳಲ್ಲಿ ಒಂದಲ್ಲ ಒಂದು ರೀತಿಯ ಅತೀಂದ್ರಿಯಾನುಭವದ ಬಗ್ಗೆ ಪ್ರಸ್ತಾಪವಿರುವುದನ್ನು ಕಾಣಬಹುದು.

ದೂರದ ನಗರದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯೊಬ್ಬನು ತನ್ನ ತಾಯಿಯ ಮರಣವನ್ನು ಕನಸಿನಲ್ಲಿ ಮುಂಗಾಣುವುದು, ಪಕ್ಕದ ಹಳ್ಳಿಯಲ್ಲಿರುವ ತನ್ನ ಅಣ್ಣನು ಕುದುರೆ ಲಾಯದಲ್ಲಿ ಸತ್ತುಬಿದ್ದಿರುವ ದೃಶ್ಯವನ್ನು ತಾನಿದ್ದಲ್ಲೇ ಕಾಣುವುದು, ಪ್ಯಾರಿಸ್ಸಿನಲ್ಲಿ ಕುಳಿತು ಆ ಕೃತಿಯೊಂದನ್ನು ನೋಡುತ್ತಿರುವವರ ಆಲೋಚನೆಗಳನ್ನು ನ್ಯೂಯಾರ್ಕಿನಲ್ಲಿ ಕುಳಿತವರು ಗ್ರಹಿಸುವುದು ಇತ್ಯಾದಿ ಒಂದಲ್ಲ, ಎರಡಲ್ಲ ಸಾವಿರಾರು ಪ್ರಸಂಗಗಳ ವರದಿಗಳು ನಮ್ಮನ್ನು ವಿಚಾರಶೀಲರನ್ನಾಗಿಸುತ್ತವೆ.

ಹೀಗೆ ಪುರಾಣ, ಪುಣ್ಯಕಥೆ, ಜಾನಪದ ಮತ್ತು ಆಧುನಿಕ ಕಲೆ-ಸಾಹಿತ್ಯ ಹಾಗೂ ವ್ಯಕ್ತಿ ಪ್ರಸಂಗಗಳಲ್ಲಿ ಮೈನವಿರೇಳುವಂತೆ ನಿರೂಪಿತವಾಗಿರುವ ಅತೀಂದ್ರಿಯಾನುಭವಗಳ ಸತ್ಯಾಸತ್ಯತೆಯ ಬಗ್ಗೆ ವೈಜ್ಞಾನಿಕ ಪರಿಶೀಲನೆ ಪ್ರಾರಂಭವಾದುದು ಕಳೆದ ಶತಮಾನದ ಅಂತ್ಯಭಾಗದಲ್ಲಿ. ಆಗ ಇಂಗ್ಲೆಂಡಿನಲ್ಲಿ ಸ್ಥಾಪಿತವಾದ 'ಅತೀಂದ್ರಿಯಾನುಭವ ಸಂಶೋಧನಾ ಸಂಸ್ಥೆ'(society for psychical research) ಯು ಪ್ರಾಕೃತಿಕವೆನಿಸಿದ ಅತೀಂದ್ರಿಯಾನುಭವಗಳ ಬಗ್ಗೆ ವಸ್ತುನಿಷ್ಠ ಮಾಹಿತಿಗಳನ್ನು ಸಂಗ್ರಹಿಸಿ ವಿಮರ್ಶಾತ್ಮಕ ಪರಿಶೀಲನೆಗೆ ಒಳಪಡಿಸುವ ಕಾರ್ಯಕ್ಕೆಗೊಂಡಿತು. ಆ ಸಂಸ್ಥೆಯ ಸದಸ್ಯರ ನಿರಂತರ ಪರಿಶ್ರಮದಿಂದಾಗಿ ಹಲವು ಅತೀಂದ್ರಿಯಾನುಭವ ಪ್ರಸಂಗಗಳ, ಸಂಗ್ರಹ ಸಾಧ್ಯವಾಗಿ ಎರಡು ಬೃಹತ್ ಸಂಪುಟಗಳಲ್ಲಿ 'phantasms of the diving' ಎಂಬ ಗ್ರಂಥ ಪ್ರಕಟವಾಯಿತು. ಈ ಗ್ರಂಥದಲ್ಲಿ ೭೦೨ ರೋಮಾಂಚನಕಾರಿ ಅತೀಂದ್ರಿಯಾನುಭವಗಳನ್ನು ವರದಿಮಾಡಲಾಗಿದೆ. ಆ ಪ್ರಸಂಗಗಳೂ ವೈವಿಧ್ಯಪೂರ್ಣವಾಗಿವೆ. 'ಮನೋಸಂವಾದ' (telepathy), ಮನೋದರ್ಶನ(clairvoyance), ಮುಂಗಾಣ್ಕೆ(precognition), ಮನೋಚಾಲನೆ(psychokinesci), ಪ್ರೇತ ಸಂಪರ್ಕ ಮುಂತಾದ ಹಲವು ರೀತಿಯ ಅತೀಂದ್ರಿಯಾನುಭವಗಳ ವಿಮರ್ಶಾತ್ಮಕನಿರೂಪಣೆಯನ್ನು ಈ ಗ್ರಂಥದಲ್ಲಿ ಕೊಡಲಾಗಿದೆ. ಆದರೆ, ಪ್ರಾಕೃತಿಕವಾಗಿ ಉಂಟಾದುವೆಂದು ಹೇಳಲಾದ ಪ್ರಸಂಗಗಳ ಅಧ್ಯಯನಗಳು, ಅತೀಂದ್ರಿಯಾನುಭವಗಳು ಸತ್ಯಾಸತ್ಯತೆಯ ಬಗ್ಗೆ ನಿಖರವೆನಿಸುವಂತಹ ಮಾಹಿತಿ ಒದಗಿಸುವುದರಲ್ಲಿ ನಿರರ್ಥಕವೆನಿಸಿದವು. ಅತೀಂದ್ರಿಯಾನುಭವದ ನಿಯೋಗಿ (mediums)ಗಳೆನಿಸಿದ ವ್ಯಕ್ತಿಗಳ ಮೇಲೆ ನಡೆಸಲಾದ ಅಧ್ಯಯನಗಳೂ ಕೂಡ ನಿಖರ ಮಾಹಿತಿಯೊದಗಿಸಲು ಅಷ್ಟಾಗಿ ಸಮರ್ಥವಾಗಲಿಲ್ಲ. ೧೯೩೦ರಲ್ಲಿ, ಸುಪ್ರಸಿದ್ಧ ಮನೋವಿಜ್ಞಾನಿ ವಿಲಿಯಂ ಮೆಗ್‌ಡಾನಲನ ಮಾರ್ಗದರ್ಶನದಲ್ಲಿ, ಸುಪ್ರಸಿದ್ಧ ಪರಾಮೋವಿಜ್ಞಾನಿ ಜೆ.ಬಿ. ರೈನ್ ಅಮೆರಿಕೆಯ ಡ್ಯೂಕ್ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿದ ಪರಾಮನೋವಿಜ್ಞಾನ ಪ್ರಯೋಗಾಲಯವು ಈ ವಿದ್ಯಾಕ್ಷೇತ್ರದ ಕಾರ್ಯಕರ್ತರಲ್ಲಿ ಒಂದು ನವಚೇತನವನ್ನುಂಟು ಮಾಡಿತೆಂದು ಹೇಳಬಹುದು. ರೈನ್ ಮತ್ತು ಆತನ ಅನುಯಾಯಿಗಳು, ಒಂದು ನೂತನ ಪ್ರಯೋಗ ವಿಧಾನವನ್ನೇ ರೂಪಿಸಿ, ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳುತ್ತ, ಅತೀಂದ್ರಿಯ ಪ್ರತ್ಯಕ್ಷಣ(extrasensory perception)ದ ಬಗ್ಗೆ ಹಲವಾರು ಪ್ರಯೋಗಗಳನ್ನು ನಡೆಸಿ, ದೊರೆತ ತಥ್ಯಾಂಶಗಳಿಗೆ ವಿಮರ್ಶಾತ್ಮಕ ಅರ್ಥವಿವರಣೆ ನೀಡಿ ಪ್ರಕಟಿಸಿದರು. ಈ ಸಂಶೋಧನಾ ತಂಡದ ಕಾರ್ಯತಂತ್ರ ಮತ್ತು ಅನುಭವಗಳಿಂದ ಪ್ರೇರಿತರಾಗಿ, ಜಗತ್ತಿನ ನಾನಾಭಾಗಗಳಲ್ಲಿ ಕೆಲವು ಮನೋವಿಜ್ಞಾನಿಗಳೂ ಪ್ರಯೋಗಗಳನ್ನು ನಡೆಸಿ ಗಣನೀಯ ಮಾಹಿತಿಗಳನ್ನು ಸಂಗ್ರಹಿಸಿದರು. ಭಾರತದಲ್ಲಿಯೂ ರಾಜಸ್ಥಾನ, ಮೈಸೂರು, ಆಂಧ್ರ ಮುಂತಾದ ವಿಶ್ವ ವಿದ್ಯಾಲಯಗಳೂ ಈ ಕ್ಷೇತ್ರದಲ್ಲಿ ಕೆಲವು ಅಧ್ಯಯನಗಳನ್ನು ನಡೆಸಿದ್ದು ಗಮನಾರ್ಹ. ಆಂಧ್ರ ವಿಶ್ವ ವಿದ್ಯಾಲಯದ ಮನೋವಿಜ್ಞಾನ

ವಿಭಾಗದಲ್ಲಿ ಅತೀಂದ್ರಿಯಾನುಭವಗಳ ಅಧ್ಯಯನ ಪ್ರಧಾನವಾಗಿದೆ.

ಜೆ.ಬಿ.ರೈನ್ ಮತ್ತು ಅನುಯಾಯಿಗಳು ತಮ್ಮ ಪ್ರಯೋಗಗಳಲ್ಲಿ ವಿಶೇಷವಾಗಿ ಸಿದ್ಧಪಡಿಸಿದ ಸೀನರ್ ಎಂಬ ಹೆಸರಿನ ಕಾರ್ಡುಗಳನ್ನು ಬಳಸಿದರು. ಇಪ್ಪತ್ತೈದು ಕಾರ್ಡುಗಳಿರುತ್ತಿದ್ದ ಒಂದು ಪ್ಯಾಕ್. ಒಂದೊಂದು ಕಾರ್ಡಿನ ಮೇಲೂ, ವೃತ್ತ, ಚೌಕ, ಕತ್ತರಿ, ನಕ್ಷತ್ರ ಮತ್ತು ತರಂಗ ಸೂಚಿಸಾಲುಗಳು ಈ ಸಂಕೇತಗಳಲ್ಲಿ ಒಂದಲ್ಲ ಒಂದು ಇರುತ್ತದೆ. ಆ ಕಾರ್ಡುಗಳನ್ನೆಲ್ಲಾ ಚೆನ್ನಾಗಿ ಕಲಸಿ'ನಿಯೋಗಿ'(pent)ಯ ಮುಂದಿಟ್ಟು, ಆತನ ಒಂದಾದ ಮೇಲೊಂದರಂತೆ ಆ ಕಾರ್ಡುಗಳನ್ನು ನೆಟ್ಟ ದೃಷ್ಟಿಯಿಂದ ನೋಡಬೇಕೆಂದು ಹೇಳುತ್ತಾರೆ. ದೂರದ ಕೊಠಡಿಯೊಂದರಲ್ಲಿ ಕುಳಿತಿರುವ'ಗ್ರಾಹಕ'(receiver)ನು, ನಿಯೋಗಿಯು ದೃಷ್ಟಿಸುತ್ತಿರುವ ಕಾರ್ಡುಗಳ ಕ್ರಮವನ್ನು ಊಹಿಸಿ ಬರೆಯಬೇಕು. ಹೀಗೆ ಹಲವಾರು ಸಲ ಪ್ರಯತ್ನಪಟ್ಟು ಅನಂತರ, ಗ್ರಾಹಕನ ಊಹೆಗಳನ್ನು ಸಂಭವತೆ(probability) ಸಿದ್ಧಾಂತದ ಆಧಾರದ ಮೇಲೆ ವಿಶ್ಲೇಷಿಸಿ, ಅರ್ಥವಿವರಣೆ ಕೊಡಲಾಗುತ್ತದೆ. ಗ್ರಾಹಕನ ಊಹೆಗಳು, ಆಕಸ್ಮಿಕವಾಗಿ ಸಂಭವಿಸಬಹುದಾದ ಸಂಖ್ಯೆಗಿಂತ ಗಣನೀಯವಾಗಿ ಅಧಿಕವಾಗಿದ್ದರೆ, ಆತನು ಅತೀಂದ್ರಿಯಾನಭವದ ಮೂಲಕ ಪ್ಯಾಕ್‌ನಲ್ಲಿದ್ದ ಕಾರ್ಡುಗಳ ಅನುಕ್ರಮವನ್ನು ಗುರುತಿಸಿದನೆಂದು ಹೇಳಲಾಗುತ್ತದೆ.

ರೈನ್ ಮತ್ತು ಅನುಯಾಯಿಗಳು ಪ್ರಾರಂಭದಲ್ಲಿ 'ಮನೋಸಂವಾದದ ಬಗ್ಗೆ ಪ್ರಯೋಗಗಳನ್ನು ನಡೆಸಿದರು. ಅನಂತರ 'ಮನೋದರ್ಶನ' ಮತ್ತು 'ಮುಂಗಾಣ್ಕೆ'ಗಳ ಮೇಲೂ ಪ್ರಯೋಗಗಳು ನಡೆದು, ಈ ವಿದ್ಯಮಾನಗಳ ಅಸ್ತಿತ್ವದ ಬಗ್ಗೆ ಆಶ್ಚರ್ಯಮೂಡಿತು. ಈ ಮೂರೂ ವಿದ್ಯಮಾನಗಳನ್ನು ಒಟ್ಟು ಸೇರಿಸಿ ರೈನ್ ಅತೀಂದ್ರಿಯ ಪ್ರತ್ಯಕ್ಷಣ (Extrasensory perception) ಎಂದು ಕರೆದ. ರೈನನ ಮಾದರಿಯನ್ನನುಸರಿಸಿ ಇಲ್ಲಿಯವರೆಗೆ ನಡೆದಿರುವ ಪ್ರಯೋಗಗಳಿಂದ ಮನೋಸಂವಾದ ಮತ್ತು ಮನೋದರ್ಶನಗಳ ಇರುವಿಕೆಯ ಬಗ್ಗೆ ಪ್ರಬಲ ಪ್ರಾಕ್ಕಲ್ಪನೆಗಳ ರೂಪಣೆಗೆ ಸಾಧ್ಯವಾಗಿದೆ. ಆದರೆ ಮುಂಗಾಣ್ಕೆಯ ಬಗ್ಗೆ ಅಷ್ಟಾಗಿ ಭರವಸೆ ಇನ್ನೂ ಮೂಡಿಲ್ಲವೆಂದೇ ಹೇಳಬೇಕು.

ಮನೋದರ್ಶನ ಮತ್ತು ಮನೋಸಂವಾದಗಳಂತಹ ಅತೀಂದ್ರಿಯಾನುಭವಗಳಿಗೂ ಹಾಗೂ ವ್ಯಕ್ತಿಗತ ಸ್ಥಿತಿಗತಿಗಳಿಗೂ ಸಂಬಂಧವಿರುವುದು ಕೆಲವು ಅಧ್ಯಯನಗಳಿಂದ ಹೊರಬಿದ್ದಿದೆ. ಭಾವೋದ್ವೇಗ ಪೂರಿತ ಸನ್ನಿವೇಶಗಳಲ್ಲಿ ಅತೀಂದ್ರಿಯಾನುಭವಗಳ ಸಾಧ್ಯತೆ ಹೆಚ್ಚು. ಆತ್ಮೀಯ ಸಂಬಂಧಿಗಳು ಹಾಗೂ ಸ್ನೇಹಿತರ ನಡುವೆ ಭಾವಾತ್ಮಕ ಸನ್ನಿವೇಶಗಳಲ್ಲಿ ಮನೋಸಂವಾದ ತಾನೇ ತಾನಾಗಿ ಕಾಣಿಸಿಕೊಳ್ಳುವ ಸಂಭವವಿದೆ. ಅತೀಂದ್ರಿಯಾನುಭವಗಳ ಬಗ್ಗೆ ಒಲವುಳ್ಳ, ಮುಕ್ತಮನಸ್ಕ ಹಾಗೂ ಉಲ್ಲಾಸಕರ ಪ್ರವೃತ್ತಿಯ ವ್ಯಕ್ತಿಗಳಲ್ಲಿ ಈ ಅನುಭವಗಳ ಸಾಧ್ಯತೆ ಹೆಚ್ಚು. ವಿದ್ಯಾವಂತರಿಗಿಂತ ಅವಿದ್ಯಾವಂತರಲ್ಲಿ ಈ ಅನುಭವಗಳ ಸಾಧ್ಯತೆ ಹೆಚ್ಚೆಂದು ಕಂಡುಬಂದಿದೆ. ಒಟ್ಟನಲ್ಲಿ ಮನೋಸಂವಾದ ಮತ್ತು ಮನೋದರ್ಶನಗಳು ನೈಸರ್ಗಿಕ ನಿಯಮಗಳಿಗನುಸಾರವಾಗಿಯೇ ಉಂಟಾಗುತ್ತವೆ ಎಂಬ ಅಭಿಪ್ರಾಯಕ್ಕೆ ಈಗ ಹೆಚ್ಚು ಹೆಚ್ಚು ಪ್ರಾಮುಖ್ಯತೆ ಬರುತ್ತಿದೆ. ಇವು ಮೇಲ್ಮಟ್ಟದ ಮನಃಶಕ್ತಿಗಳೆನಿಸಿ, ಹಲವರಲ್ಲಿ ಗೌಣವಾಗಿಯೂ ಕೆಲವರಲ್ಲಿ ಹೆಚ್ಚು ಪ್ರಕಟವಾಗಿಯೂ ಕಂಡುಬರುತ್ತವೆ ಎಂಬ ಅಭಿಪ್ರಾಯ ಪರಿಶೀಲನಯೋಗ್ಯವಾಗಿದೆ. ಗಗನಯಾತ್ರಿ ಎಡ್ಗರ್ ಮಿಟ್‌ಚೆಲ್ ತನ್ನ ಅತಲೋ ಯಾನವೊಂದರಲ್ಲಿ ೨೫ ಸಂಕೇತಗಳ ಮೇಲೆ ಏಕಾಗ್ರದೃಷ್ಟಿಯಿಟ್ಟಾಗ, ಆತನ ಅನುಭವಗಳನ್ನು

ಭೂಮಿಯಲ್ಲಿದ್ದ ಕೆಲವರು ಗ್ರಹಿಸಿದ ವರದಿ ಕುತೂಹಲಕಾರಿಯಾಗಿದೆ. ಹಾಗೆಯೇ ಗ್ರಿಗರಿ ರಾಸ್ರನ್ ಚರ್ಮದೃಷ್ಟಿ ಪ್ರತ್ಯಕ್ಷಣ (Dermo-optical perception) ದ ಬಗ್ಗೆ ನಡೆಸಿದ ಪ್ರಯೋಗಗಳೂ, ಅತೀಂದ್ರಿಯಾನುಭವಗಳ ಸ್ವಭಾವವನ್ನು ತಿಳಿಯುವುದರಲ್ಲಿ ಹೆಚ್ಚು ಆಶಾದಾಯಕವಾಗಿದೆ. ಈ ಪ್ರಯೋಗಗಳಲ್ಲಿ, ಪೂರ್ಣವಾಗಿ ಕಣ್ಣುಕಟ್ಟಿಸಿಕೊಂಡ ವ್ಯಕ್ತಿಗಳು ತಮ್ಮ ಬೆರಳು ಸ್ಪರ್ಶದ ಮೂಲಕ ಬಣ್ಣಗಳನ್ನು ಗುರುತಿಸಲು ಸಮರ್ಥರಾದುದು ಗಮನಾರ್ಹ ಅಂಶ. ಈ ದಿಸೆಯಲ್ಲಿ ರಷ್ಯ ಪರಾಮನೋವಿಜ್ಞಾನಿಗಳ ಪ್ರಯತ್ನವು ಸಫಲವಾಗುವುದಾದರೆ, ಭೌತನಿಯಮಗಳಿನು ಸಾರವಾಗಿಯೇ ಅತೀಂದ್ರಿಯವೆನಿಸುವ ಘಟನೆಗಳು ಜರುಗುತ್ತವೆ ಎಂಬ ಅಂಶ ಸ್ಪಷ್ಟವಾದೀತು.

ಸತ್ತನಂತರ ಚೇತನವು ಉಳಿಯುತ್ತದೆಯೋ ಇಲ್ಲವೋ ಎಂಬುದರ ಬಗ್ಗೆಯೂ ಕೆಲವು ಪರಾಮನೋವಿಜ್ಞಾನಿಗಳು ಪರಿಶೀಲನೆ ನಡೆಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಧಾರ್ಮಿಕ ನಂಬಿಕೆಗಳಲ್ಲಿ ಗಣನೀಯ ಭೇದವಿದೆ. ಉದಾಹರಣೆಗೆ ಕ್ರೈಸ್ತ ಧರ್ಮಿಯರು ಪುನರ್ಜನ್ಮ ಒಪ್ಪರು. ಹಿಂದೂಗಳು, ಜೈನರು ಪುನರ್ಜನ್ಮ ನಂಬುತ್ತಾರೆ. ಕ್ರೈಸ್ತ ಧರ್ಮದ ನಂಬಿಕೆಯಂತೆ ಪ್ರೇತಾತ್ಮಗಳೊಡನೆ ಸಂವಾದ ನಡೆಸುವುದರ ಸಾಧ್ಯಾಸಾಧ್ಯತೆಯ ಬಗ್ಗೆ ಪರಿಶೀಲನೆ ನಡೆಯುತ್ತಿದ್ದರೆ, ಪುನರ್ಜನ್ಮದಲ್ಲಿ ನಂಬುಗೆಯುಳ್ಳ ಸಂಸ್ಕೃತಿಗಳಲ್ಲಿ, ಪೂರ್ವಜನ್ಮ ಸ್ಮರಣೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಆದರೆ, ಇಂತಹ ಪರಿಶೀಲನೆಗಳಿಗೆ ಯಾವುದೇ ಗೊತ್ತಾದ ವೈಜ್ಞಾನಿಕ ಧೃತಿಕಲ್ಪನೆಗಳ ನೆರವಿದ್ದಂತಿಲ್ಲ. ಹೀಗಾಗಿ ಇಂತಹ ಯಾವುದೇ ಪ್ರಯತ್ನದಿಂದ ಹೊರಬೀಳುವ ತಥ್ಯಾಂಶಗಳನ್ನು ಬಹು ಜಾಗರೂಕತೆಯಿಂದ ಪರಿಶೀಲಿಸುವ ಅಗತ್ಯವಿದೆ. ಹಾಗಿಲ್ಲದಿದ್ದಲ್ಲಿ, ವಿಜ್ಞಾನದ ಹೆಸರಿನಲ್ಲಿ, ಧರ್ಮದ ಹೆಸರಿಲ್ಲಾಗುವ ಅನ್ಯಾಯ ಅತ್ಯಾಚಾರಗಳಿಗಿಂತ ಮಿಗಿಲಾದ ಘೋರ ಪರಿಣಾಮಗಳು ಆಗುವ ಸಾಧ್ಯತೆ ಇದೆ. ಈ ಕಾರಣದಿಂದ ಪರಮಾನೋವಿಜ್ಞಾನಿಗಳೆನಿಸಿಕೊಂಡವರ ಸಾಮಾಜಿಕ ಹೊಣೆಗಾರಿಕೆ ಹೆಚ್ಚು. ಅತೀಂದ್ರಿಯಾನುಭವದ ಸೋಗು ಹಾಕಿ ಅಜ್ಞಾನಿ ಜನರನ್ನು ವಂಚಿಸಿ ಸುಲಿಗೆ ಮಾಡುವಂತಹ ಧೂರ್ತಜನರನ್ನು ವಸ್ತುನಿಷ್ಠ ಪರಿಶೀಲನೆಗೆ ಒಳಪಡಿಸುವಲ್ಲಿ ದಿವಂಗತ ಡಾ. ಕೋವೂರರಂತವರು ಧೈರ್ಯ ಸ್ಥೈರ್ಯಗಳನ್ನು ಹೊಂದಿರಬೇಕಾಗುತ್ತದೆ.

ಕೆಲವು ಅತೀಂದ್ರಿಯಾನುಭವಗಳನ್ನು ನಮಗೆ ಗೊತ್ತಿರುವ ವೈಜ್ಞಾನಿಕ ವಿಧಾನಗಳಿಂದ ಪರಿಶೀಲಿಸಲು ಸಾಧ್ಯವಿಲ್ಲವೆಂಬ ವಾದವೂ ಕೇಳಿಬರುತ್ತಿದೆ. ಇಂತಹ ವಾದದಲ್ಲಿ ಹುರುಳಿರುವುದಾದರೆ, ಪರಿಶೀಲನೆಗೆ ಅಗತ್ಯವೆನಿಸುವ ಹೊಸ ಹೊಸ ವೈಜ್ಞಾನಿಕ ತಂತ್ರಗಳನ್ನು ರೂಪಿಸಿಕೊಳ್ಳುವ ಅಗತ್ಯವೂ ಇದೆ.

ಮನೋಸಂವಾದ, ಮನೋದರ್ಶನಗಳಂತಹ ಅತೀಂದ್ರಿಯಾನುಭವಗಳ ಸಾಧ್ಯತೆಯನ್ನೂ ಪ್ರಾಕೃತಿಕ ನಿಯಮಗಳ ಪರಿಮಿತಿಯಲ್ಲೇ ಪರಿಶೀಲಿಸಲು ಸಾಧ್ಯವೆಂಬ ಅಭಿಪ್ರಾಯಕ್ಕೆ ಮಾನ್ಯತೆ ಹೆಚ್ಚುತ್ತಿದೆ. ಇದಕ್ಕೆ ಸಂಬಂಧಿಸಿದಂತೆ ಹೆಚ್ಚು ಹೆಚ್ಚು ವಸ್ತುನಿಷ್ಠ ಅಧ್ಯಯನಗಳು ನಡೆಯುವಂತಾದರೆ, ಬಹುಶಃ ಅನೇಕ ಉಪಯುಕ್ತ ಅಂಶಗಳು ಬೆಳಕಿಗೆ ಬಂದು, ಜನತೆಯಲ್ಲಿ ಮನೆಮಾಡಿಕೊಂಡಿರುವ ಮೂಢನಂಬಿಕೆಗಳು ಅಳಿಯಲು, ಹಾಗೂ ಈ ಮನಶ್ಶಕ್ತಿಗಳನ್ನು ಜನತೆಯ ಶ್ರೇಯಸ್ಸಿಗೆ ಬಳಸಿಕೊಳ್ಳಲು ಅನುವಾದೀತು.

●

ಬೇಲಿ ಆಚೆ

* ರಾಜೇಂದ್ರ ಅಣ್ಣಾನವರ

ಬಿದಿಗೆ ಹಣೆ ದುಂಡುಕೆಂಪು
ಬೆಂಡಿಕಾಯ ಬೆರಳ ಮುರುಟ
ಕಯ್ಯ ತುಂಬ ಹಸಿರು,
ಕೊರಳ ಸುತ್ತು ಕಪ್ಪು ಮಿಂಚು
ಎದೆಯ ಬಿಗಿದ ಹಳದಿ ಪದಕ
ಉಸಿರ ಜಗ್ಗುವ ಮೂಗುತಿ
ಕಾಲಬೆರಳ ಬೆಳ್ಳಿಕೋಳ
ತೊಡಿಸಿ ಬಿಗಿಸಿದ ಚಿಲಕನಾರಿ
ಕಾಮ ಕಾಮಣಿ ಕಣ್ಣಿಗೂ
ಬಂಧ ಬಂಧನದ ಗೋಡೆಗೂ
ಮುಚ್ಚಿಕೊಂಡ ಬಾಗಿಲ ಬಾಳು;
ಒಳಕಾವಿಗೆ ರೋಮ ನಿಮಿರುತ
ಅನ್ನ.ಸರಿಟ್ಟ ತಳಮಳ
ವಿರಹ ಕುದಿ ; ಹಸಿರು ಕಂಡ
ತುರಮಂದಿ ಹೋರಿಮನ;
ಹಿತ್ತಲ ಬಳ್ಳಿ ಬೇಲಿ ಆಚೆಗೂ
ಅಲುಗಾಡಿ ಸುಳಿದಾಡಿರಲು
ಹಾಸುಕೊಂಡಿತು ಕತ್ತಲು
ಹೊದಿಕೆಯಾಯಿತು ಮುಗಿಲು
ಧಗ ಧಗ ಉರಿವ ಒಲೆಗೆ
ಪಳ ಪಳ ಕಾಮನ ಬಿಲ್ಲಿಗೆ
ದಾರಿಡೊಂಕ ಮುತ್ತಿಕೊಂಡು
ಓಡುತ್ತಿದೆ ಮೋಡ ಗಾಳಿ
ನೋಡುತ್ತಿದೆ
ಮಿಳುಕಿಸದ ಚಿಕ್ಕೆಗಳು
ಬಾಯಿತೆರೆದ ಚಂದಿರ

ಕನ್ನಡ ಕಾವ್ಯದಲ್ಲಿ ನವ್ಯತೆ

* ವೀರಣ್ಣ ರಾಜೂರ

ಬದುಕು ಚಲನಶೀಲ. ಬದಲಾವಣೆ ಅದರ ಜೀವಂತಿಕೆಯ ಲಕ್ಷಣ. ಬದುಕಿನ ಅಭಿವ್ಯಕ್ತಿಯಾದ ಸಾಹಿತ್ಯದಲ್ಲಿಯೂ ಈ ಬದಲಾವಣೆ ಕಾಲಕಾಲಕ್ಕೆ ನಡೆಯುತ್ತಬಂದಿದೆ. ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯಕ್ಕೂ ಈ ಮಾತು ಅನ್ವಯಿಸುತ್ತದೆ. ಕನ್ನಡ ಸಾಹಿತ್ಯ ಇದಕ್ಕೆ ಹೊರತೇನಲ್ಲ.

ಸಾವಿರ ವರುಷಕ್ಕೂ ಮೀರಿದ ಇತಿಹಾಸವುಳ್ಳ ಕನ್ನಡ ಸಾಹಿತ್ಯಪರಂಪರೆಯಲ್ಲಿ ಕಾಲಮಾನದ ಅಗತ್ಯಕ್ಕನುಗುಣವಾಗಿ ವಿಭಿನ್ನ ವಸ್ತು-ರೂಪ-ಭಾಷೆ, ಆಶಯ-ಆಕೃತಿ, ಸತ್ವ-ಸಂವೇದನೆ, ದೃಷ್ಟಿ-ಧೋರಣೆಗಳನ್ನೊಳಗೊಂಡ ಸಾಹಿತ್ಯ ಸಂಪ್ರದಾಯಗಳು ತಲೆದೋರುತ್ತಬಂದಿವೆ.

ಆರಂಭದ ಪ್ರಾಚೀನ ಕನ್ನಡ ಸಾಹಿತ್ಯ, ಧರ್ಮ-ರಾಜಾಶ್ರಯ-ಸಂಸ್ಕೃತ ಭಾಷಾ ಸಾಹಿತ್ಯ ಪರಂಪರೆ ಮತ್ತು ದೇಶೀಸಂಸ್ಕೃತಿಯಿಂದ ಪ್ರಭಾವ-ಪ್ರೇರಣೆಗಳನ್ನು ಪಡೆದು, ಸಿದ್ಧವಸ್ತು, ಚಂಪೂರೂಪ, ಸಂಸ್ಕೃತಜನ್ಯ ಪ್ರೌಢಭಾಷೆ, ಮಾರ್ಗಶೈಲಿಗಳನ್ನು ಅಳವಡಿಸಿಕೊಂಡು, ಧರ್ಮತತ್ವ ಪ್ರತಿಪಾದನೆ, ವೀರಮೌಲ್ಯಪ್ರಕಟನೆ, ಪಾಂಡಿತ್ಯಪ್ರದರ್ಶನ, ವಿದ್ವಜ್ಜನಮನ್ನಣೆಗಳೆಂಬ ಆಶಯಗಳನ್ನಿಟ್ಟುಕೊಂಡು ಹುಟ್ಟಿ ತನ್ನ ಗಟ್ಟಿಯಾದ ನೆಲೆಯನ್ನು ಸ್ಥಾಪಿಸಿತು. ಈ ಮಾರ್ಗದಲ್ಲಿ ಅನೇಕ ಕವಿಗಳು ನಡೆದು, ಉತ್ತಮ ಕೃತಿಗಳನ್ನು ರಚಿಸಿ ಸುವರ್ಣಯುಗದ ಖ್ಯಾತಿಯನ್ನು ತಂದುಕೊಟ್ಟರು. ಇದು ಹಳಗನ್ನಡ ಸಾಹಿತ್ಯಯುಗವೆಂದು ಪ್ರಸಿದ್ಧಿಯನ್ನು ಪಡೆಯಿತು.

ಹನ್ನೆರಡನೆಯ ಶತಮಾನಕ್ಕೆ ಬರುವಷ್ಟರಲ್ಲಿ ಈ ಸಾಹಿತ್ಯಸಂಪ್ರದಾಯದ ಸಾಧ್ಯತೆಗಳೆಲ್ಲ ತೀರಿ ಹೋಗಿ, ಹೊಸತನದಿಂದ ವಿಮುಖವಾಗಿ, ತನ್ನನ್ನೇ ತಾನು ಅನುಕರಿಸುತ್ತ, ತತ್ಕಾಲೀನ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಅದರ ಅಗತ್ಯಗಳನ್ನು ಪೂರೈಸದೆ ವಿಫಲವಾಯಿತು. ಕಾಲ ಹೊಸ ಸಾಹಿತ್ಯ-ಸಂವೇದನೆಗಳ ನಿರೀಕ್ಷಣೆಗೆ ತೊಡಗಿತು. ಆಗ 'ವಚನ ಸಾಹಿತ್ಯ' ರೂಪದಳೆಯಿತು. ಸಮಾಜೋಧಾರ್ಮಿಕ ಚಳುವಳಿಯ ಮೂಲಕ ಜಡಗಟ್ಟಿದ ವ್ಯವಸ್ಥೆಯನ್ನು ಒಡೆದು ಚಲನಶೀಲಗೊಳಿಸಲು ಬಂದ ಶರಣರು. ಈ ರೂಪವನ್ನು ತಮ್ಮ ಚಳುವಳಿಯ ಮಾಧ್ಯಮವನ್ನಾಗಿ ಮಾಡಿಕೊಂಡು, ತನ್ಮೂಲಕ ಹಿಂದಿನ ಮಾರ್ಗಸಾಹಿತ್ಯಪರಂಪರೆಯ ವ್ಯವಸ್ಥೆಯನ್ನೆಲ್ಲ ಮುರಿದು, ಸಾಹಿತ್ಯಕ್ಷೇತ್ರದಲ್ಲಿ ನೂತನ ಆವಿಷ್ಕಾರವನ್ನು ಮಾಡಿದರು. ವಸ್ತುನಿಷ್ಠತೆ, ಪ್ರೌಢತೆಗಳು ಹಿಂದೆ ಸರಿದು, ವ್ಯಕ್ತಿನಿಷ್ಠತೆ, ವೈಚಾರಿಕತೆ, ಸರಳತೆ, ಜನಪರತೆ, ಸಾರ್ವಕಾಲಿಕ ಸತ್ಯಗಳು ಸಾಹಿತ್ಯ ಕ್ಷೇತ್ರದಲ್ಲಿ ಅಡಿಯಿಟ್ಟವು. ದೇಶೀ ಭಾಷೇ, ಭಕ್ತಿ ಮೌಲ್ಯ, ಜನಪರ ನಿಲುವುಗಳು ಸಾಹಿತ್ಯದ ಜೀವವಾಹಿನಿ ಎನಿಸಿದವು. ಈ ರೂಪದಲ್ಲಿ ಸಮೃದ್ಧ ಸಾಹಿತ್ಯಸೃಷ್ಟಿ ನಡೆಯಿತು. ಆದರೆ ಕಲ್ಯಾಣಕ್ರಾಂತಿಯಿಂದಾಗಿ ಅದು ಥಟ್ಟನೆ ಸ್ಥಗಿತಗೊಂಡಿತು.

'ಪ್ರತಿಭಾವಂತ ಸಾಹಿತ್ಯ ಶಿಲ್ಪಿ ಹೊಸ ಸಾಹಿತ್ಯ ರೂಪವನ್ನು ಹುಟ್ಟು ಹಾಕುತ್ತಾನೆ' ಎನ್ನುವಂತೆ ವಚನಕಾರರ ನಂತರ ಹರಿಹರ ರಗಳೆರೂಪದಲ್ಲಿ ಕಾವ್ಯರಚಿಸಿ ಕನ್ನಡ ಸಾಹಿತ್ಯಕ್ಕೆ ಮತ್ತೊಂದು ಹೊಸ ಆಯಾಮವನ್ನು ತಂದುಕೊಟ್ಟ. ಅದೇ ವೇಳೆಗೆ ಮತ್ತೊಬ್ಬ ಪ್ರತಿಭಾವಂತ ಕವಿ ರಾಘವಾಂಕ

ಷಟ್ಪದಿರೂಪವನ್ನು ಸಾಹಿತ್ಯದ ಗದ್ದುಗೆಯನ್ನೇರಿಸಿದ. ಮುಂದೆ ಸಾಂಗತ್ಯ, ಕೀರ್ತನೆಗಳೆಂಬ ನೂತನ ರೂಪಗಳು ಸಾಹಿತ್ಯ ಮಾಧ್ಯಮಗಳಾಗಿ ವೈವಿಧ್ಯವನ್ನು ಸಾಧಿಸಿದವು. ಹೀಗೆ ೧೮ನೆಯ ಶತಮಾನದ ವರೆಗೆ ಈ ಪರಂಪರೆ ಮುಂದುವರೆಯಿತು. ಇದು ನಡುಗನ್ನಡ ಸಾಹಿತ್ಯಯುಗವೆಂದು ಕರೆಯಿಸಿಕೊಂಡಿತು.

೧೯ನೆಯ ಶತಮಾನ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯನ್ನು ತಂದ ಕಾಲ. ಭಾರತ ಸ್ವಾತಂತ್ರ್ಯಚಳುವಳಿ ಹಾಗೂ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಗಳ ಗಾಢ ಪ್ರಭಾವದಿಂದಾಗಿ ಸಾಹಿತ್ಯದ ಮೂಲ ಸ್ವರೂಪವೇ ಬದಲಾಯಿತು. ೧೯೨೧ರಲ್ಲಿ ಬಿ.ಎಂ.ಶ್ರೀ. ಅವರು ಪ್ರಕಟಿಸಿದ 'ಇಂಗ್ಲೀಷ ಗೀತೆಗಳು' ಕನ್ನಡ ಸಾಹಿತ್ಯದಲ್ಲಿ ಒಂದು ಐತಿಹಾಸಿಕ ಘಟನೆ ಎನಿಸಿತು. ಕನ್ನಡ ಕಾವ್ಯದಲ್ಲಿ ಹೊಸಜೀವ ಸಂಚಾರವಾಗಿ ಕನ್ನಡದಲ್ಲಿ ನಿಜವಾದ ಆಧುನಿಕಯುಗ ಆರಂಭವಾಯಿತು. ಹೊಸ ರೂಪ-ಸಂವೇದನೆ-ಆಶಯಗಳನ್ನು ಆವಿಷ್ಕರಿಸಿಕೊಂಡು ಬಂದ ಈ ಸಾಹಿತ್ಯರೂಪಕ್ಕೆ 'ನವೋದಯ ಕಾವ್ಯ' ಅಥವಾ 'ರಮ್ಯಕಾವ್ಯ' ಎಂದು ಕರೆಯಲಾಯಿತು.

'ಸಾಮಾನ್ಯ ಜನರ ಜೀವನಕ್ಕೆ ಕಾವ್ಯ ಹತ್ತಿರವಾದುದು; ಉಪದೇಶ, ನೀತಿಬೋಧೆಗೆ ಬದಲಾಗಿ ಅನುಭವದ ಕಲಾತ್ಮಕ ಅಭಿವ್ಯಕ್ತಿಗೆ ಪ್ರಾಮುಖ್ಯತೆ ದೊರೆತುದು; ಪಾರಮಾರ್ಥಿಕ ವಿಷಯಗಳಿಗಿಂತ ರಾಷ್ಟ್ರೀಯ, ಸಾಮಾಜಿಕ, ಚಾರಿತ್ರಿಕ ಮೊದಲಾದ ಲೌಕಿಕ ವಿಷಯಗಳತ್ತ ವಿಶೇಷ ಗಮನ ಹರಿದುದು; ಮಾನವನು ಕಾವ್ಯದ ಆಸಕ್ತಿಯ ಕೇಂದ್ರವೆನಿಸಿದುದು; ಅವನ ನೂರು ಆಸೆ-ಆಕಾಂಕ್ಷೆ, ಆತಂಕ, ಹಂಬಲ, ಕನಸುಗಾರಿಕೆ, ಸುಖ-ದುಃಖ, ಬೇನೆ-ಬೇಸರಿಕೆಗಳು ಕಾವ್ಯದ ವಸ್ತುವಾದುದು; ಜೀವನಶ್ರದ್ಧೆ, ಪ್ರೀತಿ, ಪ್ರೇಮ, ಒಲುಮೆ, ಆದರ್ಶ, ನಿಸರ್ಗಪ್ರೇಮ, ಅನುಕಂಪ, ತ್ಯಾಗ, ಮಾನವೀಯತೆ, ರಾಷ್ಟ್ರೀಯತೆ, ಆಧ್ಯಾತ್ಮಿಕತೆ, ಭಾವನಿಷ್ಠತೆಗಳು ಕಾವ್ಯಮೌಲ್ಯಗಳೆನಿಸಿದುದು; ಸರಳತೆ, ಆತ್ಮೀಯತೆ, ಮಧುರತೆ, ಕಾವ್ಯಭಾಷೆಯ ವೈಶಿಷ್ಟ್ಯವೆನಿಸಿದುದು; ಗೇಯತೆ, ಭಾವತೀವ್ರತೆ, ನಾದಮಯತೆ, ಉತ್ಪ್ರೇಕ್ಷೆ, ಕಲ್ಪಕತೆ, ರಮ್ಯತೆ, ಛಂದೋವೈವಿಧ್ಯಗಳು ಕಾವ್ಯದ ಶರೀರವೆನಿಸಿದುದು - ಇವೆ ಮೊದಲಾದುವು ನವೋದಯಕಾವ್ಯದ ಲಕ್ಷಣಗಳೆನಿಸಿದವು. ಕುವೆಂಪು, ಬೇಂದ್ರೆ, ಪುತಿನ, ತೀನಂಶ್ರೀ, ಕೆ.ಎಸ್.ನರಸಿಂಹಸ್ವಾಮಿ, ಚನ್ನವೀರ ಕಣವಿ, ಜಿ.ಎಸ್.ಶಿವರುದ್ರಪ್ಪ ಮೊದಲಾದವರು ಈ ಮಾರ್ಗದ ಪ್ರಮುಖ ಕವಿಗಳೆನಿಸಿ ಸಮೃದ್ಧ ಕಾವ್ಯಸೃಷ್ಟಿ ಮಾಡಿದರು. ೧೯೨೦ ರಿಂದ ೧೯೪೫ ರ ವರೆಗಿನ ಅವಧಿ ನವೋದಯಕಾವ್ಯದ ಸಂಭ್ರಮದ ಸುಗ್ಗಿಯ ಕಾಲವೆನಿಸಿತು.

೧೯೪೫ ರ ಹೊತ್ತಿಗೆ ರಶ್ಯಾದಿಂದ ಬೀಸಿದ ಹೊಸಗಾಳಿ ಕಾರಣವಾಗಿ ಕನ್ನಡದಲ್ಲಿ 'ಪ್ರಗತಿಶೀಲ' ಎಂಬ ಚಳುವಳಿಯೊಂದು ಆರಂಭವಾಯಿತು. ಅತಿ ಭಾವುಕತೆ, ಕಲ್ಪಕತೆಯಿಂದ ಕೂಡಿದ ರಮ್ಯಸಂಪ್ರದಾಯವನ್ನು ಪ್ರತಿಭಟಿಸಿ, ವಾಸ್ತವಪ್ರಜ್ಞೆ, ಸಾಮಾಜಿಕ ಕಳಕಳಿ, ಆವೇಶ-ಆದರ್ಶಗಳನ್ನು ಮುಖ್ಯ ಆಶಯಗಳನ್ನಾಗಿ ಇಟ್ಟುಕೊಂಡು ಹುಟ್ಟಿದ ಈ ಸಂಪ್ರದಾಯ, ಸಾಮಾಜಿಕ ಶುದ್ಧಿಗಾಗಿ, ತೀವ್ರ ಸ್ವರೂಪದ ಕ್ರಾಂತಿಯನ್ನೆಸಗಿತು. ಕಾವ್ಯಕ್ಕಿಂತ ಕಥೆ, ಕಾದಂಬರಿ ರೂಪಗಳಲ್ಲಿ ತನ್ನ ಸಾಧ್ಯತೆಯನ್ನು ತೋರಿದ ಇದು ಆಧುನಿಕ ಕನ್ನಡ ಸಾಹಿತ್ಯಕ್ಕೆ ವೈಶಾಲ್ಯವನ್ನು ತಂದುಕೊಟ್ಟಿತು. ಇಡೀ ಸಮಾಜದ ಚಾರಿತ್ರಿಕ ಸಂದರ್ಭದಲ್ಲಿ ಈ ಪಂಥದ ಸಾಹಿತ್ಯಕ್ಕೆ ಒಂದು ಮೌಲಿಕ ಸ್ಥಾನವಿದ್ದರೂ ಕಲಾತ್ಮಕತೆಯ ಕೊರತೆ, ಅನುಭವದ ಸರಳೀಕರಣ, ಆವೇಶದ ಅತಿರೇಕ, ಭಾಷೆಯ ಶೈಥಿಲ್ಯ, ಮಧ್ಯಮವರ್ಗದ ಬದುಕು ಕೇಂದ್ರಿತ ದೃಷ್ಟಿ ಈ ಮೊದಲಾದ ಮಿತಿಗಳಿಂದಾಗಿ ಇದು ಬಹುಬೇಗ ಹಿಂದೆಸರಿಯಿತು.

೧೯೫೦ರ ಹೊತ್ತಿಗೆ ನವೋದಯಕಾವ್ಯದ ಸತ್ವಕುಂದಿತು. ಹೊಸ ಕಾವ್ಯಮಾರ್ಗದ ಆವಶ್ಯಕತೆಯಿಂದ ಎಂಬ ಭಾವ ಬಲಿತು ನವೋದಯ ಕಾವ್ಯಮಾರ್ಗದ ಪ್ರತಿಭಟನೆಯಾಗಿ ಹೊಸ ಕಾವ್ಯಮಾರ್ಗವೊಂದು ರೂಪತಾಳಿತು. ಇದರ ಅಗತ್ಯವನ್ನು ಡಾ. ವಿ.ಕೃ.ಗೋಕಾಕ ಅವರು ಒತ್ತಿ ಹೇಳಿ ಅದಕ್ಕೆ 'ನವ್ಯಮಾರ್ಗ' ಎಂದು ಕರೆದರು. ೧೯೫೭ರ ಹೊತ್ತಿಗೆ ಗೋಪಾಲಕೃಷ್ಣ ಅಡಿಗ ಅವರು ಹೊಸ ರೀತಿಯ ಕಾವ್ಯದ ಅನಿವಾರ್ಯತೆಯನ್ನು ಪ್ರಬಲವಾಗಿ ಪ್ರತಿಪಾದಿಸಿ ಅದಕ್ಕೆ ಭದ್ರಬುನಾದಿಯನ್ನು ಹಾಕಿದರು.

ಗೋಕಾಕ ಮತ್ತು ಅಡಿಗರಿಂದ ಅಸ್ತಿತ್ವಕ್ಕೆ ಬಂದ ಈ ಕಾವ್ಯಮಾರ್ಗ 'ನವ್ಯಕಾವ್ಯ' ಎಂದು ನಿರ್ದೇಶಿಸಲ್ಪಟ್ಟಿತು. 'ನವ್ಯ' ಎಂಬ ಪದಕ್ಕೆ ಹಲವು ಅರ್ಥಸಾಧ್ಯತೆಗಳಿದ್ದರೂ ಇಲ್ಲಿ ಅದು ನವೋದಯ ಮಾರ್ಗಕ್ಕಿಂತ ಭಿನ್ನವಾದ ಕಾವ್ಯಮಾರ್ಗ ಎಂಬ ಪಾರಿಭಾಷಿಕ ಪದವಾಗಿ ಬಳಕೆಯಾಗಿದೆ.

ನವ್ಯತೆ ಮೊದಲು ಆರಂಭವಾದುದು ಫ್ರಾನ್ಸಿನಲ್ಲಿ. ನಂತರ ಅದು ಇಡೀ ಪಾಶ್ಚಾತ್ಯ ದೇಶವನ್ನೆಲ್ಲ ವ್ಯಾಪಿಸಿ, ಭಾರತವನ್ನೂ ಪ್ರವೇಶಿಸಿತು. ಕರ್ನಾಟಕಕ್ಕೂ ಕಾಲಿರಿಸಿತು. ೧೮೮೦ ರಿಂದ ೧೯೫೦ ರ ವರೆಗಿನ ಅವಧಿಯನ್ನು ಯುರೋಪಿನ ನವ್ಯಸಾಹಿತ್ಯದ ಕಾಲವೆಂದು ಗುರುತಿಸಿದರೂ ಈ ಚಳುವಳಿಯ ಉತ್ಕರ್ಷದ ಕಾಲ ೧೯೧೦ ರಿಂದ ೧೯೩೦ ರವರೆಗೆ ಎಂದು ಹೇಳಲಾಗುತ್ತದೆ.

ಪಾಶ್ಚಾತ್ಯ ಸಾಹಿತ್ಯದಲ್ಲಿ ನವ್ಯತೆ ಪ್ರವೇಶಮಾಡಲು, ಮೊದಲ ಜಾಗತಿಕ ಯುದ್ಧದ ನಂತರ ಪಾಶ್ಚಾತ್ಯರ ಬದುಕಿನಲ್ಲಾದ ಬದಲಾವಣೆ ಕಾರಣವಾಯಿತು. ಆರ್ಥಿಕ ವ್ಯವಸ್ಥೆಯ ಕುಸಿತ, ನೈತಿಕ ಅದಃಪತನ, ಮಾನವ ಸಂಬಂಧಗಳ ವಿಘಟನೆ, ಸಾಮಾಜಿಕ ಮೌಲ್ಯಗಳ ಬದಲಾವಣೆ, ಜೊತೆಗೆ ವೈಜ್ಞಾನಿಕ ಹೊಸಶೋಧಗಳು, ವೈಚಾರಿಕ ಕ್ರಾಂತಿ, ಔದ್ಯೋಗಿಕ ಬೆಳವಣಿಗೆ, ನಗರೀಕರಣ, ಕೃಷಿಪ್ರಧಾನ ಬದುಕಿನ ಅವನತಿ - ಇವುಗಳಿಂದಾಗಿ ಹಳೆಯ ಮೌಲ್ಯಗಳೆಲ್ಲ ಅರ್ಥಕಳೆದುಕೊಂಡವು. 'ಧಾರ್ಮಿಕ ನಂಬಿಕೆಗಳು ಕುಸಿದು ಆತ್ಮವಿಶ್ವಾಸ ಕಳೆದುಕೊಂಡ ವ್ಯಕ್ತಿ ಹೊಸ ಶ್ರದ್ಧೆ - ವಿಶ್ವಾಸಗಳ ವಿಫಲ ಹುಡುಕಾಟದಲ್ಲಿ ತೊಡಗಿದ'. ಇಂಥ ನಾಗರಿಕ ಬದುಕಿನ ದುರಂತವೇ ಪ್ರಧಾನ ಕಾಳಜಿಯಾಗಿ 'ನವ್ಯಕಾವ್ಯ' ಹುಟ್ಟಿಕೊಂಡಿತು.

ಟಿ.ಇ.ಹ್ಯೂಮ್, ಎಜ್ರಾ ಪೌಂಡ್, ಯೇಟ್ಸ್, ಎಲಿಯಟ್ ಮೊದಲಾದವರು ಈ ನವ್ಯ ಸಿದ್ಧಾಂತವನ್ನು ರೂಪಿಸುತ್ತಲೇ ಕಾವ್ಯ ರಚನೆಯನ್ನೂ ಮಾಡುತ್ತ ನವ್ಯ ಚಳುವಳಿಯನ್ನು ಒಂದು ಸದೃಢ ಪರಂಪರೆಯನ್ನಾಗಿಸಿದರು.

ರೋಮ್ಯಾಂಟಿಕ್ ಕಾವ್ಯದ ಅತಿಭಾವುಕತೆ, ಆತ್ಮನಿಷ್ಠತೆ, ವಾಚ್ಯವತೆ, ಅಸ್ಪಷ್ಟತೆಗಳನ್ನು ಪ್ರಬಲವಾಗಿ ಖಂಡಿಸಿದ ಈ ನವ್ಯಸಂಪ್ರದಾಯದ ಕವಿಗಳು ವ್ಯಕ್ತಿನಿರಪೇಕ್ಷತೆ, ವಸ್ತುಪ್ರತಿರೂಪ, ಏಕೀಕೃತ ಸಂವೇದನೆ, ಚಾರಿತ್ರಿಕಪ್ರಜ್ಞೆ ಮೊದಲಾದ ಪರಿಕಲ್ಪನೆಗಳನ್ನು ಜಾರಿಗೊಳಿಸಿದರು. ಪ್ರತಿಮೆಗಳ ಅರ್ಥಪೂರ್ಣ ಸಂಯೋಜನೆ, ವ್ಯಂಗ್ಯಾತ್ಮಕ ನಿರೂಪಣೆ, ಸ್ವವಿಮರ್ಶೆ, ತಂತ್ರಜ್ಞಾನ, ತತ್ತ್ವಶಾಸ್ತ್ರಗಳ ಅಳವಡಿಕೆ, ಸಂಕೀರ್ಣ ಭಾಷೆಯಬಳಕೆ ಇವು ಅವರ ಕಾವ್ಯದ ಮುಖ್ಯ ಆಶಯಗಳೆನಿಸಿದವು.

ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಕನ್ನಡದಲ್ಲಿ ನವ್ಯತೆ ಆರಂಭವಾದುದು ಪಾಶ್ಚಾತ್ಯದೇಶಗಳಲ್ಲಿ

ಅದು ಆಗಲೇ ಸಿದ್ಧಿಯ ಶಿಖರವನ್ನು ತಲುಪಿ, ಸತ್ವಗುಂದಿ ಬೇರೊಂದು ಕಾವ್ಯಸಂಪ್ರದಾಯಕ್ಕೆ ದಾರಿಮಾಡಿಕೊಟ್ಟ ಸಂದರ್ಭದಲ್ಲಿ. ಈ ಅವಧಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತು ದೇಶದ ರಾಜಕೀಯ, ಸಾಮಾಜಿಕ ಬದುಕಿನಲ್ಲಿ ಬದಲಾವಣೆಗಳು ಆಗತೊಡಗಿದ್ದವು. ಜೊತೆಗೆ ನವೋದಯ ಕಾವ್ಯ ಸಂಪ್ರದಾಯ ತನ್ನ ಎತ್ತರವನ್ನು ಮುಟ್ಟಿ ಇಳಿದು ಬಂದಿತ್ತು. ಬದಲಾದ ಈ ಸನ್ನಿವೇಶದಲ್ಲಿ ನವ್ಯಕಾವ್ಯ ಪಾಶ್ಚಾತ್ಯರ ಅನುಕರಣೆಯಾಗಿಯೂ ಕನ್ನಡದ ಅಗತ್ಯವೆನ್ನುವಂತೆ ಬಂದಿತು.

ನವ್ಯತೆ ಕನ್ನಡವನ್ನು ಎರಡು ಮಾರ್ಗಗಳಲ್ಲಿ ಪ್ರವೇಶಿಸಿತು. ಒಂದು ಗೋಕಾಕ ಮಾರ್ಗ; ಮತ್ತೊಂದು ಅಡಿಗರ ಮಾರ್ಗ. ಕನ್ನಡದಲ್ಲಿ ಹೊಸ ಕಾವ್ಯಮಾರ್ಗದ ಅನಿವಾರ್ಯತೆಯನ್ನು ಮೊದಲಿಗೆ ಅಧಿಕೃತವಾಗಿ ಪ್ರತಿಪಾದಿಸಿದ ಗೋಕಾಕ ಅವರು ೧೯೫೦ ರ ಮುಂಬೈ ಕನ್ನಡ ಸಾಹಿತ್ಯ ಸಮ್ಮೇಲನದ ಗೋಷ್ಠಿಯೊಂದರ ಅಧ್ಯಕ್ಷಸ್ಥಾನದಿಂದ 'ಸಾಹಿತ್ಯ ಹಾಗೂ ನವ್ಯತೆ' ಎಂಬ ವಿಷಯದ ಮೇಲೆ ಮಾತನಾಡುತ್ತ "ಕನ್ನಡ ಕಾವ್ಯದಲ್ಲಿ ಆಧುನಿಕಯುಗ ಮುಗಿಯುವ ಸಮಯ ಬಂದಿದೆ, ನವ್ಯಯುಗ ಪ್ರಾರಂಭವಾಗಲಿದೆ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧವನ್ನು ಇನ್ನೊಂದು ವಾರದಲ್ಲಿ ನಾವು ದಾಟುತ್ತೇವೆ. ಉತ್ತರಾರ್ಧದ ಪ್ರಾರಂಭಕ್ಕೆ ಸರಿಯಾಗಿಯೇ ಎನ್ನುವಂತೆ ಜಗತ್ತಿನ ಪರಿಸ್ಥಿತಿ ಮಾರ್ಪಡುತ್ತಿದೆ. ಈ ನವೀನ ಪರಿಸ್ಥಿತಿಯೂ ಕನ್ನಡ ಕಾವ್ಯದಲ್ಲಿಯ ಒಂದು ಪರಂಪರೆಯ ಕೃತಕೃತ್ಯತೆಯೂ ನವ್ಯಕಾವ್ಯದ ಅಗತ್ಯವನ್ನು ಸೂಚಿಸುತ್ತಿದೆ" ಎಂದು ಹೇಳಿದರು.

ಇದಕ್ಕೂ ಮೊದಲು ಅವರು ೧೯೪೦ ರಲ್ಲಿ ಪ್ರಕಟಿಸಿದ 'ಸಮುದ್ರ ಗೀತಗಳು' ಸಂಕಲನದ ಕವಿತೆಗಳಲ್ಲಿ "ಕೊಡದಿರು ಶರಧಿಗೆ ಪಟ್ಟದಿಯ ದೀಕ್ಷೆಯನು" ಎಂದು ಹೇಳಿ, ಮುಕ್ತ ಛಂದಸ್ಸನ್ನು ಬಳಸುವುದರ ಮೂಲಕ ಹೊಸ ಪ್ರಯೋಗಗಳನ್ನು ಮಾಡಿದ್ದರು. ೧೯೪೬ ರಲ್ಲಿ ಪ್ರಕಟಿಸಿದ 'ಅಭ್ಯುದಯ'ದ ಕವನವೊಂದರಲ್ಲಿ " ಹೋಗಿ ಬರುವೆನು ನನ್ನ ಎಳೆಗನಸುಗಳೆ ನಿಮ್ಮ ತಳಿರ್ಗೆಂಪು ಹೂಗಂಪು ತಂಗಾಳಿ ಮುಗಿದು, ಸಮರವನು ಸಾರಿಹುದು ಅಮರಶಕ್ತಿಯೊಂದ" ಎಂದು ನವೋದಯ ಕಾವ್ಯಪರಂಪರೆಗೆ ಒಂದು ರೀತಿಯ ವಿದಾಯವನ್ನು ಹೇಳಿದ್ದರು. ಇದಕ್ಕೆ ನಿದರ್ಶನವೆನ್ನುವಂತೆ ೧೯೫೦ ರಲ್ಲಿ 'ನವ್ಯಕವಿತೆಗಳು' ಎಂಬ ಸಂಕಲನವನ್ನು ಹೊರತಂದರು. ೧೯೭೫ ರಲ್ಲಿ ಪ್ರಕಟವಾದ 'ನವ್ಯತೆ' ಎಂಬ ಅವರ ಕೃತಿ ೧೬ ಲೇಖನಗಳನ್ನೊಳಗೊಂಡಿದ್ದು, ಗೋಕಾಕರು ೧೯೫೦ ರಿಂದ ೧೯೭೩ ರವರೆಗೆ 'ನವ್ಯ ಸಿದ್ಧಾಂತ'ದ ಬಗೆಗೆ ಮಾಡಿದ ಚಿಂತನೆಗಳನ್ನು ಅಳವಡಿಸಿಕೊಂಡಿದೆ. ಇಲ್ಲಿ ಅವರು ನವ್ಯಕಾವ್ಯದ ಸ್ವರೂಪವನ್ನು ಕುರಿತು 'ನವ್ಯ ಕಾವ್ಯವೆಂದರೆ ಆಧುನಿಕ ಕಾವ್ಯಕ್ಕಿಂತ ಭಿನ್ನವಾದ ವಿಶೇಷ ತಂತ್ರವಿಧಾನವನ್ನು ಪಡೆದ ಕಾವ್ಯ' 'ನವ್ಯ ಕಾವ್ಯ ತಾತ್ವಿಕ ಕ್ರಾಂತಿಯಲ್ಲ, ಒಂದು ನೂತನ ತಾಂತ್ರಿಕ ವಿಧಾನ ಮಾತ್ರ' 'ನವ್ಯಕಾವ್ಯಮಾರ್ಗ ತಂತ್ರದ ವಿಶಿಷ್ಟತೆಯಲ್ಲಿದೆಯೇ ಹೊರತು ಯಾವೊಂದು ಜೀವನ ದೃಷ್ಟಿಯಲ್ಲಿ ಇಲ್ಲ ' ಎಂದು ಬಲವಾಗಿ ಪ್ರತಿಪಾದಿಸಿ, "ಬಳಕೆ ಕನ್ನಡದ ಪ್ರೀತಿ. ಛಂದಸ್ಸಿನಲ್ಲಿ ಹೆಚ್ಚಿನ ಸ್ವಾತಂತ್ರ್ಯ, ಪ್ರತಿಮಾಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ. ಪಾರಿಭಾಷಿಕ ಶೈಲಿ, ವಸ್ತುವಿನ ಆಯ್ಕೆಯಲ್ಲಿ ಸ್ವಾತಂತ್ರ್ಯ, ಬುದ್ಧಿಪ್ರಧಾನತೆ, ವ್ಯಕ್ತಿತೀತ ಮೌಲ್ಯಗಳಿಗೆ ಪ್ರಾಶಸ್ತ್ಯ " ಇವು ಈ ಸಾಹಿತ್ಯದ ಪ್ರಮುಖ ಲಕ್ಷಣಗಳು ಎಂದು ಹೇಳಿದರು.

ಗೋಕಾಕರ ಈ ನವ್ಯ ಸಿದ್ಧಾಂತ ತೀವ್ರ ವಿಮರ್ಶೆಗೆ ಗುರಿಯಾಯಿತು. ಇದಕ್ಕೆ ಮೊದಲು ಆಕ್ಷೇಪವೆತ್ತಿದ ಅಡಿಗರು "ಕೇವಲ ತಂತ್ರಸಾಮ್ಯತೆಯನ್ನು ನವ್ಯಮಾರ್ಗವೆಂದು ಕರೆಯುವುದು

ಸಮಂಜಸವಲ್ಲ. ನವ್ಯತೆ ಸಂವೇದನೆಯ ಬದಲಾವಣೆಗೆ, ಜೀವನದೃಷ್ಟಿಗೆ ಸಂಬಂಧಿಸಿದ್ದು" ಎಂದು ಹೇಳಿದರು. ಅಡಿಗರ ಈ ನಿಲವನ್ನು ಬಹುಸಂಖ್ಯೆಯ ವಿಮರ್ಶಕರು ಸಮರ್ಥಿಸಿದರು. ಅಲ್ಲದೆ ಗೋಕಾಕರ ಕಾವ್ಯವನ್ನು ಕುರಿತು "ಪ್ರಯೋಗಪ್ರಿಯರಾದ ಅವರು ಛಂದಸ್ಸು, ತಂತ್ರಗಳಿಗೆ ಸಂಬಂಧಪಟ್ಟಂತೆ ಹೊಸಹೊಸ ಪ್ರಯೋಗಗಳನ್ನು ಮಾಡುತ್ತಲೇ ಬಂದರೂ ಮೂಲತಃ ಅವರ ಮನೋಧರ್ಮ ನವೋದಯ ಕಾವ್ಯಸಂಪ್ರದಾಯಕ್ಕೆ ಹತ್ತಿರವಾದುದು; ಇಂಗ್ಲೆಂಡಿನಲ್ಲಿ ಉನ್ನತ ಅಭ್ಯಾಸಕ್ಕೆಂದು ಹೋಗಿದ್ದ ಸಂದರ್ಭದಲ್ಲಿ ಅಲ್ಲಿ ಪ್ರಚಲಿತವಿದ್ದ ಮಾಡರ್ನಿಸ್ಟ್ ಪೊಯಟ್ರಿಯಿಂದ ಪ್ರಭಾವಿತರಾಗಿ ಕನ್ನಡದಲ್ಲಿ ನವ್ಯತೆಯನ್ನು ತಂದರೂ ಅವರು ನವೋದಯದಲ್ಲೇ ಬದುಕಿದರು. ಗೋಕಾಕರಲ್ಲಿ ನವ್ಯತೆ ಪ್ರಜ್ಞೆಯಾಗಿ ಮೂಡದೆ ಪ್ರತಿಜ್ಞೆಯಾಗಿ ಬಂದಿತು " ಎಂದು ವಿಮರ್ಶಿಸಿದರು. ಆದರೆ ಕನ್ನಡದಲ್ಲಿ ನವ್ಯತೆಯ ಅಗತ್ಯವನ್ನು ಮೊದಲು ಗುರುತಿಸಿ, ಆ ರೀತಿಯಲ್ಲಿ ಪ್ರಯೋಗವನ್ನು ಮಾಡಿದ ಮೊದಲ ಕೀರ್ತಿ ಮಾತ್ರ ಐತಿಹಾಸಿಕವಾಗಿ ಗೋಕಾಕರಿಗೇ ಸಲ್ಲಬೇಕಾಗುತ್ತದೆ.

ಗೋಕಾಕರು ಹುಟ್ಟುಹಾಕಿದ 'ನವ್ಯಕಾವ್ಯ' ಸಂಪ್ರದಾಯಕ್ಕೆ ಗಟ್ಟಿಯಾದ ನೆಲೆಯನ್ನು ಒದಗಿಸಿದವರು ಗೋಪಾಲಕೃಷ್ಣ ಅಡಿಗರು. ೧೯೫೦ರಲ್ಲಿ ಅವರ ನಾಯಕತ್ವದಲ್ಲಿ ಆರಂಭವಾದ ಈ ಹೊಸಸಾಹಿತ್ಯ ಕ್ರಾಂತಿಯು ಒಂದು ಇಡೀ ಜನಾಂಗದ ಸಂವೇದನೆಯನ್ನು ರೂಪಿಸಿ ಕನ್ನಡದ ಕೆಲವು ಶ್ರೇಷ್ಠ ಬರಹಗಾರರನ್ನು ನಿರ್ಮಿಸಿತು.

ಮೂಲತಃ ನವೋದಯ ಕಾವ್ಯಸಂಪ್ರದಾಯದ ಪ್ರೇರಣೆಯಿಂದ ಕಾವ್ಯಕೃಷಿಗೆ ತೊಡಗಿದ ಅಡಿಗರು, ಪ್ರಗತಿಶೀಲ ಚಳುವಳಿಯಲ್ಲಿ ಹಾಯ್ದು, ನವ್ಯಪರಂಪರೆಯಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ಹೀಗಾಗಿ ಅವರ ಬರವಣಿಗೆಯಲ್ಲಿ 'ನವೋದಯ ಕವಿಗಳ ಪ್ರಭಾವ ವಲಯದಲ್ಲಿ ತಮ್ಮ ಕಾವ್ಯಶಕ್ತಿಯನ್ನು ಗುರುತಿಸಿಕೊಂಡು, ನವ್ಯಕಾವ್ಯದಲ್ಲಿ ತಮ್ಮ ಪ್ರತಿಭಾ ಸಾಧ್ಯತೆಗಳನ್ನೆಲ್ಲ ಸಾರ್ಥಕಗೊಳಿಸಿಕೊಂಡದ್ದು' ಕಂಡುಬರುತ್ತದೆ.

೧೯೫೨ರಲ್ಲಿ ಪ್ರಕಟವಾದ 'ನಡೆದುಬಂದ ದಾರಿ' ಕವನಸಂಕಲನದಲ್ಲಿ "ನಡೆದು ಬಂದ ದಾರಿ ಕಡೆಗೆ, ತಿರುಗಿಸಬೇಡ, ಕಣ್ಣ ಹೊರಳಿಸಬೇಡ" "ಅನ್ಯರೊರೆದುದನೆ ಬರೆದುದನೆ ನಾ ಬರೆಬರೆದು ಖಿನ್ನವಾಗಿದೆ ಮನವು" ಎಂದು ಹೇಳುವುದರ ಮೂಲಕ ಭೂತಕಾಲದೊಂದಿಗಿನ ತಮ್ಮ ಸಂಬಂಧಗಳನ್ನು ಕಳಚಿಕೊಳ್ಳಲು ನಡೆಸಿದ ಪ್ರಜ್ಞಾಪೂರ್ವಕ ಪ್ರಯತ್ನವನ್ನು ಪ್ರಕಟಿಸಿದರು. ಈ ಕೃತಿಗೆ ಬರೆದ 'ಸಹೃದಯರಿಗೆ' ಎಂಬ ಹೆಸರಿನ ಪ್ರಸ್ತಾವನೆಯಲ್ಲಿ ಅದುವರೆಗಿನ ತಮ್ಮ ಕವನಗಳಲ್ಲಿದ್ದ ಅತಿರೇಕದ ಭಾವನಾಶೀಲ ಆದರ್ಶಮಯತೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ " ಇಂತಹ ಕಾಲದಲ್ಲಿ ಕಾವ್ಯಕ್ಕೆ ಹೊಸರಕ್ತ ಹರಿಯಬೇಕು. ಕಾವ್ಯ ಮಣ್ಣಿನ ಕಡೆಗೆ ಹೊರಳಿ ಮಣ್ಣಿನ ವಾಸನೆಯನ್ನು ಪಡೆಯಬೇಕು. ಇದಕ್ಕಾಗಿ ಇಲಿಯಟ್, ಆಡೆನ್ ಮೊದಲಾದ ಆಧುನಿಕ ಇಂಗ್ಲೀಷ ಕವಿಗಳಿಂದ ನಾವು ಸ್ಫೂರ್ತಿಯನ್ನು ಪಡೆಯಬೇಕಾಗಿದೆ " ಎಂದು ಹೊಸವಾಸ್ತವತೆಗಾಗಿ, ಹೊಸ ಕಾವ್ಯ ಧಾಟಿಗಾಗಿ ಕರೆಕೊಟ್ಟರು. ಈ ಕರೆಗನುಗುಣವಾಗಿ ತಾವು ಹೊಸಕಾವ್ಯ ಸೃಷ್ಟಿಯಲ್ಲಿ ತೊಡಗಿ, ಚಂಡಮದ್ದಳೆ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ ಮೊದಲಾದ ಸಂಕಲನಗಳನ್ನು ಪ್ರಕಟಿಸಿ ಹಂತಹಂತವಾಗಿ ಬೆಳೆಯುತ್ತ, ಸಮಕಾಲೀನ ಬದುಕಿನ ಸಮಸ್ಯೆಗಳ ಚಿತ್ರಣ, ಹೊಸ ಪ್ರತಿಮೆ, ಸಂಕೇತಗಳ ಬಳಕೆ, ರಚನಾತಂತ್ರದ ನಾವಿನ್ಯತೆ, ಅಭಿವ್ಯಕ್ತಿಯಲ್ಲಿ ಸಾರ್ಥಕತೆ, ಭಾಷೆಯ ಬಳಕೆಯಲ್ಲಿ ಸಂಕೀರ್ಣತೆಗಳನ್ನು

ಅರ್ಥಪೂರ್ಣವಾಗಿ ತಂದು ನವ್ಯಕಾವ್ಯವನ್ನೂ ಸಿದ್ಧಿಯ ತುಟ್ಟತುದಿಗೆ ಮುಟ್ಟಿಸಿದರು. ಹೀಗಾಗಿ ನವ್ಯಕಾವ್ಯದ ಎಲ್ಲ ಲಕ್ಷಣ, ಸಾಧ್ಯತೆ, ಸಿದ್ಧಿಗಳನ್ನು ಇವರ ಕಾವ್ಯದಲ್ಲಿ ಕಾಣಲು ಸಾಧ್ಯವಿದೆ.

ಅಡಿಗರ ಈ ಮಾರ್ಗದಲ್ಲಿ ಅನೇಕ ಕವಿಗಳು ನಡೆದು ಶ್ರೇಷ್ಠ ಕಾವ್ಯಗಳನ್ನು ರಚಿಸಿದ್ದಾರೆ. ಅವರಲ್ಲಿ ರಾಮಚಂದ್ರ ಶರ್ಮ, ವಿ.ಜಿ.ಭಟ್ಟ, ಎ.ಕೆ.ರಾಮಾನುಜನ್, ಪಿ.ಲಂಕೇಶ, ಕೆ.ವಿ.ತಿರುಮಲೇಶ, ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ, ಕೆ.ಎಸ್.ನಿಸಾರ ಅಹಮ್ಮದ್, ಲಕ್ಷ್ಮೀನಾರಾಯಣ ಭಟ್ಟ, ಸಿದ್ಧಲಿಂಗ ಪಟ್ಟಣಶೆಟ್ಟಿ ಮೊದಲಾದವರು ಪ್ರಮುಖರೆನಿಸಿದ್ದಾರೆ. ಇವರೆಲ್ಲರ ಕಾವ್ಯಗಳಲ್ಲಿ ಪ್ರಾದೇಶಿಕ ಭಿನ್ನತೆ, ವ್ಯಕ್ತಿವಿಶಿಷ್ಟತೆಗಳಿಂದಾಗಿ ಭಾಷೆಯ ಬಳಕೆ, ನಿರೂಪಣೆಯ ವಿಧಾನಗಳಲ್ಲಿ ವ್ಯತ್ಯಾಸ ಕಂಡುಬಂದರೂ ಒಟ್ಟುಧೋರಣೆಯಲ್ಲಿ ಏಕತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ನವ್ಯಕಾವ್ಯದ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು:

೧. ನವೋದಯ ಕಾವ್ಯದಲ್ಲಿ ಸಾಮಾಜಿಕ ಸಮಸ್ಯೆಗಳು ಮುಖ್ಯವೆನಿಸಿದರೆ, ನವ್ಯಕಾವ್ಯದಲ್ಲಿ ವ್ಯಕ್ತಿಯ ವೈಯುಕ್ತಿಕ ಸಮಸ್ಯೆಗಳು ಮುಖ್ಯವೆನಿಸಿದವು.

೨. ನವೋದಯ ಕಾವ್ಯದಲ್ಲಿ ಸ್ವೀಕೃತ ಮೌಲ್ಯಗಳ ಪ್ರತಿಪಾದನೆ ನಡೆದರೆ, ನವ್ಯಕಾವ್ಯದಲ್ಲಿ ಹೊಸಮೌಲ್ಯಗಳ ಶೋಧನೆ ನಡೆಯುತ್ತದೆ.

೩. ನವೋದಯ ಕಾವ್ಯದಲ್ಲಿ ಭಾಷೆ ಒಂದು ವಾಹಕವಾಗಿ ಪಾರದರ್ಶಕವಾಗಿ ಬಳಕೆಯಾದರೆ, ನವ್ಯಕಾವ್ಯದಲ್ಲಿ ಅದು ಶೋಧಕವಾಗಿ ಸಂಕೀರ್ಣವಾಗಿ ತೋರುತ್ತದೆ.

೪. ನವೋದಯ ಕಾವ್ಯದ ನಾಯಕ ಆತ್ಮವಿಶ್ವಾಸವುಳ್ಳ ಆದರ್ಶವಾದಿ ಎನಿಸಿದರೆ, ನವ್ಯಕಾವ್ಯದ ನಾಯಕ ಅಂತರ್ಮುಖಿ, ದುರ್ಬಲ, ಸೂಕ್ಷ್ಮಸಂವೇದನಶೀಲ ಎನಿಸುತ್ತಾನೆ.

೫. ಬಾಹ್ಯ ಪ್ರಪಂಚದ ವಿಮರ್ಶೆ ನವೋದಯಕಾವ್ಯದಲ್ಲಿ ಮುಖ್ಯವೆನಿಸಿದರೆ, ನವ್ಯಕಾವ್ಯದಲ್ಲಿ ಅಂತರಂಗದ ಶೋಧ ಮುಖ್ಯವೆನಿಸುತ್ತದೆ.

೬. ನವೋದಯ ಕಾವ್ಯದಲ್ಲಿ ಕಲ್ಪಕತೆಗೆ, ಭಾವಾತಿರೇಕಕ್ಕೆ ಆದ್ಯತೆ ದೊರೆತರೆ, ನವ್ಯಕಾವ್ಯದಲ್ಲಿ ವಾಸ್ತವತೆಗೆ, ಸಂಯಮಶೀಲತೆಗೆ ಪ್ರಾಮುಖ್ಯತೆ ದೊರೆತಿದೆ.

೭. ನವೋದಯ ಕಾವ್ಯದಲ್ಲಿ ಸಂವಹನ ಮುಖ್ಯವೆನಿಸಿದರೆ, ನವ್ಯಕಾವ್ಯದಲ್ಲಿ ಶೋಧ ಮುಖ್ಯವೆನಿತ್ತದೆ.

೮. ಭಾಷೆಯ ಬಳಕೆಯಲ್ಲಿ ಪರಿಶುದ್ಧತೆಗೆ ನವೋದಯ ಕಾವ್ಯ ಒತ್ತುಕೊಟ್ಟರೆ, ನವ್ಯಕಾವ್ಯದಲ್ಲಿ ಅದು ಯಾವ ಶಿಷ್ಟಾಚಾರವಿಲ್ಲದೆ ಬಳಕೆಯಾಗುತ್ತದೆ.

೯. ಸರಳತೆ, ಭಾವಪ್ರಧಾನತೆ ನವೋದಯ ಕಾವ್ಯದ ವಿಶೇಷತೆ ಎನಿಸಿದರೆ, ಸಾಂಕೇತಿಕತೆ, ಪ್ರತಿಮಾಪ್ರಧಾನತೆ, ಸಂಕೀರ್ಣತೆಗಳು ನವ್ಯಕಾವ್ಯದ ವಿಶೇಷತೆಗಳೆನಿಸಿವೆ.

೧೦. ಹಾಗೆಯೇ ಕವಿತೆ ಕೇವಲ ಮಾತಾಗಿ ಉಳಿಯದೆ ಕೃತಿಯಾಗಿ ಅವತರಿಸಬೇಕು, ಕಾವ್ಯಶಿಲ್ಪ

ಸಾವಯವ ಸಮಗ್ರತೆಯನ್ನು ಪಡೆದಿರಬೇಕು; ಪ್ರಜ್ಞಾಪ್ರವಾಹತಂತ್ರದ ಬಳಕೆ ಅರ್ಥಪೂರ್ಣವಾಗಿ ಆಗಿರಬೇಕು. 'ಆಧುನಿಕ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ವ್ಯಕ್ತಿ ಅನುಭವಿಸುವ ಸಂಕಟವನ್ನು ಅಸ್ವಸ್ಥ ಸ್ಥಿತಿಯನ್ನು, ಅದಕ್ಕೆ ಕಾರಣವನ್ನು, ರಾಜಕೀಯ ಸಾಮಾಜಿಕ ಶಕ್ತಿಗಳ ನಿಗೂಢಶಕ್ತಿಯನ್ನು ಕಂಡು ಹಿಡಿಯಲು ಕಾವ್ಯ ಪ್ರಯತ್ನಿಸಬೇಕು. ಇವೇ ಮೊದಲಾದವು ನವ್ಯಕಾವ್ಯದ ಇತರ ಪರಿಕಲ್ಪನೆಗಳೆನಿಸಿವೆ.

ಇಂಥ ವಿಶೇಷತೆಗಳನ್ನು ಒಳಗೊಂಡು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಲು ಸಹಾಯಕವಾದ ನವ್ಯಕಾವ್ಯಸಂಪ್ರದಾಯದ ಬಗೆಗೆ ಕೆಲವು ತೀವ್ರವಾದ ಆಕ್ಷೇಪಗಳೂ ಉಂಟು.

ನವ್ಯಕಾವ್ಯ ಕನ್ನಡಕ್ಕೆ ಒಂದು ಅನಿವಾರ್ಯವಾದ ಅಗತ್ಯವಾಗಿ ಬರಲಿಲ್ಲ. ಇದರ ಹೊಸತನ ಸಾಹಿತಿ ಮತ್ತು ಸಹೃದಯರಮಧ್ಯ ಕಂದಕವನ್ನು ನಿರ್ಮಿಸಿತು. ಜೀವನದ ಸಂಕೀರ್ಣತೆ, ಆಧುನಿಕ ಬದುಕಿನ ದಾರುಣತೆಗೆ ಒತ್ತುಕೊಟ್ಟು ಬದುಕಿನ ಇತರ ಮುಖಗಳನ್ನು ಮರೆಯಿತು. ನವೋದಯ ಕಾಲದ ಅನೇಕ ಹೊಸ ಸಾಹಿತ್ಯ ಪ್ರಕಾರಗಳನ್ನು ದೂರಸರಿಸಿತು. ಜೀವನವಿರೋಧಿ ಧೋರಣೆಗಳನ್ನೇ ಹೆಚ್ಚಾಗಿ ಮಾಡಿ ಜೀವನೋತ್ಸಾಹ-ಉಲ್ಲಾಸಗಳನ್ನು ಕಡಿಮೆಮಾಡಿತು. ಸಾಂಕೇತಿಕತೆ, ತಂತ್ರಪ್ರಧಾನತೆಯಿಂದಾಗಿ ಕಾವ್ಯ ಕೇವಲ ಸೊಫಿಸ್ಟಿಕೇಟೆಡ್ ವರ್ಗಕ್ಕೆ ಸೀಮಿತವಾಯಿತು. ಅಶ್ಲೀಲತೆ, ಅರ್ಥಗೂಢತೆಗಳು ಕಾವ್ಯದ ಸೊಗಸನ್ನು ಕೆಡಿಸಿದವು - ಇವೆ ಮೊದಲಾದವು ಆ ಆಕ್ಷೇಪಗಳು. ೧೯೭೩ ರಲ್ಲಿ ಪ್ರಕಟಿಸಿದ 'ಅಬಚೂರಿನ ಪೋಸ್ಟಾಫೀಸ್' ಎಂಬ ಕಥಾಸಂಕಲನದ 'ಹೊಸದಿಗಂತದೆಡೆಗೆ' ಎಂಬ ಮುನ್ನುಡಿಯಲ್ಲಿ ಪೂರ್ಣಚಂದ್ರ ತೇಜಸ್ವಿ ಅವರು 'ನವ್ಯ ಕಾವ್ಯದ ಸಾಂಕೇತಿಕ ಶೈಲಿ, ತಂತ್ರಗಳು ಕೇವಲ ಉಪಾಧ್ಯಾಯರೇ ಹೆಚ್ಚಾಗಿರುವ ಅದರ ಸಾಹಿತಿವರ್ಗ ಮತ್ತು ಕೇವಲ ಸಾಹಿತ್ಯದ ಮಟ್ಟಿಗೆ ಸೀಮಿತಗೊಂಡ ಅದರ ಕ್ರಾಂತಿಕಾರಕತನ - ಈ ಮೂರು ಕಾರಣಗಳಿಂದ ಈ ಸಾಹಿತ್ಯಸಂಪ್ರದಾಯ ಅವನತಿಹೊಂದಿದೆ. ಆದ್ದರಿಂದ ಈ ಮಾರ್ಗವನ್ನು ತ್ಯಜಿಸಬೇಕು' ಎಂದು ಕರೆಕೊಟ್ಟರು. ಈ ಕರೆಗೆ ಓಗೊಟ್ಟಂತೆ ಮುಂದೆ ಬಂಡಾಯ ದಲಿತ ಸಾಹಿತ್ಯ ಚಳುವಳಿಗಳು ಆರಂಭವಾದವು.

ಹೀಗಿದ್ದೂ ೧೯೫೦ ರಿಂದ ೧೯೮೦ ರ ವರೆಗೆ ಮೂರು ದಶಕಗಳ ಕಾಲ ನವ್ಯಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಪ್ರಮುಖ ಘಟ್ಟವಾಗಿ ಶ್ರೇಷ್ಠ ಕವಿ-ಕಥೆಗಾರ-ಕಾದಂಬರಿಕಾರ-ನಾಟಕಕಾರರನ್ನು ನೀಡಿ ಸಾಂಸ್ಕೃತಿಕ ಮಹತ್ವವನ್ನು ಪಡೆದದ್ದು ಮಾತ್ರ ಸುಳ್ಳಲ್ಲ.

ಆಧಾರ ಸಾಹಿತ್ಯ:

೧. ನವ್ಯತೆ ನರಹಳ್ಳಿ ಬಾಲಸುಬ್ರಹ್ಮಣ್ಯ.

೨. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು ಜಿ.ಎಸ್. ಶಿವರುದ್ರಪ್ಪ

೩. ನವೋದಯ: ಜಿ.ಎಸ್. ಶಿವರುದ್ರಪ್ಪ

೪. ನವ್ಯತೆ : ಡಾ. ವಿ. ಕೃ. ಗೋಕಾಕ

ಒರೆಗಲ್ಲು

೧. 'ಮರಸಿರೆಗೆ' ಅಲ್ಲ, 'ಮರಸುರಿಗೆ':

ಪಂಪಭಾರತದ ೪ನೇ ಆಶ್ವಾಸದ ೯೦ನೇ ಪದ್ಯದ ಮುಂದಿನ ವಚನಭಾಗದಲ್ಲಿ 'ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮಂ ಮರಸರಿಗೆವಿಡಿದು ಬಿಲ್ವಿಡಿದಾಡುವ ಬೂತಾಟಂಗಳುಮಂ ನೋಡಿ . . . ' ಎಂದಿದೆ. ಈ ಭಾಗದಲ್ಲಿ ಬಳಸಿದ 'ಮರಸರಿಗೆ' ಎಂಬ ಶಬ್ದಕ್ಕೆ ಕೆ.ವಿ.ಪುಟ್ಟಪ್ಪನವರ ಪ್ರಧಾನ ಸಂಪಾದಕತ್ವದಲ್ಲಿ ಹೊರಬಂದ ಪಂಪಭಾರತದಲ್ಲಿ ಕಠಿಣ ಶಬ್ದಗಳ ಅರ್ಥದ ಪಟ್ಟಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ, ಹಾಗೆಯೇ ಬಿಡಲಾಗಿದೆ. ಡಿ.ಎಲ್.ನರಸಿಂಹಾಚಾರ್ಯರು 'ಪಂಪಭಾರತ ದೀಪಿಕೆ'ಯಲ್ಲಿ ದೊಡ್ಡಚೆಂಬು ಎಂಬ ಅರ್ಥ ಬರೆದು, ಮುಂದೆ ಕಂಸಿನಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಇಟ್ಟಿದ್ದಾರೆ. ತಾವು ಊಹಿಸಿರುವ ಅರ್ಥದ ಬಗ್ಗೆ ಅವರಿಗೆ ಸಂದೇಹವಿದ್ದುದು ಇಲ್ಲಿ ಸ್ಪಷ್ಟ. ಪ್ರಾಯಶಃ ಡಿ.ಎಲ್.ಎನ್.ರವರು ಸರಿಗೆ >ಚರಿಗೆ ಎಂದಾಗಬಹುದಾದ್ದನ್ನು (ಸ>ಚ) ಗಮನಿಸಿ, (ಈಗಿನ 'ಚರಿಗೆ', ಮೊದಲ 'ಸರಿಗೆ' ಎಂದೇ ಇದ್ದಿರಬಹುದು ಎಂದು ಭಾವಿಸಿ), ಮರ =ದೊಡ್ಡ ಎಂಬ ಅರ್ಥದ ಹಿನ್ನೆಲೆಯಲ್ಲಿ ದೊಡ್ಡಚರಿಗೆ=ದೊಡ್ಡಚೆಂಬು ಎಂದು ಊಹಿಸಿದಂತಿದೆ, ಅರವಿಂದ ಮಾಲಗತ್ತಿಯವರು ತಮ್ಮ ಪಿ.ಎಚ್‌ಡಿ ಮಹಾಪ್ರಬಂಧದಲ್ಲಿ 'ಸರಿಗೆ'ಎನ್ನುವುದಕ್ಕೆ'ಗಾಲಿ' ಎಂಬ ಅರ್ಥ ಕಲ್ಪಿಸಿ, 'ಮರಸರಿಗೆ' ಎಂದರೆ ದೊಡ್ಡಗಾಲಿ ಅಥವಾ ಮರದಗಾಲಿ ಒಂದು ಆಟಿಕೆ ಎಂದು ಅರ್ಥಮಾಡಿದ್ದಾರೆ. (ಮಾಲಗತ್ತಿ ಅರವಿಂದ, ಅಪ್ರಕಟಿತ, ೧೯೮೫, ಪುಟ ೬೫)

ಪಂಪಭಾರತದ ಆ ವಚನಭಾಗದಲ್ಲಿ ಪಾನಮತ್ತಳಾಗಿರುವ ವೇಶ್ಯೆಯೊಬ್ಬಳು ತೂಗುತ್ತ, ತೊನೆಯುತ್ತ, ಧಕ್ಕೆಬಾರಿಸುತ್ತ ನರ್ತಿಸುತ್ತಿರುವ ಚಿತ್ರಣವಿದೆ. ಇಂಥ ವೇಶ್ಯೆಯ ನರ್ತನವನ್ನು ತನ್ನ ಆಯುಧಗಳೊಂದಿಗೆ ನರ್ತಿಸುತ್ತಿರುವ (ಸ್ತ್ರೀ)ಬೂತಾಟಕ್ಕೆ ಹೋಲಿಸಲಾಗಿರುವುದು ಇದರ ವೈಶಿಷ್ಟ್ಯ. ಈ ವರ್ಣನೆಯಲ್ಲಿ ನಮಗೆ ಮುಖ್ಯವಾಗುವುದು 'ಮರಸರಿಗೆ'ಮತ್ತು 'ಬಿಲ್ಲು' ಎನ್ನುವ ಎರಡು ಶಬ್ದಗಳು. ಬಿಲ್ಲು ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತವಾಗಿರುವ ಒಂದು ಆಯುಧ. ಮರಸರಿಗೆಯೂ ಒಂದು ಆಯುಧವೇ ಇರಬೇಕು. (ಇದಕ್ಕೆ ಹೆಚ್ಚಿನ ಸಮರ್ಥನೆ ಮುಂದಿನ ಭಾಗದಲ್ಲಿ ದೊರೆಯಲಿವೆ)ಮೂಲದಲ್ಲಿ ಇದ್ದ ಶಬ್ದ, 'ಮರಸರಿಗೆ'ಅಲ್ಲ'ಮರಸುರಿಗೆ' ಎಂದಿರಬೇಕು. 'ಮರಸರಿಗೆ' ಎಂದರೆ ದೊಡ್ಡಖಡ್ಗ ಅಥವಾ ಮರದಿಂದ ಮಾಡಿದ ಖಡ್ಗ. ಬೂತಾಟದ ಹಿನ್ನೆಲೆಯಲ್ಲಿ ಮರದಖಡ್ಗ ಎಂಬ ಅರ್ಥವೇ ಹೆಚ್ಚು ಹೊಂದುತ್ತದೆ. ಬೂತ ಅಥವಾ ಕ್ಷುದ್ರ ಸ್ತ್ರೀದೇವತೆಯೊಂದು ಕೈಯ್ಯಲ್ಲಿ ಮರದ ಖಡ್ಗ ಮತ್ತು ಬಿಲ್ಲುಗಳನ್ನು ಹಿಡಿದು, ತೊನೆಯುತ್ತ, ಆವೇಶದಿಂದ ನರ್ತಿಸುವ ಚಿತ್ರಣವನ್ನು ಮೇಲಿನ ಪಂಪಭಾರತದ ವಚನಭಾಗ ನೀಡುತ್ತದೆ.

ಹಾಗಾದರೆ, ಕೈಯ್ಯಲ್ಲಿ ಮರದ ಖಡ್ಗ ಹಿಡಿದಿರುವ ಗ್ರಾಮದೇವತೆ, ಅಥವಾ ಬೂತ ಯಾವುದು? ಕನ್ನಡ ಶಾಸನ ಮತ್ತು ಸಾಹಿತ್ಯಗಳಲ್ಲಿ ವಿದ್ವಾಂಸರು ಈಗಾಗಲೇ ಗಮನಿಸಿರುವಂತೆ, ಮೈಲಾರ ಮತ್ತು ಮಾಳಚಿಯರ ಕೈಯ್ಯಲ್ಲಿ ಖಡ್ಗವಿರುವುದು ಕೆಲವೆಡೆ ಉಲ್ಲೇಖವಾಗಿದೆ * ಜನ್ನನ ಅನಂತನಾಥ ಪುರಾಣದಲ್ಲಿ '. . . . . .ಮರವಾಳ್ವಾಮೀರ ಮೈಲಾರನಾ (ಅ.ಪು.೧೨-೧೬) ಎಂಬ ಮಾತು ಈ ದಿಶೆಯಲ್ಲಿ ಗಮನಾರ್ಹ, ಈ ಮೈಲಾರನ ಪತ್ನಿ, ಮಾಳಚಿ ಅಥವಾ ಮಾಳಚದೇವತೆ. ಇವರಿಬ್ಬರೂ ಪ್ರಾಚೀನ ಕಾಲದಿಂದಲೇ ಅತ್ಯಂತ ಜನಪ್ರಿಯರಾದ ಕ್ಷುದ್ರದೇವತೆಗಳೆಂದು ಭಾವಿಸಲಾಗಿದೆ. (ಚಿದಾನಂದ ಮೂರ್ತಿ ೧೯೮೪, ಪು.೧೯೯) ಒಂದು ದೃಷ್ಟಿಯಿಂದ ಮೈಲಾರನಿಗಿಂತಲೂ ಮಾಳಚಿ ಹೆಚ್ಚು ಶಕ್ತಿಯುತವಾದ ದೇವತೆ. ಇವಳನ್ನು ಕಾಳಿ, ಭೈರವಿಯೊಂದಿಗೆ, ಬನಶಂಕರಿಯೊಂದಿಗೆ ಸಮೀಕರಿಸುವುದೂ ಉಂಟು. (ದೇವೀ ಹೊಸೂರಿನ ಶಾಸನ ಕಾಲ ೧೦೬೩, ಮತ್ತು ಅಲ್ಲಿನ ದೇವಾಲಯ) ದೇವೀಹೊಸುರಿನ ಒಂದು ಶಾಸನ ಇಂದಪಯ್ಯ ನಾಯಕ ಮಾಳಜದೇವಿಗೆ ಮಕರ ತೋರಣ ಮಾಡಿಸಿದ್ದನ್ನು ದಾಖಲಿಸಿದೆ. ಇನ್ನೊಂದು, ದೇವೀ ಹೊಸೂರಿನ ಮಾಳಚಿಪೀಠ ಧರೆಯೊಳಗೆ ಅಧಿಕವಾದದ್ದೆಂದು ಸಾರುತ್ತದೆ. ಬ್ರಹ್ಮಶಿವ, ನಯಸೇನ ಮುಂತಾದವರು ಕಾಳಿ, ಬಳರಿ ಮುಂತಾದ ದೇವತೆಗಳೊಂದಿಗೆ ಮಾಳಚಿಯನ್ನೂ ಸೇರಿಸಿ, ದೂಷಿಸುವುದನ್ನು ನೋಡಿದರೆ, ಅವಳೊಬ್ಬ ಶಕ್ತಿಶಾಲಿಯಾದ ಕ್ಷುದ್ರದೇವತೆ (ಗ್ರಾಮದೇವತೆ) ಎಂಬುದರಲ್ಲಿ ಸಂಶಯವಿಲ್ಲ (ಬ್ರಹ್ಮಶಿವನ ಸಮಯಪರೀಕ್ಷೆ, (9-105) ಚಿದಾನಂದ ಮೂರ್ತಿಯವರ ಪ್ರಕಾರ, 'ಮಾಳ' ಎಂಬ ಶಬ್ದ. ಕ್ರಿ.ಶ.೯೨೨ ರಷ್ಟು ಪ್ರಾಚೀನ. ೧೧ನೆಯ ಶತಮಾನದ ಹೊತ್ತಿಗೇ ಮೈಲಾರ-ಮಾಳಚಿಯರು ಜನಪ್ರಿಯ ದೈವಗಳಾಗಿರಬೇಕು.

ಶ್ರೀನಿವಾಸ ರಿತ್ತಿಯವರು ಈ ದೇವತೆಯ ಬಗ್ಗೆ ಬರೆಯುತ್ತ ಮಾಳಚಿದೇವಿ ಕೆಲವೆಡೆ ಮೈಲಾರನಂತೆ ಲಿಂಗಸ್ವರೂಪವನ್ನು ಪಡೆದುಕೊಂಡಿದ್ದರೆ, ಕೆಲವೆಡೆ ಮೈಲಾರನ ಹೆಂಡತಿಯಾಗಿ, ಅವನೊಂದಿಗೆ ಕುದುರೆಯ ಮೇಲೆ ಕುಳಿತುಕೊಂಡಿದ್ದಾಳೆ. ಅವಳು ಮೈಲಾರನೊಂದಿಗಲ್ಲದೆ, ಸ್ವತಂತ್ರ ದೇವತೆಯಾಗಿಯೂ ಗೋಚರಿಸುತ್ತಾಳೆ. ಹಲವು ಸಲ, ಎರಡು ಕೈಗಳುಳ್ಳವಳಾಗಿಯೂ ಇನ್ನು ಕೆಲವು ಸಲ ಚತುರ್ಭುಜಳಾಗಿಯೂ ನಿರೂಪಿತಳಾಗಿದ್ದಾಳೆ. ಸಾಮಾನ್ಯವಾಗಿ ಖಡ್ಗ, ತ್ರಿಶೂಲ, ಡಮರು, ಪಾನ ಪಾತ್ರೆ ಇವು ಇವಳು ತನ್ನ ಕೈಗಳಲ್ಲಿ ಹಿಡಿದಿರುವ ವಸ್ತುಗಳು. ಹೀಗೆ ಮಾಳಚಿಯು ಹಲವಾರು ಎಡೆಗಳಲ್ಲಿ ಹಲವಾರು ಹೆಸರುಗಳಿಂದ ಪೂಜಿಸಲ್ಪಡುತ್ತಾಳೆ. (ರಿತ್ತಿ, ಶ್ರೀನಿವಾಸ, ೧೯೭೦, ಪು.31-32).

ಈ ಮೇಲಿನ ವಿವರಣೆಯಲ್ಲಿ ನಮಗೆ ಮಾಳಚಿಯ ಕೈಯಲ್ಲಿ ಖಡ್ಗ, ಡಮರು,

* 'ಮೂಲತಃ ಪ್ರಕೃತಿದೇವತೆಯಾಗಿರುವ ಮೈಲಾರ ಒಮ್ಮೆ ಪೌರಾಣಿಕ ಮಾರ್ತಂಡ ಭೈರವನನ್ನೂ ಇನ್ನೊಮ್ಮೆ ಐತಿಹಾಸಿಕ ಮೈಲಾರನನ್ನೂ ಸಮೀಕರಿಸಿಕೊಳ್ಳುವುದರ ಮೂಲಕ ಮೂರು ಅವಸ್ಥೆಗಳಲ್ಲಿ ಬೆಳೆದ ಪ್ರಮುಖ ಜನಪದ ದೇವತೆಯನ್ನಿಸಿದ್ದಾರೆ (ಎಂ.ಎಂ.ಕೆ.)

ಪಾನಪಾತ್ರೆ, ತ್ರಿಶೂಲಗಳ ಉಲ್ಲೇಖ ಮಹತ್ವಪೂರ್ಣ. ಏಕೆಂದರೆ ಕವಿಪಂಪ ಸುರಾಪಾನ ಮತ್ತಳಾದ ವೇಶ್ಯೆಯೊಬ್ಬಳು ಢಕ್ಕೆಯನ್ನು ಬಾರಿಸುತ್ತ, ತೊನೆಯುತ್ತ, ನರ್ತಿಸುತ್ತಿರುವ ಚಿತ್ರವನ್ನು, ಮರಸುರಿಗೆ ವಿಡಿದು ಬಿಲ್ಪಿಡಿದು ಕುಣಿಯುತ್ತಿರುವ ಸ್ತ್ರೀ ಬೂತಕ್ಕೆ ಹೋಲಿಸುತ್ತಿದ್ದಾನೆ. ಪಂಪನ ಕಾಲಕ್ಕೆ, ಮಾಳಚಿಯ ಕೈಯಲ್ಲಿ ಖಡ್ಗ, ಬಿಲ್ಲುಗಳು ಇದ್ದಿರಬಹುದಾಗಿದೆ.

ಸಾಂಪ್ರದಾಯಿಕವಾಗಿ, ಸ್ತ್ರೀ ವರ್ಗಕ್ಕೆ ಸುರಾಪಾನ, ಉನ್ಮತ್ತರಾಗಿ ಕುಣಿಯುವಿಕೆ ಮುಂತಾದವು ದೋಷಕಾರಕ ಗುಣಗಳೆಂದು ಪರಿಭಾವಿಸಲಾಗುತ್ತದೆ. ಆದರೆ ಸಂಗೀತ, ನೃತ್ಯ ಇತ್ಯಾದಿ ಕಲೆಗಳ ಹಿನ್ನೆಲೆಯಲ್ಲಿ ಕೆಲವೊಮ್ಮೆ ದೋಷವೂ-ಗುಣವಾಗುತ್ತದೆ. ಅಂದರೆ ಅವು ಕ್ಷಮ್ಯವಾಗುತ್ತವೆ. ಈ ಅಭಿಪ್ರಾಯ ಪಂಪನಲ್ಲಿಯೆ ವಚನ ಭಾಗದ ಮುಂದಿನ ಪದ್ಯದಲ್ಲಿಯೇ ಬಂದಿದೆ (ಪಂ.ಭಾ.೪-೯೧) ಮಾಳಚಿ ಭಯ, ಆಶ್ಚರ್ಯಗಳನ್ನು ಹುಟ್ಟಿಸುವ ದೇವತೆಯಾದರೂ ಇಲ್ಲಿ ಈ ವೇಶ್ಯೆ ಪಾನೋನ್ಮತ್ತತೆಯಿಂದ ಆ ದೇವತೆಯಂತೆ ಬೂತಾಟವಾಡುತ್ತಿದ್ದರೂ ಈ ದೃಶ್ಯ ರುದ್ರಸುಂದರ (ಸಹ್ಯ)ವೆಂದು ಭಾವಿಸಿದಂತಿದೆ.

ಹೀಗೆ 'ಮಾಳಚಿ' ದೇವತೆಯ ಹೆಸರನ್ನು ಉಲ್ಲೇಖಿಸದಿದ್ದರೂ 'ಮರಸುರಿಗೆವಿಡಿದು ಬಿಲ್ಪಿಡಿದಾಡುವ ಬೂತಾಟಂಗಳುಮಂ' ಎಂಬ ಹೇಳಿಕೆಯಿಂದ ಕ್ಷುದ್ರ ಸ್ತ್ರೀ ದೇವತೆಯ ನೃತ್ಯದಾಟವನ್ನು ವರ್ಣಿಸುವುದರ ಮೂಲಕ ಪಂಪ, ತನ್ನ ಕಾಲದಲ್ಲಿ ಪ್ರಚಲಿತವೂ ಪ್ರಭಾವಯುತವೂ ಆಗಿರುವ 'ಮಾಳಚಿಯಬ್ಬೆ'ಯನ್ನು ಇಲ್ಲಿ ಉಲ್ಲೇಖಿಸಿರಬೇಕೆನ್ನಿಸುತ್ತದೆ. ಇದನ್ನು ಒಪ್ಪಿಕೊಂಡಲ್ಲಿ, ಮೂಲ ಪಾಠ ಮರಸರಿಗೆ ಬದಲು ಮರಸುರಿಗೆ ಎಂದಾಗುತ್ತದೆ.

ಗ್ರಂಥಋಣ

೧. ಕಲ್ಬುರ್ಗಿ ಎಂ.ಎಂ: ಮಾರ್ಗ(ಭಾಗ೨), ಬೆಂಗಳೂರು ೧೯೮೮.

೨. ಚಿದಾನಂದ ಮೂರ್ತಿ ಎಂ: ಪಗರಣ, ಬೆಂಗಳೂರು ೧೯೮೪

೩. ಜನ್ನನ ಅನಂತನಾಥಪುರಾಣಂ.

೪. ನರಸಿಂಹಾಚಾರ್ ಡಿ.ಎಲ್. 'ಪಂಪಭಾರತ ದೀಪಿಕೆ', ಮೈಸೂರು,

೫. ಪುಟ್ಟಪ್ಪ ಕೆ.ವಿ. (ಪ್ರಸಂ):ಪಂಪಭಾರತ ಎಂಬ ವಿಕ್ರಮಾರ್ಜುನವಿಜಯಂ. ಭಾಗ ೧, ಮೈಸೂರು, ೧೯೭೭.

೬. ಬ್ರಹ್ಮಶಿವನ ಸಮಯ ಪರೀಕ್ಷೆ,

೭. ಮಾಲಗತ್ತಿ ಅರವಿಂದ: ಉತ್ತರ ಕರ್ನಾಟಕದ ಜನಪದ ಆಟಗಳು(ಅಪ್ರಕಟಿತ) ಕ.ವಿ.ವಿ. ಧಾರವಾಡ. ೧೯೮೫

೮. ರಿತ್ತಿ ಶ್ರೀನಿವಾಸ, ಮೈಲಾರದೇವರು, ಧಾರವಾಡ. ೧೯೭೦

ಶಾಲಿನಿ ರಘುನಾಥ

೨. ಪಂಪ ಭಾರತದ ಒಂದು ಪದ್ಯ

ಸುರಭಿ ದೇವತೆಯೆಂಬ [೧]ಕಾಪಿನೆ ಮಾಣ್ಬುದೇಱುವುದೊಂದದಂ

ವಿರದೆ ಮಾಣ್ಬು[೨]ದು ದೇವ ವಾರಣ ಪೇೞೆ ಉಂಟಪ್ಪು ಪೋದೊವಾಳ [೪]ರಕರಂಗರಿದೆಂದೆ [೫] ಮಾಣ್ಬ[೬]ರೆಮಾ [೭]ಮಾ ಹರಿ ನೀನೆ ಪೇ ಱರಿಯುವೆಂದಿಪ್ಪ ಭದ್ರದೇವರ ಜಾಗದೊಳ್ಪೊಱಗಾ೭ದುಟೆ

ಪಾಠಾಂತರ :೧. ತಾಪನೆ (ಕ) ತಾಪಿನೆ (ಖ) ೨. ದೆ (ಖ,ಪ್ರ) ೩. ಗೊಂಡ (ಕ,ಖ,ಪ್ರ)

೪. ತರತರಂಗವಿದೆಂದೆ (ಕ,ಖ) ಕರಕರಂಗರಿದೆಂದೆ (ಪ್ರ) ೫. ಪೊಣ್ಣೆಪು (ಕ) ೬. ಣ್ಡ (ಕ,ಖ,ಪು) ೭. ಗದೇ (ಕ,ಖ)

ಈ ಪದ್ಯದಲ್ಲಿ ಬದ್ದೆಗನ ದಾನದ ಹಿರಿಮೆಯನ್ನು ವರ್ಣಿಸಿದೆ. 'ಪಂಪ ಭಾರತ ದೀಪಿಕೆ'ಯಲ್ಲಿ ಮೇಲಿನ ಪದ್ಯವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ.

"ಅದರಲ್ಲಿ ಅನೇಕ ಪಾಠಕ್ಲೇಶಗಳಿರುವುದರಿಂದ ಅದರ ಅರ್ಥ ಸರಿಯಾಗಿ ಆಗುವುದಿಲ್ಲ. ಕೊನೆಯ ಪಂಕ್ತಿ ಅರಿಯುವೆಂದಿಪ್ಪ ಅಪೂರ್ವ ವಸ್ತುಗಳಾದ ಇವು, ಭದ್ರದೇವನ ಜಾಗದೊಳ್=ಭದ್ರದೇವನು ಮಾಡುವ ದಾನಗಳಲ್ಲಿ, ಪೊಱಗಾದುವೇ -ಹೊರಗಾದುವೇ. ಆಗುವ ಎಂಬ ಭಾವ. ಈ ಅಪೂರ್ವ ವಸ್ತುಗಳು ಯಾವುವು? ಸುರಭಿ=ಕಾಮಧೇನು. ಬೇಡಿದವರಿಗೆ ಬೇಡಿದ್ದನ್ನೆಲ್ಲ ಕೊಡುತ್ತೇನೆಂದು ಹೇಳುವ ಆ ದೇವತೆಯ ಗೋಸಣೆ= ಕೂಗು, ಸಾರಿಹೇಳುವುದು, ಮಾಣ್ಬುದು=ನಿಂತು ಹೋಯಿತು ಎಂದರೆ ಬದ್ದೆಗನ ದಾನ ಕಾಮಧೇನುವನ್ನು ಕೂಡ ಮೀರಿಸಿತು. ಇಲ್ಲಿ 'ಗೋಸನೆ' ಎಂದಿರುವ ಪಾಠಾಂತರ ಸ್ವೀಕರಣ ಯೋಗ್ಯ ಉಳಿದ ವಸ್ತುಗಳ ಸ್ವರೂಪ ಖಚಿತವಾಗಿ ತಿಳಿಯುವುದಿಲ್ಲ. ಖರಗರ - ಸೂರ್ಯ, ದೇವವಾರಣ=ಇಂದ್ರನ ಆನೆ, ಐರಾವತ. ಪೆಱೆಯುಂಟಪ್ಪು=ಅಪ್ಪು ಪೆಳ ಇದೆ. ಎಂದರೆ ಏನೋ ? ಆ ಹರಿ=ಕುದುರೆಗಳು, ಎಂದರೆ ಸೂರ್ಯನ ಸಪ್ತಾಶ್ವಗಳು, ಪದ್ಯದ ತಾತ್ಪರ್ಯ ತಿಳಿಯುವಂತಿಲ್ಲ".

ಪಂಪಭಾರತದ ಈ ಪದ್ಯದಲ್ಲಿ ಸಂಪಾದಕರ ಸ್ವೀಕೃತ ಪಾಠವನ್ನೇ ಇರಿಸಿಕೊಂಡು ಈ ಕೆಳಗಿನಂತೆ ಅನ್ವಯಿಸಬಹುದೆಂದು ಅನ್ನಿಸುತ್ತದೆ. ಇಲ್ಲಿ ಅರ್ಥಕ್ಲೇಶವಿಲ್ಲ. ದೇವತೆಯೆಂಬ

ಸುರಭಿ, ಕಾಪಿನೆ, ಮಾಣ್ಬುದು=ಸ್ವರ್ಗದ ಸಂಪತ್ತಾದ, ದೇವತೆಯಾದ ಕಾಮಧೇನು ಸಂರಕ್ಷಿಸಲೇಬೇಕಾದ್ದರಿಂದ ಬದ್ದೆಗನು ಹಿಡಿದು ತಂದು ದಾನಮಾಡದೆ ಬಿಟ್ಟನು.

ದೇವ ವಾರಣ ಅದು ಒಂದು ಏಜುವುದು ಎಂದು ಇರದೆ ಮಾಣ್ಬುದು=ಮೂವತ್ತು ಮೂರು ಕೋಟಿ ದೇವತೆಗಳ ಅಧಿಪತಿಯಾದ ದೇವೇಂದ್ರನ ಆನೆ ಐರಾವತ ಅವನಿಗೆ ಸವಾರಿ ಮಾಡುವುದಕ್ಕೆಂದು ಅದೊಂದೇ ಇರುವುದು. ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಆ ಆನೆ ಇಂದ್ರನಿಗೆ ಸಂದದ್ದರಿಂದ. ಕಾಲಕಾಲದಲ್ಲಿ ಮಳೆಯನ್ನು ಬರಿಸಿ ಮರ್ತ್ಯರನ್ನು ಸಂತೃಪ್ತಿಗೊಳಿಸುವ, ಪ್ರಜೆಗಳನ್ನು ಸಂತೋಷಗೊಳಿಸುವವನು ಅವನಾದ್ದರಿಂದ ಅವನ ಆನೆಯನ್ನು ಧರ್ಮಸದಲ್ಲಿ ಕುಳಿತು ಪ್ರಜಾಪರಿಪಾಲನೆ ಮಾಡುವ ಬದ್ದೆಗನು ಅದನ್ನು ಅಪಹರಿಸಿ ದಾನಮಾಡುವುದು ಧರ್ಮಸಮ್ಮತವಲ್ಲವಾದ್ದರಿಂದ ಬಿಟ್ಟನು. ಆ ಹರಿ ಏಜೆ ಉಂಟು. ಅವು ಪೋದೊಡೆ ಆ ಖರಕರಂಗೆ ಆಂದು ಎಂದು ಪೋಣ್ಬರೆ ಮಾಣ್ದುವು = ಅಶ್ವಗಳು ಬಿಟ್ಟು ಏಳು ಅಂದರೆ ಸೂರ್ಯನ ಸಪ್ತಾಶ್ವಗಳು। ಅವು ಇಲ್ಲವಾದಲ್ಲಿ ತೀಕ್ಷ್ಣ ಕಿರಣಗಳುಳ್ಳವನಾದ (ಖರಕರ)ಸೂರ್ಯನಿಗೆ ತನ್ನ ದಿನ ಪಯಣವನ್ನು ಮಾಡಲು ಅಸಾಧ್ಯ. ಸೂರ್ಯನು ಸಕಾಲದಲ್ಲಿ ಪಯಣಿಸದಿದ್ದರೆ ಸಮಸ್ತ ಜೀವಕೋಟಿಗಳಿಗೆ ಸಂಕಷ್ಟವಾದೀತು. ಆದುದರಿಂದ ಬದ್ದೆಗನು ಸೂರ್ಯನ ಅಶ್ವಗಳನ್ನು ದಾನ ಮಾಡದೆ ಬಿಟ್ಟನು.

ಅರಿಯುವು ಎಂದು ಇವು ಭದ್ರದೇವರ ಬಾಗದೊಳ್ ಪೋಜಿಗಾದುವೇ=ಇವು (ಮೇಲೆ ಹೇಳಿದ ಮೂರು ಶ್ರೇಷ್ಠ ಸಾಧನಗಳು) ದಾನ ಮಾಡಲು ಅಸಾಧ್ಯವಾದಂತಹ ವಸ್ತು. ಕಾರ್ಯ ಎಂದು ಬದ್ದೆಗನು ದಾನ ಮಾಡದೆ ಬಿಟ್ಟನೇ? 'ಅಲ್ಲ' ಎಂಬುದೇ ಉತ್ತರ. ಕಾಮಧೇನು, ಐರಾವತ, ಸೂರ್ಯನ ಸಪ್ತಾಶ್ವಗಳನ್ನು ಮನಮಾಡಿದ್ದರೆ ಅವನ್ನೂ ಕೂಡ ದಾನ ಮಾಡುತ್ತಿದ್ದನು. ಆದರೆ ಧೀರೋದಾತ್ತನಾದ ಬದ್ದೆಗನು. ಧರ್ಮಪ್ರಭುವಾದ್ದರಿಂದ ಅವುಗಳ ಶ್ರೇಷ್ಠತೆಯನ್ನು, ಪಾವಿತ್ರ್ಯವನ್ನು ತಿಳಿದು ಹಾಗೆ ಮಾಡಲಿಲ್ಲ. ಆ ಮೂರು ಸಾಧನ ಸಂಪತ್ತನ್ನು ಬಿಟ್ಟು ಉಳಿದ ಎಲ್ಲಾ ವಸ್ತುಗಳನ್ನು ದಾನ ಮಾಡಿದನೆಂದು ಭಾವ.

ನೀನೆ ಪೇಳ್ =ಎಲೈ ಸಹೃದಯ ವಾಚಕನೆ ಯಾವ ಕಾರಣದಿಂದಲಾಗಿ ಬದ್ದೆಗನು ಅವುಗಳನ್ನು ದಾನಮಾಡದೆ ಬಿಟ್ಟದ್ದು (ಕಾರಣ ಹೇಳಿದೆ) ಆ ಕಾರಣಕ್ಕಾಗಿಯೇ ಅಲ್ಲವೇ, ಇಲ್ಲದಿದ್ದರೆ ದಾನ ಮಾಡುತ್ತಿರಲಿಲ್ಲವೇ.

ಯು. ಶಂಕರನಾರಾಯಣಭಟ್

ಗ್ರಂಥಾವಲೋಕನ

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಸೂಚಿ ಸಂಪುಟಗಳು

ನಮ್ಮ ಪ್ರಾಚೀನರ ಮನೋಧರ್ಮ, ಸಂಸ್ಕೃತಿ,ಧರ್ಮ, ಇತಿಹಾಸ, ನೀತಿ, ತತ್ವ, ಆಚಾರ, ವಿಚಾರ, ನಡೆ—ನುಡಿ, ಶೀಲ ಸಂಪ್ರದಾಯ ಮುಂತಾದವುಗಳನ್ನು ಅರಿತುಕೊಳ್ಳುವಲ್ಲಿ ಹಲವಾರು ಆಕರ ಸಾಮಗ್ರಿಗಳು ಸಹಾಯಕಾರಿಯಾಗುತ್ತವೆ. ಅವುಗಳಲ್ಲಿ ಪ್ರಾಚೀನ ಹಸ್ತಪ್ರತಿಗಳೂ ಒಂದು. ಕೈಯಿಂದ ಬರೆದ ಪ್ರಾಚೀನ ತಾಳೆಗರಿ ಮತ್ತು ಕಾಗದ ಗ್ರಂಥಗಳಿಗೆ ಹಸ್ತಪ್ರತಿ ಎಂದು ಹೆಸರು. ಈ ಹಸ್ತಪ್ರತಿಗಳ ಸ್ವರೂಪ, ಲಕ್ಷಣ, ವಿಷಯ ವೈವಿಧ್ಯತೆಗಳನ್ನು ತಿಳಿಸುವುದೇ ಹಸ್ತಪ್ರತಿಶಾಸ್ತ್ರ. ಮೊದಲು ಗ್ರಂಥಸಂಪಾದನಾಶಾಸ್ತ್ರದ ಒಂದು ಅಂಗವಾಗಿ ಬೆಳೆದು ಬಂದ ಇದು ಇಂದು ಸ್ವತಂತ್ರವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಹಸ್ತಪ್ರತಿಗಳ ಅಧ್ಯಯನವನ್ನು ಸಂಗ್ರಹ, ಸೂಚೀಕರಣ, ವರ್ಗೀಕರಣ, ಶಾಸ್ತ್ರ ನಿರ್ಮಾಣ ಎಂದು ನಾಲ್ಕು ಹಂತಗಳಲ್ಲಿ ನಡೆಸಲಾಗುತ್ತಿದೆ. ಈ ವಿಭಜನೆ ಹಸ್ತಪ್ರತಿಶಾಸ್ತ್ರದಲ್ಲಿ ತುಂಬ ಮಹತ್ವಪೂರ್ಣವಾದುದೆನಿಸಿದೆ. ಹಸ್ತಪ್ರತಿ ಸಂಗ್ರಹಣ ಪ್ರಥಮ ಹಂತವಾದರೆ, ಅವುಗಳ ಸೂಚೀಕರಣ ಎರಡನೆಯ ಹಂತವಾಗಿದೆ. ಸೂಚೀಕರಣ ಕಾರ್ಯ ಪ್ರಾಚೀನ ಕಾಲದಿಂದಲೂ ಕಂಡುಬಂದರೂ ಅದು ಹೆಚ್ಚು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಕಂಡುಬಂದುದು ಇಪ್ಪತ್ತನೆಯ ಶತಮಾನದಲ್ಲಿಯೆಂದು ಹೇಳಬಹುದು. ಕರ್ನಲ್ ಮೆಕಂಜಿಯವರ ಸಂಗ್ರಹಿತ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸಿದ ಎಚ್.ಎಚ್.ವಿಲ್ಸನ್‌ರವರು ಇದರ ಹರಿಕಾರರಾದರು. ತದನಂತರ ಪ್ರ್ಯಾಚ್ಯವಿದ್ಯಾಕೇಂದ್ರಗಳು, ವಿಶ್ವವಿದ್ಯಾನಿಲಯಗಳು, ಧಾರ್ಮಿಕ -ಸಾಮಾಜಿಕ ಸಂಸ್ಥೆಗಳು ತಮ್ಮಲ್ಲಿರುವ ಹಸ್ತಪ್ರತಿಗಳ ಸೂಚಿಯನ್ನು ತಯಾರಿಸಿ ಪ್ರಕಟಿಸುತ್ತ ಬಂದವು. ಈ ಸಾಲಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಹಸ್ತಪ್ರಚಿಯನ್ನು ಹತ್ತು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ.

ಕನ್ನಡ ಅಧ್ಯಯನಪೀಠದ ಹಲವು ಶಾಖೆಗಳಲ್ಲಿ 'ಹಸ್ತಪ್ರತಿಭಾಂಡಾರ'ವೂ ಒಂದು. ಇದು ಹಲವಾರು ವಿದ್ವಾಂಸರ ಪ್ರಯತ್ನದಿಂದ, ಕನ್ನಡ ಜನತೆಯ ಸಹಕಾರದಿಂದ ಇಲ್ಲಿಯವರೆಗೆ ಸುಮಾರು ೪೦೦೦ ಹಸ್ತಪ್ರತಿಗಳನ್ನು ಒಳಗೊಂಡಿದೆ.೧ ಇವುಗಳಲ್ಲಿನ ೧೦೦೦ ಕಟ್ಟುಗಳನ್ನು ತೆಗೆದುಕೊಂಡು ಹತ್ತು ಸಂಪುಟಗಳಲ್ಲಿ ಸೂಚಿಯನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಿಸಲಾಗಿದೆ೨

೧. ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ೩ ಸಾವಿರ ಹಸ್ತಪ್ರತಿಗಳನ್ನು ಇಲ್ಲಿಗೆ ವರ್ಗಾಯಿಸಿರುವುದರಿಂದ ಈ ಸಂಖ್ಯೆ ೭ ಸಾವಿರ ಆಗಿದೆ.

೨. ಹತ್ತು ಸಂಪುಟಗಳಲ್ಲಿ ೨, ೩, ೪, ೫ ನೆಯ ಸಂಪುಟಗಳು ಇನ್ನೂ ಪ್ರಕಟಗೊಳ್ಳಬೇಕಾಗಿವೆ.

ಡಾ.ಎಂ.ಎಂ.ಕಲಬುರ್ಗಿಯವರು ಈ ಸಂಪುಟಗಳ ಪ್ರಧಾನ ಸಂಪಾದಕರಾಗಿಯೂ, ಡಾ.ಬಿ.ಆರ್. ಹಿರೇಮಠ ಅವರು ಮೊದಲನೆಯ ಸಂಪುಟದ ಸಂಪಾದಕರಾಗಿಯೂ, ಡಾ.ವೀರಣ್ಣ ರಾಜೂರ ಅವರು ಆರರಿಂದ ಹತ್ತನೆಯ ಸಂಪುಟಗಳ ಸಂಪಾದಕರಾಗಿಯೂ ಅತ್ಯಂತ ವ್ಯವಸ್ಥಿತ, ಹಾಗೂ ವೈಜ್ಞಾನಿಕವಾಗಿ ಈ ಸೂಚಿಗಳನ್ನು ಸಿದ್ಧಪಡಿಸಿದ್ದಾರೆ೩. ಇಲ್ಲಿಯವರೆಗೂ ಪ್ರಕಟವಾದ 'ಹಸ್ತಪ್ರತಿಸೂಚಿ'ಗಳನ್ನು ಗಮನದಲ್ಲಿಟ್ಟುಕೊಂಡು, ಅವುಗಳಲ್ಲಿ ಕಂಡುಬರುವ ನ್ಯೂನತೆಗಳನ್ನು ಈ ಸಂಪುಟಗಳಲ್ಲಿ ತುಂಬಿಕೊಡಲು

ಪ್ರಯತ್ನಿಸಿರುವುದಾಗಿ ಸಂಪಾದಕರು ಹೇಳಿಕೊಂಡಿದ್ದಾರೆ. ಅದರಂತೆ ಪೂರೈಸಿಯೂ ಇದ್ದಾರೆ.

ಈ ಸಂಪುಟಗಳಲ್ಲಿ ಶಿವಶರಣರ ವಚನ, ವೀರಶೈವ ಸಾಹಿತ್ಯ, ವೀರಶೈವ ಲಘುಸಾಹಿತ್ಯವನ್ನು ಕುರಿತ ಹಸ್ತಪ್ರತಿಕಟ್ಟುಗಳನ್ನು ಹೆಚ್ಚಾಗಿ ಕಾಣುತ್ತೇವೆ. ಜೊತೆಗೆ ವೈದಿಕ ಸಾಹಿತ್ಯ ಕೃತಿಗಳು, ಶಾಸ್ತ್ರಕೃತಿಗಳು, ಜಾನಪದ ಸಂಗ್ರಹಗಳನ್ನೂ ಕಾಣಬಹುದು. ಕನ್ನಡ ಸಾಹಿತ್ಯದ ಪ್ರಮುಖ ಕೃತಿಗಳಾದ ಬಸವಪುರಾಣ, ಸಿಂಗಿರಾಜ ಪುರಾಣ, ರಾಜಶೇಖರ ವಿಳಾಸ, ಶೂನ್ಯ ಸಂಪಾದನೆ, ವೃಷಭೇಂದ್ರ ವಿಜಯ, ಸ್ವರವಚನ ಮುಂತಾದ ಹಸ್ತಪ್ರತಿಗಳನ್ನು ಇವು ಒಳಗೊಂಡಿವೆ.

ಪ್ರತಿಯೊಂದು ಸಂಪುಟವು ನೂರು ಕಟ್ಟುಗಳಲ್ಲಿರುವ ಕನ್ನಡ ಕೃತಿಗಳ ಸೂಚಿಯನ್ನು ಹೊಂದಿವೆ. ೪. ಸೂಚಿ ಕ್ರಮವನ್ನು ಸಂಪಾದಕರು ಆರಂಭದಲ್ಲಿ ಹೀಗೆ ಹೇಳಿದ್ದಾರೆ.

೩. ಈ ಸಂಪುಟಗಳ ವಿವರ ಹೀಗಿದೆ

ಕನ್ನಡ ಅಧ್ಯಯನಪೀಠದ ಹಸ್ತಪ್ರತಿಸೂಚಿ ಸಂಪುಟ-೧ ಪ್ರಧಾನ ಸಂಪಾದಕರು: ಎಂ.ಎಂ.ಕಲಬುರ್ಗಿ ಸಂಪಾದಕರು:ಬಿ.ಆರ್. ಹಿರೇಮಠ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೯೨ ಪುಟ:೩೨೬+೮ ಬೆಲೆ:೩೨=೦೦

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಸೂಚಿ ಸಂಪುಟ:೬ ರಿಂದ ೧೦ ಪ್ರಧಾನ ಸಂಪಾದಕರು :ಎಂ.ಎಂ.ಕಲಬುರ್ಗಿ ಸಂಪಾದಕರು: ವೀರಣ್ಣರಾಜೂರ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೯೨

ಸಂ: ೬	ಪುಟ:	೩೧೬+೮	ಬೆಲೆ : ೩೨= ೦೦
ಸಂ: ೭	ಪುಟ:	೩೦೦+ ೮	ಬೆಲೆ ೩೨= ೦೦
ಸಂ: ೮	ಪುಟ:	೨೬೪ + ೮	ಬೆಲೆ ೬೦= ೦೦
ಸಂ: ೯	ಪುಟ:	೩೬೬+ ೮	ಬೆಲೆ ೮೩ ೦೦
ಸಂ: ೧೦	ಪುಟ:	೨೨೨ + ೮	ಬೆಲೆ ೫೨= ೦೦

೪ ಇವುಗಳಲ್ಲಿ ಸೇರಿಕೊಂಡಿರುವ ಸಂಸ್ಕೃತ ಕೃತಿಗಳನ್ನು ಇಲ್ಲಿ ಕೈಬಿಡಲಾಗಿದ್ದು, ಅವುಗಳಿಗಾಗಿಯೇ ಪ್ರತ್ಯೇಕ ಸಂಪುಟಗಳನ್ನು ರಚಿಸಲು ಯೋಜಿಸಲಾಗಿದೆಯೆಂದು ಸಂಪಾದಕರು ಹೇಳಿದ್ದಾರೆ.

೫. ಸಂ. ವೀರಣ್ಣರಾಜೂರ, ಕನ್ನಡ ಅಧ್ಯಯನ ಪೀಠದ ಹಸ್ತ ಪ್ರತಿಸೂಚಿ ಸಂ. ೯, ಪುಟ ೬೨

ಒಂದನೆಯ ಸಾಲು : ಮಧ್ಯದಲ್ಲಿರುವುದು [ದಪ್ಪಗಾತ್ರದ ಅಂಕಿ] ಕೃತಿಯ ಅನುಕ್ರಮ ಸಂಖ್ಯೆ
ಎರಡನೆಯ ಸಾಲು: ಮಧ್ಯದಲ್ಲಿ ಕೃತಿಯ ಹೆಸರು
ಮೂರನೆಯ ಸಾಲು: ಎಡಗಡೆ ಲಿಖಿತವಸ್ತು ಹಾಗೂ ಹಸ್ತಪ್ರತಿಭಾಂಡಾರದ ಕ್ರಮಸಂಖ್ಯೆ, ಬಲಗಡೆ ಸಾಹಿತ್ಯ ಪ್ರಕಾರ, ಮಧ್ಯದಲ್ಲಿ ಕರ್ತೃವಿನ ಹೆಸರು.
ನಾಲ್ಕನೆಯ ಸಾಲು: ಎಡಗಡೆ ಹಸ್ತಪ್ರತಿಯ ಅಳತೆ(ಉದ್ದ-ಅಗಲ) ಬಲಗಡೆ ಕರ್ತೃವಿನ ಕಾಲ
ಐದನೆಯ ಸಾಲು: ಮಧ್ಯದಲ್ಲಿ ಹಸ್ತಪ್ರತಿಯ ಒಡೆತನ-ಲಭಿಸಿದ ಸ್ಥಳ, ಎಡಗಡೆ ಕೃತಿಯ ಪುಟಸಂಖ್ಯೆ, ಬಲಗಡೆ ಪ್ರತಿಪುಟದಲ್ಲಿರುವ ಸಾಲಿನಸಂಖ್ಯೆ

ಆಮೇಲೆ "ಆದಿ" ಎಂಬುದರ ಅಡಿಯಲ್ಲಿ ಆಯಾಕೃತಿಯ ಪ್ರಾರಂಭದ ಸ್ವಲ್ಪ ಪಾಠವನ್ನು "ಅಂತ್ಯ" ಎಂಬುದರ ಕೆಳಗೆ ಆಯಾ ಕೃತಿಯ ಅಂತ್ಯದ ಪಾಠವನ್ನು ಬರೆಯವಾಗಿದೆ. ಈ ಎರಡೂ ವಿಭಾಗಗಳಲ್ಲಿ ಮುಂದುವರಿದ ಪಾಠಕ್ಕಾಗಿ...... ಎಂಬ ಚಿಹ್ನೆಯನ್ನೂ, ಲುಪ್ತ ಪಾಠಕ್ಕಾಗಿ* ಸಂಕೇತವನ್ನು ಬಳಸಲಾಗಿದೆ. 'ವಿಷಯ' ವಿಭಾಗದಲ್ಲಿ ಕೃತಿಯ ಕೇಂದ್ರ ವಿಷಯವನ್ನು ವಿಶೇಷವನ್ನು ಸಂಕ್ಷಿಪ್ತವಾಗಿ ಹೇಳಲಾಗಿದೆ. ಹಸ್ತಪ್ರತಿಯ ಸಮಗ್ರತೆ, ಅಸಮಗ್ರತೆ, ಸ್ಥಿತಿ, ಅಕ್ಷರಸ್ವರೂಪ ಮುಂತಾದ ಅಂಶಗಳನ್ನು 'ವಿಶೇಷ'ದಲ್ಲಿ ಸಮಾವೇಶಗೊಳಿಸಲಾಗಿದೆ. 'ಈ ಕಟ್ಟಿನಲ್ಲಿರುವ ಕೃತಿಗಳು'ವಿಭಾಗದಲ್ಲಿ ಪ್ರತಿಯೊಂದು ಕಟ್ಟಿನಲ್ಲಿರುವ ಎಲ್ಲ ಕೃತಿಗಳ ಪಟ್ಟಿಯನ್ನು ಕೊಡಲಾಗಿದ್ದು ಕನ್ನಡೇತರ ಭಾಷೆಯ ಕೃತಿಗಳ ಮುಂದೆ ಮಾತ್ರ ದುಂಡ ಕಂಸಿನಲ್ಲಿ ತೆಲುಗು, ತಮಿಳು, ಸಂಸ್ಕೃತ ಎಂದು ಸೂಚಿಸಲಾಗಿದೆ. ಈ ಪಟ್ಟಿಯನ್ನುಆಯಾ ಕಟ್ಟಿನ ಮೊದಲ ಕೃತಿಯ ಪರಿಚಯದ ಕೊನೆಗೆ ಮಾತ್ರ ಕೊಡಲಾಗಿದೆ. ಆದರೆ ಈ ಕಟ್ಟಿನಲ್ಲಿರುವ ಪ್ರಥಮೇತರ ಕೃತಿಗಳನ್ನು ಸೂಚಿಸುವ ಸಂದರ್ಭದಲ್ಲಿ 'ಈ ಕಟ್ಟಿನಲ್ಲಿರುವ ಇತರ ಕೃತಿಗಳಿಗಾಗಿ ನೋಡಿ:ತಾಪ್ರ, ಕಾಪ್ರ' ಎಂದು ಸೂಚಿಸಿ, ಆ ಕಟ್ಟಿನ ಕ್ರಮಸಂಖ್ಯೆಯನ್ನೂ, ಕಂಸಿನಲ್ಲಿ ಅದರಲ್ಲಿರುವ ಪ್ರಥಮಕೃತಿಯ ಹೆಸರನ್ನು ಕೊಡಲಾಗಿದೆ. ಕಟ್ಟಿನಲ್ಲಿ ಒಂದೇ ಕೃತಿಯಿದ್ದ ಪಕ್ಷದಲ್ಲಿ "ಈ ಕಟ್ಟಿನಲ್ಲಿರುವ ಕೃತಿಗಳು" ಹಾಗೂ ಈ ಕಟ್ಟಿನಲ್ಲಿರುವ ಇತರ ಕೃತಿಗಳಿಗಾಗಿ ನೋಡಿ:ತಾಪ್ರ , ಕಾಪ್ರ ಎಂಬ ಎರಡೂ ವಿಭಾಗಗಳನ್ನು ಸಹಜವಾಗಿಯೇ ಕೈಬಿಡಲಾಗಿದೆ. ಕರ್ತೃ,ಕಾಲ ಲಭ್ಯವಿಲ್ಲದಲ್ಲಿ ಪ್ರಶ್ನಾರ್ಥಕ ಚಿಹ್ನೆ ಹಾಕಲಾಗಿದೆ. ಉದಾಹರಣೆಗಾಗಿ ಒಂದು ಹಸ್ತಪ್ರತಿಯ ಕ್ರಮವನ್ನು ಹೀಗೆ ಹೇಳಬಹುದು: ೫

೬೮
ಗಣಭಾಷಿತರತ್ನಮಾಲೆ

ತಾಪ್ರ ೬೮/೧ ಗುಬ್ಬಿಮಲ್ಲಣಾರ್ಯ ವಚನ, ಶ್ಲೋಕ

೧೧.೬"* ೨.೧" ಉರಗಾದ್ರಿಮಠ, ಉರವಕೊಂಡ?

ಪು:೬೦-೯೩ ಆ ಸಾಲು:೧೧-೧೨

ಆದಿ: xxxx ನರಕ ತಪ್ಪದು ಅದು ಕಾರಣ ಶಿವಗಾನಮಂ ಸಂಚಿತ್ರವಾಗಿ ಕೇಳುದು||೧೧||

ಅಹರಾತ್ರಸ್ಯ ಮಾಸಂ ಸಂವತ್ಸರ ಸೂಚ್ಯ| ಉಪವಾಸ ವೃತಾನಾಂತು| ತತ್ಫಲಂ ವಾಚಿಕಾರ್ಚನಂ ೯೯ಟೀಕು ಇರುಳು ಹಗಲುಂ ಹದಿ*ದು

ದಿನ ತಿಂಗಳು ವರುಷಂ ಮಾಡಿದ ಉಪವಾಸಾದಿ ವೃತಂಗಳು ಮಹಾತಪಸ್ವಿನಿಂದು ಯೆಷ್ಟು ಪುಣ್ಯವುಂಟು|ಶಿವ ಪುರಾಣಂಗಳಂ ಕೇಳಿದಡೆ| ಆ ಯಿಷ್ಟು ಪುಣ್ಯಂ ತಪ್ಪದು||೧೨||ಅಂತ: ಇದ್ದ ಭಾಗದ ಅಂತ್ಯ

........ಅವನಾವನೊಬ್ಬನು ಲಿಂಗವನರಿತು ಲಿಂಗಾರ್ಚ್ಛನೆಯಂ ಮಾಡಿ ಲಿಂಗ ಜಂಗಮಕ್ಕೆ ತನು ಮನ ಧನವಂ ಸವೆಸಿದವೆ ಅದೆ ಚೆಲ್ವ ಭಕ್ತಿ ಅದೇ ಚೆಲ್ವಯುಕ್ತಿ ಅದೇ ಚೆಲ್ವಮೋಕ್ಷ| ಅದೆ ಸರ್ವಸಿದ್ಧಿ ಅದೆ ಸರ್ವಕಾರಣವಯ್ಯ ಉರಿಲಿಂಗಪೆದ್ದಿ ವಿಶ್ವೇಶ್ವರಾ||೫||ಯಿಂತೀ ಪ್ರಕಾರದಿಂಚವು ಶಷ್ಟಿಕಳಾ ವಿದ್ಯಗಳ ಕಲಿತಾತನು ಲಿಂ. . . . . .

ವಿಷಯ:ವೀರಶೈವ ನೂರೊಂದು ಸ್ಥಲದ ವಿವರ

ವಿಶೇಷ:ಅಸಮಗ್ರ.ಆದಿಯಿಲ್ಲ.ಗರಿಗಳು ಮುರಿದಿವೆ, ಅಕ್ಷರ ಸಾಧಾರಣ.

ಈ ಕಟ್ಟಿನಲ್ಲಿರುವ ಕೃತಿಗಳು

೧ ಗಣಭಾಷಿತ ರತ್ನಮಾಲೆ

೨ ಗಣಂಗಳ ಪ್ರಶಸ್ತಿ

ಹೀಗೆ ಸಂಪಾದಕರು ಹಸ್ತಪ್ರತಿಗಳಲ್ಲಿ ಆಳವಾದ ಅಧ್ಯಯನ, ಶ್ರದ್ಧೆ, ಆಸಕ್ತಿ, ಪರಿಶ್ರಮಕಾರಣವಾಗಿ ಕನ್ನಡ ಅಧ್ಯಯನಪೀಠದ ಹಸ್ತಪ್ರತಿಸೂಚಿ ಸಂಪುಟಗಳು ಬೇರೆ ವಿಶ್ವವಿದ್ಯಾಲಯ–ಸಂಸ್ಥೆಗಳ ಹಸ್ತಪ್ರತಿಸೂಚಿ ಸಂಪುಟಗಳಿಗಿಂತಲೂ ವಿನೂತನವಾಗಿ, ವೈಶಿಷ್ಟ್ಯಮಯವಾಗಿ ಕಂಡುಬರುತ್ತವೆ. ಇತರ ಸಂಪುಟಗಳ ಎಲ್ಲ ಅಂಶಗಳನ್ನು ಒಳಗೊಂಡು ಹೊಸದಾಗಿ ಸೇರಿಸಿದ ಅಂಶಗಳನ್ನು ಹೀಗೆ ಗುರುತಿಸಬಹುದು.

೧. ನೂರು ಕಟ್ಟುಗಳಲ್ಲಿಯೇ ವರ್ಣನಾತ್ಮಕವಾಗಿ ಸೂಚಿಯನ್ನು ತಯಾರಿಸಲಾಗಿದೆ.

೨. ಹಸ್ತಪ್ರತಿಗಳ ಒಡೆತನ, ಲಭಿಸಿದ ಸ್ಥಳಮನ್ನು ಪ್ರತಿಯೊಂದು ಕೃತಿಯ ಸೂಚಿಯಲ್ಲಿ ಸೂಚಿಸಲಾಗಿದೆ.

೩. ಕಾಗದ ಪ್ರತಿ, ತಾಡೋಲೆ ಪ್ರತಿ ಎಂದು ಹಸ್ತಪ್ರತಿಯ ಲಿಖಿತ ವಸ್ತುವನ್ನು ಸೂಚಿಸಲಾಗಿದೆ.

೪. 'ಈ ಕಟ್ಟಿನಲ್ಲಿರುವ ಇತರ ಕೃತಿಗಳಿಗಾಗಿ ನೋಡಿ' ಎಂದು ಹೇಳಿ ಕಂಸಿನಲ್ಲಿ ಆ ಕೃತಿಯ ಹೆಸರನ್ನು ಸೂಚಿಸಿ ಅದರ ಕ್ರಮಸಂಖ್ಯೆಯನ್ನು ಸಹಕೊಡಲಾಗಿದೆ.

ಹೀಗೆ ಹಸ್ತಪ್ರತಿಸೂಚಿ ಸಂಪುಟಗಳು ವಿಶಿಷ್ಟತೆಯನ್ನು ಹೊಂದಿವೆ. ಜೊತೆಗೆ ಪ್ರತಿಸಂಪುಟಗಳ

ಕೊನೆಗೆ ಕವಿಸೂಚಿ, ಕೃತಿಸೂಚಿಗಳನ್ನು ಕೊಟ್ಟಿದ್ದರೆ ಇನ್ನು ಹೆಚ್ಚು ಪ್ರಯೋಜನಕಾರಿಯಾಗುತ್ತಿತ್ತೆಂದು ಹೇಳಬಹುದು.

ಇಂಥ ಸಂಪುಟಗಳನ್ನು ಪ್ರಕಟಿಸಲು ವಿಶ್ವವಿದ್ಯಾಲಯದ ಧನಸಹಾಯ ಆಯೋಗ, ಕೇಂದ್ರ ಶಿಕ್ಷಣ ಸಂಸ್ಕೃತಿ ಇಲಾಖೆಗಳು ಸಹಾಯಧನ ನೀಡಿರುವುದು ತುಂಬಾ ಶ್ಲಾಘನೀಯ. ಉಪೇಕ್ಷಿತ ಅಧ್ಯಯನದತ್ತ ಒಲವು ಕಡಿಮೆಯಾಗುತ್ತಿರುವ ಇಂದಿನ ಕಾಲದಲ್ಲಿ ಇಂಥ ಸೂಚಿಗಳನ್ನು ಪ್ರಕಟಿಸಲು ಮುಂದಾದ ಕರ್ನಾಟಕ ವಿಶ್ವವಿದ್ಯಾಲಯ, ಕನ್ನಡ ಅಧ್ಯಯನಪೀಠ, ಇವುಗಳನ್ನು ಸಂಪಾದಿಸಿದ ಡಾ.ಎಂ.ಎಂ.ಕಲಬುರ್ಗಿ, ಡಾ.ವೀರಣ್ಣ ರಾಜೂರ, ಡಾ ಬಿ.ಆರ್. ಹಿರೇಮಠ ಅವರ ಪರಿಶ್ರಮ ಸ್ತುತ್ಯ. ಹೀಗೇ ಉಳಿದ ಮೂವತ್ತು ಸಂಪುಟಗಳನ್ನು ಪ್ರಕಟಿಸಲು ಸರಕಾರವಾಗಲಿ, ವಿಶ್ವವಿದ್ಯಾಲಯವಾಗಲಿ ವಿಶೇಷ ಆಸಕ್ತಿ ವಹಿಸಿ ಪ್ರಕಟಿಸಿದರೆ ನಾಡಿನ ಹಸ್ತಪ್ರತಿಗಳ ಅಧ್ಯಯನದತ್ತ ವಿದ್ವಾಂಸರ, ಆಸಕ್ತರ ಗಮನಸೆಳೆಯಲು ಸಾಧ್ಯವಾಗುತ್ತದೆಯೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಸ್ತುತ

ಕರ್ನಾಟಕ ಭಾರತಿ ಇಪ್ಪತ್ತೈದು ವಸಂತಗಳನ್ನು ಯಶಸ್ವಿಯಾಗಿ ದಾಟಿ ಈಗ ೨೬ನೆಯ ವರ್ಷದಲ್ಲಿ ಪದಾರ್ಪಣಮಾಡಿದೆ. ಇದರ ಸವಿನೆನಪಿಗಾಗಿ 'ಬೆಳ್ಳಿ ಸಂಚಿಕೆ'ಯೊಂದು ಈಗ ಬಿಡುಗಡೆಯ ಹಂತದಲ್ಲಿದೆ. 'ಆಧುನಿಕ ಕನ್ನಡ ಸಾಹಿತ್ಯ ರೂಪಗಳು' ಎಂಬ ಶೀರ್ಷಿಕೆಯಡಿಯಲ್ಲಿ ಖ್ಯಾತ ವಿದ್ವಾಂಸರಿಂದ ಬರೆಯಿಸಿದ ೨೫ ಮೌಲಿಕ ಲೇಖನಗಳನ್ನೊಳಗೊಂಡ ಅದು ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ ಒಂದು ಮಹತ್ವದ ಆಕರ ಗ್ರಂಥವಾಗುವುದೆಂಬ ನಂಬಿಕೆ ನಮ್ಮದಾಗಿದೆ.

ಪ್ರಸ್ತುತ ಸ್ವಾತಂತ್ರ್ಯೋತ್ಸವ ಸಂಚಿಕೆ ಇಪ್ಪತ್ತಾರನೆಯ ವರ್ಷದ ಪ್ರಥಮ ಸಂಚಿಕೆಯೆನಿಸಿದೆ. ಎಂದಿನಂತೆ ಇದರಲ್ಲಿ ಭಾಷೆ, ಸಾಹಿತ್ಯ, ಸಂಶೋಧನೆ, ಸಂಸ್ಕೃತಿ, ವಿಮರ್ಶೆ, ಶಾಸನ, ಹೊಸಶೋಧ, ಹೊಸಗ್ರಂಥಗಳ ಅವಲೋಕನೆಗೆ ಸಂಬಂಧಿಸಿದ ೧೪ ಅರ್ಥಪೂರ್ಣ ಲೇಖನಗಳನ್ನು ಜೊತೆಗೆ ಎರಡು ಕವಿತೆಗಳನ್ನು ಅಳವಡಿಸಲಾಗಿದೆ. ಈ ಲೇಖನಗಳನ್ನು ಬರೆದು ಕಳಿಸಿದ ಲೇಖಕರಿಗೆ 'ಭಾರತಿ' ಅಭಿನಂದನೆ ಸಲ್ಲಿಸುತ್ತದೆ.

ಕುಲಪತಿಗಳಿಗೆ ಸ್ವಾಗತ

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ರಾಮೇಗೌಡ ಅವರು ಮೂರುವರ್ಷದ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿ, ತಮ್ಮ ಕರ್ತೃತ್ವಶಕ್ತಿ, ಆಡಳಿತದಕ್ಷತೆ, ಶೈಕ್ಷಣಿಕಶಿಸ್ತು, ಸಾಂಸ್ಕೃತಿಕ ಕಾಳಜಿಗಳಿಂದ ವಿಶ್ವವಿದ್ಯಾಲಯವನ್ನು ಪ್ರಗತಿಪಥದಲ್ಲಿ ಸಾಗಿಸಿಕೊಂಡು ನಡೆದು, ಅದರ ಘನತೆ-ಗೌರವಗಳನ್ನು ಹೆಚ್ಚಿಸಿದುದನ್ನು ಗಮನಿಸಿ ಘನ ಸರಕಾರ ಅವರ ಸೇವೆಯನ್ನು ಮತ್ತೆ ಮೂರುವರ್ಷ ಮುಂದುವರಿಸಿದೆ. ಇದು ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿ ವೃಂದಕ್ಕೆಲ್ಲ ತುಂಬ ಸಂತಸವನ್ನುಂಟು ಮಾಡಿದ ಸಂಗತಿಯೆನಿಸಿದೆ. ಅವರ ಮುಂದಿನ ಮೂರು ವರ್ಷದ ಅವಧಿಯಲ್ಲಿ ವಿಶ್ವವಿದ್ಯಾಲಯ ಸರ್ವರಂಗಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವಂತಾಗಲಿ ಎಂಬ ಆಶಯವನ್ನುವ್ಯಕ್ತಪಡಿಸುತ್ತ, ಉತ್ತರ ಕರ್ನಾಟಕದ ಸಮಸ್ತ ಕನ್ನಡಿಗರ ಪರವಾಗಿ 'ಭಾರತಿ' ಅವರಿಗೆ ಹಾರ್ದಿಕ ಅಭಿನಂದನೆಯನ್ನು ಸಲ್ಲಿಸುತ್ತ ಆತ್ಮೀಯ ಸ್ವಾಗತವನ್ನು ಕೋರುತ್ತದೆ.

ಶ್ರದ್ಧಾಂಜಲಿ

ಪೂಜ್ಯ ಮೃತ್ಯುಂಜಯ ಅಪ್ಪಗಳು ತಮ್ಮ ಸೇವೆಯೆಂಬ ತಪಸ್ಸಿನಿಂದ ಕಟ್ಟಿಬೆಳೆಸಿದ ಧಾರವಾಡದ ಮುರುಘಾಮಠ ಕರ್ನಾಟಕದ ಒಂದು ಅಪೂರ್ವ ಆಧ್ಯಾತ್ಮಿಕ ಕೇಂದ್ರ. ಅದು ಗೈದ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ ಸೇವೆ ಅನನ್ಯ. ಉಚಿತ ಪ್ರಸಾದನಿಲಯ, ಉತ್ತಮ ಗ್ರಂಥ ಪ್ರಕಟಣೆ, ಉನ್ನತ ಶಿವಾನುಭವಗೋಷ್ಠಿಗಳ ಮೂಲಕ ನಿರಂತರವಾಗಿ ವಿದ್ಯಾರ್ಥಿಗಳಿಗೆ ಅನ್ನದಾಸೋಹ, ಜ್ಞಾನದಾಸೋಹ ಮಾಡುತ್ತ ಬಂದ ಅದು ಇಂದು ಒಂದು ಸಾಂಸ್ಕೃತಿಕ ವಿಶ್ವವಿದ್ಯಾಲಯವಾಗಿ ಬೆಳೆದು ನಿಂತಿದೆ. ಅದಕ್ಕೆ ಕಾರಣಕರ್ತರೂ, ಮೃತ್ಯುಂಜಯ ಅಪ್ಪಗಳ ಕಾರುಣ್ಯದ ಶಿಷ್ಯರೂ ಮಾತೃಹೃದಯದ ಮಮತಾಮಯಿಗಳೂ, ನಮ್ಮ ನಾಡಿನ ಮಹಾ ಶಿವಯೋಗಿಗಳೂ ಎನಿಸಿದ್ದ ಮಹಾಂತ ಅಪ್ಪಗಳು ಪುಣ್ಯದಂತೆ ಬಂದು, ಜ್ಞಾನದಂತೆ ಇದ್ದು ದಿನಾಂಕ ೨೩-೬-೯೩ರಂದು ಮೋಕ್ಷದಂತೆ ಲಿಂಗದಲ್ಲಿ ಲೀನವಾದರು. ಅವರ ಅಗಲಿಕೆಯಿಂದ ನಾಡಿನ ಸಮಸ್ತ ಭಕ್ತವೃಂದ ತಾಯಿಯನ್ನು ಕಳೆದುಕೊಂಡ ತಬ್ಬಲಿಗಳಂತೆ ಶೋಕಿಸಿದರು: ಸಾಹಿತ್ಯ ಶ್ರೀಮಂತಿಕೆಗಾಗಿ, ಲೋಕಕಲ್ಯಾಣಕ್ಕಾಗಿ ಶ್ರಮಿಸಿದ ಈ ದಿವ್ಯಚೇತನಕ್ಕೆ 'ಭಾರತಿ' ಭಕ್ತಿಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

ಲೇಖಕರ ವಿಳಾಸಗಳು

---

೧. **ಶ್ರೀ ಆರ್. ವಾಯ್. ಕುಲಕರ್ಣಿ**
ಇಂಗ್ಲೀಷ ಅಧ್ಯಾಪಕರು
ಗುಡ್‌ನ್ಯೂಜ್ ಕಲಾ ಮತ್ತು ವಾಣಿಜ್ಯ ಕಾಲೇಜು
ಕಲಘಟಗಿ - ೫೮೧೩೦೪

೨. **ಡಾ. ವಸಂತಕುಮಾರಿ**
ಇತಿಹಾಸ ಪ್ರವಾಚಕರು
ಮಹಿಳಾ ಸರಕಾರಿ ಕಾಲೇಜು, ಮಂಡ್ಯ

೩. **ಡಾ. ಎಸ್. ಕೆ. ಕೊಪ್ಪಾ**
ಕನ್ನಡ ಅಧ್ಯಾಪಕರು
ಕಲಾ ಮತ್ತು ವಾಣಿಜ್ಯ ಕಾಲೇಜು. ಇಂಡಿ, ಜಿಲ್ಲೆ ವಿಜಾಪುರ

೪. **ಡಾ. ಜಿ. ಎಂ. ಹೆಗಡೆ**
ಕನ್ನಡ ಅಧ್ಯಾಪಕರು
ಕಿಟಿಲ್ ಕಾಲೇಜು, ಧಾರವಾಡ

೫. **ಡಾ. ಶಾಂತಿನಾಥ ದಿಬ್ಬದ**
ಪ್ರವಾಚಕರು, ಕನ್ನಡ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ
ಕೃಷ್ಣದೇವರಾಯ ನಗರ
ಸಂಡೂರ, ಜಿಲ್ಲೆ:ಬಳ್ಳಾರಿ

೬. **ಡಾ. ಶ್ರೀನಿವಾಸ ವೆಂ. ಪಾಡಿಗಾರ**
ಹಿರಿಯ ಉಪನ್ಯಾಸಕರು
ಪ್ರಾಚೀನ ಭಾರತದ ಚರಿತ್ರೆ ಮತ್ತು ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೭. **ಶ್ರೀ ಡಿ. ಬಿ. ಢಂಗ**
ಶಿಕ್ಷಕರು,
ವಿಶ್ವವಿದ್ಯಾಲಯದ ಪಬ್ಲಿಕ್ ಸ್ಕೂಲ, ಧಾರವಾಡ

೮. ಡಾ. ಬಿ. ಆರ್. ಹಿರೇಮಠ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೯. ಡಾ. ವಿ. ಕಮಲಮ್ಮ
ಅಧ್ಯಾಪಿಕೆ, ಕನ್ನಡ ವಿಭಾಗ
ಉಸ್ಮಾನಿಯಾ ವಿಶ್ವವಿದ್ಯಾಲಯದ ಮಹಿಳಾ ಕಾಲೇಜು, ಕೋಠಿ
ಹೈದರಾಬಾದ

೧೦. ಶ್ರೀಮತಿ ಹನುಮಾಕ್ಷಿ ಗೋಗಿ
ಸಹಕಾರಿ ಸಂಘಗಳ ಸಹಾಯಕ ನಿಬಂಧಕರು
ಹಾವೇರಿ, ಜಿಲ್ಲಾ ಧಾರವಾಡ

೧೧. ಡಾ. ಎ. ಎಸ್. ಧರಣೇಂದ್ರಯ್ಯ
ರತ್ನತ್ರಯ, ನಿರ್ಮಲನಗರ, ಧಾರವಾಡ-೩

೧೨. ಶ್ರೀ ರಾಜೇಂದ್ರ ಅಣ್ಣಾನವರ
ಕನ್ನಡ ಅಧ್ಯಾಪಕರು
ಸಿ. ಎಸ್. ಬೆಂಬಳಗಿ ಕಾಲೇಜು, ರಾಮದುರ್ಗ, ಜಿಲ್ಲೆ:ಬೆಳಗಾವಿ

೧೩. ಡಾ. ವೀರಣ್ಣ ರಾಜೂರ
ಪ್ರವಾಚಕರು ಹಾಗೂ ಅಧ್ಯಕ್ಷರು
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಶ್ರೀ ಯು. ಶಂಕರನಾರಾಯಣ ಭಟ್
ಕನ್ನಡ ಪ್ರಾಧ್ಯಾಪಕ
ಸರಕಾರಿ ಕಾಲೇಜು, ವಿದ್ಯಾನಗರ ಅಂಚೆ -೬೭೧೧೨೩
ತಾಲೂಕು ಮತ್ತು ಜಿಲ್ಲೆ ಕಾಸರಗೋಡು, ಕೇರಳ ರಾಜ್ಯ

೧೫. ಶಾಲಿನಿ ರಘುನಾಥ
ಕನ್ನಡ ಉಪನ್ಯಾಸಕಿ
ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೬. ಶ್ರೀ ಎಫ್. ಟಿ. ಹಳ್ಳಿಕೇರಿ
ಸಂಶೋಧನ ಸಹಾಯಕ
ಕನ್ನಡ ವಿಶ್ವವಿದ್ಯಾಲಯ, ಹಂಪಿ - ೫೮೩೨೧೧